
ಅನ್ಯಭಾಷಾ ಸಾಹಿತ್ಯ ಸ್ಪಂದನ

ಅನಿಕೇತನ



ಕರ್ನಾಟಕ ಸಾಹಿತ್ಯ ಅಕಾಡೆಮಿ

ಅನ್ಯಭಾಷಾ ಸಾಹಿತ್ಯ ಸ್ಪಂದನ

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ

ಸಂಪಾದಕರು

ಪ್ರೊ। ದೊಡ್ಡರಂಗೇಗೌಡ

ಡಾ। ನಲ್ಲೂರು ಪ್ರಸಾದ್

ಕರ್ನಾಟಕ ಸಾಹಿತ್ಯ ಅಕಾಡೆಮಿ

ಬೆಂಗಳೂರು

ANIKETHANA	:	A Literary Journal (Quarterly)
Edited by	:	Prof. Doddarangegowda Dr. Nallur Prasad (R.K. Prasad)
Published by	:	Registrar, Karnataka Sahithya Academy Kannada Bhavana, J.C. Road, Bangalore-2

Pages : VIII+140, Jul - Sep. 2000
Registration No. 45646/88

ಸಂಪುಟ : 12
ಸಂಚಿಕೆ : 1

ಪ್ರಧಾನ ಸಂಪಾದಕರು
ಡಾ. ಗಿರಡ್ಡಿ ಗೋವಿಂದರಾಜ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು-೫೬೦ ೦೦೨

ರಿಜಿಸ್ಟ್ರಾರ್
ಟಿ.ಎಸ್. ದಕ್ಷಿಣಾಮೂರ್ತಿ
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - ೫೬೦ ೦೦೨

ಬಿಡಿ ಪ್ರತಿ	:	ರೂ. ೧೫/-
ವಾರ್ಷಿಕ ಚಂದಾ	:	ರೂ. ೫೦/-
ಆಜೀವ ಚಂದಾ	:	ರೂ. ೨೦೦/-

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ಬೆಂಗಳೂರು - ೧೮
✆ ೬೬೧೩೧೨೩, ೬೬೧೮೭೫೨

ಸಂಪಾದಕೀಯ

ಅನ್ಯಭಾಷಾ ಸಾಹಿತ್ಯದ ವೈವಿಧ್ಯತೆಯನ್ನು ಅದರೆಲ್ಲ ಪ್ರಾಚೀನತೆ ಮತ್ತು ಪ್ರಸ್ತುತತೆಯೊಂದಿಗೆ ಕನ್ನಡದ ಓದುಗರೆದುರು ತಂದು ಸುರಿಯಬೇಕೆಂಬ ಉದ್ದೇಶದ 'ಅನಿಕೇತನ' ಈ ಸಂಚಿಕೆಯಲ್ಲಿ ಭಾರತೀಯ ಸಾಹಿತ್ಯದ ಕೆಲವು ಬೆರಗುಗಳನ್ನು ಪ್ರಕಟಪಡಿಸಿದೆ. ಸಾಮಾಜಿಕ ವಾಸ್ತವ ಪಾತಳಿಯಲ್ಲಿ ಫ್ಯಾಂಟಸಿಯನ್ನು ಬಳಸಿ ಎರಡು ವಿರುದ್ಧ ಘಟನೆಗಳ ಸಂಯೋಜನೆಯೊಂದಿಗೆ ಸಮೂಹದ ನೈತಿಕತೆಯನ್ನು ಪರೀಕ್ಷೆಗೊಳಪಡಿಸುವಂಥ ಕಥೆಗಳಿಂದ ಗಮನ ಸೆಳೆದಿರುವ ಮರಾಠಿ ಕಥೆಗಾರ ಶ್ಯಾಮ ಮನೋಹರ ಅವರ ಕಥಾಸಾಹಿತ್ಯದ ವಿಶ್ಲೇಷಣೆಯು ಕನ್ನಡದ ಕಥೆಗಾರರಿಗೆ ಹೊಸ ದಿಕ್ಕುಗಳನ್ನು ಕುರಿತ ಆಲೋಚನೆಗೆ ಇಂಬು ಕೊಡಬಹುದು. ಕನ್ನಡದ ಮಹತ್ವದ ಕವಿ ಗೋಪಾಲಕೃಷ್ಣ ಅಡಿಗರನ್ನು ತಮ್ಮ ಪ್ರಯೋಗ ಶೀಲತೆಯಿಂದಾಗಿ ನೆನಪಿಗೆ ತರುವ ಆಧುನಿಕ ಮರಾಠಿ ಕಾವ್ಯದ ಹರಿಕಾರ ಮರ್ಡೇಕರರ ಭಾವಕವಿತೆಗಳ ಉತ್ಕಟತೆಯನ್ನು ಪರಿಚಯಿಸುವ ಲೇಖನವು ಅವರು ಮರಾಠಿ ಕಾವ್ಯ ಪರಂಪರೆಯನ್ನು ವಿಕಾಸದ ಸೋಪಾನಕ್ಕೆ ಏರಿಸಿದ ಬಗೆಯನ್ನೂ ಮರಾಠಿಯ ಆಧುನಿಕ ಕಾವ್ಯಕ್ಕೆ ಹೊಸ ದಿಕ್ಕು ತೋರಿಸಿದ ರೀತಿಯನ್ನೂ ಪ್ರಸ್ತುತಪಡಿಸುವುದರಿಂದಾಗಿ ಚಿಂತನಾರ್ಹ ವಾದದ್ದು.

ತಮಿಳಿನ ಶ್ರೇಷ್ಠ ಕಾವ್ಯ 'ಶಿಲಪ್ಪಧಿಕಾರಂ'ನ ಸುಂದರ ನಾಟಕ ರೂಪ 'ಕಾಲ್ಗಡಗ' ಈ ಸಂಚಿಕೆಯಲ್ಲಿ ಮುಕ್ತಾಯ ಕಂಡಿದೆ. ತಮಿಳಿನಿಂದಲೇ ಅನುವಾದಗೊಂಡಿರುವ 'ಚತುರ್ಥಾಶ್ರಮ' ಒಂದು ವಿಲಕ್ಷಣ ಕಥೆ. ಗಂಡಂದಿರನ್ನು ಬದಲಾಯಿಸುತ್ತ ಹೋದ ಹೆಂಡತಿಯೊಬ್ಬಳ ಬೌದ್ಧಿಕ ಹಸಿವನ್ನು ಗಂಡಂದಿರ ಮೂಲಕವೇ ಚರ್ಚೆಗೊಳ್ಳಪಡಿಸುವ ರೀತಿ ವಿಶಿಷ್ಟವಾದದ್ದು.

ದರ್ಶನಶಾಸ್ತ್ರ, ಮನೋವಿಜ್ಞಾನ, ಸಮಾಜಶಾಸ್ತ್ರ, ಸರ್ವಧರ್ಮಗಳ ತುಲನಾತ್ಮಕ ಅಧ್ಯಯನವನ್ನು ತಮ್ಮ ಜೀವನಸಾಧನೆಯಲ್ಲಿ ಸಮಾವೇಶಗೊಳಿಸಿಕೊಂಡು ತಮ್ಮ ಘನ ವ್ಯಕ್ತಿತ್ವದಿಂದ ಲಕ್ಷಾಂತರ ಶಿಷ್ಯರ ಜೀವನದಲ್ಲಿ ಹೊಸ ಬೆಳಗು ಮೂಡಿಸಿದ ಹಿಂದಿಯ ಕ್ರಾಂತಿಕಾರಿ ಕವಿ ಮುನಿಶ್ರೀ ರೂಪಚಂದ್ರರ ಹದಿನೈದು ಮುಕ್ತಕಗಳೊಂದಿಗಿರುವ ಅವರ ಪರಿಚಯ ಲೇಖನ ಅವರ ಬಗೆಗೆ ಹಲವು ಅಚ್ಚರಿಗಳನ್ನು ಮೂಡಿಸುವಂತಿದೆ. ಶ್ರೇಷ್ಠ ಕವಿ, ಒಳ್ಳೆಯ ಗಾಯಕ, ಬಿ. ಎ. ಪದವಿಯ ತನಕ ಉರ್ದು ಮಾಧ್ಯಮದಲ್ಲಿ ಕಲಿತ ಜ್ಞಾನಪೀಠ ಪ್ರಶಸ್ತಿ ವಿಜೇತ ತೆಲುಗು ಕವಿ ಡಾ। ಸಿ. ನಾರಾಯಣರೆಡ್ಡಿಯವರ ಪರಿಚಯದೊಂದಿಗೆ ಅವರ ಎರಡು ಕವಿತೆಗಳು ಪ್ರಕಟವಾಗಿವೆ. ಉರ್ದು ಕಾವ್ಯ ಪ್ರಪಂಚದಲ್ಲಿ ಗಟ್ಟಿ ಹೆಸರು ಮಾಡಿರುವ ಸಾಜಿದಾ ಜೈದೀ

ಅವರ ಮೂರು ಕವಿತೆಗಳಿವೆ.

ಬೆಂಗಳೂರಿನಲ್ಲಿ ನಡೆದ "ಪುಸ್ತಕೋದ್ಯಮದ ಸ್ವರೂಪ" ಹಾಗೂ ಚಿತ್ರದುರ್ಗದಲ್ಲಿ ನಡೆದ "ಕನ್ನಡ ಸಾಹಿತ್ಯ ಮತ್ತು ಕೈಗಾರಿಕೀಕರಣ" ವಿಚಾರ ಸಂಕಿರಣಗಳ ವಿಚಾರ ಪ್ರಚೋದಕವಾದ ಆರು ಲೇಖನಗಳು ಈ ಸಂಚಿಕೆಯಲ್ಲಿ ಸೇರ್ಪಡೆಗೊಂಡಿವೆ.

ಕನ್ನಡದಲ್ಲಿ ಇತ್ತೀಚೆಗೆ ಪ್ರಕಟವಾದ ವಿವಿಧ ಪ್ರಕಾರಗಳಿಗೆ ಸೇರಿದ ಪುಸ್ತಕಗಳ ಮಾಹಿತಿಯನ್ನು ನೀಡುವ ಉದ್ದೇಶದಿಂದ ಈ ಸಂಚಿಕೆಯಿಂದ 'ಹೊಸ ಪ್ರಕಟಣೆಗಳು' ವಿಭಾಗ ವನ್ನು ಆರಂಭಿಸಲಾಗಿದೆ. ಲೇಖಕರು, ಪ್ರಕಾಶಕರು, ಸಹೃದಯರು ಇದರ ಉಪಯೋಗವನ್ನು ಪಡೆದುಕೊಳ್ಳಬಹುದಾಗಿದೆ.

'ಅನಿಕೇತನ'ದ ವಾಚಕ ಸಮುದಾಯಕ್ಕೆ ಪ್ರಿಯವಾಗಬಹುದಾದ ಇಲ್ಲಿನ ಬರಹಗಳನ್ನು, ಬದಲಾವಣೆಗಳನ್ನು ಸಹೃದಯ ಓದುಗರು ಎಂದಿನಂತೆ ಪ್ರೀತಿಯಿಂದ ಸ್ವಾಗತಿಸುತ್ತಾರೆಂದು ಭಾವಿಸಿದ್ದೇವೆ.

ಪ್ರೊ। ದೊಡ್ಡರಂಗೇಗೌಡ

ಡಾ। ನಲ್ಲೂರು ಪ್ರಸಾದ್

ಪರಿವಿಡಿ

ಸವತಿ

ಹಿಂದಿ : ಪ್ರೇಮಚಂದ್

ಅನು : ವೀಣಾ ಆರ್. ಕುಲಕರ್ಣಿ

ಪಂಡಿತ ದೇವದತ್ತ ಮತ್ತು ಗೋದಾವರಿಯದು ಅನ್ಯೋನ್ಯ ದಾಂಪತ್ಯ. ವಿವಾಹವಾಗಿ ಅನೇಕ ವರ್ಷಗಳು ಸಂದರೂ, ಅವರಿಗೆ ಸಂತಾನ ಭಾಗ್ಯವಿರಲಿಲ್ಲ. ವೃದ್ಧ ತಂದೆತಾಯಿಗಳು ಮಗನಿಗೆ ಎರಡನೇ ವಿವಾಹವಾಗಲು ಒತ್ತಾಯಿಸಿದರೂ ಪತ್ನಿಯ ಮೇಲಿನ ಅಪರಿಮಿತ ಪ್ರೀತಿಯಿಂದ ಅವರು ಒಪ್ಪಿರಲಿಲ್ಲ.

ಸಂತಾನಸುಖಕ್ಕಾಗಿ ಪತ್ನಿಯನ್ನು ದುಃಖಕ್ಕೀಡುಮಾಡುವುದು ಅವರಿಗೆ ಇಷ್ಟವಿರಲಿಲ್ಲ. ಆಧುನಿಕ ಮನೋಭಾವದವರಾದ ಅವರ ಪ್ರಕಾರ, ಮಕ್ಕಳೆಂದರೆ ಬಹಳ ಮಹತ್ವದ ಜವಾಬ್ದಾರಿ ಎನ್ನುತ್ತಿದ್ದರಲ್ಲದೇ, ಸುಸಂಸ್ಕೃತ ಸಂತಾನದಿಂದ ಮಾತ್ರ ಕುಟುಂಬ ಕಲ್ಯಾಣ ಸಾಧ್ಯ, ಇಲ್ಲದಿದ್ದರೆ ಅಸಂಸ್ಕೃತ ಮಕ್ಕಳು ಸಮಾಜಕ್ಕೆ, ದೇಶಕ್ಕೆ ಒಂದು ಹೊರೆಯೆನ್ನುವದು ಅವರ ಅಭಿಪ್ರಾಯವಾಗಿತ್ತು. ಆದರೆ ಕೆಲವೊಮ್ಮೆ ನಲಿದಾಡುತ್ತಿರುವ ಮಕ್ಕಳನ್ನು ನೋಡಿ, ಮನದಲ್ಲಿ ಆಸೆ ಭುಗಿಲೆದ್ದರೂ ತಮ್ಮ ದೌರ್ಬಲ್ಯ ನೆನೆದು ವಿಷಾದವೆನಿಸುತ್ತಿತ್ತು. ಆ ಕೊರಗನ್ನು ಮರೆಯಲು ಆಧ್ಯಾತ್ಮಿಕ ಗ್ರಂಥಗಳನ್ನು ಓದುತ್ತಾ ಕಾಲ ಕಳೆಯುತ್ತಿದ್ದರು. ಆದರೆ ಸ್ತ್ರೀ ಸಹಜ ಬಯಕೆಯುಳ್ಳ, ತಾಯ್ತನ ಬಯಸುವ ಗೋದಾವರಿ ಅಷ್ಟು ಬೇಗನೆ ನಿರಾಶಳಾಗಿರಲಿಲ್ಲ. ಏನೇಂದರೂ ಸ್ತ್ರೀಸಹಜ ಮಾತೃತ್ವದ ವಾತ್ಸಲ್ಯವುಳ್ಳ ಆಕೆ, ಎಷ್ಟೋ ವ್ರತಾದಿ ಉಪವಾಸಗಳನ್ನು ಮಾಡಿದರೂ ಯಾವ ಲಾಭ ಸಿಗದಿದ್ದಾಗ, ಈ ಸಮಸ್ಯೆಗೆ ಅಂತಿಮವಾಗಿ ತೆರೆಯೆಳೆಯಲು ವಿಚಾರಮಂಥನವನ್ನೇ ನಡೆಸಿದಳು.

ಆದರೆ ಆಕೆ ನಿರ್ಣಯಿಸಿದ ಪರಿಹಾರಕ್ಕೆ ಅವಳು ಭಾರೀ ತ್ಯಾಗವನ್ನೇ ಮಾಡಬೇಕಾಗಿತ್ತು. ಪತಿಯೆಂಬ ಅತ್ಯಮೂಲ್ಯ ರತ್ನ ಕೈಜಾರಿ ಹೋಗುವ ಸಂಭವ, ಇದೆಲ್ಲಾ ಸಾಧ್ಯವೇ? ಎಷ್ಟು ವರ್ಷಗಳ ಪ್ರೇಮಸಿಂಚನದಿಂದ ದಾಂಪತ್ಯವೃಕ್ಷವನ್ನು ಬೆಳೆಸಿದ್ದಳೋ ಅದು ಗಾಳಿಯ ಸಣ್ಣ ಅಲೆಯನ್ನು ತಡೆಯಲು ಸಾಧ್ಯವಿಲ್ಲವೇ? ಬಹಳಷ್ಟು ಯೋಚನೆ. ಕೊನೆಗೆ ಸವತಿಯ ಶುಭಾಗಮನಕ್ಕೆ ಸಿದ್ಧತೆ ಮಾಡಿಕೊಳ್ಳತೊಡಗಿದಳು. ಆದರೆ ಸಜ್ಜನರಾದ ಪಂಡಿತರೇ ಗೋದಾವರಿಯ ಪ್ರಸ್ತಾವ ಕೇಳಿ ಸ್ತಂಭಿತರಾದರು. ಬಹುಶಃ ಆಕೆ ಪ್ರೇಮಪರೀಕ್ಷೆ ಮಾಡುತ್ತಿರ ಬಹುದೆಂದು ಹಗುರವಾಗಿ ನಕ್ಕು ಸುಮ್ಮನಾದರು. ಆದರೆ ಗೋದಾವರಿ ಗಂಭೀರವಾಗಿ, ಸಂತಾನಕ್ಕಾಗಿ ತಾನು ಯಾವ ತ್ಯಾಗವನ್ನೂ ಮಾಡಲು ಸಿದ್ಧಳಿರುವೆನೆಂದಾಗ, ಅವಳ ಉದಾತ್ತ ಪವಿತ್ರ ವಿಚಾರಗಳನ್ನು ಕೇಳಿ, ಆಕೆಯ ಮೇಲೆ ಪ್ರೀತಿ ಉಕ್ಕೇರಿ ಬಿಗಿದಪ್ಪಿಕೊಂಡು ನಿನ್ನ ನಿರ್ಣಯ ಸರಿಯಿಲ್ಲವೆಂದು ಸಾಕಷ್ಟು ತಿಳುವಳಿಕೆ ಹೇಳಿದರೂ ಗೋದಾವರಿಯ ಒತ್ತಾಯಕ್ಕೆ ಅವರು ತಲೆಬಾಗಲೇಬೇಕಾಯ್ತು.

ಇಂಥಾ ವಯಸ್ಸಿನಲ್ಲಿ ತಾನು ಮತ್ತೆ ಮದುಮಗನಾದರೆ, ತನ್ನ ಸಹೋದ್ಯೋಗಿ ಮಿತ್ರರು ಅಪಹಾಸ್ಯ ಮಾಡಲಿಕ್ಕಿಲ್ಲವೇ? ಎಂದು ಆಲೋಚಿಸುತ್ತಾ ದೇವದತ್ತರು ಗೋಮತಿಯನ್ನು ಎರಡನೇ ಪತ್ನಿಯನ್ನಾಗಿ ಮನೆಗೆ ಕರೆತಂದರು. ಗೋದಾವರಿಗಂತೂ ತನ್ನ ಮಗನ ಮದುವೆ ಮಾಡಿದಷ್ಟು ಸಂಭ್ರಮ! ಅವಳ ಸಂತೋಷಕ್ಕೆ ಪಾರವೇ ಇಲ್ಲ. ಪಾಪ ಅವಳಿಗೇನು ಗೊತ್ತು? ಅವಳ ಸಂತೋಷ, ಸಂಭ್ರಮ ಕ್ಷಣಿಕವೆಂಬುದು. ದಿನಗಳು ಅದರ ಪಾಡಿಗೆ ಉರುಳಲಾರಂಭಿಸಿದವು. ಗೋದಾವರಿ ಅತ್ತೆಯಂತೆ ಅಧಿಕಾರ ಚಲಾಯಿಸುತ್ತಿದ್ದಳು. ಗೋಮತಿಗೆ ಅವಳ ಅಧಿಕಾರ ಅಪಥ್ಯವೆನಿಸುತ್ತಿತ್ತಲ್ಲದೇ, ಸಣ್ಣ ಪುಟ್ಟ ವಸ್ತುಗಳಿಗೂ ಅವಳನ್ನು ಬೇಡುವುದು ಸಂಕೋಚವೆನಿಸುತ್ತಿತ್ತು. ಆದರೆ ಕೆಲದಿನಗಳ ನಂತರ ಗೋದಾವರಿಯ ಸ್ವಭಾವದಲ್ಲಿ ವಿಶೇಷ ಪರಿವರ್ತನವಾಯಿತು. ಪತಿಯ ಸಹಜ ನಡವಳಿಕೆಯು ಅಹಂಕಾರವೆನಿಸುತ್ತಿತ್ತು. ಅವರು ಹೊರಗಿನಿಂದ ಬಂದ ತಕ್ಷಣ, ಗಂಟೆಗಟ್ಟಲೇ ಅವರ ಹತ್ತಿರ ಕುಳಿತು ಮನೆಯ ವಿಷಯವೆಲ್ಲಾ ಹೇಳುತ್ತಿದ್ದಳು. ಅದರಲ್ಲಿ ಗೋಮತಿಯ ಬಗ್ಗೆ ಚಾಡಿಯ ಮಾತುಗಳೂ ಇರುತ್ತಿದ್ದವು. ಇಂಥಾ ಹಟಾತ್ ಪರಿವರ್ತನೆಯಿಂದ ಪಂಡಿತಜಿಗೆ ಆಶ್ಚರ್ಯವಾಯಿತು. ಬಹುಶಃ ಗೋಮತಿಯ ಯೌವ್ವನ, ಕಣ್ಣುಕೋರೈಸುವ ಸೌಂದರ್ಯ ಪತಿಯನ್ನು ತನ್ನಿಂದ ಎಲ್ಲಿ ದೂರ ಮಾಡುತ್ತಿವೆಯೋ ಎಂಬ ಹೆದರಿಕೆ ಅವಳಲ್ಲಿ ಮನೆ ಮಾಡಿತ್ತು. ಆದರೆ ಅಣೆಕಟ್ಟನ್ನು ಒಡೆದು, ಅದರ ನೀರಿನ ಧಾರೆಯನ್ನು ದುರ್ಬಲ ಹುಟಿಯಿಂದ ತಡೆಯಲು ಸಾಧ್ಯವೇ?

ಒಮ್ಮೆ ರಕ್ಷಾಬಂಧನದ ದಿನ ಸಿಹಿಯಡುಗೆ ಮಾಡೆಂದು ಗೋಮತಿಗೆ ಹೇಳಿದಾಗ, ಆಕೆ ಸಕ್ಕರೆ ಮುಗಿದುಹೋಗಿದೆಯೆಂದಾಗ ಗೋದಾವರಿಗೆ ಆಶ್ಚರ್ಯವಾಯಿತು. "ಇಷ್ಟು ಬೇಗನೆ ಸಕ್ಕರೆ ಹೇಗೆ ಮುಗಿದು ಹೋಯಿತು? ದುಡಿಯುವವರು ಕಷ್ಟಪಟ್ಟು ದುಡಿಯುತ್ತಾರೆ, ಕುಳಿತು ತಿನ್ನುವವರಿಗೇನು ಗೊತ್ತು ಹಣದ ಬೆಲೆ?" ಎಂದು ನಿಂದಿಸಿದಳು. ಪತಿ ಬಂದ ತಕ್ಷಣ, ಇಂಥ ಸುದ್ದಿಗಳನ್ನು ಅವರ ಕಿವಿಗೆ ತಲುಪಿಸುವದು ಗೋದಾವರಿಯ ಕೆಲಸವಾಗಿತ್ತು. ಇದರಿಂದ ಮನೆಯ ವಾತಾವರಣದಲ್ಲಿ ಅಶಾಂತಿಯುಂಟಾಯಿತು. ಇಂಥ ಚಿಕ್ಕ ಪುಟ್ಟ ಘಟನೆಗಳು ಸಾಕಷ್ಟು ಸಲ ಪುನರಾವರ್ತನೆಗೊಳ್ಳುತ್ತಿದ್ದವು. ಪಂಡಿತಜೀ ಅನಾರೋಗ್ಯದ ಕಾರಣ ಹೆಚ್ಚು ಮಸಾಲೆಯುಕ್ತ ಪದಾರ್ಥಗಳನ್ನು ವರ್ಜಿಸಿದ್ದರು. ಅದನ್ನು ತಿಳಿಯದ ಗೋಮತಿ, ಹೆಚ್ಚು ಮಸಾಲೆ ಹಾಕಿ ಅಡಿಗೆ ಮಾಡಿದಾಗ ಪಂಡಿತಜೀ ಅದನ್ನು ತಿನ್ನದೇ ಎದ್ದರು. ಅದರಿಂದ ಸಿಟ್ಟಿಗೆದ್ದ ಗೋದಾವರಿ "ನಿನ್ನ ಅಡುಗೆ ಊಟ ಮಾಡಿದರೆ ನಾಲಿಗೆಯೇ ಸುಟ್ಟುಹೋಗುತ್ತದೆ" ಎಂದು ಮನಸಾ ನಿಂದಿಸಿದಳು.

ಸರಳ ಸ್ವಭಾವದ ಪಂಡಿತಜೀ ಮೆತ್ತನೆಯ ವ್ಯಕ್ತಿಯಾಗಿದ್ದರು. ತಾವಾಯಿತು, ತಮ್ಮ ಕೆಲಸವಾಯಿತು. ಮನರಂಜನೆಯ ಮಾತಂತೂ ಅವರಿಗೆ ಮಾರುದ್ದ ದೂರ. ನಾಟಕಗಳ ಉಚಿತ ಪಾಸು ಸಿಕ್ಕರೂ ಅದನ್ನು ಬೇರೆಯವರಿಗೆ ಕೊಟ್ಟುಬಿಡುತ್ತಿದ್ದರು. ಗೋದಾವರಿಗೆ ಅವರ ನಿರ್ಲಿಪ್ತ ಸ್ವಭಾವದ ಪರಿಚಯವಿದ್ದುದರಿಂದ, ಸುಮ್ಮನಿರುತ್ತಿದ್ದಳು. ಆದರೆ ಸ್ವಭಾವತಃ ಮೆತ್ತಗಿರುವ ಹತ್ತಿಯನ್ನು, ಹೆಚ್ಚು ಒತ್ತಿಯಿಡುವುದರಿಂದ ಅದು ಕಠೋರವಾಗುತ್ತದೆ. ನಿತ್ಯ ಯಾಂತ್ರಿಕ ಜೀವನದಿಂದ ಬೇಸತ್ತ ಪಂಡಿತಜೀಯ ಮನಸ್ಸಿನಲ್ಲೇನೋ ಅಸ್ಪಷ್ಟ ಗೊಂದಲ. ಇಷ್ಟು ದಿನ ಬಯಕೆಗಳನ್ನು ಹತ್ತಿಕ್ಕಿದ್ದರಿಂದ ಅವು ದುರ್ಬಲವಾಗಿದ್ದವು.

ಆದರೆ ನವಯೌವ್ವನೆಯಾದ, ನವಪತ್ನಿಯ ಸಾಮೀಪ್ಯದಿಂದ ಬಯಕೆಗಳು ಜೀವಂತವಾಗ ತೊಡಗಿದವು. ತಾನು ಬದುಕಿದ್ದಾಗಲೇ ಸವತಿಯನ್ನು ಸ್ವಾಗತಿಸಿರುವ ಗೋದಾವರಿಯ ತ್ಯಾಗ ಅಲೌಕಿಕ ವೆನಿಸುತ್ತಿತ್ತು. ಆದರೆ ಅವಳು ಗೋಮತಿಯ ಮೇಲೆ ತೋರಿಸುವ ಅಧಿಕಾರ ಮನಸ್ಸಿಗೆ ಅಪಥ್ಯವೆನಿಸುತ್ತಿತ್ತು. ನಿಜವಾಗಿಯೂ ಇಲ್ಲಿ ಗೋಮತಿಗೆ ಸೂರೆಗೊಳ್ಳುವಂತಹ ಸುಖವೇನಿದೆ? ಪತಿಯಿದ್ದರೂ ನಿಶ್ಶಕ್ತ ಮತ್ತು

ರೋಗಿಷ್ಠ. ಮನೆತನವಂತೂ ಮಧ್ಯಮ ವರ್ಗದ್ದು. ಮೇಲಾಗಿ ಗೋದಾವರಿಯ ಕಟುನುಡಿಗಳು. ತನ್ನ ವರ್ತನೆ ಪತಿಗೆ ಅನುಚಿತವೆನಿಸುತ್ತಿದೆಯೆಂದು, ಅವರ ಮುಖಮುದ್ರೆಗಳಿಂದ ಗೋದಾವರಿಗೆ ತಿಳಿದು ಗೋಮತಿಯ ಮೇಲೆ ಅಸೂಯೆ ಹೆಚ್ಚಾಯಿತು. ಅಲ್ಲದೇ ಪತಿಯನ್ನು ನಿಷ್ಠುರಿ ಮತ್ತು ಸ್ವಾರ್ಥಿಯೆಂದು ಜರಿದಳು. ಮನೆ ವಾತಾವರಣ ಬಹಳ ಕೆಟ್ಟು, ಪತಿ-ಪತ್ನಿಯರಲ್ಲಿ ಬಿಕ್ಕಟ್ಟು ತಲೆದೋರಿತು.

ಗೋದಾವರಿ ಈ ರೀತಿ ಗೋಮತಿಯ ಮೇಲೆ ಅತ್ಯಾಚಾರ ಮಾಡುವುದನ್ನು ನೋಡಿ, ಏನಾದರೂ ಹೇಳಿದರೆ ಮನೆಯಲ್ಲಿ ಅಶಾಂತಿಯುಂಟಾಗಬಹುದೆಂದು ಅವರು ಸುಮ್ಮನಾಗುತ್ತಿದ್ದರು. ಆದರೆ ಒಮ್ಮೆ ಉಪಾಹಾರಕ್ಕೆ ಮಿಠಾಯಿ ಯಾಕೆ ತರಿಸಲಿಲ್ಲವೆಂದು ಗೋದಾವರಿಯನ್ನು ಕೇಳಿದಾಗ ಆಕೆ, "ನನಗೇನು ಪೇಟೆಯಿಂದ ತರಿಸಲು ನೌಕರರಿದ್ದಾರೆಯೇ"? ಎಂದು ಮುಖದ ಮೇಲೆ ಹೊಡೆದಂತೆ ಒರಟಾಗಿ ಉತ್ತರಿಸಿದಾಗ, ಈ ರೀತಿ ಒರಟುತ್ತರವನ್ನು ನಿರೀಕ್ಷಿಸದ ಅವರು "ಸಾವಕಾಶವಾಗಿ ಹೇಳು, ಹಾಗೆ ಸಿಟ್ಟುಗೊಳ್ಳುವ ಕಾರಣವಿಲ್ಲ"ವೆಂದಾಗ ಆಕೆ ಇನ್ನೂ ಒರಟಾಗಿ "ಹೌದು ನಾನು ಹೀಗೇ ಮಾತನಾಡುವುದು. ಬೇರೆಯವರ ಹಾಗೆ ಮೃದುವಾಗಿ ಮಾತನಾಡಲು ನನಗೆ ಬರುವುದಿಲ್ಲ"ವೆಂದಳು. ಆಗ ದೇವದತ್ತರು ಇನ್ನೂ ಸಿಟ್ಟಾಗಿ "ನೀನು ಇತ್ತಿತ್ತಲಾಗಿ ಬಹಳ ಬೇಗನೆ ಸಿಟ್ಟಿಗೇಳುತ್ತಿ, ಯಾಕೆಂದು ಅರ್ಥವಾಗುತ್ತಿಲ್ಲ." ಎಂದರು. ಅವರ ಮಾತು ಕೇಳಿ, ಅವಳ ಮುಖ ರೋಷದಿಂದ ಕೆಂಪಾಗಿ ತುಟಿಗಳು ಅದುರತೊಡಗಿದವು. ಕುಳಿತವಳು ಎದ್ದು ನಿಂತು "ನಿಮಗೆ ಇತ್ತಿತ್ತಲಾಗಿ ನನ್ನ ಮಾತುಗಳು ಅಸಹ್ಯವೆನಿಸತೊಡಗಿವೆ. ನನ್ನ ಸ್ವಭಾವವೇ ನಿಮಗೆ ದೋಷಪೂರ್ಣವೆನಿಸತೊಡಗಿದೆ. ನಿಮಗೆ ಸರಿಕಾಣುವವರೇ ಬೇರೆಯಿದ್ದಾರೆ. ನಿಮ್ಮ ಮನೆತನದ ಜವಾಬ್ದಾರಿ ಇಷ್ಟು ದಿನ ಹೊತ್ತಿದ್ದು ಸಾಕು. ಇನ್ನು ನಿಮಗೆ ತಿಳಿದಂತೆ ಮಾಡಿಕೊಳ್ಳಿ. ಇದೇ ನಿಮ್ಮ ಸಂದೂಕಿನ ಕೀಲಿಕೈ " ಎಂದು ಅದನ್ನು ಸರ್ರನೆಸೆದು ಹೊರಟುಹೋದಳು. ಇಂಥಾ ಎದುರುತ್ತರ ನಿರೀಕ್ಷಿಸದ ಪಂಡಿತಜೀ ಮೂರ್ಛಿತರಾದಂತಾದರು. ಯಾವ ಶಾಂತಿಭಂಗಕ್ಕೆ ಅವರು ಹೆದರಿದ್ದರೋ, ಅದು ಭಯಂಕರ ರೂಪ ತಾಳಿ ಅವರ ಮನೆಯನ್ನು ಪ್ರವೇಶಿಸಿತು.

ಹೆಚ್ಚಿಗೆ ಮಾತನಾಡಿದರೆ ಕಲಹ ಮುಂದುವರಿಯುತ್ತಿತ್ತು. ಗೋದಾವರಿಯೊಂದಿಗೆ ತಾವೇನು ಅನುಚಿತವಾಗಿ ವರ್ತಿಸಿರಲಿಲ್ಲ. ಆಕೆ ತಮ್ಮ ಚಿಕ್ಕ ಆದಾಯದಲ್ಲಿ, ಹೇಗೆ ಮನೆಯನ್ನು ನಿಭಾಯಿಸುತ್ತಿದ್ದಳೋ ಭಗವಂತನಿಗೇ ಗೊತ್ತು. ಅನನುಭವಿಯಾದ ಗೋಮತಿಗೆ ಇಂಥಾ ಜವಾಬ್ದಾರಿ ಹೊರಲು ಅಸಾಧ್ಯ. ಇನ್ನು ತಮಗಂತೂ ಕಛೇರಿಯ ಕೆಲಸದಿಂದಲೇ ಪುರುಸೊತ್ತು ಸಿಗುತ್ತಿರಲಿಲ್ಲ. ಅಂಥದ್ದರಲ್ಲಿ ಇದೊಂದು ಹೆಚ್ಚಿನ ಜವಾಬ್ದಾರಿ. ಗೋದಾವರಿ ಸಮೀಪ ಸುಳಿಯಲಿಲ್ಲ. ಅವಳೆಸೆದ ಕೀಲಿಕೈ ವಿಷನಾಗದಂತೆ ಅಂಗಳದಲ್ಲಿಯೇ ಬಿದ್ದಿತ್ತು. ಅದನ್ನೆತ್ತುವ ಧೈರ್ಯ ಯಾರಿಗೂ ಇರಲಿಲ್ಲ. ಕೊನೆಗೆ ಪಂಡಿತಜೀ ಅಂಗೈಯಲ್ಲಿ ಜೀವ ಹಿಡಿದುಕೊಂಡು, ಅದನ್ನೆತ್ತುವಾಗ ಅವರ ತಲೆಯ ಮೇಲೆ ಪರ್ವತದ ಹೊರೆ ಬಿದ್ದಂತಾಯಿತು. ಆಲಸಿ ಮನುಷ್ಯನಿಗೆ ತಾನು ಹಿಡಿದ ಮಾರ್ಗದಿಂದ ತಿಲಮಾತ್ರವೂ ಸರಿಯುವದು ಬಹಳ ಕಠಿಣವಾಗಿರುತ್ತದೆ. ಕೀಲಿಕೈಯನ್ನು ಗೋಮತಿಗೆ ಕೊಡಲು ಧೈರ್ಯವಿಲ್ಲ, ಆದರೆ ಕೆಲಸವೆಲ್ಲಾ ಆಕೆಯದಾಗಿತ್ತು. ಈ ರೀತಿಯಾಗಿ ಗೋದಾವರಿಯ ಹಟ ಮತ್ತು ಈರ್ಷ್ಯಾ ಸ್ವಭಾವದಿಂದ ಗೃಹಿಣಿಯೆನ್ನುವ ಆದರ, ಮರ್ಯಾದೆ ಅವಳೆಸೆದ ಅಂತಿಮ ಸಾಧನವಾದ ಕೀಲಿಕೈ ಜೊತೆ ಹೊರಟುಹೋಗಿತ್ತು.

ಕಾಲಕ್ರಮೇಣ ನೆರೆಹೊರೆಯವರೂ ಸಹ ಗೋದಾವರಿಯೊಂದಿಗೆ ವಿಚಿತ್ರವಾಗಿ ವರ್ತಿಸುತ್ತಿದ್ದರು. ಅವಳೀಗ ಬರೀ ಬೇರೆಯವರ ಸಹಾನುಭೂತಿ ಮತ್ತು ಅನುಕಂಪಗಳ ಮೇಲೆ ಬದುಕಿರುವ ಪದಚ್ಯುತ

ರಾಣಿಯಾಗಿದ್ದಳು. ಅಸೂಯೆ ಅವಳ ಮನದಲ್ಲೇ ತುಂಬಿ ತುಳುಕುತ್ತಿತ್ತು. ನೆರೆಹೊರೆಯವರ ಚರ್ಚೆಗೆ ಗ್ರಾಸವಾಗಿದ್ದಳು. "ನೋಡಿದಿರಾ ಏನು ಸ್ವಾರ್ಥಿ ಜನ, ಪಾಪ! ಗಂಡನನ್ನು ಒತ್ತಾಯ ಮಾಡಿ, ತನಗೇ ಸವತಿಯನ್ನು ತಂದುಕೊಂಡು, ತನ್ನಕಾಲ ಮೇಲೆ ತಾನೇ ಕೊಡಲಿ ಹಾಕಿಕೊಂಡಂತೆಯಾಗಿದೆ. ತನ್ನ ಆಭರಣಗಳನ್ನಷ್ಟೇ ಅಲ್ಲದೇ, ಪತಿಯನ್ನೂ ಬಿಟ್ಟುಕೊಟ್ಟು, ಈಗ ಬರೀ ಕಣ್ಣೀರಿನಲ್ಲಿ ಕೈತೊಳೆಯುವಂತಾಗಿದೆ. ಸವತಿಯಂತೂ ಎಂದಿಗೂ ಸವತಿಯೇ. ಪತಿಯೂ ಸಹ ಹೊಸ ಹೆಂಡತಿಯ ಹುರುಪಿನಲ್ಲಿ ಈಕೆಯನ್ನು ನಿರ್ಲಕ್ಷ್ಯ ಮಾಡುತ್ತಿದ್ದಾನೆ. ಈಕೆಯದೂ ಒಂದು ಬದುಕೇ?" ಈ ರೀತಿ ಜನರ ಅನುಕಂಪಭರಿತ ಮಾತುಗಳನ್ನು ಕೇಳಿ, ಗೋದಾವರಿಯ ಈರ್ಷ್ಯೆ ಇನ್ನೂ ಹೆಚ್ಚಾಯಿತು. ಪತಿಗೆ ಮನೆಯ ಜವಾಬ್ದಾರಿ ಹೊರುವುದು ಅಸಾಧ್ಯವೆಂದು ಅವಳಿಗೆ ವಿಶ್ವಾಸವಿತ್ತು. ಆದರೆ ಅವಳ ಹಾಗೆ ಅಲ್ಲದಿದ್ದರೂ, ಅಂತು ನಿರ್ವಿಘ್ನವಾಗಿ ಪಂಡಿತಜೀ ಸಂಸಾರ ರಥವನ್ನು ಎಳೆಯುತ್ತಿದ್ದರು.

ಗೋಮತಿಯ ಪ್ರತಿ ಕೆಲಸಗಳಲ್ಲಿಯೂ ಗೋದಾವರಿ ತಪ್ಪು ಕಂಡುಹಿಡಿಯುತ್ತಿದ್ದಳು. ಅಸೂಯೆಯಲ್ಲಿ ಅಗ್ನಿ ಅಡಗಿದೆ. ಆದರೆ ಅಗ್ನಿಯ ಗುಣ ಅದರಲ್ಲಿಲ್ಲ. ಅದು ಹೃದಯವನ್ನು ವಿಶಾಲವಾಗಿಸುವುದಕ್ಕಿಂತ, ಸಂಕುಚಿತಗೊಳಿಸುತ್ತದೆ. ಮನೆಯಲ್ಲೇನಾದರೂ ಹಾನಿ ಸಂಭವಿಸಿದರೆ, ಪೈಶಾಚಿಕ ಆನಂದವನ್ನನುಭವಿಸುವಷ್ಟು ಗೋದಾವರಿಯ ಅಸೂಯೆ ಪರಾಕಾಷ್ಠೆಗೇರಿತ್ತು. ಅವು ಭೀಕರ ಮಳೆಗಾಲದ ದಿನಗಳು. ಎಷ್ಟೋ ದಿನಗಳಾದರೂ ಸೂರ್ಯನ ದರ್ಶನವಿಲ್ಲ. ಮನೆಯಲ್ಲಿನ ಸಾಮಾನುಗಳು ಕೆಟ್ಟುಹೋಗಲು ಒಂದಿಷ್ಟೂ ದುಃಖಿಸದ ಗೋದಾವರಿಗೆ, ಗೋಮತಿಯನ್ನು ಹಂಗಿಸಲು ಒಂದು ಒಳ್ಳೆಯ ಅವಕಾಶ ಸಿಕ್ಕಿತು. ಈ ರೀತಿ ಸಮಸ್ಯೆ ಗೊಂದಲಗಳಿಂದ ಪಂಡಿತಜೀಯ ಆರೋಗ್ಯ ಕೆಡಲಾರಂಭಿಸಿತು. ಮೊದಲಿಗೆ ಮನೆಯ ವ್ಯವಹಾರಗಳನ್ನೆಲ್ಲಾ ಗೋದಾವರಿಯೇ ನೋಡಿಕೊಳ್ಳುತ್ತಿದ್ದುದರಿಂದ ಪಂಡಿತಜೀಗೆ ಅಷ್ಟಾಗಿ ವ್ಯವಹಾರ ಜ್ಞಾನವಿರಲಿಲ್ಲ. ಆದರೆ ಈಗ ಪೇಟೆಗೆ ಹೋಗುವದು ಅನಿವಾರ್ಯವಾಗಿತ್ತು.

ದಿನಕ್ಕೆ ಮೂರ್‍ನಾಲ್ಕು ಬಾರಿ ಪೇಟೆಗೆ ಹೋಗುವ ಅವರನ್ನು ನೋಡಿ ಗೋದಾವರಿ ನೆರೆಹೊರೆಯವರಲ್ಲಿ "ನೋಡಿದಿರಾ, ಮೊದಲು ಇದೇ ದೊಡ್ಡ ಮನುಷ್ಯ ಒಂದು ಕಡ್ಡಿಯನ್ನೂ ಸಹ ಎತ್ತಿಡುತ್ತಿರಲಿಲ್ಲ, ಈಗ ಸದಾ ಬಜಾರಿನಲ್ಲಿರುತ್ತಾರೆ." ಗೋದಾವರಿ ಸೀರೆಯನ್ನು ಸಹ ಪಕ್ಕದ ಮನೆಯ ವೃದ್ಧ ಲಾಲಾಜಿ ಹತ್ತಿರ ಕೊಳ್ಳುತ್ತಿದ್ದಳು. ಆಕೆಗೆ ಈಗ ಸೀರೆಯ ಅವಶ್ಯಕತೆಯಿದ್ದರೂ ಬಾಯಿಬಿಟ್ಟು ಕೇಳಿರಲಿಲ್ಲ. ಆದರೆ ಗೋಮತಿ ಪತಿ ತನಗಾಗಿ ತಂದ ಸೀರೆಯನ್ನು ಗೋದಾವರಿಗೆ ತೋರಿಸಿದಾಗ, ಅವಳು ತಿರಸ್ಕಾರದಿಂದ ಮುಖ ತಿರುಗಿಸಿ ನುಡಿದಳು "ಒಳ್ಳೆಯದಾಯಿತು ಬಿಡು, ನೀನಾದರೂ ಅವರಿಗೆ ವ್ಯವಹಾರಜ್ಞಾನವನ್ನು ಕಲಿಸಿದೆ. ನಾನೂ ಮದುವೆಯಾಗಿ ಇಷ್ಟು ವರ್ಷ ಸಂಸಾರ ಮಾಡಿದರೂ ಅವರು ಖರೀದಿಸಿ ತಂದ ಸೀರೆಯನ್ನು ಕನಸಿನಲ್ಲಿ ಉಡುವುದೂ ಸಹ ನನ್ನ ಹಣೆಬರಹದಲ್ಲಿಲ್ಲ". ಇಂಥ ಕಟು ಮಾತುಗಳನ್ನು ಕೇಳಿ ಗೋಮತಿ ಪೆಚ್ಚು ಮೋರೆ ಹಾಕಿದಾಗ ಗೋದಾವರಿ ವಿಲಕ್ಷಣ ಆನಂದ ಅನುಭವಿಸುತ್ತಿದ್ದಳು. ಅವಳ ಈರ್ಷಾಗ್ನಿ ಮತ್ತಷ್ಟು ಪ್ರಜ್ವಲಿಸಿತು. ಪತಿಯ ನಿರ್ಲಿಪ್ತತೆ ಅವಳನ್ನು ಪ್ರಸನ್ನಳಾಗಿಸಿತು. ಆದರೆ ಅವಳ ಅಸೂಯೆಯೆಂಬ ಅಗ್ನಿಗೆ, ಮತ್ತಷ್ಟು ತುಪ್ಪ ಹಾಕಿದಂತೆ ಪತಿ ಗೋಮತಿಯತ್ತ ಆಕರ್ಷಿತವಾಗುವುದನ್ನು ಕಂಡು ಮನದಲ್ಲೇ ಕುದಿಯುತ್ತಿದ್ದಳು. ಅವಳು ಎಷ್ಟೇ ಪ್ರಯತ್ನಪಟ್ಟರೂ ಪಡೆಯಲಾರದ ಪತಿಯ ಪ್ರೀತಿಯನ್ನು ಗೋಮತಿ ತನ್ನ ಸೌಂದರ್ಯ ಮತ್ತು ಯೌವ್ವನದಿಂದ ಗದ್ದಿದ್ದಳು. ತಾನು ಯಾವುದನ್ನು ನಿಸ್ವಾರ್ಥ, ನಿಷ್ಕಲ್ಮಷ ಪ್ರೀತಿಯೆಂದುಕೊಂಡಿದ್ದಳೋ ಅದು ಕಪಟ ಮತ್ತು ಸ್ವಾರ್ಥಯೆಂದು ಗೋದಾವರಿಗರಿವಾಯಿತು.

ಗೋಮತಿಯ ಆರೋಗ್ಯ ಕೆಟ್ಟಾಗ ಅವಳು ಸುಮ್ಮನೇ ಸೋಗು ಹಾಕಿ ತನ್ನ ಹತ್ತಿರ ಸೇವೆ ಮಾಡಿಸಿಕೊಳ್ಳುತ್ತಿರುವಳೆಂದು ಗೋದಾವರಿಗೆ ಶಂಕೆಯುಂಟಾಯಿತು. ನೆರೆಹೊರೆಯವರು ಸಹ ಅವಳ ಶಂಕೆಯನ್ನು, ತಮ್ಮ ಮಾತುಗಳಿಂದ ಧೃಡಪಡಿಸಿದರು.

ಇತ್ತಿತ್ತಲಾಗಿ ಪಂಡಿತಜೀ ಊಟ ಮಾಡುವಾಗ ಗೋದಾವರಿಯ ದೃಷ್ಟಿ ತಪ್ಪಿಸುತ್ತಿದ್ದರು. ಅವಳ ಕಟು ಮಾತುಗಳಿಗೆ ಹೆದರುತ್ತಿದ್ದರು. ಆದರೆ ಅವರ ಈ ಕಣ್ಣುಮುಚ್ಚಾಲೆಯಾಟ ಬಹಳ ದಿನ ನಡೆಯಲಿಲ್ಲ. ಅವಳು ಕೇಳಿಯೇಬಿಟ್ಟಳು "ಯಾಕೆ ನನ್ನ ಜೊತೆ ಮಾತನಾಡಲು ಅವಳ ಅಪ್ಪಣೆ ಬೇಕೆ? ಅವಳ ಜೊತೆ ಮಾತನಾಡಲು ಸಾಕಷ್ಟು ವಿಷಯವಿರುತ್ತದೆ. ಅಥವಾ ನಾನ್ನೊಂದಿಗೆ ಮಾತನಾಡಬಾರದೆಂದು ಪ್ರಮಾಣ ಮಾಡಿದ್ದೀರಾ? ಮನೆಯಂತೂ ನಿಮ್ಮ ಇಚ್ಛೆಯಂತೇ ನಡೆಯುತ್ತಿದೆಯಲ್ಲಾ?" ಅವಳ ಮಾತಿಗೆ ತಲೆತಗ್ಗಿಸಿಯೇ ಪಂಡಿತಜೀ ಉತ್ತರಿಸಿದರು. "ಹೂಂ! ಹೇಗೋ ನಡೆಯುತ್ತಿದೆ. ನನಗಂತೂ ಸಂಸಾರದ ಜಂಜಾಟದಿಂದ ಸಾಕಾಗಿಹೋಗಿದೆ. ನೀನಂತೂ ಮನೆಯ ಮಾನ ಮರ್ಯಾದೆಗಳನ್ನು ಗಾಳಿಗೆ ತೂರಲು ಸಿದ್ಧಳಾಗಿರುವೆ. ಪರಿಸ್ಥಿತಿ ಹೀಗಿದ್ದಾಗ ನಾನು ತಾನೇ ಏನು ಮಾಡಲು ಸಾಧ್ಯ?" ಪರಸ್ಪರರಲ್ಲಿ ಮಾತಿಗೆ ಮಾತು ಬೆಳೆದು ಅವರು ವಾದ ಬಿಟ್ಟು ಎದ್ದು ಹೋದರು. ಮನೆಯಲ್ಲಿ ಮತ್ತೆ ಅಶಾಂತಿ, ಎಲ್ಲರಿಗೂ ಉಪವಾಸ. ಆದರೆ ಹಸಿವೆ ತಡೆಯಲಾರದೇ ಗೋಮತಿ ಪೇಟೆಯಿಂದ ಮಿಠಾಯಿ ತರಿಸಿ ತಿಂದಳು. ಗೋದಾವರಿಗೆ ಸಹಿಸಲಾಗಲಿಲ್ಲ. ಬಹುಶಃ ಇವನ್ನೆಲ್ಲಾ ತನ್ನ ಮೇಲಿನ ಸ್ಪರ್ಧೆಯಿಂದ ಮಾಡುತ್ತಿದ್ದಾಳೆ ಎಂದುಕೊಂಡು, ಆಕೆಗಿಂತ ತಾನೇನೂ ಕಮ್ಮಿಯಿಲ್ಲವೆನ್ನುವಂತೆ ವರ್ತಿಸತೊಡಗಿದಳು.

ಅಂದು ಕೃಷ್ಣಾಷ್ಟಮಿಯ ಶುಭದಿನ. ಪಂದಿತಜೀ ಆಲಸ್ಯಬಿಟ್ಟು ಸಂಭ್ರಮ ಸಡಗರದಿಂದ ಕೃಷ್ಣನ ಪೂಜೆ ಮಾಡಿದರು. ಎಂದೂ ಉಪವಾಸ, ವ್ರತಾದಿಗಳನ್ನು ಮಾಡದ ಗೋಮತಿ, ಅಂದು ನಿರ್ಜಲ ಉಪವಾಸ ಮಾಡಿದರೆ ಗೋದಾವರಿ ಮಾತ್ರ ಉಪಾಹಾರ ಸ್ವೀಕರಿಸಿದ್ದು ಎಲ್ಲರಿಗೂ ಆಶ್ಚರ್ಯವಾಯಿತು. ಸಾಯಂಕಾಲ ಮಂದಿರಕ್ಕೆ ಹೋಗಲು, ಕುದುರೆಗಾಡಿ ತರಿಸೆಂದು ಗೋದಾವರಿ ಹಟ ಹಿಡಿದಾಗ, ಗೋಮತಿ "ಇಂದು ಹಬ್ಬದ ದಿನ. ಗಾಡಿಯವನು ಬಹಳ ಹಣ ಕೇಳುತ್ತಾನೆ. ಮತ್ತು ಹೆಜ್ಜೆಗೆ ಗಾಡಿಯೇಕೆಬೇಕು? ಅಧಿಕಾರ ಚಲಾಯಿಸುವುದು ಬಹಳ ಸರಳ. ಆದರೆ ಎತ್ತಿಸುತೆ ದುಡಿಯುವವರಿಗೆ ಗೊತ್ತು ಹಣದ ಮಹಿಮೆ".

ಮೂರು ವರ್ಷಗಳ ಹಿಂದೆ ಗೋದಾವರಿ ತನಗೆ ಆಡಿದ ಮಾತನ್ನು ಗೋಮತಿ ಈಗ ಅವಳಿಗೇ ತಿರುಗಿಸಿದ್ದಳು. ಬಹುಶಃ ಇದೇ ಇರಬಹುದು ಸಮಯ ಚಕ್ರ. ಇತ್ತಿತ್ತಲಾಗಿ ಗೋದಾವರಿ ಪ್ರತಿಯೊಂದು ಕೆಲಸವನ್ನೂ ಉದಾಸೀನವಾಗಿ ಮಾಡಿ ಮುಗಿಸುತ್ತಾಳೆ. ಒಮ್ಮೆ ಯಾವುದೋ ಧ್ಯಾನದಲ್ಲಿ ಅಡಿಗೆಗೆ ಹೆಚ್ಚು ಮಸಾಲೆ ಹಾಕಿದಾಗ, ಪಂಡಿತಜೀಗೆ ತಿನ್ನಬೇಕೆಂಬ ಚಪಲವಿದ್ದರೂ ಅನಾರೋಗ್ಯದ ಕಾರಣ ಹಿಂಜರಿದಾಗ ಗೋಮತಿ ಥಟ್ಟನೇ ನುಡಿದಳು "ಯಾಕೆ ವೃದ್ಧಾಪ್ಯದಲ್ಲಿ ನಾಲಿಗೆ ಚಪಲ ಹೆಚ್ಚುತ್ತಿದೆಯಲ್ಲ". ಇಂಥವೇ ಮಾತುಗಳನ್ನು ಆಗ ಗೋದಾವರಿ ನುಡಿಯುತ್ತಿದ್ದಳು. ಆದರೆ ಈಗ ಅಂಥ ಮಾತುಗಳನ್ನು ಕೇಳುವುದು ಅವಳ ದುರ್ಗತಿಯಾಗಿತ್ತು. ಒಟ್ಟಿನಲ್ಲಿ ಅವಳು ದಾರಿಯಲ್ಲಿ ಬಿದ್ದ ಕಲ್ಲಿನಂತಾಗಿದ್ದಳು. ಎಲ್ಲರೂ ತುಳಿಯುವವರೇ.

ಗಂಗಾ ಪರಮ ಪವಿತ್ರವಾದ ನದಿ. ಹಿಂದೆ ಮದುವೆಯಾದ ಹೊಸತರಲ್ಲಿ ಗೋದಾವರಿ, ನವದಂಪತಿಗಳನ್ನು ಕರೆದುಕೊಂಡು ಬಹಳ ಸಂಭ್ರಮದಿಂದ, ಗಂಗಾಪೂಜೆ ಮಾಡಿ ಹೋಗಿದ್ದಳು. ಆದರೆ ಇಂದು ಪತಿಯಿಂದ ನಿರ್ಲಕ್ಷಿತಳಾಗಿ ಗಂಗೆಯ ವಿಶಾಲ ತರೆಗಳಲ್ಲಿ ಸಮರ್ಪಿಸಿಕೊಳ್ಳಲು ಬಂದಿದ್ದಾಳೆ.

ಒಂದು ಕಾಲದಲ್ಲಿ ಅನಭಿಷಿಕ್ತ ರಾಣಿಯಂತೆ ಮೆರೆದು, ದಾಸಿಯಂತೆ ಬಾಳುವುದು ಅವಳಂತಹ ಸ್ವಾಭಿಮಾನಿ ಸ್ತ್ರೀಗೆ ಅಸಂಭವ. ಅಂಥ ಹೇಯ ಪರಿಸ್ಥಿತಿಯಲ್ಲಿ ನಿಮಿಷ ಕೂಡಾ ಇರುವುದು ಅಸಾಧ್ಯವಾಗಿದೆ. ಗೋದಾವರಿಯ ಪರಿಸ್ಥಿತಿ ಪುನಃ ಪುನಃ ಗಂಟು ಹಾಕಿದರೂ ಬಿಚ್ಚಿಕೊಳ್ಳುವಂತಹ ಹಳೆಯ ಹಗ್ಗದಂತಾಗಿದೆ. ಮನೆಯ ಗೊಂದಲ, ಪತಿಯ ನಿರ್ಲಕ್ಷ್ಯ, ಸವತಿಯ ಚುಚ್ಚುನುಡಿಗಳಿಂದ ಬೇಸತ್ತು ಪ್ರಾಣತ್ಯಾಗದ ಬೆದರಿಕೆ ಹಾಕಿದಾಗ ಪಂಡಿತಜೀ ಸಿಟ್ಟಿನಿಂದ "ಸಾಯುವಪದಾದರೆ ಸತ್ತುಹೋಗು" ಎಂದ ಕಠೋರ ಮಾತುಗಳು ಅವಳೆದೆಯನ್ನು ಶೂಲದಂತೆ ತಿವಿಯುತ್ತಿದ್ದವು. ತಾನು ನುಡಿದ ಕಠೋರ ಮಾತುಗಳು ಮರೆತುಹೋಗಿ, ಅವರಿಬ್ಬರ ತಿರಸ್ಕಾರದ ನುಡಿಗಳು ಅವಳೆದೆಯಲ್ಲಿ ಆಳವಾಗಿ ನೆಟ್ಟಿದ್ದವು. ಆಕೆಗೆ ಗಂಗೆಯಲ್ಲಿ ಶರಣು ಹೋಗುವುದನ್ನು ಬಿಟ್ಟು ಬೇರೆ ಮಾರ್ಗ ಗೋಚರಿಸುತ್ತಿರಲಿಲ್ಲ.

ರಾತ್ರಿಯ ನಿಶ್ಶಬ್ದ ನೀರವತೆಯಲ್ಲಿ, ಊರೆಲ್ಲಾ ಮಲಗಿಕೊಂಡ ಮೇಲೆ ಗೋದಾವರಿ ಮೆಲ್ಲನೆ ಮನೆಯಿಂದ ಹೊರಬಿದ್ದಳು. ಆಕಾಶದಲ್ಲಿ ಕಪ್ಪು ಮೋಡಗಳು ನೆರೆದುಕೊಂಡು ರಾತ್ರಿ ಕಾಡಿಗೆಯಂತೆ ಕಪ್ಪಾಗಿತ್ತು. ಸಣ್ಣನೆ ಮಳೆ ಆರಂಭವಾಗಿ, ಅವಳ ಕಣ್ಣಿಂದ ಸುರಿಯುವ ಅಶ್ರುಬಿಂದುಗಳು ಮಳೆಯ ನೀರಿನೊಡನೆ ಬೆರೆತುಹೋಗುತ್ತಿದ್ದವು. ಪ್ರೇಮಬಂಧನ ಅಪಮಾನದ ಮುಂದೆ ಕೋಮಲವಾಗಿಯೂ, ವಿಯೋಗದ ಮುಂದೆ ದೃಢವಾಗಿಯೂ ಇತ್ತು. ಆಕೆ ಮನೆಯ ಚೌಕಟ್ಟಿಗೆ ನಿಂತು ದುಃಖಿಸಿದಳು. ಇದೇ ಮನೆಯಲ್ಲವೆ ಅವಳಿಗೆ ಗೃಹಿಣಿ ಪಟ್ಟ ಕೊಟ್ಟು ಆದರ ಮರ್ಯಾದೆ ನೀಡಿದ್ದು. ಆದರೆ ಅಷ್ಟರಲ್ಲಿಯೇ ಪತಿಯ ಕಠೋರ ಮಾತುಗಳು ನೆನಪಿಗೆ ಬಂದವು. ಕಿತ್ತಿಡಲಾರದೇ ಒಂದೊಂದೇ ಹೆಜ್ಜೆಗಳನ್ನು ಎತ್ತಿಡುತ್ತಿದ್ದಳು. ಒಂದು ವೇಳೆ ಪಂಡಿತಜೀ ಇಂಥ ಸಮಯದಲ್ಲಿ ಮಳೆಯಲ್ಲಿ ನೆನೆಯುತ್ತ, ಬಿರುಗಾಳಿನಿಂದ ಓಡುತ್ತ ಬಂದು ಗೋದಾವರಿಯ ನಡುಗುವ ಕೈಗಳನ್ನು ಹಿಡಿದು, ತಮ್ಮ ಕಂಪಿಸುವ ಹೃದಯಕ್ಕೆ ಒತ್ತಿಕೊಂಡು "ಪ್ರಿಯೆ"! ಅಂದಿದ್ದರೆ ಆಕೆಯ ವಿಚಾರ ಬದಲಾಗುತ್ತಿತ್ತೇ? ಹೇಗೆ ಹೇಳಲು ಸಾಧ್ಯ.

ಸಿರಿಯ ನಿಸ್ತಬ್ಧತೆಯಲ್ಲಿ ಗಂಗೆಯ ಅಲೆಗಳ ಘೋರ್ಗರೆತ ಭಯಾನಕವಾಗಿತ್ತು. ಆಕಾಶದಲ್ಲಿ ಥಳ್ಳನೆ ಮಿಂಚು ಹೊಡೆದಾಗ, ಆ ಪ್ರಕಾಶದಲ್ಲಿ ಅಲೆಗಳು ಹೊಳೆದಂತಾಗುತ್ತಿದ್ದವು. ಬೆಳಕು ಮದೋನ್ಮತ್ತ ಆನೆಯ ರೂಪ ಧರಿಸಿದಂತೆ ಕಾಣುತ್ತಿತ್ತು. ಜೀವನದ ಎಲ್ಲ ದೃಶ್ಯಗಳೂ ಕಣ್ಮುಂದೆ ಹಾದುಹೋಗುತ್ತಿದ್ದವು. ಹೃದಯದಲ್ಲಿದ್ದ ವಿಚಾರವಲೆಗಳು ಪರಸ್ಪರ ತಾಕಲಾಡಿ ಅಂಧಕಾರದಲ್ಲಿ ಅದೃಶ್ಯವಾಗುತ್ತಿದ್ದವು. ಹೀಗೆ ಮದೋನ್ಮತ್ತಳಾಗಿ ಅಬ್ಬರಿಸಿ ಹರಿಯುತ್ತಿರುವ ಗಂಗೆ ಗೋದಾವರಿಗೆ ಶಾಂತತೆಯನ್ನು ನೀಡಬಲ್ಲಳೇ? ಅವಳ ಅಲೆಗಳಲ್ಲಿ ಮಧುರಧ್ವನಿಗಳಿಲ್ಲ, ಆ ಕರ್ಕಶತೆಯಲ್ಲಿ ಕಾರುಣ್ಯವಿಲ್ಲ. ಈ ಭೀಕರ ರಾತ್ರಿಯಲ್ಲಿ ಉದ್ದಂಡತಾ ಮತ್ತು ನಿರ್ಭಯತೆಯ ಮೂರ್ತಿಯಂತೆ ಕಾಣುತ್ತಿದ್ದಾಳೆ.

ಗಂಗೆಯ ದಂಡೆಯ ಮೇಲೆ ಕುಳಿತ ಗೋದಾವರಿಯ ಮನೋವಿಪ್ಲವವನ್ನು ಯಾರು ತಾನೇ ಹೇಳಲು ಸಾಧ್ಯ? ತನ್ನ ಪತಿ ಬರಬಹುದೆಂಬ ಆಸೆಯೇ? ಪ್ರೇಮಬಂಧನ ಎಷ್ಟು ಗಟ್ಟಿಯೆಂದರೆ, ಸಾಯಬೇಕೆನ್ನುವ ಹೊತ್ತಿನಲ್ಲಿ ಪತಿಯ ಬಗ್ಗೆ ಮಮಕಾರ, ಆ ಅಂಧಕಾರದಲ್ಲಿ ಈರ್ಷ್ಯಾ ನಿಷ್ಠುರತಾ ಮತ್ತು ನಿರಾಶೆಯಿಂದ ಹತಾಶಳಾದ ಆ ಅಬಲೆ ಗಂಗೆಯಲ್ಲಿ ಧುಮುಕಿದಳು. ಎಲ್ಲವನ್ನೂ ತನ್ನೊಳಗೆ ಸೆಳೆದುಕೊಳ್ಳುವ ಸಹಜ ಸ್ವಭಾವದ ಗಂಗೆಯ ಅಲೆಗಳು ಅವಳನ್ನು ಒಳಗೆ ಎಳೆದುಕೊಂಡು ನುಂಗಿಹಾಕಿದವು. ಎಂದಿನಂತೆ ಸೂರ್ಯೋದಯವಾಯಿತು. ಗೋದಾವರಿ ಮನೆಯಲ್ಲಿರಲಿಲ್ಲ. ಅವಳ ಹಾಸಿಗೆಯ ಮೇಲೆ ಪತ್ರ ಸಿಕ್ಕಿತು.

"ಸ್ವಾಮಿ! ಸಂಸಾರದಲ್ಲಿ ನೀವಲ್ಲದೇ ನನಗೆ ಯಾರು ದಿಕ್ಕು? ನಿಸ್ವಾರ್ಥದಿಂದ ನಾನು ನನ್ನ ಸರ್ವಸ್ವಗಳನ್ನು ನಿಮಗರ್ಪಿಸಿದೆ. ಆದರೆ ನಾನು ನಿಮ್ಮಿಂದ ದೂರವಾದರೆ ಮಾತ್ರ ನಿಮಗೆ ಸುಖವಿದೆ. ಆದ್ದರಿಂದ ನನ್ನ ಪ್ರಾಣವನ್ನೇ ನಿಮಗರ್ಪಿಸುತ್ತಿದ್ದೇನೆ. ನನ್ನ ಅಪರಾಧಗಳಿಗೆ ಕ್ಷಮೆ ಇರಲಿ. ಈಶ್ವರ ನಿಮಗೆ ಸದಾ ಸುಖವನ್ನೇ ನೀಡಲಿ".

ಪತ್ರವನ್ನೋದುತ್ತಿದ್ದಂತೆಯೇ ಪಂಡಿತಜೀ ಮೂರ್ಛಿತರಾದಂತಾದರು. ಗೋಮತಿ ಕಣ್ಣೀರು ಹಾಕುತ್ತ ದುಃಖಿಸಿದಳು. ಆದರೆ ನಿಜವಾಗಿಯೂ ಅವಳ ಕಣ್ಣೀರು ದುಃಖದ ಕಣ್ಣೀರೆ?

---

* ವೀಣಾ ಆರ್. ಕುಲಕರ್ಣಿ. 'ಕಮಲ್ ಕುಂಜ್' ನಂ. ೬೧/೧, ಕಾಮನಕಟ್ಟಿ, ಧಾರವಾಡ - ೫೮೦ ೦೦೧.

ಶ್ಯಾಮ ಮನೋಹರ ಅವರ ಕಥೆಗಳು

ಮರಾಠಿ : ಚಂದ್ರಶೇಖರ ಜಹಗೀರದಾರ

ಅನು : ಚಂದ್ರಕಾಂತ ಪೋಕಳೆ

-೧-

ಮಧ್ಯಮ ವರ್ಗದ ಆದರ್ಶವಾದದಿಂದ ನಿರ್ಮಾಣಗೊಂಡ ಮರಾಠಿ ಕಥೆಗಳು ಮೇಲ್ನೋಟಕ್ಕೆ ವ್ಯಕ್ತಿ ಚಿತ್ರಣ, ಘಟನಾಪ್ರಧಾನ, ಮನೋವಿಶ್ಲೇಷಣೆ, ಕಾವ್ಯಾತ್ಮಕತೆ ಇಂಥ ವಿವಿಧ ಮುಖಗಳಿಂದ ಮುಂದುವರೆದದ್ದು ಕಂಡುಬಂದರೂ ವೆಂಕಟೇಶ ಮಾಡಗೂಳಕರ ಮತ್ತು ಕೆಲವು ಪ್ರಮಾಣದಲ್ಲಿ ಬಾಬುರಾವ ಬಾಗೂಲರನ್ನು ಬಿಟ್ಟರೆ ದಿವಾಕರ ಕೃಷ್ಣನಿಂದ ಹಿಡಿದು ನೇರವಾಗಿ ಜಿ. ಎ. ಕುಲಕರ್ಣಿವರೆಗೆ ಗೋಚರಿಸುವ ಮರಾಠಿ ಕಥೆಗಳ ಖಾಸಾ ಸ್ವಭಾವ ಧರ್ಮವೆಂದರೆ ಉತ್ಕಟತೆ, ಉಪರೋಧ ಹಾಗೂ ಉಪಹಾಸವೇ ಆಗಿದೆ. ಉತ್ಕಟವಾದ ಕಾವ್ಯಾತ್ಮಕ ವರ್ಣನೆ ನೀಡಿ, ಭಾವಪೂರ್ಣ ಬಿಂದುವಿನ ಮುಕ್ತಾಯಕ್ಕೆ ಓದುಗನನ್ನು ಒಯ್ಯುವುದೇ ಉತ್ಕಟ ಕಥೆಗಳ ವೈಶಿಷ್ಟ್ಯ. ದಿವಾಕರ ಕೃಷ್ಣನ 'ಮೃಣಾಲಿನಚೀ ಲಾವಣ್ಯ', ಪು. ಭಾ. ಭಾವೆಯ 'ಸಾವಲ್ಯಾ'. ಅರವಿಂದ ಗೋಖಲೆಯ 'ಮಾಹೇರ' ಅಥವಾ 'ಕಾತರವೇಳ'; ಗಂಗಾಧರ ಗಾಡಗೀಳರ 'ಘಾಂಟ' 'ಉದ್ಯಾಚಿ ಮಾವುಲಿ' ಅಥವಾ 'ತಲಾವಾತಲೇ ಚಾಂದಣೆ' ಇವುಗಳೆಲ್ಲ ಉತ್ಕಟ ಕಥೆಗಳ ಕೆಲ ಉದಾಹರಣೆಗಳು. ಇದೇ ಲೇಖಕರ, ಅನುಕ್ರಮವಾಗಿ 'ಜಗಾಯಚಯ ಮಲಾ', 'ಪಶು', 'ಆರಾಮಕುರ್ಚಿ', 'ಕಿವಲೇಲಿ ಮಾಣಸೆ' ಇವು ಉಪರೋಧದ ಉದಾಹರಣೆಗಳು. ಸಮಕಾಲೀನ ಸಾಮಾಜಿಕ ಮೌಲ್ಯಗಳ ಬಗೆಗಿನ ಉಪರೋಧ, ವಿರಸ ಇತ್ಯಾದಿ ಆವಿಷ್ಕಾರ ಈ ಕಥೆಗಳಲ್ಲಿ ಗೋಚರಿಸುತ್ತದೆ. ಮರಾಠಿ ಕಥೆಗಳ ಸ್ವಭಾವಧರ್ಮವೆಂದು ಉಪಹಾಸದ ಕೆಲ ಉದಾಹರಣೆ ನೀಡಿದೆ. ಚಿ. ವಿ. ಜೋಶಿ ಉಪಹಾಸವನ್ನೊಂದು ನಿರ್ಮಲ ಅವ್ಯೆಯಕ್ತಿಕ ಹಾಗೂ ಘಟನಾ ಪ್ರಧಾನ ಪಾತಳಿಗೊಯ್ದರೆ ಅನಂತರದ ಹಾಸ್ಯ ಲೇಖಕರು, ಶಬ್ದಗಳ ಚೌಕಟ್ಟಿನ ಆಧಾರದಿಂದ ವ್ಯಕ್ತಿಗತ ಇಲ್ಲವೇ ವಿಶಿಷ್ಟ ಸಾಮಾಜಿಕ ವ್ಯಂಗ್ಯ ದರ್ಶನಕ್ಕಾಗಿ ಅದನ್ನು ಬಳಸಿಕೊಂಡರು. ಒಟ್ಟಿನಲ್ಲಿ ಉತ್ಕಟತೆ, ಉಪರೋಧ ಹಾಗೂ ಉಪಹಾಸ ಈ ಮೂರು ಘಟಕಗಳನ್ನೂ ಮರಾಠಿ ಕಥಾಪರಂಪರೆ ಸತತವಾಗಿ ಬಳಸಿಕೊಂಡಂತಿದೆ. ಮಧ್ಯಂತರ ಕಾಲದಲ್ಲಂತೂ ಉತ್ಕಟತೆಯ ಮೌಲ್ಯವಾಗಿ ಕಥೆಯೊಳಗಿನ ಪ್ರತಿಮಾತ್ಮಕ ಹಾಗೂ ಕಾವ್ಯಾತ್ಮಕಕ್ಕೇ ಹೆಚ್ಚು ಮಹತ್ವ ಸಿಕ್ಕಿತು. ಮರಾಠಿ ಕತೆ ಈಗ ಕಾವ್ಯದ ಕಡೆ ಹೊರಳುತ್ತಿದೆ ಎನ್ನುವ ವಿಮರ್ಶೆಯೂ ಇದೇ ಕಾಲದಲ್ಲಿ ಹುಟ್ಟಿಕೊಂಡಿತು. 'ಕಾಳಾಸೂರ್ಯ'- ಇದೊಂದು ಭಾವಕಾವ್ಯವೆನ್ನುವ ವಿಮರ್ಶಕರು ನಿತ್ಯದ ಆಡುಮಾತು ಹಾಗೂ ಸೂಕ್ಷ್ಮವಾದ

ಹಾಸ್ಯದ ಬಳಕೆಯಿಂದ ಮೂಡಿಬರುವ ಕಮಲ ದೇಸಾಯಿಯ ಕಥೆಗಳ ಹೊಸತನ ನಿರ್ಲಕ್ಷಿಸಿ ಸ್ವತಃ ಬೌದ್ಧಿಕ ಗೊಂದಲಕ್ಕೊಳಗಾಗಬೇಕಾಯಿತು.

-೨-

ಉತ್ಕಟತೆ, ಉಪರೋಧ ಹಾಗೂ ಉಪಹಾಸ ಈ ವೈಶಿಷ್ಟ್ಯವುಳ್ಳ ಮರಾಠಿ ಕಥಾಪರಂಪರ ಸಮಕಾಲೀನ ವಾಙ್ಮಯದಲ್ಲಿ ಅದೆಷ್ಟು ಬದಲಾಗಿದೆ ಎನ್ನುವದನ್ನು ಗಮನಿಸಬೇಕಾದರೆ ಶ್ಯಾಮ ಮನೋಹರರ ಕಥೆ ಅವಶ್ಯಕ ಕೇಂದ್ರಬಿಂದುವೆನಿಸುತ್ತದೆ. ಶ್ಯಾಮ ಮನೋಹರರ ಕಥೆ ಉಳಿದವರಿಗಿಂತ ಭಿನ್ನವಾಗುವದು ಅದರ ಸಮಕಾಲೀನ ಕಾರಣಕ್ಕಾಗಿ. ಸಮಕಾಲೀನ ಸಾಮಾಜಿಕ ವಾಙ್ಮಯಕ್ಕೆ ಒಂದು ವ್ಯಾಪಕವಾದ ಪರಿಣಾಮ ನೀಡಿ ಅವರು ಮಾನವೀಯ ಸಂಬಂಧದ ವಿಶ್ಲೇಷಣೆ ಮಾಡುತ್ತಾರೆ. ಈ ವಿಶ್ಲೇಷಣೆ ಬರೇ ಉತ್ಕಟತೆಗೆ ಹಾಗೂ ಉಪರೋಧಕ್ಕೆ ಸಿಮೀತವಾಗಿಲ್ಲದಿರುವದೇ ಅವರ ವೈಶಿಷ್ಟ್ಯ. ಅಲ್ಲದೆ, ಸಮಕಾಲೀನತೆ ಹಾಗೂ ನೈತಿಕತೆಯನ್ನು ಶಾಶ್ವತವಾಗಿ ಉಳಿಸಿಕೊಂಡು ಫ್ಯಾಂಟಸಿಯನ್ನು ಬಳಸಿಕೊಳ್ಳುತ್ತಾರೆ.

'ಘೋಳಕ್ಯಾತ ಪರಾಭವ' (ಗುಂಪಿನಲ್ಲಿ ಪರಾಭವ) - ಈ ಕತೆ ಶ್ಯಾಮ ಅವರ ವಿವಿಧ ವಸ್ತುಗಳ ಸೂತ್ರದಲ್ಲಿ ಏಕಾತ್ಮಕತೆಯನ್ನು ವ್ಯಕ್ತಪಡಿಸುತ್ತಿದೆ. ಗುಂಪಿನ ಅಧ್ಯಾತ್ಮಕ್ಕೆ ಈ ಕಥೆ ಸಂಬಂಧಿಸಿದ್ದು. ಈ ಕಥೆಯಲ್ಲಿ ವೈಯಕ್ತಿಕ ತಾನು, ತನ್ನ ಸ್ವಂತದ್ದು, ಗುಂಪಿನಲ್ಲಿ ಸ್ವಂತದ್ದು ಹಾಗೂ ಗುಂಪಿನೊಳಗಿನದು ಹೀಗೆ ಮೂರು ರೀತಿಯ ವರ್ಣನೆಯಿದೆ. ರಸ್ತೆಯ ಗುಂಪು, ಸ್ಟ್ಯಾಂಡ ಮೇಲಿನ ಗುಂಪು, ಮನೆಯೊಳಗಿನ ಗುಂಪು - ಈ ಎಲ್ಲ ಗುಂಪು ಒಂದೇ. ಒಂದು ಗುಂಪಿನ ರೂಪಾಂತರ ಇನ್ನೊಂದು ಗುಂಪಿನಲ್ಲಾಗುತ್ತದೆ. ಗುಂಪಿಗೆ ಆತ್ಮೀಯವಾಗಿ ತಿಳಿಸಲು ನೈತಿಕ ಬಲ ಅವಶ್ಯಕ ಪರಿಣಾಮ. ಸೃಜನಶೀಲವಾದ ನೈತಿಕ ಸ್ವಾತಂತ್ರ್ಯದಲ್ಲೇ ಸಮಕಾಲೀನ ಸಮಸ್ಯೆಯನ್ನು ಅರ್ಥೈಸುವ ಪ್ರಯತ್ನ ಶ್ಯಾಮ ಮನೋಹರ ಅವರ ಕಥೆ ಮಾಡುತ್ತದೆ.

ಈ ನೈತಿಕ ಶಕ್ತಿಯಿಂದಲೇ ವ್ಯಕ್ತಿ, ಕುಟುಂಬ, ಸಮೂಹ, ಸಮಾಜ ಇವುಗಳ ಪರಸ್ಪರ ಸಂಬಂಧ; ವ್ಯಕ್ತಿಯ ಸ್ಥಾನ-ಮಾನ, ಸಾಮಾಜಿಕ ಹೊಣೆಗಾರಿಕೆ ಇವುಗಳಲ್ಲಿರುವ ಅಂತರ ವಿರೋಧ ಹಾಗೂ ಉದ್ವಿಗ್ನತೆಯನ್ನು ಹುಡುಕಲು ಪ್ರಯತ್ನಿಸುವ ಶ್ಯಾಮ ಮನೋಹರ ಅವರ ಶೈಲಿ ನಿರ್ಲಿಪ್ತ ಧಾಟಿಯದು. ಏಜಂಟ, ಮೇಜರ, ಮಾಸ್ತರ, ಮೆನೇಜರ, ಸಾಮಾಜಿಕ ಕಾರ್ಯಕರ್ತ, ಗುಮಾಸ್ತ, ಶಾಸ್ತ್ರಜ್ಞ, ರೈತ ಇವರೆಲ್ಲ ಶ್ಯಾಮ ಅವರ ಕಥೆಗಳಲ್ಲಿ ಗೋಚರಿಸುವ ಪಾತ್ರಗಳು. ಇವರೆಲ್ಲ ಗುಂಪಿನಲ್ಲಿ ಬಂಧಿತವಾಗುವ ಹಾಗೂ ಬತ್ತಲೆಯಾಗುವ ಈ ಜನ ಪ್ರಚಲಿತ ಸಮಾಜವ್ಯವಸ್ಥೆಯಲ್ಲಿ ಅಧ್ವ ಜೀವದ ರೂಪದಲ್ಲಿ ಗೋಚರಿಸುತ್ತಾರೆ. ವೈಯಕ್ತಿಕ ತಾನು ಹಾಗೂ ಸಮಾಜದಲ್ಲಿ ಪಾರಾಗಲು ಬೇಕಾಗುವ ಇನ್ನೊಂದು ಭೂಮಿಕೆ ಈ ಎರಡರ ವ್ಯವಸ್ಥಿತ ಸಮನ್ವಯಕ್ಕಾಗಿ ಬೇಕಾಗುವ ನೈತಿಕ ಹೊಣೆಗಾರಿಕೆಯೇ ಶ್ಯಾಮ ಅವರ ಕಥೆಯ ಪ್ರಮುಖ ವಸ್ತು. ಜೊತೆಗೆ ಮಧ್ಯಮ ವರ್ಗದ ಪೊಳ್ಳು ಜಗತ್ತು, ಅದರೊಳಗಿನ ನೈತಿಕ ಜಗತ್ತನ್ನು ಉಪರೋಧ ಅಥವಾ ಉಪಹಾಸದ ನಿರ್ಲಿಪ್ತ ಧಾಟಿಯಲ್ಲಿ ಚಿತ್ರಿಸುತ್ತಾರೆ. ಈ ರೀತಿ ವರ್ಣಿಸುವಾಗ ಭಾವುಕ ಕಾವ್ಯಾತ್ಮಕತೆಯನ್ನು ದೂರ ತಳ್ಳುತ್ತಾರೆ. 'ಕಂಟಿನ್ಯೂಟಿ' (ನಿರಂತರತೆ) ಎಂಬ ಕಥೆಯಲ್ಲಿ ಘಟಕಗಳ ಕಾರ್ಯಕಾರಣ ಸಂಬಂಧದ ಹಿನ್ನಲೆಯಲ್ಲಿ ವಿಶಿಷ್ಟ ರೀತಿಯ ಕಥಾಸೂತ್ರವನ್ನು ಸತತವಾಗಿ ಜೋಡಿಸುತ್ತಾರೆ. 'ಕ್ರೌರ್ಯ', 'ಸೆಮ್ಯುವೆಲ್ ಬೆಕೆಟ್‌ಗಾಗೊಂದು ಕಥೆ' ಯಲ್ಲಿ ಇದೇ ರೀತಿಯ ಸಾತತ್ಯವನ್ನು 'ಪರಿಪೂರ್ಣ ವಿಕಾಸ'ದ ರೀತಿಯಲ್ಲಿ ಮಾಡಿದ್ದಾರೆ.

ಶ್ಯಾಮ ಅವರ ಬಹಳಷ್ಟು ಕಥೆಗಳಲ್ಲಿ ಕಾದಂಬರಿ ಸದೃಶವಾದ ಕಾಲವಿರುತ್ತದೆ. 'ಕಾಂಪಿಟೀಶನ'ದಲ್ಲಿ ಇಪ್ಪತ್ತೈದು ವರ್ಷಗಳದ್ದು. 'ವಾಸು ಇಂಥಲ್ಲಿ ಹೀಗ ಹಾಗ' ಕಥೆಯಲ್ಲಿ ಬಾಲ್ಯ, ತರುಣ, ನೌಕರಿ, ಜೈಲು ಶಿಕ್ಷೆಯಂತಹ ದೀರ್ಘ ಕಾಲಾವಧಿಯಿದೆ.

ಸ್ವಂತ ಸುರಕ್ಷಿತತೆಯಲ್ಲಿ ಬಂಧಿಸ್ತಗೊಳ್ಳಲು ಹವಣಿಸುವ, ಬದುಕು ಕರಿಯರ್ ಎಂದು ಭಾವಿಸುವ ನಿರಂತರ ದುಃಖದಿಂದ ಛಿದ್ರಗೊಂಡ ಅಸ್ತಿತ್ವದೊಂದಿಗೆ ಉಳಿದವರೊಂದಿಗೆ ಸಂಪರ್ಕ ಸಾಧಿಸಿ ಬದುಕಲು ಹವಣಿಸುವ ನೈತಿಕತೆಯನ್ನೇ ಶ್ಯಾಮ ಎತ್ತಲು ಪ್ರಯತ್ನಿಸುತ್ತಾರೆ. 'ಕ್ರೌರ್ಯ' ಕಥೆಯಲ್ಲಿ ದೀರ್ಘ ಕಾವ್ಯದ ನಾಜೂಕು ದ್ರುಪದದಂತ ಕ್ರೌರ್ಯ ಭೋಗಿಸುವ ರೀತಿ ಅನನ್ಯ.

ಮಾನವ ನೈತಿಕತೆ ಕಳಕೊಳ್ಳಲು ಔದ್ಯೋಗಿಕ, ಯಾಂತ್ರಿಕ ಸಂಸ್ಕೃತಿಯೇ ಕಾರಣವೆಂಬ ಗೋಖಲೆ ಗಾಡಗೀಳರ ಕಥೆಗಳಲ್ಲಿ ವ್ಯಕ್ತವಾಗುವ ಮರ್ದೀಕರರ ಧಾಟಿ ಶ್ಯಾಮ ಮನೋಹರ ಅವರಲ್ಲಿಲ್ಲ ಎನ್ನುವದೇ ಮಹತ್ವದ ಅಂಶವಾಗಿದೆ.

'ನಾಗರಿಕ' ಎಂಬ ಕಥೆ ಮೂತ್ರ ಹೊಯ್ಯುವದು ಹಾಗೂ ತೀರ್ಥ ಪ್ರಾಶನ ಮಾಡುವದು-ಈ ಎರಡು ಘಟನೆಗಳಿಂದ ಸಮೂಹದ ನೈತಿಕತೆಯನ್ನು ಪರೀಕ್ಷಿಸುವ ರೀತಿ ವಿಶಿಷ್ಟವಾದುದು. ವ್ಯಕ್ತಿ ಸಮಷ್ಟಿಯನ್ನು ಒಂದೇ ಪಾತಳಿಯಲ್ಲಿ ತರುವ ನೈಸರ್ಗಿಕ ಕ್ರಿಯೆ, ಅದು ಮುಗಿದ ಮರುಕ್ಷಣ ಪುನಃ ನಾಗರಿಕರಾಗುತ್ತಾರೆ. ತೀರ್ಥ ಸ್ವೀಕರಿಸುವಾಗಲೂ ಶ್ರದ್ಧೆಯೂ ಅಲ್ಲ, ಅಶ್ರದ್ಧೆಯೂ ಇಲ್ಲದೆ ಪವಿತ್ರ ನೈತಿಕ ನಿಷ್ಠೆಯಲ್ಲಿ ಸಿಲುಕಿದ ಸಮೂಹದ ದರ್ಶನ ಇಲ್ಲಿ ಮಾಡಿಸಲಾಗಿದೆ. ಶ್ಯಾಮ ಅವರ ಬಹಳಷ್ಟು ಕಥೆಗಳ ವಿಷಯಗಳು ಇದೇ ಸ್ವರೂಪವಲ್ಲಿವೆ.

-೩-

ಸಾಮಾಜಿಕ ವಾಸ್ತವ ಪಾತಳಿಯಲ್ಲಿ ಫ್ಯಾಂಟಸಿಯನ್ನು ಬಳಸುವ ಶ್ಯಾಮ ಅವರ ಕಥೆಗಳ ಇನ್ನೊಂದು ಗುಂಪಿದೆ. ಫ್ಯಾಂಟಸಿಯ ವಿರುದ್ಧ, ಭಾವ ಕಾವ್ಯಾತ್ಮಕತೆಯ ಪಾತಳಿಯಾಚೆಗೆ ಹೋಗಿ ಅದರ ಬಳಕೆ ಮಾಡುವ ವಿಷಯದ ವ್ಯಾಪಕತೆ, ಅದರ ಸಾತತ್ಯ ಹಾಗೂ ಒಟ್ಟು ವಾಙ್ಮಯದ ವ್ಯಕ್ತಿಮತ್ವದ ಸನಿಹದಲ್ಲಿರುವ ಕೆಲಸ ಲೇಖಕನದು. ಸಮಕಾಲೀನ ಮರಾಠಿ ಕಥೆಯಲ್ಲಿ ಜಿ. ಎ. ಕುಲಕರ್ಣಿ ಹಾಗೂ ಶ್ಯಾಮ ಮನೋಹರ ಇಂಥ ಸ್ವರೂಪದ ಲೇಖಕರು.

ಶ್ಯಾಮ ಮನೋಹರ ಅವರ ಫ್ಯಾಂಟಸಿ 'ಜಿಎ' ಅವರಂತೆ ಗಾಥಿಕ್ ಹಾಗೂ ಆಧಿಭೌತಿಕ ಸ್ವರೂಪದ್ದಲ್ಲ, ಅದು ವಾಸ್ತವದ ಪರಧಿಯಲ್ಲಿ ನಿಂತೇ ಅದರೊಳಗಿನ ನೈತಿಕ ಕೇಂದ್ರ ಹುಡುಕುತ್ತಿರುವದರಿಂದ ವಾಸ್ತವ ಹಾಗೂ ಫ್ಯಾಂಟಸಿಯ 'ಮೋಜಾಯಿಕ' ಮಾದರಿಯ ಆಕೃತಿ ಬಂಧವನ್ನು ಶ್ಯಾಮ ನಿರ್ಮಾಣ ಮಾಡುತ್ತಾರೆ. ಹೀಗಾಗಿ ಅವರ ಕಥೆಗಳಿಗೆ 'ಫೆಬಲ್' ರೀತಿಯ ನೈತಿಕತೆ ಪ್ರಾಪ್ತವಾಗುತ್ತದೆ. ಸಮಕಾಲೀನತೆ ಹಾಗೂ ಫ್ಯಾಂಟಸಿಗೆ ಒಂದು ಉತ್ತಮ ಉದಾಹರಣೆ ಎಂದರೆ 'ರಿಲೇಶನಶಿಪ್' ಎಂಬ ಕಥೆ.

ಪ್ರದೂಷಣಗೊಂಡ ನಾಗರೀ ಸಂಸ್ಕೃತಿಗೆ ನೈತಿಕ ಉದ್ವಿಗ್ನತೆಯು ಅದೆಷ್ಟು ಭಯಾನಕ ಹಾಗೂ ದುಃಖದಿಂದ ಕೂಡಿರುವದು ಸಾಧ್ಯ ಎನ್ನುವದನ್ನು 'ತಾತ್ಪರ್ಯ ಕಥಾ'ದಿಂದ ತಿಳಿದುಕೊಳ್ಳಬಹುದು. ನೈತಿಕ ಅವಶ್ಯಕತೆಯು ವ್ಯಕ್ತಿಯೊಂದಿಗೆ, ಮಾಸ್ ಸಂಸ್ಕೃತಿಯದ್ದೂ ಸಹ ದಾರುಣ ಶೋಕಾಂತಿಕೆಯಾಗಿದೆ.

'ಗುರುತ್ವಪಸರಣಾಚೆ ಪ್ರದೇಶ' ಎಂಬ ಕಥೆಯು ಒಟ್ಟು ಸಂಸ್ಕೃತಿಯೊಳಗಿನ ರಾಷ್ಟ್ರ, ಸಮಾಜ, ಸೈನ್ಯ, ಸಂರಕ್ಷಣೆ, ಯುದ್ಧ, ತಂತ್ರವಿಜ್ಞಾನ ಈ ಎಲ್ಲ ಸಂಕಲ್ಪನೆಯೊಂದಿಗೆ ತಮ್ಮೊಂದಿಗೆ ಇರುವ ಸಂಬಂಧವನ್ನು

ಶೋಧಿಸುವ ಸೈನಿಕನ ಬಗ್ಗೆಯಿದೆ. ಸಮಾಜದೊಳಗಿನ ಅಂತರ ವಿರೋಧ ನೈತಿಕತೆ, ಸಾಮಾನ್ಯ ಜನರ ಸಾಮಾಜಿಕ ಬದ್ಧತೆ, ಯಾವ ಆಘಾತವನ್ನೂ ಸಹಿಸುವ ಸಂಸ್ಕೃತಿಯ ಹವ್ಯಾಸ; ಮತ್ತು ಇದೆಲ್ಲದರ ನಡುವೆ ಸಿಕ್ಕ ತೊಳಲಾಡುವ, ವೇದನೆಯಿಂದ ಮುಕ್ತಿ ಪಡೆಯುವ ಸಂವೇದನಾಶೀಲ ವ್ಯಕ್ತಿ ಈ ವಿಷಯದ ಬಗೆಗಿನ ಸಮಕಾಲೀನ ಫ್ಯಾಂಟಸಿ ರೂಪದಲ್ಲಿ ವ್ಯಕ್ತವಾಗುವ ಈ ಕತೆಯು ಶ್ಯಾಮ ಮನೋಹರರ ಅಪ್ರತಿಮ ಕತೆಯಾಗಿದೆ.

'ಮಿ. ಥಿಂಕರ' ಇದು ಉತ್ಕ್ರಾಂತಿ ತತ್ವವನ್ನು ಫ್ಯಾಂಟಸಿಗೊಯ್ದು ಸಮಕಾಲೀನ ಸಂದರ್ಭ ನೀಡುವ ಕಥೆ. 'ಗುರುತ್ವಾಕರ್ಷಣಾಚೆ ಪ್ರದೇಶ'ದಲ್ಲಿ ಸಂಸ್ಕೃತಿಗೆ ಬೇಸತ್ತು, ದೂರ ಹೋಗಿ ಸ್ವಾತಂತ್ರ್ಯ ಗಳಿಸಲು ಹವಣಿಸುವ ಒಂಟಿ ಸೈನಿಕನಿದ್ದಾನೆ. 'ಮಿ. ಥಿಂಕರ'ನಲ್ಲಿ ಸಿಕ್ಕ ಸ್ವಾತಂತ್ರ್ಯದ ಲಾಭವನ್ನು ಸಂಸ್ಕೃತಿ ನಿರ್ಮಾಣಕ್ಕಾಗಿ ಪ್ರಯತ್ನಿಸುವ ಒಂಟಿ ಥಿಂಕರ ಮಂಕಿಯಿದೆ. ಸ್ವಾತಂತ್ರ್ಯ ಹಾಗೂ ಸಂಸ್ಕೃತಿ-ಈ ವಿಷಯ ಸೂತ್ರದ ಎರಡು ದಿಶೆಗಳಿಂದ ಹುಡುಕಾಟ ನಡೆಸುವ ಪರಸ್ಪರ ಪೂರಕ ರೀತಿಯ ಕಥೆಯಿದು.

-೪-

ಮರಾಠಿ ಕಥೆ ಹಾಗೂ ಪಾಶ್ಚಾತ್ಯ ಕಥೆಗಳನ್ನು ತೌಲನಿಕವಾಗಿ ನೋಡಿದಾಗ ಅನಿಸುವದೇನೆಂದರೆ ಪಾಶ್ಚಾತ್ಯ ಕಥಾ ಸಾಹಿತ್ಯದಲ್ಲಿ ಕಾದಂಬರಿ, ನಾಟಕ ಇತ್ಯಾದಿ ಪ್ರಮುಖ ವಾಙ್ಮಯ ಪ್ರಕಾರವು ಪರಿಪಕ್ವತೆಯಿಂದ ಹಾಗೂ ಸಮರ್ಥವಾಗಿ ಕೈಯಾಡಿಸುವ ಲೇಖಕರೇ ಕಥಾ ಸಾಹಿತ್ಯ ಗೌಣವಾಗಿದ್ದರೂ ಮುಂದುವರೆಸಿದರು. ಓ ಹೆನ್ರಿಯಂಥ ಪತ್ರಿಕಾಲೇಖಕರನ್ನು ಬಿಟ್ಟರೆ ದೊಸ್ತೊವಸ್ಕಿ, ಟಾಲಸ್ಟಾಯ್, ಗೋಗೋಲ, ಚೆಕಾವ-ರಶಿಯನ್ ಲೇಖಕರು, ಹಾರ್ಥಾರ್ನ ಮೊಲವಿಲ್, ಮಾರ್ಕ ಟ್ವೇನ್, ಹೆನ್ರಿ ಜೇಮ್ಸ್, ಫಾರನರ್, ಹೇಮಿಂಗವೇ, ಸ್ಟಾಯಿನ ಬೆಕ, ಸಾಲಿಂಜರ್, ಮಲಾಮುಡ ಅಮೇರಿಕದ ಲೇಖಕರು; ಜಾಯಿಸ್ ಲಾರೆನ್ಸ, ಕಾಫ್ಕಾ, ಯುರೋಪಿಯನ ಲೇಖಕರು-ಇವರೆಲ್ಲ ಕಥೆಗಳ ಜೊತೆಗೆ ಉಳಿದ ವಾಙ್ಮಯ ಪ್ರಕಾರವನ್ನು ಮೌಲಿಕವಾಗಿ ಸಮರ್ಥವಾಗಿ ಬಳಸಿಕೊಂಡಂತೆ ಕಂಡುಬರುತ್ತಾರೆ. ಇದರ ಅರ್ಥವೇನೆಂದರೆ ಈ ಎಲ್ಲದರ ಸೃಜನಶೀಲ ವ್ಯವಹಾರದಲ್ಲಿ ಪೂರಕ ಅಥವಾ ಆಂತರಿಕ ಸ್ವರೂಪದಲ್ಲಿ ಕಥೆಗಳ ವಿಕಾಸ ಆ ದೇಶದಲ್ಲಾಯಿತು. ಇದರ ಪರಿಣಾಮವೇನೆಂದರೆ ಪಾಶ್ಚಾತ್ಯ ದೇಶದಲ್ಲಿ ಕಥಾಸಾಹಿತ್ಯವು ಸಮೃದ್ಧಿಯಾಗಿ ಬೆಳೆಯಿತು, ಜೊತೆಗೆ ಅದರ ಸೀಮೆಯೂ ಸ್ಪಷ್ಟವಾಯಿತು. ಮರಾಠಿಯಲ್ಲಿ ವೆಂಕಟೇಶ ಮಾಡಗೂಳಕರನಂತಹ ಒಂದೆರಡು ವ್ಯಕ್ತಿಗಳ ಅಪವಾದ ಬಿಟ್ಟರೆ ಬಹಳಷ್ಟು ಕಥಾ ಲೇಖಕರು ಕಥೆಗಳ ಪೂರಕ ಹಾಗೂ ಅಂತರಿಕ ರೂಪದ ಕಡೆ ಗಮನ ಹರಿಸದೇ ಕಥೆಯೊಂದು ಪ್ರಮುಖ ವಾಙ್ಮಯ ಪ್ರಕಾರವೇಕಾಗಿದೆ ಎಂಬ ಆವಿರ್ಭಾವದಲ್ಲಿ ಅದರ ಕಡೆಯೇ ಲಕ್ಷ್ಯವನ್ನು ಕೇಂದ್ರಿತಗೊಳಿಸಿದರು. ಕೊನೆ ಪಕ್ಷ ಶ್ಯಾಮ ಮನೋಹರನಂತಹ ಲೇಖಕರಾದರೂ ಇದನ್ನು ಅರ್ಥಮಾಡಿಕೊಂಡು ಈಗ ಪ್ರಮುಖ ವಾಙ್ಮಯ ಪ್ರಕಾರದ ಆಹ್ವಾನವನ್ನು ಸ್ವೀಕರಿಸಬೇಕೆಂದು ಸೂಚಿಸಬೇಕೆನಿಸುತ್ತದೆ.

---

* **ಚಂದ್ರಕಾಂತ ಪೋಕಳೆ**, ಕನ್ನಡ ಉಪನ್ಯಾಸಕ, ಬಿ. ಎಸ್. ಪಿ. ಪಿ. ಕಾಲೇಜು,
ಬೇಡಕಿಹಾಳ - ೫೯೧ ೨೧೪.

ಪ್ರಜ್ಞಾಪುರುಷ ಮುನಿಶ್ರೀ ರೂಪಚಂದ್ರ

ಹಿಂದೀ ಭಾಷೆಯ ಕ್ರಾಂತಿಕಾರಿ, ದಾರ್ಶನಿಕ ಕವಿ ಮುನಿಶ್ರೀ ರೂಪಚಂದ್ರ ಅವರು ಪ್ರತಿಭೆಯ ಮೇರುವಾಗಿದ್ದಾರೆ. ಓರ್ವ ಕವಿಯ ಸೂಕ್ಷ್ಮ ಸಂವೇದನೆ, ಸಂತನ ಕರುಣೆ, ಮನೀಷಿಯ ಪ್ರಖರ ಆಂತರಿಕ ದೃಷ್ಟಿ, ಸಮನ್ವಯ ಮತ್ತು ಶಾಂತಿಯ ಅಗ್ರದೂತನ ನಿರ್ಮಲ ಭಾವನೆ - ಇವೆಲ್ಲ ಮುನಿಶ್ರೀ ರೂಪಚಂದ್ರ ಅವರ ಕೃತಿಗಳಲ್ಲಿ ವಿವಿಧ ರೂಪದಲ್ಲಿ ಧ್ವನಿತವಾಗಿವೆ.

೧೯೩೯ರ ಸಪ್ಟಂಬರ ೨೨ರಂದು ಈ ಕವಿಯ ಜನನ ರಾಜಸ್ಥಾನದ ಚೂರು ಜಿಲ್ಲೆಯ ಸರದಾರ ಶಹರದಲ್ಲಾಯಿತು. ಕೇವಲ ತಮ್ಮ ೧೬ನೆಯ ವಯಸ್ಸಿನಲ್ಲಿಯೇ ಅವರು ಜೈನ ಮುನಿಯಾಗಿ ದೀಕ್ಷೆ ಹೊಂದಿದರು. ಅಂದಿನಿಂದ ಅವರ ಜೀವನ ಪ್ರವಾಹದಲ್ಲಿ ಸಾಧನೆ, ಸ್ವಾಧ್ಯಾಯ, ಕಾವ್ಯ, ಲೇಖನ ರಚನೆ, ನಿರಂತರ ಪಾದಯಾತ್ರೆ, ಸೂರಿಗಳೊಂದಿಗೆ, ಬುಧರೊಂದಿಗೆ ಸತ್ಸಂಗ, ಲೌಕಿಕ ಜೀವನದಲ್ಲಿ ನೈತಿಕತೆ, ಧಾರ್ಮಿಕತೆ ಈ ಶಾಶ್ವತ ಮೌಲ್ಯಗಳ ಅನುಷ್ಠಾನಕ್ಕೆ ಪ್ರೇರಣೆ-ಇವೆಲ್ಲ ಒಳಗೊಂಡವು.

ಮುನಿಶ್ರೀ ರೂಪಚಂದ್ರರು ಸಂಸ್ಕೃತ, ಪ್ರಾಕೃತ, ಹಿಂದೀ, ರಾಜಸ್ಥಾನಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅತ್ಯಂತ ಶ್ರೇಷ್ಠ ರೀತಿಯ ನೈಪುಣ್ಯತೆ ಹೊಂದಿದ್ದಾರೆ.

ಮುನಿಶ್ರೀ ರೂಪಚಂದ್ರರು ದರ್ಶನಶಾಸ್ತ್ರ, ಮನೋವಿಜ್ಞಾನ ಶಾಸ್ತ್ರ, ಸಮಾಜಶಾಸ್ತ್ರ, ಸರ್ವಧರ್ಮಗಳ ತುಲನಾತ್ಮಕ ಅಧ್ಯಯನಗೈದು ಅವುಗಳ ಸಾರಸರ್ವಸ್ವವನ್ನು ತಮ್ಮ ಜೀವನದ ಸಾಧನೆಯಲ್ಲಿ ಸಮಾವೇಶ ಗೊಳಿಸಿಕೊಂಡು, ಜಗತ್ತಿನ ತುಂಬ ಸಂಚರಿಸಿ, ಜನಸಮುದಾಯದ ಮುಂದೆ ತಮ್ಮ ಅನುಭವವನ್ನು ತುಂಬ ಪರಿಣಾಮಕಾರಿಯಾಗಿ ಪ್ರಸ್ತುತಗೊಳಿಸಿದ್ದಾರೆ.

ಜನರ ಬದುಕನ್ನು ಹಸನುಗೊಳಿಸುವ ಕಾರ್ಯದಲ್ಲಿ ನಿರತರಾಗಿರುವ ಅವರು ಸಮಗ್ರಭಾರತ ಮತ್ತು ನೇಪಾಲ ಸೇರಿ ಐವತ್ತು ಸಾವಿರ ಕಿ. ಮೀ. ಪಾದಯಾತ್ರೆ ಮಾಡಿ ಮಾನವಧರ್ಮದ ಸಾರ ಸೂತ್ರಗಳ ಪ್ರಚಾರ ಮಾಡಿದ್ದಾರೆ. ಆತ್ಮಸಾಧನೆ, ಜನಜಾಗ್ರತಿಯ ಕಾರ್ಯದಲ್ಲಿ ಮುನಿಶ್ರೀ ರೂಪಚಂದ್ರರ - ಸಂಪರ್ಕ ವಿಚಾರವಿನಿಮಯ, ಸಂಗೋಷ್ಠಿ, ಸಮ್ಮೇಳನಗಳಲ್ಲಿ ರಾಷ್ಟ್ರ, ಅಂತಾರಾಷ್ಟ್ರೀಯ ದಾರ್ಶನಿಕರೊಂದಿಗೆ, ರಾಷ್ಟ್ರನಾಯಕರೊಂದಿಗೆ, ಕವಿಗಳೊಂದಿಗೆ, ಚಿಂತಕರೊಂದಿಗೆ, ಆಧ್ಯಾತ್ಮಿಕ ವಿಭೂತಿ ಪುರುಷರೊಂದಿಗೆ ಸದಾಕಾಲ ಆಗುತ್ತಲೇ ಇರುತ್ತದೆ.

ಮುನಿಶ್ರೀ ರೂಪಚಂದ್ರರು ದಿಲ್ಲಿಯಲ್ಲಿ ಸ್ಥಾಪಿಸಿರುವ ಮಾನವಮಂದಿರ ಮಿಶನ್ನಿನ ಮುಖಾಂತರ

ಸಾಂಪ್ರದಾಯಿಕ ಸಂಕೀರ್ಣತೆಗಳಿಂದ ಮುಕ್ತವಾದ ಧರ್ಮದ ತೇಜಸ್ವೀ ಸ್ವರೂಪವನ್ನು ಪ್ರಕಟಗೊಳಿಸುವ ಇಚ್ಛೆಯುಳ್ಳವರಾಗಿದ್ದಾರೆ. ಅವರ ದೃಷ್ಟಿಯಲ್ಲಿ ಧರ್ಮವೆಂದರೆ ಕೇವಲ ಪ್ರೇಮವೇ ಆಗಿದೆ. ಅವರ ಪ್ರೇರಣೆ ಹಾಗೂ ಮಾರ್ಗದರ್ಶನ ಪಡೆದು, ಉತ್ತರ ಭಾರತದಲ್ಲಿ ಅನೇಕ ನಗರಗಳಲ್ಲಿ ಮಾನವ ಮಂದಿರಗಳು ಸ್ಥಾಪನೆಗೊಂಡಿವೆ. ಈಗ ಅಮೇರಿಕಾ, ಕೆನಡಾ, ಇಂಗ್ಲಂಡಗಳಲ್ಲೂ ಮಾನವಮಂದಿರಗಳು ಸ್ಥಾಪನೆಯಾಗಿವೆ.

ಭಗವಾನ್ ಮಹಾವೀರರ ಸತ್ಯ, ಅಹಿಂಸೆ, ಅಪರಿಗ್ರಹ ಮುಂತಾದ ತತ್ವಗಳನ್ನು ಮಾನವರಲ್ಲಿ, ಅವರ ಜೀವನದಲ್ಲಿ ಸಮಾವೇಶಗೊಳಿಸಿ, ಭೂಮಿಯ ಮೇಲಿನ ಜೀವನವನ್ನು ಸುಂದರಗೊಳಿಸುವ ಒಂದೇ ಉದ್ದೇಶದಿಂದ ಅವರು ಜೈನಧರ್ಮದ ಬಹಳಷ್ಟು ಅನಾವಶ್ಯಕವೆಂದು ತೋರಿದ ಕಟ್ಟುಪಾಡುಗಳನ್ನು ಕಳಚಿ, ತಮ್ಮ ಲೋಕಯಾತ್ರೆ ಆರಂಭಿಸಿದರು - ಬಹಳಷ್ಟು ಸಂಪ್ರದಾಯಸ್ಥ ಜೈನಮುನಿಗಳ ವಿರೋಧ ಲೆಕ್ಕಿಸದೆ. ಈ ಕಾರ್ಯಕ್ಕಾಗಿ ಅವರು ತಮ್ಮ ಗುರುಗಳ ವಿರೋಧವನ್ನೂ ಎದುರಿಸಬೇಕಾಯಿತು. ಒಂಟಿಯಾಗಿಯೇ ಈ ಎಲ್ಲ ವಿರೋಧಗಳನ್ನು ಅತಿಕ್ರಮಿಸಿ ಮುಂದುಮುಂದಕ್ಕೆ ಹೋದರು. ಆ ಸಂಪ್ರದಾಯಸ್ಥ ಜನ ಬೆರಳುಕಚ್ಚುವಂತೆ, ಅಚ್ಚರಿಯಿಂದ ಈ ಮುನಿಯ ಕ್ರಾಂತಿಕಾರಿ ಕಾರ್ಯಗಳನ್ನು ವೀಕ್ಷಿಸುವಂತೆ, ಲೋಕಕಾರ್ಯ ಮಾಡುತ್ತಿದ್ದಾರೆ. ಅಂತೆಯೇ ಅವರೀಗ ವರ್ಷದಲ್ಲಿ ನಾಲ್ಕಾರು ತಿಂಗಳು, ವಿಶೇಷವಾಗಿ ವರ್ಷಾಕಾಲದಲ್ಲಿ ಅಮೇರಿಕಾ, ಕೆನಡಾ, ಇಂಗ್ಲಂಡಗಳಲ್ಲಿ ಚಾತುರ್ಮಾಸ ನಡೆಸುತ್ತಾರೆ. ಅಲ್ಲಿರುವ ಅನಿವಾಸಿ ಭಾರತೀಯರ ಜೀವನದಲ್ಲಿ ಭಾರತೀಯ ಸಂಸ್ಕೃತಿಯನ್ನು ಮತ್ತೆ ಜಾಗ್ರತಗೊಳಿಸಿದ್ದಾರೆ. ಅಲ್ಲಿ ಈಗ ಮುನಿಶ್ರೀ ರೂಪಚಂದ್ರರ ಘನ ವ್ಯಕ್ತಿತ್ವಕ್ಕೆ ಮಾರುಹೋಗಿರುವ ಶಿಷ್ಯರು ಲಕ್ಷ ಲಕ್ಷ ಸಂಖ್ಯೆಯಲ್ಲಿದ್ದಾರೆ. ಅವರೆಲ್ಲರ ಜೀವನದಲ್ಲಿ ಹೊಸ ಬೆಳಗು, ಹೊಸ ಸೂರ್ಯೋದಯ ಮೂಡಿಸಿದ ಮಹಾಮಹಿಮ ಮುನಿಶ್ರೀ ರೂಪಚಂದ್ರರು, ಹೊಸ ಮನ್ವಂತರದ ಹರಿಕಾರರೂ ಹೌದು.

ಸಾಧನೆಯೊಂದಿಗೆ ಸೇವೆ, ಸೇವೆಯೊಂದಿಗೆ ಸಾಧನೆ ಒಟ್ಟಗೊಂಡಾಗಲೇ ಧರ್ಮದಲ್ಲಿ, ಜನಜೀವನದಲ್ಲಿ ತೇಜಸ್ಸು ಆವಿರ್ಭಾವಗೊಳ್ಳುತ್ತದೆಂಬ ನಂಬುಗೆಯುಳ್ಳಿಸಿಕೊಂಡವರು ಮುನಿಶ್ರೀ ರೂಪಚಂದ್ರರು. ಅದಕ್ಕೆ ಸಾಕ್ಷಿಯಾಗಿ ದಿಲ್ಲಿಯ ಮಾನವ ಮಂದಿರದಲ್ಲಿ ಸಾವಿರಾರು ಅನಾಥ ಮಕ್ಕಳಿಗಾಗಿ ಗುರುಕುಲ ಸ್ಥಾಪಿಸಿ ಅವರಿಗೆಲ್ಲ ಹೊಸ ಜೀವನ ನೀಡಿದ್ದಾರೆ.

ಓರ್ವಶ್ರೇಷ್ಠ ಮತ್ತು ಕ್ರಾಂತಿಕಾರಿ ಕವಿಯಾಗಿರುವ ಮುನಿಶ್ರೀ ರೂಪಚಂದ್ರರು ಇಪ್ಪತ್ತಕ್ಕೂ ಹೆಚ್ಚು ಮುಕ್ತಕ, ಕಾವ್ಯ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ನಾಲ್ಕು ವೈಚಾರಿಕ ಪ್ರಬಂಧಗಳ ಸಂಗ್ರಹಗಳು ಹಾಗೂ ಒಂದು ಭಕ್ತಿ ಗೀತೆಗಳ ಸಂಗ್ರಹ ಕೂಡ ಪ್ರಕಟವಾಗಿವೆ. ಅವರು 'ಜೈನಸಂಗಮ' ಮಾಸಿಕದಲ್ಲಿ ಬರೆಯುತ್ತಿರುವ ಲೇಖನಗಳು ಸಾವಿರ ಪುಟಗಳಷ್ಟಾಗಬಹುದು.

ಅವರ ಅನೇಕ ಮುಕ್ತಕಗಳ ಸಂಗ್ರಹಗಳು, ಕವಿತಾ ಸಂಗ್ರಹಗಳು ಕನ್ನಡ, ತಮಿಳು, ಬಂಗಾಲಿ, ಪಂಜಾಬಿ, ಇಂಗ್ಲಿಷ್ ಮುಂತಾದ ಭಾಷೆಗಳಿಗೆ ಅನುವಾದಗೊಂಡು ಪ್ರಕಟವಾಗಿವೆ. 'ಮೇರಿ ಆಕಾಶ್ ಮೆ', 'ಭೂಮಾ', ಇಂದ್ರಧನುಸ್ಸು' ಮುಂತಾದ ಕೃತಿಗಳು ಕನ್ನಡಕ್ಕೆ ಅನುವಾದಗೊಂಡಿವೆ.

ಹದಿನೈದು ಮುಕ್ತಕಗಳು

ಹಿಂದಿ : ಮುನಿಶ್ರೀ ರೂಪಚಂದ್ರ
ಅನು : ಡಾ। ಪಂಚಾಕ್ಷರಿ ಹಿರೇಮಠ

-೧-

ಇಂದು ದೇಶಕ್ಕೆ ವೈರಿಗಳಿಂದಲ್ಲ
ದೇಶದ್ರೋಹಿಗಳಿಂದ ಅಪಾಯವಿದೆ!
ಭಂಡಾರಕ್ಕೆ ಕಳ್ಳರಿಂದಲ್ಲ
ಪಹರೆದಾರರಿಂದ ಗಂಡಾಂತರವಿದೆ!
ಧರ್ಮಕ್ಕೆ ನಾಸ್ತಿಕರಿಂದಲ್ಲ
ಗುತ್ತಿಗೆದಾರರಿಂದ ಅಪಾಯವಿದೆ!
ಧರ್ಮದ ರಕ್ಷಣೆಗಾಗಿ
ಇಂದು ಎಚ್ಚರಿಕೆಯ ಅವಶ್ಯಕತೆಯಿದೆ!

-೨-

ವಸಂತವಿಂದು ಹೂದೋಟ
ಕೊಳ್ಳೆ ಹೊಡೆಯಲು ಯತ್ನಿಸಿದೆ!
ಚುಕ್ಕೆಗಳು ಮುಗಿಲು ದೋಚುವ
ಹವಣಿಕೆಯಲ್ಲಿವೆ!
ಧರ್ಮವೀಗ ಸಂಪ್ರದಾಯದ
ಕೋಟೆಯೊಡೆದು ಕ್ರಾಂತಿ ಬಯಸಿದೆ!
ಏಕೆಂದರೆ ಧರ್ಮದರ್ಶಿಗಳು
ದೇವರನ್ನೇ ಅಪಹರಿಸುವ ಯತ್ನದಲ್ಲಿದ್ದಾರೆ!

-೩-

ಒಂದುವೇಳೆ ಚುಕ್ಕೆಗಳು ಬಂಡಾಯವೆದ್ದರೆ
ಆಗ ಆಗಸದ ಗತಿ ಏನಾದೀತು?

ಒಂದುವೇಳೆ ತೀರವೆ ಬಂಡಾಯವೆದ್ದರೆ
ಆಗ ಸಾಗರದ ಗತಿ ಏನಾದೀತು?
ಧರ್ಮದ ಆಸರೆ ಪಡೆದು ಬಡಬಗ್ಗರನು
ಹಾಡೇಹಗಲು ವಂಚಿಸುವವರೆ,
ಒಂದುವೇಳೆ ಮಾನವ ಬಂಡಾಯವೆದ್ದರೆ
ಆಗ ದೇವದೂತರ ಗತಿ ಏನಾದೀತು?

-೪-

ಧರ್ಮದ ಸೌಧ ಈಗ ಕುಸಿವ ಸ್ಥಿತಿಯಲ್ಲಿದೆ
ಅದರ ಬಗ್ಗೆ ನನಗೆ ಚಿಂತೆಯಿಲ್ಲ!
ಧರ್ಮಕ್ಕೆ ಅಫೀಮ್, ವಿಷ-ಎಂದೂ ಕರೆಯಲಾಗುತ್ತಿದೆ
ಅದರ ಬಗ್ಗೆಯೂ ನನಗಾವ ದುಃಖವಿಲ್ಲ!
ಆದರೆ ಇಂದಿನ ವಿದ್ಯಾವಂತ ಜನಾಂಗ
ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ
ಮೋಸ, ಅನಾಚಾರಗಳನ್ನೆಲ್ಲ ಸುಮ್ಮನೆ
ಸಹಿಸುತ್ತದೆಯಲ್ಲ! - ಎಂದು ನನಗೆ ದುಃಖ!

-೫-

ಈ ಧಾರ್ಮಿಕ ಸಮಾಜ ಎಂಥ ವಿಚಿತ್ರ
ಜೀವನ ಜೀವಿಸುತ್ತದೆಯಲ್ಲ
ಇದನ್ನು ಕಂಡು ನನಗೆ ಕನಿಕರವೆನಿಸುತ್ತದೆ!
ಮನದಲ್ಲಿ ಕೊಳ್ಳೆಹೊಡೆವ ಯೋಜನೆ, ಗತ್ತುಗಾರಿಕೆ
ಕೈಯಲ್ಲಿ ಮಾತ್ರ ಆಗಮ, ಕುರಾನ, ಗೀತೆ ಸಹಾಯಕ್ಕೆ!
ಜೀವ-ದಯೆ ತೋರಲೆಂದು ನೀರು ಸೋಸಿ ಸೋಸಿ
ಕುಡಿಯುವ ಇಂದಿನ ಧರ್ಮಪುರುಷ
ನಿರಪರಾಧಿ ಜನರ ರಕ್ತವನು ಸೋಸದೆಯೇ
ಕುಡಿಯುತ್ತಾನಲ್ಲ-ಇದು ಎಂಥ ಅಚ್ಚರಿ!

೬

ನಮ್ಮ ಹೃದಯದಲ್ಲಿ ಸತ್ಯವನ್ನು
ಅರಸುವ ಇಚ್ಛೆ ಇಲ್ಲ!
ಪರಸ್ಪರರಲ್ಲಿ ಪ್ರೀತಿ ಪ್ರೇಮವಿಲ್ಲ
ವಿಶ್ವಾಸ ನಂಬುಗೆಗಳಂತೂ ಮೊದಲೇ ಇಲ್ಲ!

ಪುಣ್ಯ ಪಾಪದ ಕಟಾಂಜನೆಯಲ್ಲಿ
ಕೈದಿಯಾಗಿಯೇ ಒಂದುವೇಳೆ
ಜೀವನ ಕಳೆದುಹೋಗುವುದಾದರೆ
ಧರ್ಮಗ್ರಯುಕ್ತ ಜೀವಿಸಿದರೂ
ನಿಜವಾದ ಧಾರ್ಮಿಕತೆಯ
ಅರಿವು ಆಗುವುದೇ ಇಲ್ಲ!

-೭-

ಧರ್ಮದ ಕ್ಷೇತ್ರದಲ್ಲಿ ಇಂದು ವಿಜ್ಞಾನದ ದೀವಿಗೆ ಬೇಕು
ಸತ್ಯವನ್ನು ಪಡೆಯಲು ನಮಗೆ ತೆರೆದ ಚಿತ್ತ ಬೇಕು
ಹೊಗೆಯಾಗಿ ನೂರು ವರುಷ ಬದುಕುವುದು ಬೇಕಿಲ್ಲ
ಒಂದು ಕ್ಷಣ ಬದುಕಿದರೂ ಸರಿ, ಬೆಂಕಿಯಂತೆ ಝಗಝಗಿಸಬೇಕು!

-೮-

ಮಾನವನ ಹೃದಯದಲ್ಲಿ ಅದೆಂಥ ವಿಚಿತ್ರ
ಬಿರುಗಾಳಿ ಬೀಸುತ್ತಿದೆಯೋ ತಿಳಿಯದಂತಾಗಿದೆ!
ಎಲ್ಲರೂ ಒಬ್ಬರನ್ನೊಬ್ಬರು ದ್ವೇಷಿಸುತ್ತಿದ್ದಾರೆ
ಮನುಷ್ಯ ಮನುಷ್ಯನಿಗೆ ಅಂಜುತ್ತಿದ್ದಾನೆ
ನನಗೆ ಒಳಗೊಳಗೇ ನಗೆ-
ಭೂಮಿಯ ಮೇಲೆ ಸರಿಯಾಗಿ ಇರುವುದನ್ನು
ಈವರೆಗೂ ಕಲಿಯದ ಈ ಮಾನವ-
ಚಂದ್ರಲೋಕಕ್ಕೆ ಹೋಗಿ ಏನು ಮಾಡಬಲ್ಲ!

-೯-

ಮಾನವನ ಬುದ್ಧಿ ಚಂದ್ರನನ್ನೂ ಮೀರಿ ಆಚೆ ಕಿರಣ ಚಾಚಿದೆ
ಅವನ ಶಕ್ತಿಯ ಎದುರಿನಲ್ಲಿ ದೇವದೂತರೂ ಸೋತಿದ್ದಾರೆ!
ಆದರೆ ಅವನ ಹೃದಯಕ್ಕೆ 'ಲಕ್ವ' ಹೊಡೆದಿರುವುದನ್ನು ಕಂಡು
ನನ್ನ ಕಣ್ಣಲ್ಲಿ ಕಣ್ಣೀರ ಮೋಡ ಹಬ್ಬುತಿದೆ!

-೧೦-

ಮಾನವ ಮಾನವನ ಆಕೃತಿಗೆ ಈಗ ಅಂಜುತ್ತಿದ್ದಾನೆ
ಮಾನವ ಮಾನವನನ್ನು ಕೊಳ್ಳೆಹೊಡೆದು ಮನೆ ತುಂಬುತ್ತಿದ್ದಾನೆ!
ಮಾನವನೇ ಹೊಡೆಯುತ್ತಿದ್ದಾನೆ, ಮಾನವನೇ ಸಾಯುತ್ತಿದ್ದಾನೆ
ಮಾನವ ಏನು ಮಾಡುತ್ತಿದ್ದಾನೆಂಬುದೇ ತಿಳಿಯದಂತಾಗಿದೆ!

-೧೧-

ಪರರನ್ನು ಸುಧಾರಿಸುವ ಮೊದಲು
ನಿನ್ನನ್ನು ಸುಧಾರಿಸಲು ಕಲಿ!
ಎಲ್ಲರ ಪ್ರೀತಿ ಗಳಿಸಬೇಕಾದಲ್ಲಿ
ಎಲ್ಲರ ಜೊತೆ ಬೆರೆವುದನ್ನು ಕಲಿ!
ಬೆಳಕಿನ ಪರಿಭಾಷೆ
ಪುಸ್ತಕಗಳಲ್ಲಿ ಸಿಗುವುದಿಲ್ಲ;
ಅದನ್ನು ಪಡೆಯಲು
ನೀನೇ ದೀಪವಾಗಿ ಉರಿವುದನ್ನು ಕಲಿ!

-೧೨-

ಯಾರಿಗೆ ಬಾಯಾರಿಕೆಯ ಅರಿವಿಲ್ಲವೋ
ಅಂಥವರಲ್ಲಿ ನೀರು ಕೇಳದಿರು!
ಯಾರಿಗೆ ಉಸಿರಿನ ಅರಿವಿಲ್ಲವೋ
ಅಂಥವರಿಗೆ ಜೀವನ ಒಪ್ಪಿಸದಿರು!
ಜೀವನದ ಸುದೀರ್ಘ ಪ್ರವಾಸದಲ್ಲಿ
ಏಕಾಕಿಯಾಗಿ ನಡೆದರೂ ಚಿಂತೆಯಿಲ್ಲ
ಯಾರಿಗೆ ವಿಶ್ವಾಸದ ಅರಿವು ಇಲ್ಲವೋ
ಅಂಥವರಿಗೆ ವಿಶ್ವಾಸ ತೋರದಿರು!

-೧೩-

ತುಂಬಿದ ಸಮುದ್ರ ಬತ್ತಿಹೋಗಲಿ
ಆದರೆ ನೀರಡಿಕೆ ಮಾತ್ರ ಬತ್ತದಿರಲಿ!
ಬಯಸಿದ ಜೀವನ ನಿನಗೆ ಸಿಗದೇ ಹೋದರೂ
ಬದುಕುವ ಛಲ ಮಾತ್ರ ಬತ್ತದಿರಲಿ!
ದಾರಿ ಮುಳ್ಳಿನಿಂದ ತುಂಬಿದೆ ಸುದೀರ್ಘವಾಗಿದೆ
ನೀನೊಬ್ಬನೆ ಇರುವೆ ಎಂಬುದನ್ನೂ ಒಪ್ಪುವೆ-
ಆದರೂ ಗುರಿ ನಿನ್ನ ಪ್ರತೀಕ್ಷೆಯಲ್ಲಿದೆ
ವಿಶ್ವಾಸವನು ಬತ್ತಗೊಡದಿರು!

-೧೪-

ವಿಷವನ್ನೂ ಅಮೃತದ ಹಾಗೆ
ಕುಡಿವುದನ್ನು ಬಲ್ಲಾತ ದೊಡ್ಡಾತ!

ವೈರಿಗಳೊಂದಿಗೂ ಮಿತ್ರರಂತೆ
ಜೀವಿಸಲು ಬಲ್ಲಾತ ದೊಡ್ಡಾತ!
ಮಾತಾಡುವುದು ಒಂದು ಕಲೆ ನಿಜ
ಆದರೆ ಸಮಯ ಬಂದಾಗ
ತುಟಿ ಹೊಲಿದುಕೊಂಡಿರುವಾತ
ಆ ಮೌನಿ ದೊಡ್ಡ ಕಲಾವಿದ!

-೧೫-

ಹೊಸ ವರುಷದ ಹೊಸ ಸೂರ್ಯನ
ಹೊಸ ಕಿರಣದೊಂದಿಗೆ ಅಭಿನಂದನೆ ಗೈಯುತ್ತಿದ್ದೇನೆ!
ಉಕ್ಕೇರುವ ರಕ್ತದೊಂದಿಗೆ
ವಿಶ್ವ ಸಮರಾಂಗಣದಲ್ಲಿ ಅಭಿನಂದನೆ ಗೈಯುತ್ತಿದ್ದೇನೆ!
ಶಾಂತಿಯ ಇತಿಹಾಸವನ್ನು ಕ್ರಾಂತಿಯ ಮಸಿಯಿಂದ
ಬರೆಯಬೇಕಾಗುತ್ತದೆ ಓ! ನನ್ನ ದೇವತೆ
ಹಾಗೆಂದೆ ರಕ್ತದಲ್ಲಿ ಅದ್ದಿದ ಲೆಕ್ಕಣಿಕೆಯಿಂದ
ನಿನ್ನ ಅಭಿನಂದನೆ ಗೈಯುತ್ತಿದ್ದೇನೆ.

* ಡಾ। ಪಂಚಾಕ್ಷರಿ ಹಿರೇಮಠ, 'ಮೃತ್ಯುಂಜಯ ಕೃಪ', ಜಯನಗರ, ಧಾರವಾಡ - ೫೮೦ ೦೦೧.

ಕಾಲ್ಕಡಗ (ನಾಟಕ)

ಇಂಗ್ಲಿಷ್ : ಕಸ್ತೂರಿ ಶ್ರೀನಿವಾಸನ್
ಅನು : ಪ್ರೊ। ಎನ್. ಚಂದ್ರಪ್ಪ

(ಕಳೆದ ಸಂಚಿಕೆಯಿಂದ)

ಅಂಕ ಎರಡು

(ಒಂದು ತಿಂಗಳ ನಂತರ. ಮಧುರಾನಗರ. ಕನ್ನಗಿಗೆ ಆಶ್ರಯ ನೀಡಿದ ಗೋಪಾಲಕನ ಮನೆ. ಕೊಠಡಿ ವೈಭವೋಪೇತವಾಗೇನೂ ಇಲ್ಲ. ಆದರೆ ಶ್ರಮಜೀವನದ ಚಿಹ್ನೆಗಳು, ಸಂತೃಪ್ತ ಜೀವನದ ಕುರುಹುಗಳು ಎದ್ದು ಕಾಣುತ್ತಿವೆ. ಮಣ್ಣಿನ ಗಡಿಗೆಗಳು, ಹಾಲಿನ ಹಿತ್ತಾಳೆ ಪಾತ್ರೆಗಳು ಮೂಲೆಗಳಲ್ಲಿವೆ. ಕಂಬದೆದುರು ಮೊಸರು ಕಡೆಯುವ ಮಣ್ಣಿನ ಕುಡಿಕೆ. ಕನ್ನಗಿ ಹೊಳಪಾಗಿ ಹೊಳೆಯುವ ಚಾಪೆಯ ಮೇಲೆ ಕುಳಿತಿದ್ದಾಳೆ. ಗೋಪಾಲಕನ ಮಡದಿ ಮಾಥರಿ ಕೊಠಡಿಯೊಳಕ್ಕೆ ಬರುತ್ತಾಳೆ.)

ಮಾಥರಿ : ನಿನ್ನ ದೀರ್ಘ ಶ್ರಮದಾಯಕ ಪ್ರಯಾಣದ ಆಯಾಸ ಕಳೆದು ವಿಶ್ರಾಂತಿ ಪಡೆದದ್ದು ಆಯಿತೆ? ಸುಖ ನಿದ್ರೆ ಬಂತೆ? ನಾವು ಬಡ ಜನಪದರು. ಹಾಲು ಮೊಸರು ಬೆಣ್ಣೆಗಳನ್ನು ಮಾರಿ ಜೀವನ ಮಾಡುವವರು. ನೀನು ನಿಮ್ಮ ದೇಶದ ಶ್ರೀಮಂತ ಮನೆತನದಿಂದ ಬಂದವಳು. ನಿಮ್ಮಂತಹವರಿಗೆ ಒದಗಿಸಬಹುದಾದ ಸವಲತ್ತುಗಳು ನಮ್ಮಲ್ಲಿ ಬಹಳ ಇಲ್ಲ. ಕೊರತೆಗಳನ್ನು ಲೆಕ್ಕಿಸಬೇಡಿ. ರೈತರ ಈ ಮನೆಯಲ್ಲಿನ ಆನಂದ ಶ್ರೀಮಂತರ ಸವಲತ್ತುಗಳನ್ನೆಲ್ಲಾ ಸರಿದೂಗಿಸಬಲ್ಲವು.

ಕನ್ನಗಿ : ನಿಮಗೆ ನಾನು ಹೊಸಬಳಾದರೂ ನನ್ನ ಮನೆಯಲ್ಲಿರಿಸಿಕೊಂಡು ನನಗೆ ಬೇಕಾದ ಅವಶ್ಯಕತೆಗಳನ್ನೆಲ್ಲಾ ಒದಗಿಸಿದ್ದೀರಿ. ನಾನು ನನ್ನ ಎಲ್ಲಾ ಭಾವನೆಗಳನ್ನು ನಿಮ್ಮ ಜೊತೆ ಹಂಚಿಕೊಂಡಿದ್ದೇನೆ. ನನ್ನ ಹಿಂದಿನ ನೋವುನಲಿವುಗಳನ್ನು ನಿಮಗೆ ಹಂಚಿದ್ದೇನೆ. ನೀವು ನನಗೆ ತಾಯಿಗಿಂತಲೂ ಮಿಗಿಲಾಗಿದ್ದೀರಿ. ನನ್ನ ಸ್ವಂತ ತಾಯಿಯ ಜೊತೆಯಲ್ಲಿಯೂ ನಾನು ಹೀಗೆ ಮನಸ್ಸು ಬಿಚ್ಚಿ ಮಾತನಾಡಿಲ್ಲ. ನಾನೇ ನಾಚಿಕೊಳ್ಳುವಂತೆ ಅವರಿಗೂ ಹೇಳದೆ ಓಡಿ ಬಂದಿದ್ದೇನೆ. ನಾನು ಎಲ್ಲಿದ್ದೇನೆಂಬುದೂ ಅವಳಿಗೆ ಗೊತ್ತಿಲ್ಲ.

ಮಾಥರಿ : ಇದು ಸತ್ಯ. ಅಂತರಂಗದ ಗೋಪ್ಯಗಳನ್ನು ಪ್ರೀತಿಸುವವರಿಗೆ ಹೇಳಲು ಸಾಧ್ಯವಾಗದೆ ಹೋದಾಗ ಹೊಸಬರು ಅಪರಿಚಿತರಿಗೆ ಹೇಳಲೇಬೇಕು. ಹೊಸಬರು, ಅಪರಿಚಿತರು ಇದ್ದದ್ದು ಇರುವಂತೆ ಸ್ವೀಕರಿಸುತ್ತಾರೆ. ಬಂಧುಗಳೋ ಗತಕಾಲದ ಅಳತೆಗೋಲಿನಿಂದಲೇ ಅಳೆಯುತ್ತಾರೆ. ನೀನು ಇಲ್ಲಿ ಯಾವುದಕ್ಕೂ ಹೆದರಬೇಡ; ನಿನ್ನ ಅಂತರಂಗದ ಗೋಪ್ಯಗಳು ನಿನ್ನೆದೆಯ ನಿಗೂಢತೆಗಿಂತಲೂ ಸುಭದ್ರವಾಗಿ ನನ್ನೆದೆಯಲ್ಲಿ ಅಡಗಿಕೊಂಡಿರುತ್ತವೆ.

ಕನ್ನಗಿ : ಅಪರಿಚಿತರೂ, ಹೊಸಬರೂ ಆದ ನಮಗೆ ನೀವು ಆಸರೆ ನೀಡಿರುವುದೇ ನಿಮ್ಮ ದೊಡ್ಡತನ
ದಯಾಳತ್ವಕ್ಕೆ ಸಾಕ್ಷಿಯಾಗಿದೆ. ನೀವು ನನಗೆ ಬೇಕಾದ ಸವಲತ್ತುಗಳನ್ನೆಲ್ಲಾ ನೀಡಿದ್ದೀರಿ. ಮಿಗಿಲಾಗಿ ಮನಸ್ಸಿ
ಸಾಂತ್ವನ, ಸಂತೃಪ್ತಿಯನ್ನು ನೀಡಿದ್ದೀರಿ. ಅಡವಿಯಲ್ಲಿ ನಡೆದು ತುಟಿಗಳು ಒಣಗಿದ್ದವು. ತಿಂಗಳಿಗೂ ಹೆಚ್ಚಿ
ಬೆಟ್ಟ ಗುಡ್ಡಗಳಲ್ಲಿ ಅಲೆದಿದ್ದ ಆಯಾಸ ಈಗಿಲ್ಲ. ನನ್ನ ಮನಸ್ಸು ಪ್ರಶಾಂತವಾಗಿದೆ. ನಾನೀಗ ಸಂಪೂರ್ಣವಾ
ಚೇತರಿಸಿಕೊಂಡಿದ್ದೇನೆ. ನಿಮಗೆ ಮನೆಗೆಲಸಗಳಲ್ಲಿ ಸಹಾಯ ಮಾಡಲು ಸಿದ್ಧಳಾಗಿದ್ದೇನೆ.

ಮಾಥರಿ : ನೀನು ಅಂತಹುದೇನನ್ನೂ ಮಾಡುವಂತಿಲ್ಲ. ಸಭ್ಯ ಗೃಹಿಣಿಗೆ ಆಸರೆ ನೀಡಿ ಮನೆಗೆಲ
ಮಾಡಿಸಿಕೊಂಡಳು ಎಂಬ ಲೋಕಾಪವಾದಕ್ಕೆ ಸಿಕ್ಕುವುದು ನನಗೆ ಇಷ್ಟವಿಲ್ಲ. ನನ್ನ ಕೆಲಸಗಳು ನನ
ಹೆಚ್ಚಾಗುವುದಿಲ್ಲ. ಅದಿರಲಿ, ನಿನ್ನ ಗಂಡ ಎಲ್ಲಿ?

ಕನ್ನಗಿ : ನನ್ನ ಅಮೂಲ್ಯವಾದ ಕಾಲ್ಕಡಗವನ್ನು ಮಾರುವುದಕ್ಕಾಗಿ ನಗರದೊಳಕ್ಕೆ ಹೋಗಿದ್ದಾರ
ಈ ನಗರದಲ್ಲಿ ಯಾವ ವಸ್ತುಗಳ ವ್ಯಾಪಾರ ಚೆನ್ನಾಗಿ ಆಗಬಹುದು ಎಂಬುದನ್ನು ತಿಳಿದುಕೊಳ್ಳಲ
ಹೋಗಿದ್ದಾರೆ. ಅವರಿಗೆ ನಮ್ಮ ಬಂದರಿನಲ್ಲಿ ನೆಲೆಯೂರಿರುವ ಗ್ರೀಕರು, ರೋಮನ್ನರು ಪರಿಚಿತರಾಗಿದ್ದಾರ
ಇವರಿಗೆ ಅವರ ವ್ಯಾಪಾರದ ಗುಟ್ಟುಗಳೆಲ್ಲ ಗೊತ್ತು. ಈ ನಗರದ ಬೆಲೆ ಬಾಳುವ ವಸ್ತುಗಳನ್ನೆಲ್ಲಾ ಅವರಿ
ಮಾರಬಲ್ಲರು.

ಮಾಥರಿ : ಪ್ರಿಯಳೇ, ಇಂದಿಗೆ ನಿನ್ನ ತೊಂದರೆಗಳೆಲ್ಲ ಮುಗಿದವು. ನೀನು ಇರುವ ಈ ದೇ
ತತ್ವಜ್ಞಾನಿಗಳಿಗೆ, ಮೇಧಾವಿಗಳಿಗೆ ಹೆಸರುವಾಸಿಯಾಗಿದೆ. ನ್ಯಾಯಪರನಾದ ರಾಜನಿದ್ದಾನೆ. ಭೂವಿ
ಫಲವತ್ತಾಗಿದೆ. ಇಲ್ಲಿನ ಜನರು ಪ್ರಾಮಾಣಿಕರು ಮತ್ತು ಸತ್ಯಸಂಧರು. ಆದ್ದರಿಂದಲೇ ಇಲ್ಲಿ ಸಕಾಲದ
ಮಳೆಯಾಗುತ್ತದೆ. ನಮ್ಮ ಕಣಜಗಳು ಸದಾಕಾಲ ತುಂಬಿರುತ್ತವೆ. ನಿನ್ನ ಪತಿರಾಯನ ವ್ಯಾಪಾರಕ್ಕೆ ಬೇಕಾ
ಸವಲತ್ತುಗಳು ಈ ದೇಶದಲ್ಲಿವೆ. ನಮ್ಮ ರಾಜನು ಯಾವಾಗಲೂ ವಿದೇಶಿ ವ್ಯಾಪಾರಸ್ಥರನ್ನು ನಗರ
ಸ್ವಾಗತಿಸುತ್ತಲೇ ಇರುತ್ತಾನೆ. ಬಂದವರೆಲ್ಲ ಈ ನಗರದ ವೈಭವ, ಸಂಪತ್ತುಗಳನ್ನು ಹೊಗಳಿದ್ದಾರೆ. ಬಹು
ಬೇಗ ನೀನು ಸ್ವಂತ ಮನೆಯನ್ನು ಪಡೆಯುವೆ. ಯಾವ ವೈಭವದಲ್ಲಿ ನೀನು ಹುಟ್ಟಿರುವೆಯೋ ಅದನ
ಮರಳಿ ಪಡೆಯುವೆ; ಬಹುಶಃ ಮಕ್ಕಳಾನಂದದ ಜೊತೆಯಾಗಿ.

ಕನ್ನಗಿ : ನಿಮ್ಮ ಕರುಣೆ ಮತ್ತು ಪ್ರೋತ್ಸಾಹಗಳು ನನ್ನ ಕಷ್ಟ ಮತ್ತು ಮನೆ ಬಿಟ್ಟ ನೋವನ್ನು ಮರೆಯುವಂ
ಮಾಡಿವೆ. ಒಂದು ಕಾಲದಲ್ಲಿ ನನ್ನ ಮೆದುಳನ್ನು ಸದಾ ಕೊರೆಯುತ್ತಿದ್ದ ಪಿಶಾಚಿಗಳ ಕಾಟ ಈಗ ಮರೆಯಾಗಿದೆ

ಮಾಥರಿ : ನಾನು ಈಗ ಸ್ವಲ್ಪ ಸಮಯ ಹಾಲು ಮಾರುವುದಕ್ಕಾಗಿ ಹೊರಗೆ ಹೋಗಬೇಕು. ನ
ಹೆಣ್ಣುಮಕ್ಕಳು ಬರುತ್ತಾರೆ. ಅವರ ಹಾಡು ಕುಣಿತಗಳ ಮನರಂಜನೆಯಲ್ಲಿ ಗಂಡನಗಲಿಕೆಯ ಬೇಸರವನ
ಕಳೆಯುತ್ತಿರು, ಬಂದು ಬಿಡುತ್ತೇನೆ. [ಮಾಥರಿ ಹಾಲಿನ ಗಡಿಗೆಯನ್ನು ತಲೆಮೇಲಿಟ್ಟುಕೊಂಡು ಹೊರ
ಹೋಗುತ್ತಾಳೆ. ದೇವಂತಿ ಬುಟ್ಟಿಯ ಸಮೇತ ಒಳಕ್ಕೆ ಬರುತ್ತಾಳೆ]

ದೇವಂತಿ : ಈ ಜನ ಬಜಾರಿನಲ್ಲಿ ತಮಾಷೆಯ ಭಾಷೆಯನ್ನಾಡುತ್ತಾರೆ. ಇವರು ಅಪಕ್ವ ಅಭಿವ್ಯಕ್ತಿಯನ
ಮಾಡಿದರೂ ಸಹ ಸರಿಯಾಗಿ ಮಾತನಾಡುವ ನನ್ನನ್ನು ನೋಡಿ ನಗುತ್ತಾರೆ.

ಕನ್ನಗಿ : ಭಾಷೆ ಸ್ಥಳದಿಂದ ಸ್ಥಳಕ್ಕೆ ಬದಲಾಗುವುದು ನಿನಗೆ ಗೊತ್ತಿಲ್ಲವೆ?

ದೇವಂತಿ : ಇವರ ವೇಷಭೂಷಣಗಳು, ನಡವಳಿಕೆಗಳು ಭಯಾನಕವಾದವು. ಬಹಳ ಹಳೆಯಕಾಲ
ವಸ್ತುಗಳನ್ನೇ ಬಳಸುತ್ತಾರೆ. ಆದರೆ ನಮಗಿಂತ ಇವರೇ ನಾಗರಿಕರೆಂಬಂತೆ ಕಿರುಚುತ್ತಾರೆ.

ಕನ್ನಗಿ : ಹಾಗಿದ್ದರೆ ಮಧುರೆಯ ಜನ ನಿನಗಿಷ್ಟವಾಗಲಿಲ್ಲವೆನ್ನು.

ದೇವಂತಿ : ನೀವು ಹೇಳಿದಷ್ಟು ದೂರ ಹೋಗಲು ನಾನು ಇಷ್ಟಪಡುವುದಿಲ್ಲ. ಆದರೆ ಇವರು ತಾವೇ ದೊಡ್ಡವರು ಎಂಬ ಅಹಂನಲ್ಲಿ ಬಿದ್ದು ಅಕಾರಣವಾಗಿ ಬೀಗುತ್ತಿದ್ದಾರೆ. ಉದಾಹರಣೆಗೆ ನಮಗೆ ಆಸರೆ ನೀಡಿರುವ ಅತಿಥೇಯರನ್ನೇ ನೋಡಿ! ಗೋಪಾಲಕನ ಮಡದಿಯಲ್ಲವೆ ಅವಳು! ನಮ್ಮ ನಗರದಲ್ಲಾಗಿದ್ದರೆ ಇಂತಹವರು ನಿಮ್ಮೊಡನೆ ಮಾತನಾಡಲೂ ಸಾಧ್ಯವಾಗುತ್ತಿರಲಿಲ್ಲ. ಆದರೆ ಇಲ್ಲಿ ಅವಳು ನಿಮ್ಮನ್ನು ಅವರಲ್ಲೊಬ್ಬಳಂತೆ ವರ್ತಿಸುತ್ತಿದ್ದಾಳೆ.

ಕನ್ನಗಿ : ಅವಳು ನಮಗೆ ಆಸರೆ ನೀಡಿರುವುದನ್ನು ಮರೆಯಬೇಡ. ಅಲ್ಲದೆ ಅವಳು ನಮ್ಮ ಬಗ್ಗೆ ಕರುಣಾಮಯಿಯಾಗಿಯೇ ಇದ್ದಾಳೆ.

ದೇವಂತಿ : ಬೇರೆ ಎಲ್ಲಿಯಾದರೂ ನಾವು ಇಲ್ಲಿಗಿಂತ ಸುಖವಾಗಿರುತ್ತಿದ್ದೆವೆಂಬುದೇ ನನ್ನ ಭಾವನೆ.

ಕನ್ನಗಿ : ದೇವಂತಿ, ನೀನು ಬಹಳ ಕೃತಘ್ನಳು.

ದೇವಂತಿ : ದೇವಿ, ಈ ವಿದೇಶಿಯರನ್ನು ನೀವು ಬಹಳ ನಂಬುತ್ತೀರಿ. ನಿನ್ನೆ ಇಡೀ ರಾತ್ರಿ ನನಗೆ ನಿದ್ರೆ ಬರಲಿಲ್ಲ. ಏಕೆ ಗೊತ್ತೆ, ನೀವು ಅವಳಿಗೆ ಕಾಲ್ಕಡಗದ ವಿಷಯ ಹೇಳಿದಿರಿ. ನನಗೆ ಅವರ ಕಣ್ಣು ಇದರ ಮೇಲಿರಬಹುದೆಂಬ ಸಂಶಯ. ನೀವು ಈ ಜನರನ್ನು ಹಿಂದೆ ಎಂದೂ ಬಲ್ಲವರಲ್ಲ.

ಕನ್ನಗಿ : ಅಪ್ರಯೋಜಕ ಮಾತು ನಿಲ್ಲಿಸು. ನನ್ನ ಮಾತು ಕೇಳು. ದೇವಂತಿ, ನಮ್ಮವರ ಬಗ್ಗೆ ನಾನು ಅಸ್ವಸ್ಥಳಾಗಿಲ್ಲವೆ! ಅವರು ಸರಳ ಜೀವಿಗಳು. ಧೈರ್ಯವಂತರು ಮತ್ತು ಪ್ರಾಮಾಣಿಕರು. ಆದರೂ ವ್ಯವಹಾರ ಕಲೆಯಲ್ಲಿ ಅನನುಭವಿಗಳು. ಯಾರ ಪರಿಚಯವೂ ಇಲ್ಲದ, ಇವರು ಯಾರ ಮಗನೆಂಬುದನ್ನೂ ತಿಳಿಯದ ಈ ನಗರದಲ್ಲಿ ಇವರನ್ನು ವಂಚಿಸುವುದು ಬಹಳ ಸುಲಭ.

ದೇವಂತಿ : ದೇವಿ, ಚಿಂತಿಸಬೇಡಿ. ನಿಮ್ಮವರು ವಿದೇಶಿಯರೆಲ್ಲರಿಗಿಂತ ಮೇಲು. ಅವರೊಡನೆ ಇವರು ಸುಲಭವಾಗಿ ವ್ಯವಹರಿಸಬಲ್ಲರು ಮತ್ತು ವಿದೇಶಿಯರಿಗೆ ಅವರದೇ ಆದ ಕೆಲವು ವ್ಯಾಪಾರ ತಂತ್ರಗಳನ್ನು ಕಲಿಸಬಲ್ಲರು.

ಕನ್ನಗಿ : ಅವರು ನಗರದೊಳಕ್ಕೆ ಹೋಗಿ ಬಹಳ ಹೊತ್ತಾಯಿತು. ಇಷ್ಟರಲ್ಲಿ ವಾಪಸ್ಸು ಬರಬೇಕಾಗಿತ್ತು. ಅವರಿಗಾಗಿ ಕಾಯುತ್ತಿರುವ ನನಗೆ ಎಲ್ಲೆಲ್ಲೂ ಅಪಶಕುನಗಳೇ ಕಾಣಿಸುತ್ತಿವೆ. ಆ ದೀಪದಲ್ಲಿದ್ದ ಎಣ್ಣೆ ಬತ್ತಿ ಹೋಗಿದೆ; ಅವರು ನನಗೆ ಮುಡಿಸಿದ ಹೂಗಳು ಬಾಡಿ ಹೋಗಿವೆ; ಬೆಳಗ್ಗೆ ತಂದ ಹಣ್ಣು ಕೊಳೆತಿದೆ; ಈ ಎಲ್ಲ ಲಕ್ಷಣಗಳನ್ನು ನಿರ್ಲಕ್ಷಿಸುವುದು ಕಷ್ಟ.

ದೇವಂತಿ : ದೇವಿ, ಇವು ಕೆಟ್ಟ ಲಕ್ಷಣಗಳಲ್ಲ, ಕಾಲಕ್ಷೇಪದ ಕುರುಹುಗಳು. ಮನೆಯೊಡತಿ ಎಣ್ಣೆ ಹಾಕದಿರುವ ಕಾರಣ ದೀಪ ಆರಿದೆ; ದಿನದ ತಾಪಕ್ಕೆ ಹೂಗಳು ಬಾಡಿವೆ. ನಿನ್ನೆಯೂ ಹಣ್ಣು ಅತಿ ಪಕ್ವವಾಗಿತ್ತು. ಅಪಾಯವಿಲ್ಲದ ಕಡೆ ಅದನ್ನೇ ಹುಡುಕಬೇಡಿ. ನಿಮ್ಮೆಜಮಾನರು ಸುರಕ್ಷಿತವಾಗಿ ಹಿಂತಿರುಗುವರು.

ಕನ್ನಗಿ : ಆ ಕನಸೇ ನನ್ನ ಬುದ್ಧಿಯನ್ನು ಆಕ್ರಮಿಸಿಕೊಂಡು ಅದೇ ಇಲ್ಲಿಯವರೆಗೆ ನಿಜವಾಗಿ ಕಾಣುತ್ತಿದೆ. ಕನಸಿನ ಮೊದಲ ಭಾಗ ನನಸಾದ ಮೇಲೆ ನಾನು ಜಾಗ್ರತಳಾಗಿದ್ದೇನೆ. ಕೊನೇಪಕ್ಷ ನಿನ್ನ ಸಲಹೆಯನ್ನಾದರೂ ಒಪ್ಪಬಹುದಿತ್ತು. ಸೂರ್ಯನ ಕೆರೆಯ ಪವಿತ್ರ ನೀರಿನಲ್ಲಿ ಸ್ನಾನ ಮಾಡಬಹುದಿತ್ತು.

ದೇವಂತಿ : ನಾನು ಹಾಗೆಯೇ ಹಾರೈಸಿದ್ದು.

ಕನ್ನಗಿ : ನಾನು ಆಗ ಜಂಬದಲ್ಲಿದ್ದೆನು. ನನ್ನ ಆ ನೋವಿನಲ್ಲಿ ಜಂಬ ಒಂದನ್ನು ಬಿಟ್ಟರೆ ಬೇ ಏನೂ ಕಾಣುತ್ತಿರಲಿಲ್ಲ. ಆದರೆ ಈಗ ನನಗೊಬ್ಬ ಗಂಡನಿರುವುದೇ ಜಂಬವಾಗಿದೆ. ನನ್ನ ಎಲ್ಲಾ ಕಾಳಜಿಯೂ ಅವರ ಯೋಗಕ್ಷೇಮವನ್ನು ಕುರಿತದ್ದೇ ಆಗಿದೆ.

ದೇವಂತಿ : ಇದು ಹೀಗೆಯೇ ಆಗಬೇಕೆಂದು ವಿಧಿಯ ಪುಸ್ತಕದಲ್ಲಿ ಬರೆದಿದ್ದರೆ ಅದನ್ನು ಯಾರು ತಪ್ಪಿಸಲಾರರು. ಹುಡುಗಿಯರು ನಿಮಗೆ ಮನರಂಜನೆ ನೀಡಲು ಬರುತ್ತಿರುವ ಸದ್ದು ಕೇಳಿಸುತ್ತಿದೆ. ನೀವ ಅವರ ಕುಣಿತವನ್ನು ನೋಡುತ್ತ ಮೂಢನಂಬಿಕೆಗಳನ್ನು ಮರೆಯಿರಿ. ನಾನು ನಿಮ್ಮನ್ನು ಬೇಗ ಕೂಡಿಕೊಳ್ಳುತ್ತೇನೆ

[ಕನ್ನಗಿ ಹೊರಗೆ ಹೋಗುತ್ತಾಳೆ. ಹಿನ್ನಲೆಯಲ್ಲಿ ಸಂಗೀತ ಲಹರಿ ಕೇಳಿಸುತ್ತದೆ. ದೇವಂತಿ ಕೃಷ್ಣ ವಿಗ್ರಹದ ಮುಂದೆ ಮೊಣಕಾಲೂರಿ ಕುಳಿತು ಪ್ರಾರ್ಥಿಸುತ್ತಾಳೆ]

ಓ! ದೇವರೇ, ನನ್ನೊಡತಿಗೆ ಮತ್ತೆ ನೋವನ್ನು ಉಂಟುಮಾಡಬೇಡಿ. ಅವಳು ಈಗಾಗಲೆ ಸಾಕಷ್ಟ ನೊಂದಿದ್ದಾಳೆ. ಈಗಲಾದರೂ ಸ್ವಲ್ಪ ಕಾಲ ಕೌಟುಂಬಿಕ ಆನಂದವನ್ನು ಸವಿಯುವಂತಾಗಲಿ. ವಿಚಿತ್ರವಾ ಗಾಳಿಸುದ್ದಿಗಳು ಕೇಳಿಬರುತ್ತಿವೆ. ಅವರು ಸುರಕ್ಷಿತವಾಗಿ ಹಿಂತಿರುಗಲಿ. ಈ ಅಪರಿಚಿತ ನಗರದಲ್ಲಿ ಯಾವ ದುಷ್ಟ ಶಕ್ತಿಯ ಬಲೆಗೂ ಬೀಳದಿರಲಿ [ಮಾಧವಿ ಒಳಗೆ ಬರುತ್ತಾಳೆ. ಆಕೆ ಯುವತಿ. ಜಗತ್ತಿನ ಆಕರ್ಷ ಬೆಡಗು ಬಿನ್ನಾಣದ ಹೆಣ್ಣು]

ಮಾಧವಿ : ಕನ್ನಗಿ ಗಂಡನೊಡನೆ ವಾಸವಾಗಿರುವ ಗೋಪಾಲಕನ ಮನೆ ಇದೇ ಏನು?

ದೇವಂತಿ : ನೀನು... ಇಲ್ಲಿ!

ಮಾಧವಿ : ಹೌದು. ಮಾಧವಿ ತನ್ನ ಪ್ರಿಯಕರನನ್ನು ಮತ್ತು ಅವನ ಹೆಂಡತಿಯನ್ನು ಹುಡುಕುತ್ತಿದ್ದಾಳೆ ನೀನು ದೇವಂತಿಯಲ್ಲವೆ? ಕನ್ನಗಿಯ ಸಹಚರಿ, ಅಹುದಲ್ಲವೆ? ನಿನ್ನೊಡತಿ ಎಲ್ಲಿ?

ದೇವಂತಿ (ಸ್ವಗತ) : ಓ! ನಾನು ಮೂರ್ಖತನದಿಂದ ನಾವಿಲ್ಲಿ ಸುರಕ್ಷಿತವಾಗಿದ್ದೇವೆ ಎಂದು ಭಾವಿಸಿದ್ದೆನಲ್ಲ! (ಮಾಧವಿಯನ್ನು ಕುರಿತು) ನಾವು ಇಲ್ಲಿರುವುದನ್ನು ಹೇಗೆ ಪತ್ತೆಮಾಡಿದೆ? ನಾವು ಮಧುರೆಗ ಹೋಗಿದ್ದೇವೆಂದು ನಿನಗೆ ಯಾರು ಹೇಳಿದರು? ನರ ಪಿಳ್ಳೆಗೂ ನಾವು ಉಸಿರು ಬಿಟ್ಟಿಲ್ಲ. ನಿನಗೆ ಇನ್ನೂ ಎಷ್ಟು ದುಷ್ಟತಂತ್ರಗಳನ್ನು ನಮ್ಮ ಮೇಲೆ ಪ್ರಯೋಗಿಸಬೇಕೆಂದಿದೆ? ನೀನು ನಮ್ಮನ್ನು ನೆಮ್ಮದಿಯಿಂದಿರಲು ಬಿಡುವುದಿಲ್ಲವೆ!

ಮಾಧವಿ : ನಾನು ಕಳುಹಿಸಿದ ಪತ್ರವನ್ನು ನಿರಾಕರಿಸಿದಾಗ, ನನ್ನ ಸಂದೇಶವನ್ನು ನಿರ್ಲಕ್ಷಿಸಿದಾಗ, ಇದು ತಾತ್ಕಾಲಿಕ ಕೋಪವೆಂದುಕೊಂಡೆ. ಇಂದಲ್ಲ ನಾಳೆ ಬಂದೇ ಬರುತ್ತಾರೆಂದು ಬಕಪಕ್ಷಿಯಂತೆ ಆಸೆಯಿಂದ ಕಾದಿದ್ದೆ. ಆದರೆ ಅವರು ಬರಲೇ ಇಲ್ಲ. ಮರುದಿನ ನಾನು ಕನ್ನಗಿಯ ಮನೆಗೆ ಹೋದೆ.

ದೇವಂತಿ : ಯಾವ ಸುಶೀಲ ಪತಿವ್ರತೆಗೆ ನೋವುಂಟುಮಾಡಿದೆಯೋ ಅವಳ ಬಾಗಿಲನ್ನು ತಟ್ಟುವ ಧೈರ್ಯವೂ ಬಂತೆ ನಿನಗೆ?

ಮಾಧವಿ : ಹೌದು. ನನ್ನ ಪ್ರೀತಿಯೇ ನನಗೆ ಆ ಶಕ್ತಿ ನೀಡಿತು. ಆದರೆ ನಾನು ನೋಡಿದ್ದು ಮಾತ್ರ ಬರಿಯ ಮನೆಯನ್ನು; ನನ್ನಿನಿಯನ ಮಡದಿ ಐದು ವರ್ಷಗಳನ್ನು ದುಃಖದಿಂದ ಕಳೆದ ಉಗ್ರಸಂಯಮದ ತಪಶ್ಶಕ್ತಿಯ ಸ್ಥಳವನ್ನು ನೋಡಿದೆ. ಕಡು ಬಡತನ ಆ ಮನೆಯ ಮೂಲೆಮೂಲೆಯಲ್ಲಿ ಆವರಿಸಿದ್ದನ್ನು ನೋಡಿದೆ. ಹಾಗೆಯೇ ಅವಳು ಜಗತ್ತಿನ ಕಣ್ಣಿಗೆ ಕಾಣದಂತೆ ಮುಚ್ಚಿಟ್ಟಿದ್ದ ಗೌರವವನ್ನು ನೋಡಿದೆ. ಅವಳ ತಂದೆ ತಾಯಿಗಳಿಗೂ ಸಹ ನಿಗೂಢವಾಗಿಯೇ ಇಟ್ಟಿದ್ದ ಸುಶೀಲೆಯ ಪಾತಿವ್ರತ್ಯವನ್ನು ನೋಡಿದೆ. ಆಗಲೇ

ಅವಳ ದುಃಖದಲ್ಲಿ ನನ್ನ ಪಾಲೆಷ್ಟಿದೆಯೆಂಬುದು ನನಗೆ ಅರ್ಥವಾದದ್ದು. ಮರುಕ್ಷಣದಲ್ಲಿಯೇ ನನ್ನ ಮನಸ್ಸನ್ನು ಬದಲಿಸಲು ನಿರ್ಧರಿಸಿದೆ. ಬಡಪಾಯಿ ನನ್ನ ಮೇಲಿನ ಮೋಹದಿಂದ ಸುರಿದ ಸಂಪತ್ತನ್ನೆಲ್ಲಾ ಅವರಿಗೇ ಹಿಂತಿರುಗಿಸಲು ಸಿದ್ಧಳಾದೆ.

ದೇವಂತಿ : ನೀಚ ಹೆಂಗಸೇ! ನಿನಗೆ ಸಂತೆಯಲ್ಲಿ ಕೊಂಡ ವಸ್ತುವನ್ನು ವಾಪಸ್ಸು ಕೊಡಬಲ್ಲ ಅರ್ಹತೆ ಇದೆಯೆ? ಪಶ್ಚಾತ್ತಾಪಕ್ಕೆ ನೀನು ಅರ್ಹಳೇ? ಅರ್ಹಳಾದರೆ ತಕ್ಷಣ ಈ ನಗರವನ್ನು ಬಿಟ್ಟು ಹೊರಡು. ನೆಮ್ಮದಿಯಿಂದಿರುವ ದಂಪತಿಗಳನ್ನು ಮತ್ತೊಮ್ಮೆ ದುಃಖದ ಕೂಪಕ್ಕೆ ದೂಡಬೇಡ.

ಮಾಧವಿ : ನನ್ನ ಅಮಾಯಕತೆಯನ್ನು ಸಾಬೀತುಪಡಿಸಿದ ಬಳಿಕ ಮತ್ತು ನನ್ನೆಲ್ಲ ಸಂಪತ್ತನ್ನು ಮುಟ್ಟಿಸಬೇಕಾದವರಿಗೆ ಮುಟ್ಟಿಸಿದ ಬಳಿಕ ಖಂಡಿತವಾಗಿ ನಾನು ಈ ನಗರವನ್ನು ಬಿಟ್ಟು ಹೊರಟು ಹೋಗುತ್ತೇನೆ.

ದೇವಂತಿ : ನೀನು ಇಲ್ಲಿಗೆ ಹೇಗೆ ಬಂದೆ?

ಮಾಧವಿ : ನಿಮ್ಮೊಡತಿಯ ಮನೆ ಖಾಲಿಯಾಗಿರುವುದನ್ನು ನೋಡಿದ ಮೇಲೆ ಆಕೆಗೆ ಜನ್ಮಕೊಟ್ಟ ಪುಣ್ಯಾತ್ಮರ ಬಳಿಗೆ ಹೋದೆ.

ದೇವಂತಿ : ಏನು? ಅಲ್ಲಿಗೂ ಹೋದೆಯಾ?

ಮಾಧವಿ : ಹೌದು. ಅಲ್ಲಿಗೂ ಹೋದೆ. ನನ್ನ ಪಾಪಕೃತ್ಯವನ್ನು ಬಹಿರಂಗಗೊಳಿಸಲು ಹೋದೆ. ನೀವು ಎಲ್ಲಿರುವಿರಿ ಎಂದು ವಿಚಾರಿಸಲು ಹೋದೆ. ನೀವು ಎಲ್ಲಿಗೆ ಹೋಗಿದ್ದೀರಿ, ಯಾವಾಗ ಹಿಂದಿರುಗುವಿರಿ ಎಂಬುದನ್ನು ತಿಳಿದುಕೊಳ್ಳಲು ಹೋದೆ. ದೇವರೇ! ಅವರಿಗೇನೂ ಗೊತ್ತಿಲ್ಲ. ಅಲ್ಲಿಯೂ ನನಗೆ ದುಃಖವೇ ಕಾದಿತ್ತು. ನೀವು ನಗರ ಬಿಟ್ಟಿರುವುದೂ ಸಹ ಅವರಿಗೆ ಗೊತ್ತಿರಲಿಲ್ಲ. ನೀವು ನಗರವನ್ನು ಬಿಟ್ಟ ಬಗ್ಗೆ ಯಾವ ಸುಳಿವನ್ನೂ ಬಿಟ್ಟಿಲ್ಲ.

ದೇವಂತಿ : ಸೋಂಕುರೋಗದ ಕ್ರಿಮಿಯಂತೆ ನೀನು ದುಃಖ ಹೊರಬಲ್ಲೆ. ನೀನು ಮಾಡಬಹುದಾದ ಉತ್ತಮ ಕೆಲಸವೆಂದರೆ ಏಕಾಂಗಿಯಾಗಿ ಇರುವುದೊಂದೇ.

ಮಾಧವಿ : ಬಹುಶಃ ಅದು ನನ್ನ ಹಣೆಬರಹವಷ್ಟೆ! ನಾನಾದರೂ ಅದನ್ನೇ ಹಿಂಬಾಲಿಸಬೇಕು. ಬಂದ ದಾರಿಗೆ ಸುಂಕವಿಲ್ಲೆಂದು ನೀವು ನಮ್ಮ ನಗರವನ್ನು ಬಿಟ್ಟು ನಡೆದ ದಾರಿಯಲ್ಲಿಯೇ ನಾನೂ ಹೊರಟೆ. ಹಳ್ಳಿಯಿಂದ ಹಳ್ಳಿಗೆ ಬರುವಾಗ ನೀವು ಪೂಜೆ ಮಾಡಿ ಪ್ರಾರ್ಥಿಸಿದ್ದ ದೇವಾಲಯಗಳನ್ನೆಲ್ಲಾ ನೋಡಿದೆ. ನೀವು ವಿಶ್ರಾಂತಿ ಪಡೆದ ಪುಣ್ಯಧಾಮಗಳನ್ನು ಗಮನಿಸಿದೆ. ಆಗೆಲ್ಲ ನೋವಿನಿಂದ ಹೃದಯ ಬಿರಿದಂತಾಗುತ್ತಿತ್ತು. ನಿಮ್ಮ ಕಷ್ಟಗಳಿಗೆಲ್ಲ ನಾನೇ ಕಾರಣವೆಂದು ಕೊರಗುತ್ತಿದ್ದೆನು.

ದೇವಂತಿ : ಅಮಾಯಕ ಗಂಡಸರನ್ನು ಸೆಳೆಯುವ ದುಷ್ಟ ಮಾಂತ್ರಿಕಗಳೇ, ಅವರ ಸುಖಮಯ ಸಂಸಾರಗಳನ್ನು ಹಾಳುಮಾಡುವ ಪಾಪಿಯೇ, ನೀತಿಗೆಟ್ಟು ಅನೀತಿಯನ್ನೇ ಎತ್ತಿ ಹಿಡಿಯುವ ನೀಚಳೇ, ಹೆಣ್ಣಿನ ಶೀಲ ಮತ್ತು ಗೌರವಗಳನ್ನು ಹಾಳುಮಾಡುವವಳೇ, ನನ್ನ ಮಾತು ಕೇಳು : ನಮ್ಮೊಡೆಯರಾದ ಕೋವಲನ್‌ರವರಲ್ಲಿ ನಿನಗೆ ಒಪ್ಪಿಸಬಹುದಾದ ಸಂಪತ್ತು ಏನೂ ಉಳಿದಿಲ್ಲ; ಅವರ ಪ್ರೇಮದ ಉಳಿದಂಶವನ್ನು ತಮ್ಮ ಮಡದಿಗಾಗಿಯೇ ಮೀಸಲಿಟ್ಟಿದ್ದಾರೆ. ನಿನ್ನ ಸಮರ್ಪಣೆಯ ಉದ್ದೇಶ ಒಂದು ವೇಳೆ ಸತ್ಯವಾಗಿದ್ದರೂ ಪ್ರಾಮಾಣಿಕವಾಗಿದ್ದರೂ ಸಹ ಅದನ್ನು ಅವರು ಸ್ವೀಕರಿಸುವುದಿಲ್ಲ. ನಿನ್ನ ನಿರ್ದೋಷತ್ವವನ್ನು ಎಂದೆಂದಿಗೂ ನಂಬುವುದಿಲ್ಲ. ಬದಲಾಗಿ ನಾವೆಲ್ಲ ನಿನ್ನನ್ನು ತಿರಸ್ಕರಿಸುತ್ತೇವೆ, ಅಪಮಾನಗೊಳಿಸುತ್ತೇವೆ ಮತ್ತು

ದೂಷಿಸುತ್ತೇವೆ. ನೀನು ಇಲ್ಲಿ ನಿಲ್ಲುವುದರಿಂದ ಏನನ್ನೂ ಪಡೆಯಲಾರೆ. ನೀನು ಎಲ್ಲಿಗೆ ಹೋದರೂ ದುಃಖದ ವಿಷಬೀಜಗಳನ್ನೇ ಬಿತ್ತುವೆ. ದುಃಖ ಮತ್ತು ಅಸ್ವಸ್ಥತೆಯನ್ನೇ ಹೊತ್ತು ಹೋಗುವೆ ಮತ್ತು ಎಲ್ಲ ಸದ್ಗೃಹಿಣಿಯರ ಶಾಪಗಳನ್ನು ಪಡೆಯುವೆ. ನಿನ್ನ ದೃಷ್ಟಿಯೇ ದುಷ್ಟವಾದುದು, ನಿನ್ನ ಮಾತು ವಿಷಪೂರಿತವಾದುದು. ನಿನ್ನ ಉದ್ದೇಶಗಳೆಲ್ಲ ಯಾವಾಗಲೂ ಮಲಿನವಾದವುಗಳೇ! ಆದ್ದರಿಂದ ನಾನು ಕೈಮುಗಿದು ಬೇಡಿಕೊಳ್ಳುತ್ತೇನೆ. ಹೋಗು, ಹೊರಟುಹೋಗು ಇಲ್ಲಿಂದ, ಎಂದೆಂದಿಗೂ ಮರಳಿ ಬರಬೇಡ ನಿನಗೆ ಮುಕ್ತಿ ನೀಡುವಂತೆ ನಾನು ಪ್ರತಿ ದಿನ ಎಲ್ಲ ದೇವರುಗಳಲ್ಲಿಯೂ ಪ್ರಾರ್ಥಿಸುತ್ತಾ ಮೊರೆಯಿಡುತ್ತೇನೆ ನೀನೇನಾದರೂ ಹೋಗದಿದ್ದ ಪಕ್ಷದಲ್ಲಿ ನಿನ್ನ ಪಾಪಗಳು ಇಮ್ಮಡಿಯಾಗುತ್ತವೆ. ನರಕದಲ್ಲಿ ನಿನ್ನ ಅಪರಾಧಗಳಿಗೆ ತಕ್ಕ ಚಿತ್ರಹಿಂಸೆಯನ್ನು ಅನುಭವಿಸುವೆ! ನೀತಿಗೆಟ್ಟ ನಿನ್ನ ಬದುಕು ನಮ್ಮನ್ನು ಹಾಳುಮಾಡಿದ್ದಕ್ಕೆ ನಿನಗೆ ಅದೇ ತಕ್ಕ ಶಿಕ್ಷೆ. [ಕನ್ನಗಿ ಒಳಕ್ಕೆ ಬರುತ್ತಾಳೆ]

ಕನ್ನಗಿ : ಏನಿದು ಸದ್ದು ಇಲ್ಲಿ?

ಮಾಧವಿ : ಪ್ರೀತಿಯ ಅಕ್ಕ. ನಾವಿಬ್ಬರೂ ಒಬ್ಬರನ್ನೇ ಪ್ರೀತಿಸಿ ನೊಂದಿರುವುದರಿಂದ ನಾನು ನಿನ್ನನ್ನು ಅಕ್ಕ ಎಂದು ಕರೆಯಲು ನೀನು ಒಪ್ಪುವೆಯೆಂದು ನಂಬಿದ್ದೇನೆ. ನಾನೊಬ್ಬ ನತದೃಷ್ಟ ಹೆಣ್ಣು ಯುಕ್ತಾಯುಕ್ತ ಪರಿಜ್ಞಾನವಿಲ್ಲದೆ ನಿನ್ನ ಕಷ್ಟಗಳಿಗೆ ಕಾರಣಳಾಗಿರುವವಳು. ನನ್ನ ಹಿಂದಿನ ತಪ್ಪುಗಳನ್ನು ತಿದ್ದಿಕೊಳ್ಳಲು ಇಚ್ಛಿಸಿ ಬಂದಿದ್ದೇನೆ. ನಿಮ್ಮ ಪ್ರೇಮಕ್ಕೆ ಪ್ರತಿಸ್ಪರ್ಧಿಯಾಗಿ ಬಂದಿಲ್ಲ. ನಿನ್ನಂತಹ ಸ್ಫುರದ್ರೂಪಿಯೊಡನೆ ಸ್ಪರ್ಧಿಸುವುದು ನನಗೆ ಇಷ್ಟವಿಲ್ಲ. ಆದರೆ ನಿಮ್ಮ ದಾಸಿಯಾಗಿರಲು, ನಿಮ್ಮ ಸೇವೆ ಮಾಡಿ ನನ್ನ ಪಾಪ ಕಳೆದುಕೊಳ್ಳಲು ಬಂದಿದ್ದೇನೆ.

ದೇವಂತಿ : ನಮ್ಮೊಡತಿ ಕೋಪ ಮಾಡಿಕೊಳ್ಳುವ ಮೊದಲು ಇಲ್ಲಿಂದ ಹೊರಟುಹೋಗು. ಮತ್ತೆ ಬರಬೇಡ.

ಕನ್ನಗಿ : ಅವಳನ್ನು ಇಲ್ಲಿ ಇರಲು ಬಿಡು. ಅವಳು ಇಷ್ಟಪಡುವುದಾದರೆ ಒಳ್ಳೆಯವರನ್ನು ಕೆಡಿಸುವ ಕಲೆಯಲ್ಲಿ ನಿಪುಣೆಯಾಗಿರುವವಳು ಮತ್ತೆ ಅದನ್ನು ಪ್ರಯೋಗಿಸಲಿ. ನನ್ನ ಗಂಡ ಮರಳಿ ಅವಳ ಬಲೆಗೆ ಬೀಳುವಷ್ಟು ಬಲಹೀನನಾಗಿದ್ದರೆ, ನಾನೆಂದೆಂದಿಗೂ ಗಂಡನನ್ನೇ ಬಯಸುವುದಿಲ್ಲ. [ಮಾಧವಿಯ ಕಡೆ ತಿರುಗಿ] ನಿರ್ಗತಿಕ ನೀಚ ಹೆಣ್ಣೇ, ತೋರಿಕೆಗಾದರೂ ನಿನ್ನಲ್ಲಿ ಶೀಲವೆಂಬುದು ಇಲ್ಲವೆ? ಸೌಜನ್ಯವಿಲ್ಲ, ಸಭ್ಯತೆಯಿಲ್ಲ, ಹೆಣ್ಣಿಗೆ ಭೂಷಣವಾದ ನಾಚಿಕೆಯೂ ಇಲ್ಲ. ಘನತೆಯಿಲ್ಲ ಅಥವಾ ಕಳ್ಳರಿಗಿರಬಹುದಾದಷ್ಟು ಸೌಜನ್ಯವೂ ಇಲ್ಲ. ಕೊನೆಯ ಪಕ್ಷ ವೃತ್ತಿಗೌರವದ ಸ್ವಾಭಿಮಾನವೂ ಇಲ್ಲ. ಎಲ್ಲವನ್ನು ಬಿಟ್ಟು ಮತ್ತೊಮ್ಮೆ ಪರಹೆಣ್ಣಿನ ಗಂಡನನ್ನು ಬೆನ್ನಟ್ಟಿ ಬಂದಿರುವೆಯಾ?

ಮಾಧವಿ : ಪ್ರೀತಿಯ ಅಕ್ಕ, ನೀನು ಗೌರವಾನ್ವಿತ ಹೆಂಡತಿ. ಈ ಸಮಾಜ ನಿನ್ನ ಗೌರವವನ್ನು ರಕ್ಷಿಸುತ್ತದೆ; ನಿನ್ನ ಹಕ್ಕುಗಳನ್ನು ಎತ್ತಿ ಹಿಡಿಯುತ್ತದೆ; ನಿನ್ನ ವಾರಸುದಾರತ್ವವನ್ನು ಒಪ್ಪುತ್ತದೆ ಮತ್ತು ನಿನ್ನನ್ನು ಬಿಟ್ಟ ಗಂಡನನ್ನು ಶಿಕ್ಷಿಸುತ್ತದೆ. ಸಾಮಾಜಿಕ ಸಂಪ್ರದಾಯ ಹೆಂಡತಿಯನ್ನು ಬಿಟ್ಟ ಗಂಡನನ್ನು ಬಹಿಷ್ಕರಿಸುತ್ತದೆ. ನಿನಗೆ ಗಂಡನು ಹಿಂದಿರುಗುವವರೆಗೆ ಕಾಯುವಂತೆ, ಕಷ್ಟ ಸಹಿಸುವಂತೆ ಹಿತೋಪದೇಶ ನೀಡುತ್ತದೆ. ಆದರೆ ನನಗೆ ಅಂತಹವು ಯಾವೂ ಇಲ್ಲ. ನಾನು ಪ್ರೀತಿಸಿದ ಮನುಷ್ಯನನ್ನು ಉಳಿಸಿಕೊಳ್ಳುವ ಹಕ್ಕಾಗಲಿ, ವಾರಸುದಾರತ್ವವಾಗಲಿ ನನಗಿಲ್ಲ. ನನ್ನ ಹೆಸರಿಗೆ ಪ್ರತಿಯೊಬ್ಬ ಜಾಣನಾದ ಕಾಮುಕನ ನಾಲಿಗೆಯೂ ಬೆಲೆಗಟ್ಟುತ್ತದೆ. ನನ್ನ ಮನೆ ಅಶ್ಲೀಲತೆಯ ದೋಷಾರೋಪಕ್ಕೆ ಗುರಿಯಾಗುತ್ತದೆ, ದುರ್ವ್ಯಸನದ ಗಣಿಯಾಗುತ್ತದೆ.

ನ್ನ ಹೆಸರು ಹಗುರವಾಗಿ ಮಲಿನಗೊಳ್ಳುವಂತಹದು. ನಾನು ಅತ್ಯುತ್ತಮವಾದ ಕಲೆಗಳಲ್ಲಿ ಪ್ರವೀಣೆಯಾದರೂ ಹ ಯಾರೊಬ್ಬರೂ ಲೆಕ್ಕಿಸುವುದಿಲ್ಲ ಅಥವಾ ನನ್ನ ಶೀಲವನ್ನು ರಕ್ಷಿಸುವುದಿಲ್ಲ.

ಕನ್ನಗಿ : ನನ್ನ ಗಂಡ ನಮ್ಮ ಸಂಪತ್ತನ್ನೆಲ್ಲಾ ನಿನ್ನ ಮೈಮೇಲೆ ಸುರಿದಾಗ ನನಗೇನು ರಕ್ಷಣೆಯಿತ್ತು?

ಮಾಧವಿ : ನಿಮ್ಮ ಸಂಪತ್ತು ರಕ್ಷಿಸಲ್ಪಡದಿದ್ದರೂ ಗೌರವ ರಕ್ಷಿಸಲ್ಪಟ್ಟಿದೆ. ಪ್ರೀತಿಯ ಅಕ್ಕ, ಮೊದಲು ನ್ನ ಮಾತು ಕೇಳು, ಅನಂತರ ಬೇಕಾದರೆ ನಿನ್ನ ಮನಸ್ಸಿಗೆ ಬಂದಂತೆ ದೂಷಿಸು. ನಿಮ್ಮ ತಂದೆ ತಾಯಿಗಳ ಇಷ್ಟದಂತೆ ಬ್ರಾಹ್ಮಣರ ಮಂತ್ರ ಘೋಷಗಳೊಂದಿಗೆ ನೀವಿಬ್ಬರು ಮದುವೆಯಾಗಿರುವಿರಿ. ಬಾಳ ಸಂಗಾತಿಗಳಾದಿರಿ. ಇದೇ ಒಬ್ಬರಿಗೊಬ್ಬರ ಬಂಧನದ ಕರ್ತವ್ಯವಾಯಿತು. ಈ ವಿವಾಹ ಕರ್ತವ್ಯ ಬಂಧ ನಮಗೆ ಸಾಮಾಜಿಕ ರಕ್ಷಣೆಯಾಯಿತು. ಇಂತಹ ಪವಿತ್ರ ಬಂಧನ ನನಗಿಲ್ಲವಲ್ಲ. ಶೀಲದ ಭಯವಿಲ್ಲ; ಗೌರವ ಅಥವಾ ಪಾವಿತ್ರ್ಯತೆಗಳು ನನ್ನಿಂದ ದೂರ. ಅಂದರೆ ನಾನು ಸರ್ವ ಸ್ವತಂತ್ರಳು. ಮನ್ಮಥನು ತನ್ನ ಪ್ರೇಮಬಲೆಯನ್ನು ಬೀಸಿ ಅಸಹಾಯಕ ಪಕ್ಷಿಗಳಂತೆ ನಮ್ಮನ್ನು ಬಂಧಿಸಿಬಿಟ್ಟನು. ಪ್ರೇಮದ ಔನ್ನತ್ಯದ ಸವಿಯನ್ನು ಸಮವಾಗಿ ಹಂಚಿಕೊಂಡು ಸವಿಯುತ್ತಾ ಉಳಿದೆಲ್ಲವನ್ನು ಅಲಕ್ಷಿಸಿ ಬದುಕಿದೆವು. ನಮಗೆ ಮಗಳಾಗುವವರೆಗೆ ಬೇರೆ ಯಾವ ಕೊಳಗಳೂ ನಮ್ಮ ಪ್ರೇಮವನ್ನು ಬಂಧಿಸಲಾಗಲಿಲ್ಲ.

ಕನ್ನಗಿ : ನಿನಗೊಬ್ಬ ಮಗಳಿದ್ದಾಳೆಯೆ?

ಮಾಧವಿ : ಹೌದು, ನಿಮ್ಮ ಗಂಡನ ಪ್ರತಿರೂಪವಾಗಿದ್ದಾಳೆ.

ಕನ್ನಗಿ : ದೇವಂತಿ, ನಮ್ಮೊಡೆಯರಿಗೆ ಒಬ್ಬ ಮಗಳಿದ್ದಾಳೆಂಬುದನ್ನು ನನಗೆ ಏಕೆ ತಿಳಿಸಲಿಲ್ಲ?

ದೇವಂತಿ : ದೇವಿ, ನೀವು ಈ ಸುದ್ದಿಯನ್ನು ಇಷ್ಟಪಡುತ್ತೀರೆಂದು ನಾನು ಭಾವಿಸಲಿಲ್ಲ.

ಕನ್ನಗಿ : [ಮಾಧವಿಯ ಕಡೆ ತಿರುಗಿ] ಹಾಗಿದ್ದರೆ ನೀನೇ ಅದೃಷ್ಟವಂತ ಹೆಂಗಸು. ಸಂತೃಪ್ತಳಾಗು. ಹೆಚ್ಚಿಗೆ ಆಸೆಪಟ್ಟು ಸುತ್ತ ಮುತ್ತಲಿನ ವಾತಾವರಣ ಕೆಡಿಸಬೇಡ. ನೀನು ಅವರಿಂದ ಮಗುವನ್ನು ಪಡೆದಿದ್ದೀಯಾ ಮತ್ತು ಅವರ ಸಂಪತ್ತನ್ನು ದೋಚಿದ್ದೀಯಾ. ಸ್ವಲ್ಪಕಾಲ ಅವರ ಪ್ರೀತಿಯನ್ನು ಅನುಭವಿಸಿದ್ದೀಯಾ. ಮತ್ತೆ ಏನನ್ನು ಕೇಳುವೆ ನೀನು?

ದೇವಂತಿ : ದೇವಿ, ಅವಳ ಮಾತನ್ನು ಕೇಳಬೇಡಿ. ನಮ್ಮೊಡೆಯರು ಏನು ಹೇಳಿದರೆಂದು ಕೇಳಿಸಿಕೊಳ್ಳಲಿಲ್ಲವೆ? ಸಾವಿರ ನಾಟಕಗಳ ಅಭಿನಯದಿಂದ ಪರಿಪಕ್ವವಾದಂತೆ ಅವಳ ಮಾತುಗಳು, ಅವಳ ಕಣ್ಣುಗಳು ಮತ್ತು ಹಾವಭಾವಗಳು ಅವಳ ಇಷ್ಟವನ್ನು ಅಭಿವ್ಯಕ್ತಪಡಿಸಲು ಬೇಕಾದ ತರಬೇತಿಯನ್ನು ಪಡೆದಿವೆ. ಅವಳ ಮುಖ ಯಾವ ಭಾವವನ್ನಾದರೂ ಅವಳು ಇಚ್ಛಿಸಿದಾಗ ಬದಲಾಯಿಸಬಲ್ಲದು. ಇವು ಎಲ್ಲಾ ಅವಳ ಮೋಸದ ಕುತಂತ್ರಗಳಿಗೆ ಸಹಾಯಕವಾಗುವ ಉಪಕರಣಗಳು. ಅವಳ ಕುಚೇಷ್ಟೆಗಳಿಗೆ ಮತ್ತೆ ಬಲಿಯಾಗುವ ಮೊದಲು ಅವಳನ್ನು ಇಲ್ಲಿಂದ ತೊಲಗಿಸಿ.

ಮಾಧವಿ : ನಾನು ಅವರ ಪ್ರೇಮದ ಭಿಕ್ಷೆಗೆ ಇಲ್ಲಿಗೆ ಬಂದಿಲ್ಲ. ನಾನು ಅದಕ್ಕೆ ಅರ್ಹಳಾಗಿದ್ದರೂ ಅದು ಈಗ ಸಂಪೂರ್ಣವಾಗಿ ಅವರ ಮಡದಿಗೇ ಮೀಸಲು. ನಾನು ನಿಮ್ಮ ಮತ್ತು ಅವರ ನಡುವೆ ಎಂದೆಂದಿಗೂ ಸುಳಿಯುವುದಿಲ್ಲ. ನನ್ನನ್ನು ಅನುಮಾನಿಸಿದ ಅವರ ಮುಂದೆ ನನ್ನ ನಿರ್ದೋಷತ್ವವನ್ನು ಸಾಬೀತುಪಡಿಸಲು ಮತ್ತು ನನಗೆ ಉಪಯುಕ್ತವಲ್ಲದ ನನ್ನ ಎಲ್ಲ ಸಂಪತ್ತನ್ನು ನಿಮಗೆ ಅರ್ಪಿಸಲು ಬಂದಿದ್ದೇನೆ. ನನ್ನಿಂದ ಹಿಂದೆ ನೀವು ಅನುಭವಿಸಿರುವ ಕಷ್ಟಕಾರ್ಪಣ್ಯಗಳನ್ನು ಕ್ಷಮಿಸುವಂತೆ ಬೇಡಲು ಬಂದಿದ್ದೇನೆ.

ಕನ್ನಗಿ : ದುರಹಂಕಾರದ ಹೆಣ್ಣೇ! ನನ್ನ ಗಂಡನ ಕ್ಷಣಿಕ ಕಾಮುಕತೆಯನ್ನು ಬಳಸಿಕೊಂಡ ಮಾತ್ರಕ್ಕೆ

ನನ್ನ ಬಗ್ಗೆ ಕನಿಕರ ತೋರಿಸುವಷ್ಟು ನಿನಗೆ ಸಲುಗೆಯೆ? ನಿನ್ನ ಪಾಪದ ಪ್ರಾಯಶ್ಚಿತ್ತಕ್ಕೆ ತುಚ್ಛವಾದ ಬಂಗಾರವನ್
ಪರಿಹಾರವಾಗಿ ನನಗೆ ಕೊಡುವಷ್ಟು ಧೈರ್ಯ ಬಂತೆ ನಿನಗೆ? ನನ್ನನ್ನು ಅಕ್ಕ ಎಂದು ಸಂಬೋಧಿಸುವ
ಹುಚ್ಚು ಸಾಹಸ ಬಂತೆ ನಿನಗೆ! ನಿನಗೆ ನನ್ನ ಸ್ಥಳ, ಹುಟ್ಟು ಮತ್ತು ಶೀಲಗಳು ತಿಳಿದಿಲ್ಲವೆ? ನನ್ನ ಪವಿತ್ರವಾದ
ಪಾತಿವ್ರತ್ಯವನ್ನು ನಿನ್ನ ಶ್ರೀಮಂತಿಕೆಗೆ ಮಾರುತ್ತೇನೆಂದು ಭಾವಿಸಿದೆಯಾ?

ಮಾಧವಿ : ಪ್ರಿಯಳೇ, ಅನಗತ್ಯವಾಗಿ ನನಗೆ ಅಪಮಾನ ಮಾಡಬೇಡ. ಎಲ್ಲವನ್ನು ಬಲ್ಲ ವಿಧಿಯ
ಕಣ್ಣಲ್ಲಿ ನಾವಿಬ್ಬರೂ ಸಮಾನದುಃಖಿಗಳು. ಹಿಂದಿನ ಜನ್ಮದ ಪಾಪಕ್ಕೆ ಪ್ರಾಯಶ್ಚಿತ್ತದ ದಂಡವನ್
ಒಪ್ಪಿಸುತ್ತಿರುವವರು. ಈ ಲೋಕದ ನಮ್ಮ ಹುಟ್ಟು ಮತ್ತು ಸ್ಥಳಗಳನ್ನು ಆ ಲೋಕದಲ್ಲಿ ಲೆಕ್ಕಕ
ತೆಗೆದುಕೊಳ್ಳುವುದಿಲ್ಲ. ಸುಶೀಲತೆಯ ಬಗ್ಗೆ ನನ್ನ ಸಂಪೂರ್ಣ ಒಪ್ಪಿಗೆ ಇದೆ. ಅದರಲ್ಲಿ ನನಗೂ ಪಾಲಿದ್ದರೂ
ಸಹ ನಿನಗೇ ಬಿಟ್ಟುಕೊಡುತ್ತೇನೆ.

ಕನ್ನಗಿ : ನಿರ್ಗತಿಕ ನೀಚ ನರ್ತಕಿಯೆ? ಸೂಳೆಯಾದ ನಿನಗೂ ಸೌಶೀಲ್ಯವೆ?

ಮಾಧವಿ : ಹೌದು. ನಿನಗೆ ಕಾಣುತ್ತಿರುವಂತೆ ಆಶ್ಚರ್ಯಕರವಾದುದು. ನನಗೂ ನನ್ನ ಶೀಲವಿದೆ
ನನ್ನ ಬಗ್ಗೆ ಯಾರು ಏನೆಂದುಕೊಂಡರೂ ನನ್ನ ಬಾಳು ನಾಟ್ಯಕಲೆಗೆ ಸಂಪೂರ್ಣವಾಗಿ ಅಂಕಿತವಾಗಿದ
ಮತ್ತು ನನ್ನ ಮನಸ್ಸು ಅಚಲವಾಗಿ ನಿರಂತರ ಅವನ್ನು ಪ್ರೀತಿಸುತ್ತದೆ.

ಕನ್ನಗಿ : ಇನ್ನೊಂದು ಹೆಣ್ಣಿನ ಗಂಡನನ್ನು!

ಮಾಧವಿ : ನಾನು ಅದಕ್ಕೆ ಏನೂ ಮಾಡುವಂತಿಲ್ಲ. ನಮ್ಮ ಕೈಕಾಲುಗಳನ್ನು ತೊಳೆದುಕೊಳ್ಳುವಂತ
ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದೇ ಆದರೆ ಪ್ರತಿಯೊಬ್ಬ ಮನುಷ್ಯನೂ ದೇವರಾಗಿಬಿಡುತ್ತಾನ
ಮತ್ತು ಈ ಲೋಕ ಸ್ವರ್ಗವಾಗಿಬಿಡುತ್ತದೆ. ಪರಪುರುಷರ ಉದ್ರೇಕಿತವಾದ ಆಕರ್ಷಣೆಗಳಿಗೆ ನಾನು ಒಲಿದಿದ್ದ
ನನ್ನ ಖ್ಯಾತಿ ಇನ್ನೂ ಹೆಚ್ಚುತ್ತಿತ್ತು. ನಾನು ನಿಮ್ಮವರನ್ನು ಪ್ರೀತಿಸಿದ್ದರಿಂದ ಅದಕ್ಕೇ ಅಚಲಳಾಗಿ ಪ್ರಿಯಕರನಿ
ನಿಷ್ಠಳಾಗಿ ಉಳಿದೆ. ಇದನ್ನು ಶೀಲವೆಂದು ನೀನು ಕರೆಯುವುದಿಲ್ಲವಲ್ಲ!

ಕನ್ನಗಿ : ನೀನು ಅವರಿಗೆ ಅಂಟಿಕೊಂಡಿದ್ದು ಅವರ ಐಶ್ವರ್ಯಕ್ಕಾಗಿ, ಪ್ರೇಮಕ್ಕಾಗಲ್ಲ!

ಮಾಧವಿ : ನಿನ್ನ ತೀರ್ಪಿನಲ್ಲಿ ನೀನು ಬಹಳ ಸರಳವಾಗಿರುವೆ. ನಿಮ್ಮವರದೇ ಅಲ್ಲ ಪುಹರ್‌ನಗರದ
ಎಲ್ಲ ಶ್ರೀಮಂತರ ಐಶ್ವರ್ಯವೆಲ್ಲಾ ನನ್ನದಾಗಬಹುದಾಗಿತ್ತು. ಅದಕ್ಕೆ ಆಸೆಪಟ್ಟವಳು ನಾನಲ್ಲ. ಅವರ
ನನಗೆ ಕೊಟ್ಟಿದ್ದೆಲ್ಲಾ ನಿನ್ನದು. ಅದನ್ನು ನೀನು ಇಷ್ಟಪಟ್ಟಾಗ ಹಿಂತಿರುಗಿಸಲು ಸಿದ್ಧವಾಗಿಯೇ ಇಟ್ಟುಕೊಂಡಿದ್ದೇನೆ

ಕನ್ನಗಿ : ಅವರ ಮೇಲೆ ನಿನಗೆ ಅಷ್ಟು ಸದೃಢವಾದ ಪ್ರೀತಿ, ನಿಷ್ಠೆಗಳು ಇದ್ದುದೇ ಆದರೆ ನೀನು
ಬೇರೊಬ್ಬನನ್ನು ಪ್ರೀತಿಸುವ ನಟನೆಯ ಅಪನಂಬಿಕೆಯನ್ನು ಉಂಟುಮಾಡುವ ಹಾಡುಗಳನ್ನು ಏಕೆ ಹಾಡಿದೆ

ಮಾಧವಿ : ನಾನು ಅವರನ್ನು ನನ್ನವರನ್ನಾಗಿ ಬಂಧಿಸಿಕೊಳ್ಳಲು ಲೋಕದ ಒಪ್ಪಿಗೆ ಇಲ್ಲ. ನನ
ಅವರ ಪ್ರೇಮಬಂಧನಕ್ಕೆ ಸಾಮಾಜಿಕ ಸಮ್ಮತಿ ಇಲ್ಲವಾದಾಗ ಅವರು ನಿನ್ನನ್ನು ಶಾಶ್ವತವಾಗಿ ಬಿಟ್ಟುಬಿಡುವ
ಅಪಾಯವಿತ್ತು. ಪ್ರತಿಯೊಬ್ಬ ರೂಪವತಿಯಾದ ಹೆಣ್ಣು ಇನ್ನೊಂದು ಹೆಣ್ಣಿನೊಂದಿಗೆ ಪ್ರೇಮಕ್ಕಾಗಿ
ಸ್ವಾರ್ಥಿಯಾಗುವುದು ಸಹಜ. ನೋವಿನಲ್ಲಿರುವ ಹೆಂಡತಿ ತ್ಯಾಗದ ಸಂಕೇತವಾಗಿ ದೂರಕ್ಕೆ ಹೆಚ
ಆಕರ್ಷಕಳಾಗಿ ಕಾಣುತ್ತಾಳೆ. ಅಕಾರಣವಾಗಿ ನೀನು ಮತ್ಸರದ ನೋವನ್ನು ಅನುಭವಿಸಿದೆ. ನಿನ್ನಂತಹ
ಹಿಡಿದ ಹೆಂಡತಿಗಿಂತಲೂ ಹೆಚ್ಚಿನ ಅಸೂಯಾಪರಳು ನಾನಾಗಿದ್ದೆ. ನನ್ನ ಮೋಹದ ಬಲೆಯಲ್ಲಿ ಬಿ
ಅವರೂ ಮೊದಲಿಗೆ ನಿನ್ನ ಬಗ್ಗೆ ಅಷ್ಟೇ ಅಸೂಯಾಪರರಾಗಿದ್ದರು. ನಿಜವಾದ ಪ್ರೀತಿಯ ಬಂಧನಗಳ

ಶುದ್ಧವಾದವು, ದಿವ್ಯವಾದವು, ಸ್ವರ್ಗೀಯವಾದವು. ಅವರು ಇಂತಹ ಅಮರಪ್ರೇಮಿಗಳಾದ್ದರಿಂದ ನಿಮ್ಮ ಬಗ್ಗೆ ಅಚಲರು! ಆದರೆ ಅಸೂಯೆಯೊಂದೇ ಅವರ ಪ್ರೇಮವನ್ನು ನನ್ನಲ್ಲಿ ಜೀವಂತವಾಗಿಡಲು ನನಗೆ ದಾರಿಯಾಗಿತ್ತು. ಅದಕ್ಕಾಗಿ ನಾನೆಂದೂ ಭಯಪಟ್ಟವಳಲ್ಲ.

ಕನ್ನಗಿ : ಹಾಗಿದ್ದರೆ ಅವರು ನಿನ್ನ ಬಗ್ಗೆ ಬೇಸರಪಟ್ಟಿದ್ದರ?

ಮಾಧವಿ : ಇಲ್ಲ. ನಾನು ಗ್ರಹಿಸಿದಂತೆ ಅವರ ಮನಸ್ಸಿನಲ್ಲಿ ನಿಮ್ಮ ಬಗ್ಗೆ ಪಾಪಭೀತಿಯಿತ್ತು. ಕೆಲವೊಮ್ಮೆ ಅವರು ಗಂಟೆಗಟ್ಟಲೆ ಏಕಾಂತವಾಗಿ ಕುಳಿತು ಒಂದು ಮಾತೂ ಆಡದೆ ಶೂನ್ಯವನ್ನೇ ದೃಷ್ಟಿಸುತ್ತಿದ್ದರು. ಮತ್ತದು ಅವರನ್ನೇ ಆವರಿಸಿಕೊಂಡಿರುತ್ತಿತ್ತು. ನನ್ನ ಮಗಳ ತುಂಟಾಟದ ಕುಚೇಷ್ಟೆಗಳೂ ಸಹ ಅವರನ್ನು ಮುದಗೊಳಿಸುತ್ತಿರಲಿಲ್ಲ. ನಾನು ಎಷ್ಟೋ ಸಾರಿ ನಿನ್ನ ಬಗ್ಗೆ ತಿಳಿಸುವಂತೆ ಗಂಟುಬಿದ್ದಿದ್ದೆನು. ಆದರೂ ಅವರು ನಿನ್ನ ಬಗ್ಗೆ ನನ್ನಲ್ಲಿ ಏನನ್ನೂ ಹಂಚಿಕೊಳ್ಳಲಿಲ್ಲ.

ಕನ್ನಗಿ : ನಾನು ಎಷ್ಟು ಬಾರಿ ನಿನ್ನ ಬಗ್ಗೆ ಯೋಚಿಸಿದ್ದೇನೆ. ನೀನು ಹೇಗಿರಬಹುದು? ಯಾವ ಬಗೆಯ ಆಕರ್ಷಣೆಗಳನ್ನು ಇಟ್ಟುಕೊಂಡಿರುವೆ? ಪರಪುರುಷರನ್ನು ಸೆಳೆಯಲು ಎಂತಹ ಕಲೆಗಳನ್ನು ಆಚರಿಸುತ್ತಿರುವೆ? ನನ್ನನ್ನು ಮದುವೆಯಾಗಿರುವ ಗಂಡನಿಗೆ ನೀನು ಎಂತಹ ಪ್ರೀತಿ ನೀಡಬಲ್ಲೆ? ಎಂದು ಯೋಚಿಸಿ ಆಶ್ಚರ್ಯಪಟ್ಟಿದ್ದೇನೆ.

ಮಾಧವಿ : ಇದಕ್ಕೆ ಮೊದಲೇ ನಮ್ಮಿಬ್ಬರ ಭೇಟಿಯಾಗಿ ಪರಿಚಿತರಾಗಿದ್ದರೆ ಇಬ್ಬರೂ ಕೂಡಿ ಅವರ ಪ್ರೇಮವನ್ನು ಹಂಚಿಕೊಂಡು ಅವರನ್ನು ಸಂತೃಪ್ತಿಪಡಿಸಬಹುದಿತ್ತು, ನಾವೂ ನೆಮ್ಮದಿಯಾಗಿರಬಹುದಿತ್ತು.

ಕನ್ನಗಿ : ಇಲ್ಲ, ಇಲ್ಲ. ಅದು ಸಾಧ್ಯವಿಲ್ಲ. ನೀನೇ ನನ್ನ ನೋವಿಗೆ ಕಾರಣ. ನಾನು ಇನ್ನೂ ನಿನ್ನನ್ನು ದ್ವೇಷಿಸುತ್ತೇನೆ. ನಾನು ಎಂದೆಂದೂ ನನ್ನ ಪ್ರಸ್ತದ ಹಾಸಿಗೆಯನ್ನು ಮತ್ತೊಂದು ಹೆಣ್ಣಿನೊಂದಿಗೆ ಹಂಚಿಕೊಳ್ಳಲು ಇಷ್ಟಪಡುವುದಿಲ್ಲ. ನಿನ್ನ ಮಾತುಗಳು ಆಶ್ಚರ್ಯಕರವಾಗಿದ್ದರೂ ಸಹ ಸತ್ಯಾಂಶದಿಂದ ಕೂಡಿರುವಂತಿವೆ. ನನ್ನ ಪ್ರತಿಯೊಂದು ಪ್ರಶ್ನೆಗೂ ನಿನ್ನಲ್ಲಿ ಸಿದ್ಧ ಉತ್ತರವಿದೆ. ನೀನು ಇಷ್ಟಪಡುವುದಾದರೆ ಇಲ್ಲಿಯೇ ಇದ್ದು ನನ್ನ ಗಂಡನನ್ನು ಸಂಧಿಸಿ ಮಾತನಾಡು. ಅವರೇ ನಿನ್ನ ಹಣೆಬರಹವನ್ನು ತೀರ್ಮಾನ ಮಾಡುತ್ತಾರೆ. [ಮಾಥರಿ ಬರುತ್ತಾಳೆ. ನೋವಿನಿಂದ ದೇವಂತಿಗೆ ಏನೋ ಹೇಳುತ್ತಾಳೆ. ಕನ್ನಗಿ ಅವಳ ಬಳಿಗೆ ಓಡುತ್ತಾಳೆ.] ಗೆಳತಿ ಏನದು? ನೀನಾದರೋ ದುಃಖಿತಳಾಗಿರುವೆ ಮತ್ತು ನನ್ನ ಗಂಡ ಬರುವುದು ತಡವಾಗಿದೆ. ನೀನು ಕೆಟ್ಟ ಸುದ್ದಿಯನ್ನೇನಾದರೂ ತಂದಿದ್ದರೆ ನನ್ನಲ್ಲಿ ಮುಚ್ಚಿಡಬೇಡ.

ಮಾಥರಿ : ನಾನು ನಿನಗೆ ಪೈಶಾಚಿಕ ಸುದ್ದಿಯನ್ನೇ ತಂದಿದ್ದೇನೆ. ಅದನ್ನು ಕೇಳಿ ಅರಗಿಸಿಕೊಳ್ಳಲು ಸಿದ್ಧಳಾಗು.

ಕನ್ನಗಿ : ಅದು ನನ್ನ ಗಂಡನಿಗೆ ಸಂಬಂಧಪಟ್ಟಿದ್ದೆ?

ಮಾಥರಿ : "ಅವರ ಮೇಲೆ ಕಳ್ಳತನದ ಆರೋಪ ಮಾಡಲಾಗಿದೆ....."

ಕನ್ನಗಿ : ಅವರ ಮೇಲೆ ಅಂತಹ ಆರೋಪ ಮಾಡುವ ಧೈರ್ಯ ಯಾರಿಗೆ ಬಂತು?

ಮಾಥರಿ : ಅವರ ಮೇಲೆ ಕಳ್ಳತನದ ದೋಷಾರೋಪ ಮಾಡಿ, ಕದ್ದ ಮಾಲಿನ ಸಹಿತ ಹಿಡಿದು, ಸ್ಥಳದಲ್ಲಿಯೇ ವಿಚಾರಣೆಗೆ ಒಳಪಡಿಸಿ, ರಾಜಾದೇಶದಂತೆ ಮರುಕ್ಷಣದಲ್ಲಿಯೇ ಮರಣದಂಡನೆಗೆ ಗುರಿಪಡಿಸಿ ಜಾರಿಗೊಳಿಸಿದ್ದಾರೆ.

ದೇವಂತಿ : ಇದು ನಿಜವಲ್ಲ. ಏನೋ ತಪ್ಪಾಗಿದೆ. ಬಹುಶಃ ನೀನು ಗಾಳಿಮಾತು ಕೇಳಿರಬೇಕು. ಬಹುಶಃ ಬೇರೆ ಯಾರನ್ನೋ ಮರಣದಂಡನೆಗೆ ಗುರಿಪಡಿಸಿದ್ದನ್ನು ಕೇಳಿ ಈ ನಗರಕ್ಕೆ ಹೊಸಬರಾದ ನಮ್ಮೊಡತಿಯ ಪತಿಯೆಂದೇ ನೀನು ತಪ್ಪಾಗಿ ಭಾವಿಸಿರಬೇಕು. [ಕನ್ನಗಿಯ ಕಡೆ ತಿರುಗಿ] ದೇವಿ, ಅವಳ ಮಾತನ್ನು ನಂಬಬೇಡಿ. ನಾನೇ ಹೋಗಿ ಸತ್ಯವನ್ನು ತಿಳಿದುಬರುತ್ತೇನೆ. ನನಗಿದು ಸತ್ಯವಾಗಿ ಕಾಣುತ್ತಿಲ್ಲ. ಅದು ಸಾಧ್ಯವೇ ಇಲ್ಲ.

ಮಾಧವಿ : ಇದನ್ನು ನಿನಗೆ ಯಾರು ಹೇಳಿದರು? ಮರಣದಂಡನೆ ಜಾರಿಗೊಳಿಸಿದ್ದನ್ನು ನೀನು ನೋಡಿದೆಯಾ? ಸತ್ಯವೆಂಬಂತೆ ಈ ಪೈಶಾಚಿಕ ಸುದ್ದಿಯನ್ನು ತರಲು ನಿನಗೇನಾಧಾರ?

ಮಾಥರಿ : ನಾನು ಇದು ಸತ್ಯವಲ್ಲವೆಂದು ಎಷ್ಟೋ ಆಸೆಪಟ್ಟೆ! ನಾನು ಅದನ್ನು ಪುನರುಚ್ಚರಿಸುವ ಮೊದಲು ನನ್ನ ನಾಲಿಗೆ ಎಷ್ಟು ತೊದಲಿತು! ಈ ದುರಂತ ಕತೆಯನ್ನು ನಿಮಗೆ ತಿಳಿಸಿ ನಿಮ್ಮ ಸಂತೋಷವನ್ನು ಶಾಶ್ವತವಾಗಿ ಹಾಳುಮಾಡುವುದಕ್ಕಿಂತ ದಾರಿಯಲ್ಲಿಯೇ ನಾನು ಸತ್ತುಹೋಗಿದ್ದರೆ ಚೆನ್ನಾಗಿತ್ತು. ಆದರೆ ಭಯಾನಕವಾದರೂ ಇದು ಸತ್ಯ.

ಕನ್ನಗಿ : ಅಯ್ಯೋ! ನನ್ನ ಗಂಡ!

ಮಾಧವಿ : ಓ! ಪ್ರಿಯಕರನೇ, ನನ್ನ ಪ್ರಾಣಪಕ್ಷಿಯೆ!

ಕನ್ನಗಿ : ಪ್ರಖ್ಯಾತನೂ ಸತ್ಯವಂತನೂ ಆಗಿದ್ದು ತಂದೆತಾಯಿಗಳ ಸಹಾಯವನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದವರಿಗೆ ಈ ಹಣೆಬರಹವೆ? ಕಳ್ಳನೆಂಬ ಆರೋಪಕ್ಕೆ ಸಿಕ್ಕಿ ಕಳ್ಳನಲ್ಲವೆಂದು ಸಾಬೀತು ಪಡಿಸಿಕೊಳ್ಳುವುದಕ್ಕೂ ಅವಕಾಶವಿಲ್ಲದಂತೆ ಮರಣದಂಡನೆಗೆ ಗುರಿಯಾದರೆ? ಅದೂ ಕರುಣೆ ಇಲ್ಲದ ಅನೀತಿಯ ರಾಜನ ಕೈಯಲ್ಲಿ ಸಾಯುವುದೆ? ಓ ವಿಧಿಯೆ! ಓ ವಿಧಿಯೆ! ನಾವು ಈ ದೋಷಾರೋಪಿತ ನಗರಕ್ಕೆ ಬಂದಾಗ ನಿನ್ನನ್ನು ಹೀಗೆ ಪ್ರಾರ್ಥಿಸಿದ್ದೆವೆ? ಓ ದೇವರೇ, ನೀವು ಮಾಧವಿಯ ಬಳಿಯೇ ಇದ್ದು ನನ್ನನ್ನು ನೋವಿನಲ್ಲೇ ಬಿಟ್ಟಿದ್ದರೆ ಈ ಅನ್ಯಾಯದ ಅನೀತಿಯ ಸಾವು ನಿಮಗೆ ಬರುತ್ತಿರಲಿಲ್ಲವಲ್ಲವೆ?

ಮಾಧವಿ : ನೀವೆಷ್ಟು ಜೀವಂತವಾಗಿದ್ದಿರಿ, ಸಾವಿನ ಭಯದಲ್ಲಿದ್ದ ಎಷ್ಟು ಜನರಿಗೆ ಜೀವ ತುಂಬಿದಿರಿ, ನಿಮ್ಮ ಮನೆಯ ಬಾಗಿಲಿನಿಂದ ಭಿಕ್ಷುಕರು ಎಂದೂ ಬರಿಗೈಯಲ್ಲಿ ಬಂದುದೇ ಇಲ್ಲ; ಸಾವಿರಾರು ಜನ ನಿಮ್ಮನ್ನು ಹೊಗಳಿ ಹಾಡುತ್ತಾರೆ: ಅವರ ಪ್ರಾರ್ಥನೆಗಳಲ್ಲಿ ನಿಮ್ಮ ಹೆಸರು ಇದ್ದೇ ಇರುತ್ತದೆ. ಅವರ ಪ್ರಾರ್ಥನೆಯಾದರೂ ನಿಮ್ಮನ್ನು ಈ ದುರ್ವಿಧಿಯಿಂದ ರಕ್ಷಿಸಬಾರದಿತ್ತೆ?

ದೇವಂತಿ : ಇದು ಹೇಗಾಯಿತು? ನಿನಗೆ ಹೇಗೆ ಗೊತ್ತಾಯಿತು?

ಮಾಥರಿ : ಸ್ವಲ್ಪ ಸಮಯದ ಹಿಂದೆ ನಾನು ನಿಮ್ಮನ್ನು ಬಿಟ್ಟು ಹಾಲು, ಮೊಸರು ಮಾರಲು ಹೊರಟೆನಲ್ಲವೆ? ದಾರಿಯಲ್ಲಿ ನನ್ನ ಗಂಡ ಭೇಟಿಯಾದರು. ಅಲ್ಲಿ ಜನರು ಗುಂಪುಸೇರಿ ನಗರಕ್ಕೆ ಹೊಸಬನಾಗಿ ಬಂದಿದ್ದವನೊಬ್ಬನು ಅಸಹಜವಾದ ರೀತಿಯಲ್ಲಿ ಕಳ್ಳತನ ಮಾಡಿದ್ದರ ಬಗ್ಗೆ ಮಾತನಾಡುತ್ತಿದ್ದರು. "ರಾಜನ ಅಂತಃಪುರದ ಕಾಲ್ಕಡಗವನ್ನು ಕದಿಯಲು ಅವನಿಗೆಷ್ಟು ಧೈರ್ಯ! ರಾಜನಿಗೆ ಎಷ್ಟು ಕೋಪ ಬಂದಿತ್ತು! ಮಹಾರಾಣಿಯವರ ಅಮೂಲ್ಯವಾದ ಕಾಲ್ಕಡಗವನ್ನು ಕದಿಯುವಷ್ಟು ಧೈರ್ಯ ಈ ಕಳ್ಳನಿಗೆ ಹೇಗೆ ಬಂತು?" ಎಂದು ಮುಂತಾಗಿ ಮಾತನಾಡುತ್ತಿದ್ದರು.

ದೇವಂತಿ : ಏನೂ, ಮಹಾರಾಣಿಯ ಕಾಲ್ಕಡಗವೆ?

ಮಾಥರಿ : ಅವರು ಹೇಳಿದ್ದು ಹಾಗೆ! ನಗರಕ್ಕೆ ಹೊಸಬನಾಗಿ ಬಂದಿದ್ದವನೊಬ್ಬನು ಕಾಲ್ಕಡಗವನ್ನು

ಮಾರಲು ರಾಜನ ರತ್ನವ್ಯಾಪಾರಿಯ ಬಳಿಗೆ ಹೋದನಂತೆ. ನಾವು ದೂರದೇಶದಿಂದ ನಮ್ಮ ಬಾಳನ್ನು ಹಸನು ಮಾಡಿಕೊಳ್ಳಲು ಈ ನಗರಕ್ಕೆ ಬಂದಿದ್ದೇವೆ. ಇದು ನನ್ನ ಮಡದಿಯ ಕಾಲ್ಕಡಗವೆಂದು ಹೇಳಿ ರಾಣಿಯದೆಂದು ಆರೋಪಿಸಲ್ಪಟ್ಟ ಕಾಲ್ಕಡಗವನ್ನು ಮಾರಲು ಪ್ರಯತ್ನಿಸಿದನಂತೆ. ರತ್ನ ವ್ಯಾಪಾರಿ ಸುದ್ದಿಯನ್ನು ರಾಜನಿಗೆ ಮುಟ್ಟಿಸಿದನಂತೆ. ರಾಜನು ದಂಡಾಧಿಕಾರಿಗಳನ್ನು ಕಳುಹಿಸಿ ಒಡವೆಯನ್ನು ವಶಪಡಿಸಿಕೊಂಡು ಕಳ್ಳನನ್ನು ಸ್ಥಳದಲ್ಲಿಯೇ ಮರಣದಂಡನೆಗೆ ಗುರಿಪಡಿಸುವುದೆಂದು ಆದೇಶಿಸಿದನಂತೆ!

ದೇವಂತಿ : ಆದರೆ ಆ ಕಳ್ಳ ನಮ್ಮೊಡತಿಯ ಯಜಮಾನರೇ ಎಂದು ನಿನಗೆ ಹೇಗೆ ತಿಳಿಯಿತು?

ಮಾಧರಿ : ನಾವು ಈ ಮಾತುಗಳನ್ನು ಕೇಳಿದಾಗ, ಆ ಹೊಸಬ ಮತ್ತು ರಾಣಿಯದೆಂದು ಆರೋಪಿಸಲ್ಪಟ್ಟ ಕಾಲ್ಕಡಗ ನಿಮ್ಮೊಡತಿಯದೆ ಇರಬಹುದೆಂಬ ಅನುಮಾನ ಬಂತು. ನಾವು ತಕ್ಷಣ ರತ್ನ ವ್ಯಾಪಾರಿಯ ಮನೆಗೆ ಹೋದೆವು. ಓ! ನಾವಲ್ಲಿ ನೋಡಿದ್ದನ್ನು ಹೇಳಲು ಬಾಯಿ ಬರುತ್ತಿಲ್ಲ.

ಕನ್ನಗಿ : ದಯಮಾಡಿ ನೀವು ನೋಡಿದ್ದನ್ನು ನಮಗೂ ಹೇಳಿ. ಒಮ್ಮೆ ಒಡೆದ ಹೃದಯ ಮತ್ತೆ ಒಡೆಯಲಾರದು!

ಮಾಧರಿ : ನಿಮ್ಮೊಡೆಯರ ದೇಹ ರಕ್ತದ ಮಡುವಿನಲ್ಲಿ ಬಿದ್ದಿತ್ತು. ಕ್ರೂರ ಕತ್ತಿಯಿಂದ ಕತ್ತರಿಸಲ್ಪಟ್ಟಿದ್ದ ತಲೆ ಉರುಳಿ ದೂರದಲ್ಲಿ ಬಿದ್ದಿತ್ತು. ಸೋಮಾರಿಗಳಾದ ಪ್ರೇಕ್ಷಕರು ಕಳ್ಳತನ ಮತ್ತು ಕಳ್ಳನಿಗಾದ ಶಿಕ್ಷೆಯ ಬಗ್ಗೆ ಮಾತನಾಡಿಕೊಳ್ಳುತ್ತಾ ಅವರ ಪಾಡಿಗೆ ಅವರು ಹೋಗುತ್ತಿದ್ದರು.

ದೇವಂತಿ : ರಾಜನ ವ್ಯಾಪಾರಿ ಅಷ್ಟು ನೀಚನೆ? ರಾಜನು ಅಷ್ಟು ದುರಾತ್ಮನೆ? ಅವನ ದಂಡಾಧಿಕಾರಿಗಳು ಅಷ್ಟು ಮೂರ್ಖರೆ? ಅವರಿಗೆ ಒಬ್ಬ ಸಭ್ಯ ಪ್ರಾಮಾಣಿಕನಿಗೂ ಕಳ್ಳನಿಗೂ ಇರುವ ವ್ಯತ್ಯಾಸವನ್ನು ಗುರುತಿಸುವಷ್ಟು ಬುದ್ಧಿ ಇಲ್ಲವೆ?

ಕನ್ನಗಿ : ನನ್ನ ಗಂಡ ಒಮ್ಮೆ ನನ್ನನ್ನು ಬಿಟ್ಟು ಬೇರೊಬ್ಬಳನ್ನು ಆರಿಸಿಕೊಂಡ. ಈಗ ನನ್ನನ್ನು ಶಾಶ್ವತವಾಗಿ ಬಿಟ್ಟು ಯಾರಲ್ಲಿಗೆ ಹೋದ? ಯಾವಳಾದರೂ ಸ್ವರ್ಗದ ದೇವತೆ ತನ್ನ ತೋಳಲಪ್ಪಿ ಮರಳುಮಾಡಿ ಸ್ವರ್ಗಕ್ಕೆ ಎಳೆದುಕೊಂಡಳೆ? ಅನ್ಯಾಯದ ಈ ರಾಜನು ಅದಕ್ಕೆ ಸಹಾಯ ಮಾಡಿದನೆ? ಈ ದಿನ ಬೆಳಗ್ಗೆ ನೀವು ಸಂಜೆಯೊಳಗಾಗಿ ವಾಪಸ್ಸು ಬರುವುದಾಗಿ ಭರವಸೆ ನೀಡಿರಲಿಲ್ಲವೆ? ನೀವು ವಾಪಸ್ಸು ಬರುವುದಕ್ಕೆ ನಾನೆಷ್ಟು ಸೂರ್ಯಾಸ್ತಮಾನಗಳನ್ನು ಕಳೆಯಬೇಕು? ಇಲ್ಲ, ನಾನಿನ್ನು ಕಾಯುವಂತಿಲ್ಲ.

ಮಾಧವಿ : ನಮ್ಮೊಡೆಯ, ಕೈಹಿಡಿದ ಹೆಂಡತಿಯ ಬಳಿ ನನ್ನನ್ನು ಬಿಟ್ಟು ಹೋದೆಯಾ? ನಮ್ಮಿಬ್ಬರನ್ನು ಶಾಶ್ವತವಾಗಿ ಬಿಟ್ಟು ಹೋದೆಯಾ? ಜೀವನದಲ್ಲಿ ಶತ್ರುಗಳನ್ನು ನೀವು ನೋಯಿಸಿದವರಲ್ಲ, ಸಾವಿನಲ್ಲಿ ನಿಮ್ಮನ್ನು ಗಾಢವಾಗಿ ಪ್ರೀತಿಸುವವರನ್ನು ಏಕೆ ನೋಯಿಸಿದಿರಿ?

ಕನ್ನಗಿ : ಮೋಸಗಾರನ ಕ್ರೂರಕೃತ್ಯಗಳ ಮೋಸದ ಬಲೆಗೆ ಬಲಿಯಾಗುವಷ್ಟು ನೀವು ಬಲಹೀನರಾದಿರೆ? ನನ್ನನ್ನು ಮನೆಯಲ್ಲಿಯೇ ಬಿಟ್ಟು ಏಕೆ ಒಬ್ಬರೇ ಹೋದಿರಿ? ನೀವು ಭೇಟಿಯಾದ ಮೊದಲ ಮೋಸಗಾರನ ಕುತಂತ್ರವನ್ನು ಅರಿಯದಷ್ಟು ಅಮಾಯಕರಾದಿರೆ? ನಮ್ಮ ರಾಜ್ಯದ ರಕ್ಷಣೆಯನ್ನು ಏಕೆ ಪಡೆಯಲಿಲ್ಲ? ದೋಷಪೂರಿತ ಸುದ್ದಿಯನ್ನು ಕೇಳಿ, ವಿಚಾರಮಾಡಲರಿಯದ ಅನ್ಯಾಯದ ರಾಜನ ರಾಜದಂಡನೆಗೆ ಬಲಿಯಾಗುವಷ್ಟು ಮೂರ್ಖರಾದಿರೆ? ಈ ನಗರಕ್ಕೇ ಬರಬೇಕೆಂದು ನೀವು ಏಕೆ ತೀರ್ಮಾನಿಸಿದಿರಿ?

ಮಾಧವಿ : ಕ್ರೂರ ಪಿಶಾಚಿಯ ಕತ್ತಿ ನಿಮ್ಮ ಕುತ್ತಿಗೆಯ ಮೇಲೆ ಆಡುವಾಗ ಪ್ರಿಯಕರನೇ, ನೀವು ಏನು ಯೋಚಿಸುತ್ತಿದ್ದಿರಿ? ಬಹುಶಃ ಹರಿತವಾದ ಕತ್ತಿ ಯಾವ ಗಳಿಗೆಯಲ್ಲಾದರೂ ನಿಮ್ಮ ತಲೆಯನ್ನು

ಯೋಚಿಸುವುದಕ್ಕೂ ಅವಕಾಶವೀಯದೆ ಕತ್ತರಿಸಿರಬಹುದು ಅಥವಾ ಮೃತ್ಯುದೇವತೆಯ ದೂತ ಕ್ರೂರ ಕುತಂತ್ರಗಳ ವಾಮಮಾರ್ಗದಲ್ಲಿ ನಿಮ್ಮ ತಲೆಯನ್ನು ತುಂಡುತುಂಡು ಮಾಡಿರಬಹುದು. ನೀವು ಆಗ ನನ್ನ ಬಗ್ಗೆ ಯೋಚಿಸಿದಿರಾ! ಅಲ್ಪ ಕಾಲವಾದರೂ ನಮ್ಮ ಆನಂದಮಯ ಪ್ರೀತಿಯನ್ನು, ನಮ್ಮ ಅವಿವೇಕದ ಕುಚೇಷ್ಟೆಯ ಹುಚ್ಚು ಕುಣಿದಾಟಗಳನ್ನು, ಸಂತೋಷದ ಯುಗಲ ಗೀತೆಗಳನ್ನು, ಕಡಲ ತೀರದಲ್ಲಿ ಕಳೆದ ಮಧುರ ರಾತ್ರಿಗಳನ್ನು, ನದಿಯ ಮೇಲೆ ವಿಹರಿಸಿದ ವಿಹಾರಗಳನ್ನು ಕ್ಷಣವಾದರೂ ನೆನೆಸಿಕೊಳ್ಳಲಿಲ್ಲವೆ? ಅವಳ ಚೂಟಿಯಾದ ಜಾಣ ತೊದಲುನುಡಿಗಳು ನೆನಪಿಗೆ ಬರಲಿಲ್ಲವೆ? ನಾನು ನಿಮ್ಮನ್ನು ಉದ್ದೇಶಪೂರ್ವಕವಾಗಿ ದೂರ ಮಾಡಿದಾಗ ಅನುಭವಿಸಿದ ನೋವು ಸ್ಮರಣೆಗೆ ಬರಲಿಲ್ಲವೇ ಅಥವಾ ನನ್ನ ನೆಪಮಾತ್ರದ ಅವಿಧೇಯತೆಯಾದರೂ ಜ್ಞಾಪಕಕ್ಕೆ ಬರಲಿಲ್ಲವೆ? ಅಥವಾ ಲಜ್ಜಾಸ್ಪದ ನೋವಿನಿಂದ ನರಳಿದಿರಾ? ನಿಮ್ಮ ಹೃದಯದ ಯಾವ ಮೂಲೆಯಲ್ಲಿಯೂ ಈ ಬಡ ಹೆಣ್ಣಿಗಾಗಿ ಯೋಚಿಸುವ ಸ್ಥಳವಿಲ್ಲವೆ?

ಕನ್ನಗಿ : ನಾನು ಹೆತ್ತ ತಂದೆ ತಾಯಿಗಳನ್ನು, ಮನೆಯನ್ನು, ಗೆಳತಿಯರನ್ನು, ನನ್ನದೆಂಬ ಎಲ್ಲವನ್ನು ಬಿಟ್ಟು ನಿಮ್ಮನ್ನು ಒಲಿದು ಹಿಂಬಾಲಿಸಿ ಬಂದುದು ಈ ಮಸಣಕ್ಕಾಗಿಯೇ? ಇಲ್ಲ, ಸಾಧ್ಯವಿಲ್ಲ ನನ್ನೊಡೆಯ. ನಾನು ನಿಮ್ಮನ್ನು ಮಸಣದಾಚೆಗೂ ಹಿಂಬಾಲಿಸುತ್ತೇನೆ. ಸ್ವರ್ಗ-ನರಕಗಳ ಮೂಲೆ ಮೂಲೆಗಳಲ್ಲಿ ನಿಮ್ಮನ್ನು ಹುಡುಕುತ್ತೇನೆ. ಸಾವಿನಲ್ಲಿಯೂ ನೀವೇ ನನ್ನ ಗಂಡ ಎಂದು ಒತ್ತಾಯಿಸುತ್ತೇನೆ.

ಮಾಧವಿ : ಈ ಲೋಕದಲ್ಲಿ ನಾನು ಪ್ರೀತಿಸಿದ್ದು ನಿಮ್ಮೊಬ್ಬರನ್ನೆ! ನೀವು ಈಗ ಪರಲೋಕಕ್ಕೆ ಹೋಗಿರುವಿರಿ. ನನ್ನ ಪ್ರೀತಿಯನ್ನು ನಿಮ್ಮ ಚಿತೆಯಲ್ಲಿ ಸುಟ್ಟು ಭಸ್ಮ ಮಾಡುತ್ತೇನೆ. ಪ್ರಜ್ವಲಿಸುವ ಜ್ವಾಲೆಗಳು ಅದನ್ನು ಆಸ್ವಾದಿಸಿ ಆನಂದಿಸಲಿ. ದಿವ್ಯಧೂಪವಾಗಿ ಭೂಮಿಯನ್ನೆಲ್ಲಾ ಆವರಿಸಿಕೊಳ್ಳಲಿ. ನಿಮ್ಮನ್ನು ಪ್ರೀತಿಸುವುದರ ಜೊತೆಯಲ್ಲಿಯೇ ನಾನು ಈ ಸೃಷ್ಟಿಯನ್ನೂ ಪ್ರೀತಿಸುವುದನ್ನು ಕಲಿತೆ. ಭೂಮಿಯ ಮೇಲಿರುವ ಜೀವಿಗಳನ್ನೆಲ್ಲಾ ಅದು ಇರುವೆಯಾಗಲಿ, ಕ್ರಿಮಿಕೀಟ ಪಶುಪಕ್ಷಿಗಳಾಗಲಿ, ಗಿಡಮರ ಬಳ್ಳಿಗಳಾಗಲಿ ಅಥವಾ ವಿಷಪೂರಿತ ಹಾವಾಗಲಿ, ಕ್ರೂರ ಮೃಗಗಳಾಗಲಿ ಈ ಸೃಷ್ಟಿಯ ಚರಾಚರಗಳೆಲ್ಲ ದೈವಾಂಶದಿಂದೊಡಗೂಡಿದವು ಎಂದು ಸಮವಾಗಿಯೇ ಪ್ರೀತಿಸಿದೆ. ಒಂದು ಕಾಲದಲ್ಲಿ ಗಂಡಸರನ್ನೆಲ್ಲಾ ಆಕರ್ಷಿಸಿದ ನನ್ನ ಈ ಪಾದಗಳು ಕುಣಿತದ ಲಯಕ್ಕೆ ಮುಂದೆ ಎಂದೂ ಕುಣಿಯುವುದಿಲ್ಲ. ನನ್ನ ಹಾವಭಾವ ವಿಲಾಸಗಳು ಯಾರ ಮನಸ್ಸನ್ನೂ ಕೆಡಿಸುವುದಿಲ್ಲ. ನನ್ನ ಕಣ್ಣಿನ ಕುಡಿನೋಟ ಮೌನಸಂಭಾಷಣೆಯನ್ನು ನಡೆಸುವುದಿಲ್ಲ. ಈ ದುರದೃಷ್ಟದ ದೇಹ ಸಕಲ ಜೀವಿಗಳಿಗೆ ಆಹಾರವಾಗಲು ಸಿದ್ಧ.

ಮಾಧರಿ : (ಕನ್ನಗಿಯನ್ನು ಕುರಿತು) ನನ್ನ ಅಕ್ಕರೆಯ ಹೆಣ್ಣೇ, ಜೀವನದಲ್ಲಿ ಅನಿವಾರ್ಯವಾದುದನ್ನು ಎಲ್ಲರೂ ಒಟ್ಟಿಗೆ ಅನುಭವಿಸಲೇಬೇಕು. ನಾನು ನಿನ್ನ ನೋವನ್ನು ಜೊತೆಯಾಗಿಯೇ ಅನುಭವಿಸುತ್ತೇನೆ.

ಕನ್ನಗಿ : ನ್ಯಾಯ ಸಮ್ಮತನಾದ ರಾಜನಿರುವ ರಾಜ್ಯ ಇದೇ ಏನು? ಮೇಧಾವಿಗಳೂ ತತ್ವಜ್ಞಾನಿಗಳೂ ಇರುವ ದೇಶ ಇದೇ ಏನೂ? ಫಲವತ್ತಾದ ಭೂಮಿಯ ಭಾಗ ಇದೇ ಏನು? ಕಾಲಕಾಲಕ್ಕೆ ಮಳೆಬೆಳೆಗಳಾಗುವ ದೇಶ ಇದೇ ಏನು? ಇದು ರಾಜನಾಳುವ ನಗರವೇ ಅಲ್ಲ; ಇಲ್ಲಿ ನಾಗರಿಕರಾದ ಜನರೇ ಇಲ್ಲ. ಪ್ರಾಮಾಣಿಕತೆಗೆ ಇಲ್ಲಿ ಬೆಲೆಯೇ ಇಲ್ಲ. ಇದು ಸತ್ಯವಂತರ ನಗರ ಅಲ್ಲವೇ ಅಲ್ಲ! ಸತ್ಯವಂತರಿಗೆ ಮೋಸದ ಶಿಕ್ಷೆಯನ್ನು ನೀಡುವ ಪಾಪದ ನಗರವಿದು. ಕ್ರೂರ ಮೃಗಗಳು ಗರ್ಜಿಸುವ ಕಾಡಿದು. ಸಹಜ ಕಾಯಿದೆಗಳಿಲ್ಲದ ಕ್ರೌರ್ಯ, ಸ್ವಾರ್ಥ, ಲೋಭಿತ್ವಗಳೇ ತಾಂಡವವಾಡುತ್ತಿರುವ ಪಾಪಕೂಪವಿದು. ದುಷ್ಟ ನಿರಂಕುಶ ರಾಜನ ಸ್ವೇಚ್ಛತೆಯ ಮುಂದೆ ನ್ಯಾಯ ಎಲ್ಲಿದೆ? ಅಸಹಾಯಕರಿಗೆ ಆಸರೆಯ ರಕ್ಷಣೆ ಎಲ್ಲಿದೆ? ಅತಿಥಿ ಅಭ್ಯಾಗತರಿಗೆ ಇಲ್ಲಿ

ಗೌರವದ ಗಣನೆಯೇ ಇಲ್ಲ. ನಾವು ಇಂತಹ ಕೆಟ್ಟ ರಾಜ್ಯಕ್ಕೆ ಬಂದಿದ್ದೇವೆ. ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಅಲ್ಲ, ಮಸಣದ ಮರಣದಂಡನೆಯನ್ನು ಅನುಭವಿಸಲು ಬಂದಿದ್ದೇವೆ.

ಮಾಥರಿ : ನನ್ನಕ್ಕರೆಯ ಹೆಣ್ಣೇ, ನಿನ್ನ ನೋವು ನ್ಯಾಯಸಮ್ಮತವಾದುದು. ನಿನ್ನ ಮೇಲೆ ಇಂತಹ ದುರ್ವಿಧಿ ಆವರಿಸಿದ್ದಕ್ಕೆ ನಾವೆಲ್ಲರೂ ನೊಂದಿದ್ದೇವೆ. ನಮ್ಮ ಸೂರಿನಾಸರೆಯಲ್ಲಿ ನಿನಗೆ ಈ ದುಸ್ಥಿತಿ ಬಂದಿರುವುದು ನನಗೆ ಇಮ್ಮಡಿಯ ನೋವನ್ನುಂಟುಮಾಡಿದೆ. ನಿನ್ನ ಕೋಪವು ಪ್ರಕೃತಿಸಹಜವಾದರೂ ನ್ಯಾಯಸಮ್ಮತವಲ್ಲ. ಅವರ ಹೇಳಿಕೆಯಂತೆ ಕಾಲ್ಕಡಗ ರಾಣಿಯದು. ಅಂತಹ ಇನ್ನೊಂದು ಕಾಲ್ಕಡಗ ಪಡೆಯುವಷ್ಟು ಭಾಗ್ಯವಂತ ಶ್ರೀಮತರು ಬೇರೆ ಯಾರೂ ಇಲ್ಲ.

ದೇವಂತಿ : ವಿಶ್ವಾಸಘಾತಕ ಹೆಣ್ಣೇ! ನಮ್ಮೊಡೆಯ ಕುತಂತ್ರ ಮೋಸಗಳೇ ಹೆಚ್ಚಾಗಿರುವ ಈ ನಿಮ್ಮ ರಾಜ್ಯದ ಅರಾಜಕತೆಗೆ ಬಲಿಯಾಗಬೇಕೆಂದು ಸೂಚಿಸುವೆಯೇನು? ಪವಿತ್ರವಾದ ಕಾವೇರಿ ನದಿ ಹುಟ್ಟಿ ಹರಿಯುವ ದೇಶದಿಂದ ಬಂದಿರುವವರು ನಾವು. ನಿಮ್ಮ ನಿರ್ಗತಿಕ ರಾಜನಿಗಿಂತಲೂ ಸಾವಿರಪಟ್ಟು ಶ್ರೀಮಂತ ವ್ಯಾಪಾರಿಗಳಿರುವ ರಾಜ್ಯ ನಮ್ಮದು.

ಕನ್ನಗಿ : ಓ ಕ್ರೂರ ವಿಧಿಯೆ! ಯಾವ ಜನ್ಮದ ಪಾಪಶೇಷಕ್ಕಾಗಿ, ಯಾವ ನಿಸ್ವಾರ್ಥ ತಪ್ಪಿನ ಪ್ರತೀಕಾರಕ್ಕಾಗಿ, ಪ್ರಾಯಶ್ಚಿತ್ತಕ್ಕಾಗಿ, ಸ್ವರ್ಗದ ದೇವತೆಗಳನ್ನು ಒಲಿಸದ ಯಾವ ತಪ್ಪಿಗಾಗಿ ಕ್ರೂರ ವಿಧಿ ನಮ್ಮನ್ನು ಬಲಿ ಮಾಡಿದೆಯೋ ನನಗರ್ಥವಾಗುತ್ತಿಲ್ಲ. ಈ ಹೆಣ್ಣು, ನನ್ನ ಗೆಳತಿ ಮತ್ತು ಅಪರಿಚಿತರಾದ ನಮಗೆ ಈ ನಗರದಲ್ಲಿ ಆಸರೆ ನೀಡಿ ರಕ್ಷಿಸಿದವಳು. ಇವಳೂ ಸಹ ನನ್ನೊಡೆಯನ ನಿರ್ದೋಷತ್ವವನ್ನು ಅನುಮಾನಿಸುತ್ತಿದ್ದಾಳೆ. ಮುಗ್ಧರಾದ ಜನರು ಕಳ್ಳನ ಹೆಸರನ್ನು ಪುನರುಚ್ಚರಿಸುತ್ತಿದ್ದಾರೆ. ರಾಜನ ಮರಣದಂಡನೆ ಇದನ್ನು ಖಚಿತ ಮಾಡಿದೆ. ರಾಜನ ಬಾಡಿಗೆಯ ಹೊಗಳುಭಟ್ಟರ ಹಾಡುಗಳಲ್ಲಿ ಅವರ ಹೆಸರು ಅಮರವಾಗಿರಲಿ. ಆದರೆ ನಾನು ಮಾತ್ರ ಇವರನ್ನೆಲ್ಲಾ ಪ್ರತಿಭಟಿಸಿ ನಿರಾಕರಿಸುತ್ತೇನೆ. ನನ್ನ ಗಂಡ ನಿರಾಪರಾಧಿಯೆಂದು ಸಾಬೀತುಪಡಿಸಿ, ತಪ್ಪು ಮಾಡದವನಿಗೆ ಅನ್ಯಾಯದ ಈ ಉಗ್ರ ಶಿಕ್ಷೆ ನೀಡಿದ್ದಾರೆ ಎಂದು ತೋರಿಸಿಕೊಡುತ್ತೇನೆ. ಮದುವೆಯಲ್ಲಿ ಕಟ್ಟಿರುವ ಈ ತಾಳಿಯನ್ನು ಕೀಳುವುದಿಲ್ಲ. ಬಿಳಿಯ ಸೀರೆ ಉಟ್ಟು ನನ್ನನ್ನು ನಾನು ಹಿಂಸಿಸಿಕೊಳ್ಳುವುದಿಲ್ಲ. ದುರ್ವಿಧಿಯ ಪಶುಬಲಿ ಎಂಬ ಹಂಗಿಗೆ ಸಿಗುವುದಿಲ್ಲ. ಗಂಡನ ಅವಸಾನ ಕಾಲದಲ್ಲಿ ರಕ್ಷಿಸಲಾಗದ ಪಾತಿವ್ರತ್ಯವುಳ್ಳವಳು ಎಂಬ ಮೂದಲಿಕೆಗೆ ಸಿಗುವುದಿಲ್ಲ. ಇಲ್ಲ, ಇಲ್ಲ. ನಾನು ವಿಧವೆಯ ನಿರ್ಗತಿಕ ಹೇಯ ಜೀವನ ನಡೆಸುವುದಿಲ್ಲ. ಏಕೆಂದರೆ ನಾನು ಅವರ ಸಾವನ್ನು ಒಪ್ಪಿಲ್ಲ. ನಾನೀಗ ಇಲ್ಲಿ ನೆರೆದಿರುವವರ ಮುಂದೆ ನನ್ನ ಗಂಡ ನಿರಾಪರಾಧಿಯೆಂದು ಪ್ರಮಾಣ ಮಾಡುತ್ತೇನೆ. ದುರಾತ್ಮನ ಕುತಂತ್ರ ಅವರಿಗೆ ಸಾವು ತಂದಿದೆ. ಈ ದಿನ ಸೂರ್ಯನು ಮುಳುಗುವ ಮೊದಲು ಈ ದುರಂತವನ್ನು ರುಜುವಾತು ಮಾಡುತ್ತೇನೆಂದು ಘೋಷಿಸುತ್ತೇನೆ. ನಾನೊಬ್ಬ ಸುಶೀಲ ಪತಿವ್ರತೆಯೆಂಬುದನ್ನು ತೋರಿಸಿಕೊಡುತ್ತೇನೆ. ನಮ್ಮ ಪವಿತ್ರ ಗ್ರಂಥಗಳಲ್ಲಿ ಕಾಣುವ ಪತಿವ್ರತೆಯರಿಗೆಲ್ಲಾ ಗಂಡನೊಲವಿನಲ್ಲಿ, ತ್ಯಾಗಗಳಲ್ಲಿ ನಾನೂ ಸಮಾನಳೂ ಎಂಬುದನ್ನು ತೋರಿಸಿಕೊಡುತ್ತೇನೆ. ನನ್ನ ಗಂಡನ ಮುಗ್ಧತೆಗೆ ಸ್ವರ್ಗ ನನಗೆ ಅಲ್ಪ ಸಾಕ್ಷ್ಯವನ್ನು ನೀಡಿದರೆ ಅಷ್ಟೇ ಸಾಕು. [ಗುಡುಗಿನ ಆರ್ಭಟದ ಶಬ್ದ ಕೇಳಿ ಎಲ್ಲರೂ ಮೇಲಕ್ಕೆ ನೋಡುತ್ತಾರೆ]

ಮಾಥರಿ : ಆಕಾಶದಲ್ಲಿ ಮೋಡಗಳಿಲ್ಲದೆಯೂ ಗುಡುಗು ಕೇಳಿಸುತ್ತಿದೆ. ಇದು ಮಳೆಗಾಲವಲ್ಲವಾದರೂ ಮಿಂಚು ಕಾಣಿಸುತ್ತಿದೆ. ಪವಿತ್ರ ಹೆಣ್ಣೇ, ಒಂದು ಕ್ಷಣ ನಿನ್ನ ಗಂಡನ ಪ್ರಾಮಾಣಿಕತೆಯನ್ನು ಸಂಶಯಿಸಿದ್ದಕ್ಕೆ ನನ್ನನ್ನು ಕ್ಷಮಿಸಿಬಿಡು.

ದೇವಂತಿ : (ಕನ್ನಗಿಯನ್ನು ಕುರಿತು) ನಿಮ್ಮ ಕರೆಗೆ ಉತ್ತರ ಸಿಕ್ಕಿದೆ. ಅವರು ಮುಗ್ಧರೆಂಬುದು ಜಗತ್ತಿಗೆಲ್ಲ ಗೊತ್ತಿದೆ. ನ್ಯಾಯದ ವಿಚಾರಣೆಯಲ್ಲಿ ಏರುಪೇರಾಗಿದೆ.

ಮಾಧರಿ : ಈಗ ನಾವು ಕಾಣುತ್ತಿರುವ ಪವಾಡಸದೃಶವಾದ ಅಕಾಲ ಗುಡುಗು ಮಿಂಚುಗಳಿಗೆ ಸಾಕ್ಷಿಗಳಾಗಿದ್ದೇವೆ. ಈ ನಗರವಾಸಿಗಳಿಗೆಲ್ಲಾ ನಿನ್ನ ಗಂಡ ನಿರ್ದೋಷಿ, ಅನ್ಯಾಯವಾಗಿ ಅವರನ್ನು ಕೊಂದಿದ್ದಾರೆಂದು ಸಾರಿ ಹೇಳಬಲ್ಲೆ. ಆದರೆ ಮೊದಲವರ ಶವ ಸಂಸ್ಕಾರಕ್ಕೆ ಸಿದ್ಧವಾಗಬೇಕು.

ಕನ್ನಗಿ : ಸುರಿಸಲು ನನ್ನ ಕಣ್ಣಿನಲ್ಲಿ ನೀರೇ ಇಲ್ಲ; ಚಿತೆಗೆ ನಾನು ಬೆಂಕಿಯನ್ನು ಹಚ್ಚಲಾರೆ. ಆದರೆ ನಾನು ಪಾಂಡ್ಯರಾಜನ ಅರಮನೆಗೆ ಹೋಗುತ್ತೇನೆ. ಈ ಘೋರ ಅಪರಾಧಕ್ಕೆ ಅವರೇ ಹೊಣೆಯೆಂದು ಆರೋಪಿಸುತ್ತೇನೆ. ಅನಂತ ನರಕಯಾತನೆಗೆ ಅರ್ಹನಾದ ಅನ್ಯಾಯದ ರಾಜನೆಂದು ನಿಂದಿಸುತ್ತೇನೆ. ಯಾವ ನ್ಯಾಯ ನನ್ನ ಗಂಡ ಪಡೆಯಲು ಅಸಾಧ್ಯವಾಯಿತೋ ಅದೇ ನ್ಯಾಯದಿಂದ ರಾಜನನ್ನು ಶಿಕ್ಷಿಸುತ್ತೇನೆ. ನನ್ನ ಕನಸಿನ ಕಟುವಾದ ಅಂತ್ಯವನ್ನು ಹಿಂಬಾಲಿಸುತ್ತೇನೆ. ಈಗ ನಾನು ಮಾಡಲೇಬೇಕಾದ ಜೀವನ ಧ್ಯೇಯ ಬಂದಿದೆ.

ಮಾಧವಿ : ಒಮ್ಮೆ ನಡೆದುದನ್ನು ಎಂದೆಂದೂ ಅಳಿಸುವುದಕ್ಕಾಗುವುದಿಲ್ಲ. ಸಾವಿನ ಸತ್ಯವನ್ನು ಹಿಂದಕ್ಕೆ ಪಡೆಯಲಾಗುವುದಿಲ್ಲ. ದೇವತೆಗಳು ಅವರು ಮುಗ್ಧರೆಂಬುದನ್ನು ಸಾಬೀತುಮಾಡುತ್ತಾರೆ. ಅವರಲ್ಲಿ ನಮಗೆ ನಂಬಿಕೆ ಇರಲಿ. ನಿಮ್ಮ ಕೋಪ ದಿವ್ಯವಾದುದು. ಅದನ್ನು ಅನಗತ್ಯವಾಗಿ ಕಳೆದುಕೊಳ್ಳಬೇಡಿ.

ಕನ್ನಗಿ : ನಾನು ಅಂತಹ ಕೆಲಸಕ್ಕೆ ಎಂದೂ ಸಹಕಾರಿಯಾಗುವುದಿಲ್ಲ. ಸತ್ತ ಗಂಡನಿಗಾಗಿ ಪ್ರತೀಕಾರ ಮನೋಭಾವವಿದೆ.

ಅಂಕ ಮೂರು

[ಅದೇ ದಿನ ಸಂಜೆ. ಮಧುರೆಯ ಅರಮನೆಯಲ್ಲಿ ಮಹಾರಾಣಿಯವರ ಅಂತಃಪುರ. ಮಹಾರಾಣಿಯ ಕೊಠಡಿ ಮದುರೆಯ ಪ್ರಾಚೀನ ವೈಭವದ ಪ್ರತಿಬಿಂಬವಾಗಿದೆ, ರಾಜನ ಸಂಪತ್ತು ಮತ್ತು ಸಮೃದ್ಧಿಗಳ ಸಂಕೇತವೂ ಆಗಿದೆ. ಕಲ್ಲಿನ ಕಂಬಗಳು ಸುಂದರವಾಗಿ ಕೆತ್ತಲ್ಪಟ್ಟಿವೆ. ಬಂಗಾರಮಿಶ್ರಿತ ಪೀತಾಂಬರಗಳನ್ನು ಕಿಟಕಿ ಬಾಗಿಲುಗಳಿಗೆ ನೇತುಹಾಕಲಾಗಿದೆ. ಹಾಸಿಗೆ ಚಿನ್ನಾಭರಣಗಳಿಂದ ಶೃಂಗರಿಸಲ್ಪಟ್ಟಿದೆ. ರಂಗದ ಹಿಂಭಾಗದಲ್ಲಿ ಒಂದು ಬಾಗಿಲಿದೆ. ಅದರ ಮೂಲಕ ರಾಣಿ ತನ್ನ ಸ್ವಂತ ಕೈತೋಟವನ್ನು ನೋಡಬಹುದಾಗಿದೆ. ಎಡಗಡೆಯ ಬಾಗಿಲು ಮಹಾರಾಜರ ವಾಸಸ್ಥಾನಕ್ಕೆ ದಾರಿಯಾಗಿದೆ. ತೆರೆ ಏಳುತ್ತಿರುವಂತೆ ಮಹಾರಾಣಿ ಎಡಗಡೆಯ ಬಾಗಿಲ ಕಡೆ ಕಣ್ಣಾಯಿಸುವಷ್ಟರಲ್ಲಿ ಬಾಗಿಲು ತೆಗೆದುಕೊಂಡು ಮಹಾರಾಜರು ಪ್ರವೇಶಿಸುತ್ತಾರೆ.]

ಮಹಾರಾಣಿ : ಸ್ವಲ್ಪ ಸಮಯವಾದರೂ ನನ್ನ ಜೊತೆಯಲ್ಲಿ ಕಳೆಯಲು ಆಗದಷ್ಟು ಹೊರೆಯಾಗಿದೆಯೇ ನಿಮ್ಮ ರಾಜ್ಯದ ಹೊಣೆ? ಜನರು ನಿಮ್ಮನ್ನು ಈ ದೇಶದ ದೇವರೆಂದೇ ಹೊಗಳುತ್ತಿದ್ದಾರೆ. ನಿಮ್ಮ ಹೆಸರನ್ನು ಕೇಳಿಯೇ ಶತ್ರುಗಳು ಹೆದರುತ್ತಾರೆಂದೂ, ನೀವೂ ಸದಾ ನ್ಯಾಯಪರವಾಗಿರುತ್ತೀರೆಂದೂ, ನಿಮ್ಮ ಆಳ್ವಿಕೆಯಲ್ಲಿ ಕಾಡಿನ ಕ್ರೂರ ಪ್ರಾಣಿಗಳಾದ ಹುಲಿಸಿಂಹಗಳು ಸಹ ಸಭ್ಯ ಜನರನ್ನು ಕಾಡಿಸುವುದಿಲ್ಲೆಂದೂ, ನಿಮ್ಮ ಆಸ್ಥಾನ ಕವಿಗಳು ನಿಮ್ಮನ್ನು ಸದಾಕಾಲ ಪ್ರಜಾಸಂರಕ್ಷಕ ದೇವರೆಂದೇ ಹೊಗಳುತ್ತಿದ್ದಾರೆಂದೂ, ನಿಮ್ಮ ಆಲೋಚನೆಗಳು ಜೀವನದ ಆದರ್ಶಗಳೆಂದೂ, ನಿಮ್ಮ ಇಚ್ಛೆಯೇ ಇಲ್ಲಿ ವಿಧಿಯೆಂದೂ, ಕವಿಗಳು ಹೊಗಳುಭಟ್ಟರು ಹೊಗಳುತ್ತಿದ್ದಾರೆಂದೂ, ಜನರು ಅದನ್ನು ಕೇಳಿ ಸಂತೋಷಿಸುತ್ತಿದ್ದಾರೆಂದೂ ಕೇಳಿ ನಾವು ಸಂತೋಷಪಡುತ್ತಿದ್ದೇವೆ.

ಮಹಾರಾಜ : (ಪಸನ್ನುಖಿಯಾಗಿ) ನನ್ನ ಕೆಲಸಕ್ಕೆ ಕೊನೆಯೆಂಬುದಿಲ್ಲ. ನನ್ನ ಅಧಿಕಾರವನ್ನು ಹಸ್ತಾಂತರಿಸಬಲ್ಲ ಸಾಮರ್ಥ್ಯ ಇರುವವರು ಬೇರೆ ಯಾರೂ ಇಲ್ಲ. ನನ್ನ ಎಲ್ಲ ಕ್ರಿಯೆಗಳಿಗೂ ನಾನೇ ದೇವರಿಗೆ ಉತ್ತರ ನೀಡಬೇಕು. ನನ್ನ ಆಜ್ಞೆಗಳನ್ನು ಅನುಷ್ಠಾನಗೊಳಿಸುವ ಅಧಿಕಾರಿಗಳ ಎಲ್ಲ ಕ್ರಿಯೆಗಳಿಗೂ ನಾನೇ ನೇರ ಹೊಣೆಗಾರನಾಗಿದ್ದೇನೆ. ನಾನು ಎಲ್ಲರನ್ನು ಸಮವಾಗಿ ನೋಡಿದರಷ್ಟೇ ನಿಷ್ಪಕ್ಷಪಾತಿಯಾಗಬಲ್ಲೆ.

ಮಹಾರಾಣಿ : (ಸ್ವಲ್ಪ ಕೋಪದಿಂದ) ನೀವು ನನ್ನ ಬಳಿ ಬರುವಾಗಲೂ ಪೂರ್ವ ನಿಯೋಜಿತರಾಗಿಯೇ ಬರುತ್ತೀರಲ್ಲ! ನನ್ನ ಪ್ರೀತಿಯ ಸವಿನುಡಿಗಳನ್ನು ಅರೆ ಮನಸ್ಸಿನಿಂದಲೇ ಕೇಳುತ್ತೀರಲ್ಲ! ನನ್ನ ಅಂತಃಪುರದ ಪಾವಿತ್ರ್ಯದ ಬಳಿಗೂ ನಿಮ್ಮ ಸಚಿವರು, ರಾಜ್ಯದ ಸಮಸ್ಯೆಗಳು ಹಿಂಬಾಲಿಸಿಕೊಂಡೇ ಬರುತ್ತವಲ್ಲ!

ಮಹಾರಾಜ : (ಗಲ್ಲ ಹಿಡಿದು) ಪ್ರಿಯಕರಳೇ, ನನ್ನ ಕೆಲಸವೇ ಕಷ್ಟಕರವಾದುದು. ನಾನು ರಾಜ್ಯದ ಎಲ್ಲ ಆಗುಹೋಗುಗಳನ್ನು ತಿಳಿದುಕೊಂಡರೆ ಮಾತ್ರ ಸಮರ್ಥವಾಗಿ ಕಾರ್ಯಭಾರವನ್ನು ನಿರ್ವಹಿಸುವುದಕ್ಕೆ ಸಾಧ್ಯವಾಗುತ್ತದೆ. ನನ್ನ ಆಸ್ಥಾನಿಕರ ವಂಚನೆಯ ಸ್ವಾರ್ಥ ತಂತ್ರಗಳನ್ನು, ಅತಿಯಾದ ಮುಖಸ್ತುತಿಯಿಂದ ನನ್ನ ಬಲಹೀನತೆಯನ್ನು ಬಳಸಿಕೊಂಡು ನನ್ನನ್ನು ಅಜ್ಞಾನದ ಕತ್ತಲೆಯಲ್ಲಿ ಇರಿಸಲು ಇಚ್ಛಿಸುವವರನ್ನು, ಸ್ವಾಮಿನಿಷ್ಠರಲ್ಲದ ಸಚಿವರ ಅಪಾಯಕಾರಿ ಸಲಹೆಗಳನ್ನು ಗಮನಿಸಬೇಕು. ಇವರೇ ನನ್ನ ಪ್ರತಿದಿನದ ಶತ್ರುಗಳು. ಇವರ ನಡೆವಳಿಕೆಯನ್ನು ಗಮನಿಸುತ್ತ, ಹೊರಶತ್ರುಗಳನ್ನು ನಿಗ್ರಹಿಸಿ, ಒಳಸಂಚುಗಳನ್ನು ನಿಯಂತ್ರಿಸಿ ರಾಜ್ಯವನ್ನು ರಕ್ಷಿಸುವುದೇ ರಾಜನ ಧರ್ಮ, ಕರ್ತವ್ಯ. ಎಲ್ಲಕ್ಕಿಂತ ಮಿಗಿಲಾಗಿ ಕಡಿವಾಣವಿಲ್ಲದ ನನ್ನ ನಿರಂಕುಶಾಧಿಕಾರದ ಕುದುರೆಯನ್ನು ನಿಯಂತ್ರಿಸಬೇಕಾಗಿದೆ.

ಮಹಾರಾಣಿ : ನೀವು ದೇವರ ಪ್ರತಿನಿಧಿಗಳಲ್ಲವೆ?

ಮಹಾರಾಜ : ಹೌದು. ನಾನು ದೈವ ಪ್ರಾತಿನಿಧ್ಯದ ಜವಾಬ್ದಾರಿಯನ್ನು ವಹಿಸಿಕೊಳ್ಳಲೇಬೇಕು. ಆದರೆ ದುರದೃಷ್ಟವಶಾತ್ ಆ ದೈವಶಕ್ತಿ ನನಗಿಲ್ಲ ಅಥವಾ ದೈವ ಪ್ರತಿನಿಧಿಗೆ ಇರಬೇಕಾದ ಬುದ್ಧಿವಂತಿಕೆಯೂ ಇಲ್ಲ.

ಮಹಾರಾಣಿ : ನಮ್ಮ ಕೈತೋಟದ ಕಾರಂಜಿಯ ಬಳಿ ಕುಳಿತು ನಾನೆಷ್ಟು ದಿನಗಳನ್ನು ನಿಮಗಾಗಿ ಕಾದು ಕಳೆದಿದ್ದೇನೆ. ನನ್ನ ಕಳೆಗುಂದಿದ ಮುಖಛಾಯೆಯನ್ನು ಸರೋವರದ ಅಲೆಗಳಲ್ಲಿ ಕಾಣುತ್ತಾ ಸೂರ್ಯ ಮುಳುಗುವುದನ್ನು ನೋಡಿದೆನೇ ಹೊರತು ನೀವು ಬರಲಿಲ್ಲ. ಎಷ್ಟು ಸುಂದರ ರಾತ್ರಿಗಳನ್ನು ಕಿಟಕಿಯ ಪಕ್ಕ ಕುಳಿತು ತಾರೆಗಳನ್ನು ಎಣಿಸುತ್ತಾ ಕಳೆದಿದ್ದೇನೆ. ನೂರು ಎಣಿಸುವಷ್ಟರಲ್ಲಿ ನನ್ನೊಲುಮೆಯ ನೀವು ಎದುರಾಗುವಿರೆಂದು ಆಶಿಸಿದ್ದೇನೆ. ಅದೆಷ್ಟು ಸಾರಿ ಆಕಾಶದಲ್ಲಿರುವ ತಾರೆಗಳನ್ನೆಲ್ಲಾ ನೀವು ಬಾರದ ನಿರಾಶೆಯಲ್ಲಿ ಎಣಿಸಿದ್ದೇನೆ.

ಮಹಾರಾಜ : ನಿನ್ನ ಕಾಯುವಿಕೆಯ ಬೇಸರವನ್ನು ಕಳೆಯಲೆಂದೇ ಇಂದು ರಾಜಕಾರ್ಯಗಳನ್ನೆಲ್ಲ ಬದಿಗೊತ್ತಿ ಬಂದಿದ್ದೇನೆ. ನನ್ನ ಏಕಾಂತದ ಪ್ರಶಾಂತತೆಗೆ ಯಾರೂ ಭಂಗ ಮಾಡಬಾರದೆಂದು ಆಜ್ಞಾಪಿಸಿದ್ದೇನೆ. ಈ ದಿನದ ಸಂಜೆಯನ್ನು ನಿನ್ನ ಜೊತೆ ಸರಸ ಸಲ್ಲಾಪಕ್ಕಾಗಿಯೇ ಮೀಸಲಾಗಿಟ್ಟಿದ್ದೇನೆ.

ಮಹಾರಾಣಿ : ನಾನು ಅಪನಂಬಿಕೆಯ ಸ್ವಭಾವದವಳಾಗಿದ್ದರೆ, ಅಥವಾ ನನ್ನ ಬಳಿ ಬರಲಿಲ್ಲವೆಂಬ ಮತ್ಸರದ ಮನೋಭಾವದವಳಾಗಿದ್ದರೆ, ನಿಮ್ಮ ರಾಜ್ಯದ ಲೆಕ್ಕವಿಲ್ಲದ ಅರಮನೆಗಳಲ್ಲಿ ನೀವು ಬೇರೊಬ್ಬ ಪ್ರೇಯಸಿಯನ್ನು ಇರಿಸಿಕೊಂಡಿರುವಿರೆಂದು ಸಂಶಯಪಡುತ್ತಿದ್ದೆ. ಆದರೆ ನೀವು ಅಂತಹವರಲ್ಲ. ನಿಮ್ಮ ಸರಳತೆಯನ್ನು ನಾನು ನಂಬಿದ್ದೇನೆ.

ಮಹಾರಾಜ : ನನ್ನ ಆಸ್ಥಾನಿಕರು ಹೇಳುವುದನ್ನೆಲ್ಲ ನಂಬುವಂತಿಲ್ಲ ಅಥವಾ ಸಚಿವರು ಹೇಳುವುದೆಲ್ಲಾ ಪೂರ್ಣ ಸತ್ಯವಲ್ಲ. ಏಕೆಂದರೆ ಅವರೆಲ್ಲಾ ನನಗೆ ಹೇಳುವುದು ನನಗೆ ಇಷ್ಟವಾದುದನ್ನು ಮಾತ್ರ, ಉಳಿದವುಗಳನ್ನು ಬಚ್ಚಿಡುತ್ತಾರೆ. ಆದ್ದರಿಂದ ನಾನು ರಾತ್ರಿಯಲ್ಲಿ ವ್ಯಾಪಾರಿಯಂತೆ, ಭಿಕ್ಷುಕನಂತೆ ವೇಷ ಧರಿಸಿ ನನ್ನ ಬಗ್ಗೆ ಜನರು ಏನು ಆಡಿಕೊಳ್ಳುತ್ತಾರೆ, ನನ್ನ ಆಳ್ವಿಕೆಯ ಬಗ್ಗೆ ಏನು ಯೋಚನೆ ಮಾಡುತ್ತಾರೆಂಬುದನ್ನು ಸ್ವತಃ ಕೇಳಲು, ತಿಳಿದುಕೊಳ್ಳಲು ಹೋಗುತ್ತೇನೆ. ಇದರಿಂದ ನಾನು ಮಹಾರಾಣಿಯವರ ಪ್ರೀತಿಯಿಂದ ಪ್ರತಿದಿನ ವಂಚಿತನಾಗುವುದು ಅನಿವಾರ್ಯ.

ಮಹಾರಾಣಿ : ನೀವು ಹೀಗೆ ವೇಷ ಮರೆಸಿ ರಾತ್ರಿ ಗಸ್ತು ತಿರುಗುವುದರಿಂದ ಯಾವ ಸಾರ್ವಜನಿಕ ತಪ್ಪನ್ನು ಅಥವಾ ಖಾಸಗಿ ಆರೋಪವನ್ನು ಸರಿಪಡಿಸಿದ್ದೀರಿ.

ಮಹಾರಾಜ : ಸರಿಪಡಿಸಿದ್ದೇನೆ. ಅದು ಸಾರ್ವಜನಿಕವೂ ಹೌದು, ಖಾಸಗಿಯೂ ಹೌದು. ಅದು ಸಾರ್ವಜನಿಕ ಹೇಗೆಂದರೆ ಪರದೇಶದ ಕಳ್ಳನೊಬ್ಬನನ್ನು ಹಿಡಿದು ಮರಣದಂಡನೆಗೆ ಒಳಪಡಿಸಿದ್ದೇನೆ. ಅದು ಖಾಸಗಿಯೂ ಹೌದು, ಹೇಗೆಂದರೆ ಮಹಾರಾಣಿಯವರ ಕಳೆದುಹೋಗಿದ್ದ ಅಮೂಲ್ಯವಾದ ಕಾಲ್ಕಡಗವನ್ನು ಪತ್ತೆಮಾಡಿ ವಶಪಡಿಸಿಕೊಂಡು ಕಾಲ್ಕಡಗ ಕಳೆದುಕೊಂಡಿದ್ದ ಚಿಂತೆಯನ್ನು ಪರಿಹರಿಸಿದಂತಾಗಿದೆ. ಹೀಗಾಗಿ ನನಗೆ ಇಂದು ಇಬ್ಬಗೆಯ ತೃಪ್ತಿಯಾಗಿದೆ.

ಮಹಾರಾಣಿ : ಏನೂ! ನನ್ನ ಕಾಲ್ಕಡಗ ಪತ್ತೆ ಮಾಡಿದಿರಾ? ಪಡೆದುಕೊಂಡಿರಾ?

ಮಹಾರಾಜ : ಹೌದು. ಅದು ಇಲ್ಲಿದೆ ನೋಡು [ಕಾಲ್ಕಡಗವನ್ನು ಕೊಡುತ್ತಾನೆ]

ಮಹಾರಾಣಿ : ಓಹೋ! ನನಗೆ ಮಹದಾನಂದವಾಗಿದೆ. ಕಳೆದುಹೋಗಿದ್ದ ಕಾಲ್ಕಡಗವನ್ನು ನಿಜವಾಗಿ ಪಡೆದಿದ್ದೀರಿ![ಅದನ್ನು ನೋಡಿ] ನಿಗೂಢ ರೀತಿಯಲ್ಲಿ ಅರಮನೆಯ ರಕ್ಷಕರೆಲ್ಲರ ಕಣ್ಣುಗಳನ್ನು ತಪ್ಪಿಸಿ ಕಳ್ಳತನ ಮಾಡಿದ್ದ ಆ ಕಳ್ಳನನ್ನು ಹೇಗೆ ಹಿಡಿದಿರಿ? ಯಾವ ಶಿಕ್ಷೆ ನೀಡಿದಿರಿ?

ಮಹಾರಾಜ : ನೀನು ಅದನ್ನು ಕಳೆದುಕೊಂಡಾಗ ಅದೆಷ್ಟು ದುಃಖಿತಳಾಗಿದ್ದೆ! ಅದನ್ನು ಈಗ ಪಡೆದು ಅಷ್ಟೇ ಸಂತೋಷಪಟ್ಟಿರುವೆಯಲ್ಲವೆ?

ಮಹಾರಾಣಿ : ಹೌದು. ನಾನು ಅಂದು ನಿಜವಾಗಿಯೂ ತುಂಬಾ ದುಃಖಿತಳಾಗಿದ್ದೆ. ಮಹಾರಾಣಿಯ ಅಂತಃಪುರದಿಂದ ಅಮೂಲ್ಯವಾದ ಒಂದು ಕಾಲ್ಕಡಗ ಕಳುವಾಯಿತೆಂದರೆ ದುಃಖವಾಗುವುದಿಲ್ಲವೆ? ರಾಜನ ಎಲ್ಲ ಅಧಿಕಾರ, ಶಕ್ತಿಗಳು ಒಬ್ಬ ಕಳ್ಳನನ್ನು ಪತ್ತೆ ಮಾಡಿ ಬಂಧಿಸಲು ಅಶಕ್ತವೆ? ಅಂತಹ ವೇಳೆ ದುಃಖಿತಳಾಗದೆ ಅಭಿವಂದಿಸಲೆ? ಅದಿರಲಿ, ಅದು ಹೇಗೆ ಪತ್ತೆಯಾಯಿತು ಎಂಬುದನ್ನು ಹೇಳಿ! ಪತ್ತೆ ಮಾಡಿದವನಿಗೆ ನಾನು ಬಹುಮಾನವನ್ನು ಕೊಡಬೇಕು. [ಹೊರಗಡೆ ಗದ್ದಲ ಕೇಳಿಸುತ್ತದೆ. ಯಾರೋ ಬಾಗಿಲು ಬಡಿಯುತ್ತಾರೆ]

ಮಹಾರಾಜ : ಯಾರದು ಸದ್ದು ಮಾಡುವವನು? ಮಹಾರಾಜನು ಮಹಾರಾಣಿಯೊಂದಿಗೆ ಏಕಾಂತದಲ್ಲಿರುವಾಗ ಭಂಗ ಮಾಡುವವನು ಯಾರು? [ಬಾಗಿಲು ಬಡಿಯುವ ಶಬ್ದ ಮುಂದುವರಿಯುತ್ತದೆ] ಒಳಗೆ ಬನ್ನಿ. [ಖಿನ್ನವದನನಾಗಿ ಸಚಿವ ಬರುತ್ತಾನೆ]

ಸಚಿವ : ಪ್ರಭುಗಳೇ, ನಾನು ನಿಮ್ಮ ಕ್ಷಮೆ ಬೇಡುತ್ತೇನೆ. ಮುಖ್ಯವಲ್ಲದ ವಿಚಾರವಾಗಿದ್ದರೆ ನಿಮ್ಮ ಏಕಾಂತಕ್ಕೆ ಭಂಗ ಉಂಟುಮಾಡುತ್ತಿರಲಿಲ್ಲ.

ಮಹಾರಾಣಿ : ರಾಜಾಜ್ಞೆಗೆ ಅರಮನೆಯಲ್ಲಿಯೇ ಬೆಲೆ ಇಲ್ಲವೆ?

ಮಹಾರಾಜ : ಅದು ಏನು?

ಸಚಿವ : ಬಾಗಿಲ ಬಳಿ ನಿಂತಿರುವ ಹೆಂಗಸೊಬ್ಬಳು ತಕ್ಷಣ ರಾಜದರ್ಶನವನ್ನು ಬಯಸಿ ಒತ್ತಾಯಿಸುತ್ತಿದ್ದಾಳೆ.

ಮಹಾರಾಜ : ಅವಳಿಗೆ ಏನು ಬೇಕಾಗಿದೆಯೆಂದು ತಿಳಿದುಕೊಳ್ಳುವುದಕ್ಕೆ ಆಗಲಿಲ್ಲವೆ? ಅವಳೇನಾದರೂ ದುಃಖಿತಳಾಗಿದ್ದರೆ ನೀನೇ ಸಮಾಧಾನಪಡಿಸಲು ಆಗಲಿಲ್ಲವೆ? ಅವಳಿಗೇನಾದರೂ ದಾನ ಬೇಕಿದ್ದರೆ ಭಿಕ್ಷೆ ಏಕೆ ಕೊಡಲಿಲ್ಲ? ಅಥವಾ ದುರಾತ್ಮನಾದ ಗಂಡನ ಕಾಟದಿಂದ ತಪ್ಪಿಸಿಕೊಳ್ಳುವ ರಾಜರಕ್ಷಣೆ ಅಪೇಕ್ಷಿಸಿ ಬಂದಿದ್ದಾಳೆಯೋ? ಅಥವಾ ದುಷ್ಟ ತಂದೆಯ ಕಾಟಕ್ಕೆ ಒಳಗಾಗಿರುವಳೋ? ರಾಜನಪ್ಪಣೆ ಇಲ್ಲದೆ ಇವುಗಳನ್ನು ನೀನೇ ಬಗೆಹರಿಸಲು ಸಾಧ್ಯವಾಗಲಿಲ್ಲವೆ? ನೀನು ಇಷ್ಟು ದೀರ್ಘಕಾಲ ನಮ್ಮ ಸೇವೆ ಮಾಡುತ್ತಿದ್ದರೂ ಸಹ ನಿಮ್ಮ ವೃತ್ತಿಯ ಪ್ರಾಥಮಿಕ ಕರ್ತವ್ಯವನ್ನು ತಿಳಿದುಕೊಳ್ಳಲು ಅಸಮರ್ಥರಾದಿರೆ?

ಸಚಿವ : ಓ! ಪ್ರಭುಗಳೇ! ಅವಳು ಸಾಮಾನ್ಯ ಹೆಂಗಸಲ್ಲ. ಕಣ್ಣೀರಿನಿಂದ ತುಂಬಿದ ಕಣ್ಣುಗಳು ಬೆಂಕಿಯ ಚೆಂಡುಗಳಂತಿವೆ. ಅವಳ ಕಂಠ ಮಧುರವಾಗಿದ್ದರೂ ಮಾತು ಕರ್ಕಶವಾಗಿದೆ. ಬೀದಿಯುದ್ದಕ್ಕೂ ಪ್ರತೀಕಾರದ ಘೋರ ಶಾಪವನ್ನು ಹಾಕುತ್ತಾ ಬಂದಿದ್ದಾಳೆ. ಅವಳ ಅವತಾರವನ್ನು ನೋಡಿ ಜನರೆಲ್ಲಾ ಭಯಭೀತರಾಗಿದ್ದಾರೆ ಮತ್ತು ಅವಳ ಬಗ್ಗೆ ಪಿಸುಗುಟ್ಟುತ್ತಿದ್ದಾರೆ. ಅವಳು ಈ ನಾಡಿನ ಬಗ್ಗೆ ದ್ವೇಷಪೂರಿತಳಾಗಿದ್ದಾಳೆ. ರಾಜರ ಬಗ್ಗೆಯೂ ಕೋಪಾವಿಷ್ಟಳಾಗಿದ್ದಾಳೆ. ಯಾರಿಂದಲೂ ಅವಳ ಕೋಪವನ್ನು ಇಳಿಸಿ ಸಮಾಧಾನಪಡಿಸಲು ಸಾಧ್ಯವಾಗುತ್ತಿಲ್ಲ. ಸ್ವತಃ ರಕ್ಷಕರು ಅವಳ ನೋಟಕ್ಕೆ ಹೆದರುತ್ತಿದ್ದಾರೆ. ಅವಳ ಅಸ್ತಿತ್ವ ಪವಿತ್ರ ಕೋಪವನ್ನು ಎತ್ತಿ ತೋರುತ್ತಿದೆ. ಅವಳು ಯಾವುದೋ ಪವಿತ್ರ ದೈವೀ ಶಕ್ತಿಯನ್ನು ಪಡೆದಂತಿದೆ. ಯಾರೂ ಅವಳ ಕೋಪವನ್ನಾಗಲಿ ಅಥವಾ ಪಕ್ಕೊತ್ತಾಯವನ್ನಾಗಲಿ ವಿರೋಧಿಸುವುದಕ್ಕೆ ಆಗುತ್ತಿಲ್ಲ.

ಮಹಾರಾಜ : [ರಾಣಿಯನ್ನು ಕುರಿತು] ಪ್ರಿಯಳೇ, ನನ್ನ ಅವಿಶ್ರಾಂತ ಕಾರ್ಯತತ್ಪರತೆಯನ್ನು ನೋಡಿದೆಯಾ? ಯಾರೋ ಮೂಢಳೋ, ಅಸಂತೃಪ್ತಳೋ ಅಥವಾ ಹುಚ್ಚಳೋ ಬುದ್ಧಿ ಭ್ರಮಿತಳಾಗಿ ಜೋರಾಗಿ ಕಿರುಚುತ್ತಿರಬೇಕು. ರಾಜರ ಈ ಸಚಿವನೂ ಭಯಭೀತನಾಗಿದ್ದಾನೆ. ಅವನೇ ಹೇಳುತ್ತಿರುವಂತೆ ಅರಮನೆಯ ರಕ್ಷಕರೂ ಅವಳ ನೋಟಕ್ಕೆ ಹೆದರುತ್ತಿದ್ದಾರಂತೆ. ಹೀಗಿರುವಾಗ ರಾಜನು ಏಕಾಂತವನ್ನು ಬಿಡಲೇಬೇಕು. ಅವಳಿಗೆ ದರ್ಶನ ನೀಡಿ, ಅವಳ ಕುಂದುಕೊರತೆಗಳನ್ನು ಕೇಳಿ, ಪರಿಹಾರವನ್ನು ಒದಗಿಸಲೇಬೇಕು.

ಸಚಿವ : ಪ್ರಭು ನನ್ನ ಮಾತನ್ನು ನಂಬಿರಿ. ಅವಳು ನಿಶ್ಚಿತವಾಗಿಯೂ ದುಷ್ಟಶಕ್ತಿಯ ಪ್ರತಿನಿಧಿ. ಅವಳ ಉದ್ದೇಶ ಏನೆಂದು ಹೇಳುತ್ತಿಲ್ಲ. ಖಂಡಿತವಾಗಿಯೂ ಅವಳಿಗೆ ಯಾವುದೋ ದುಷ್ಟ ಸಂಕಲ್ಪವಿದ್ದಂತಿದೆ. ಆದ್ದರಿಂದಲೇ ತಮ್ಮ ಸಲಹೆಯನ್ನು ಪಡೆಯಲು ನಿಮ್ಮ ಏಕಾಂತದ ನಡುವೆ ಪ್ರವೇಶಿಸಬೇಕಾಯಿತು.

ಮಹಾರಾಜ : ನನಗೆ ತಿಳಿದಿರುವಂತೆ ಸಚಿವರಾದವರು ರಾಜರಿಗೆ ಸಲಹೆ ಸೂಚನೆಗಳನ್ನು ನೀಡುವುದು ಸಂಪ್ರದಾಯ. ಅದು ಬಿಟ್ಟು ನೀವೇ ನನ್ನ ಸಲಹೆ ಕೇಳುತ್ತಿದ್ದೀರಿ. ನಿಮ್ಮ ಅನುಭವ, ಬುದ್ಧಿವಂತಿಕೆಗಳೆಲ್ಲ ಮಂಕಾದವೆ? ಇಂತಹ ಸಂದರ್ಭಗಳಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ಮರೆತಿರಾ? ಆ ಹೆಂಗಸನ್ನು ಇಲ್ಲಿಗೆ ಕರೆದುಕೊಂಡು ಬನ್ನಿ. ಅವಳು ಏನು ಬೊಗಳಬೇಕಾಗಿದೆಯೋ ಅದನ್ನು ನನ್ನ ಎದುರಿಗೆ ಬೊಗಳಲಿ.

ಸಚಿವ : ಪ್ರಭುಗಳೇ, ತಾವು ಅವಳನ್ನು ನೋಡುವುದು ಬೇಡ. ಅವಳನ್ನು ಬಂಧಿಸಿ ಕಾರಾಗೃಹಕ್ಕೆ ಕಳುಹಿಸುವ ಅಥವಾ ನಮ್ಮ ಗಡಿಯಿಂದಾಚೆಗೆ ಸಾಗಿಸುವ ಆದೇಶ ನೀಡಿ ಸಾಕು. ತಮ್ಮ ಪವಿತ್ರ ವ್ಯಕ್ತಿತ್ವಕ್ಕೆ ಕುಂದು ಬರುವಂತಹ ಮಾತುಗಳನ್ನಾಡುತ್ತಿದ್ದಾಳೆ. ದೈವದೂಷಣೆ ಮಾಡುತ್ತಿದ್ದಾಳೆ ಮತ್ತು ತಮ್ಮ ಆಳ್ವಿಕೆಯ ನ್ಯಾಯತತ್ಪರತೆಯನ್ನೇ ಪ್ರಶ್ನಿಸುತ್ತಿದ್ದಾಳೆ.

ಮಹಾರಾಜ : ನನ್ನ ಸಲಹೆಯನ್ನು ಕೇಳಿ ಅದನ್ನು ನೀವೇ ನೀಡುತ್ತಿರುವಿರಲ್ಲ. ನಿಮ್ಮ ಈ ವರ್ತನೆ ವಿಚಿತ್ರವಾಗಿದೆ. ಆ ಹೆಂಗಸು ಯಾರೇ ಆಗಿರಲಿ ನಿಮ್ಮ ತಾರ್ಕಿಕ ಬುದ್ಧಿಶಕ್ತಿಯನ್ನು ತಲೆಕೆಳಗು ಮಾಡುವಷ್ಟು ಪ್ರಭಾವಶಾಲಿಯಾಗಿದ್ದಾಳೆ ಎಂದಹಾಗಾಯಿತು. ತರ್ಕಬದ್ಧವಲ್ಲವಾದರೂ ಅವಳು ಕುತೂಹಲಿತಳಾಗಿರುವಂತೆ ಕಾಣುತ್ತಿದೆ. ಅವಳನ್ನು ನೋಡಿ, ಅವಳ ಮಾತುಗಳನ್ನು ಕೇಳುವುದಕ್ಕಾದರೂ ಅವಳ ಬೇಡಿಕೆಯನ್ನು ಅಂಗೀಕರಿಸಬೇಕಿದೆ. ಅವಳಿಗೆ ಭೇಟಿಯನ್ನು ಮಂಜೂರು ಮಾಡಿದ್ದೇನೆ. ಕರೆದುಕೊಂಡು ಬನ್ನಿ.

ಮಹಾರಾಣಿ : ಪ್ರಭುಗಳೇ, ಕೃಪೆಯಿಟ್ಟು ಸಚಿವರ ಸಲಹೆಯನ್ನು ಮಂಜೂರು ಮಾಡಿ. ಅವಳಿಗೆ ಅಪೇಕ್ಷಿತವಾದ ವ್ಯಕ್ತಿತ್ವ ಇದ್ದಂತೆ ಇಲ್ಲ. ನಮ್ಮ ಸಂಜೆಯ ಏಕಾಂತವನ್ನು ಭಂಗಮಾಡುತ್ತಿದ್ದಾಳೆ. ಬಹುಶಃ ಅವಳಿಗೆ ಒದಗಿರುವ ಅವಸ್ಥೆಯೇ ಅವಳ ವಿಧಿಯಾಗಿರಬಹುದು. ಈ ಸಂಜೆ ನನ್ನದು ಎಂಬುದನ್ನು ಮರೆಯಬೇಡಿ.

ಮಹಾರಾಜ : ದೇವಿ ಹತಾಶಳಾಗಬೇಡ. ನಮಗೆ ಅನಪೇಕ್ಷಿತವಾದ ಮನರಂಜನೆ ಸಿಗುತ್ತದೆಂಬ ಭರವಸೆಯನ್ನು ನೀಡುತ್ತೇನೆ.

ಸಚಿವ : ಪ್ರಭುಗಳೇ, ನಗರದಲ್ಲಿ ಈ ದಿನ ವಿಚಿತ್ರವಾದ ಘಟನೆಗಳು ಸಂಭವಿಸುತ್ತಿವೆ. ಸಾರ್ವಜನಿಕರಲ್ಲಿ ಅಶಾಂತಿ ಏರ್ಪಟ್ಟಿದೆ. ಸಹಜವಾದ ಕೆಲಸಗಳು ಸ್ಥಗಿತವಾಗಿವೆ. ವರ್ತಕರು ಅಂಗಡಿಗಳನ್ನು ಮುಚ್ಚಿದ್ದಾರೆ. ಕುಶಲಕರ್ಮಿಗಳು ತಮ್ಮ ಕೆಲಸಗಳಲ್ಲಿ ತೊಡಗಿಲ್ಲ. ಮಹಿಳೆಯರು ಎಂದಿನಂತೆ ವೈಗೈ (Vaigai) ನದೀ ತೀರದಲ್ಲಿ ಬಟ್ಟೆ ಒಗೆಯುತ್ತ ಹರಟೆ ಹೊಡೆಯುತ್ತಿಲ್ಲ. ಬ್ರಾಹ್ಮಣರು ದೈನಂದಿನ ಮಂತ್ರ ಘೋಷಣೆ ಮಾಡುತ್ತಿಲ್ಲ. ಪ್ರಶಾಂತತೆಯಿಂದ ಚಲಿತರಾಗದ ಬೌದ್ಧ ಭಿಕ್ಷುಗಳು ಸಹ ಇಂದು ಅಶಾಂತರಾಗಿದ್ದಾರೆ. ಪ್ರತಿಯೊಬ್ಬರೂ ತಮ್ಮ ಸುರಕ್ಷತೆಯ ಬಗ್ಗೆ ಶಂಕಿತರಾಗಿದ್ದಾರೆ. ಯಾರೊಬ್ಬರೂ ಗಟ್ಟಿಯಾಗಿ ಮಾತನಾಡುವ ಧೈರ್ಯ ಮಾಡುತ್ತಿಲ್ಲ, ಬೀದಿ ಚೌಕಗಳಲ್ಲಿ ಅಥವಾ ದಾರಿಗಳಲ್ಲಿ ನಿಂತು ಪಿಸುಗುಟ್ಟುತ್ತಿದ್ದಾರೆ. ಕಳ್ಳರು, ಕೊಲೆಗಡುಕರು, ಸಂಶಯಾಸ್ಪದ ವ್ಯಕ್ತಿಗಳು ಮಾತ್ರ ಮಾತನಾಡುತ್ತಿದ್ದಾರೆ. ಸಭ್ಯರು ಯಾರೂ ಬಾಯಿ ಬಿಡುತ್ತಿಲ್ಲ. ಎಲ್ಲೆಲ್ಲೂ ಗಾಬರಿ, ಭೀತಿಗಳು ತಾಂಡವವಾಡುತ್ತಿವೆ. ಯಾರೂ ಯಾವ ಕಾರಣವನ್ನೂ ಕೊಡುತ್ತಿಲ್ಲ. ಯಾರೂ ದೂರು ನೀಡುತ್ತಿಲ್ಲ. ಯಾರೊಬ್ಬರನ್ನೂ ತಪ್ಪಿತಸ್ಥರನ್ನಾಗಿಸಿಲ್ಲ ಆದರೆ ಎಲ್ಲರೂ ಸಂಕಟವನ್ನೇ ಉಸಿರಾಡುತ್ತಿರುವಂತಿದೆ. ಜನರೆಲ್ಲ ದಂಡಾಜ್ಞೆಯ ಕತ್ತಿ ತೂಗುತ್ತಿರುವ ಭಾವದಿಂದಿದ್ದಾರೆ.

ಮಹಾರಾಜ : ಇಷ್ಟೆಲ್ಲಾ ಅರಮನೆಯ ಬಾಗಿಲಿನಲ್ಲಿರುವ ಹೆಂಗಸಿನಿಂದ ಆಗಿರುವುದೆ?

ಸಚಿವ : ಹೌದು ಮಹಾಪ್ರಭು. ಭೂಮಿಯ ಮೇಲೆ ಅವಳಿಡುವ ಹೆಜ್ಜೆಯ ಗುರುತುಗಳನ್ನು ಜನರು ಪೂಜಿಸುತ್ತಿದ್ದಾರೆ. ಅವಳ ಮಾತುಗಳು ಜನರ ಹೃದಯಗಳನ್ನು ಸೀಳುವ ಬಾಣಗಳಂತಿವೆ. ಅವಳ ಕೋಪಾಗ್ನಿ ಜ್ವಾಲಾಮುಖಿಯಂತೆ ಎಲ್ಲವನ್ನೂ ಸುಟ್ಟು ಭಸ್ಮಮಾಡಿ ಭಕ್ಷಿಸುತ್ತಿದೆ. ದಿವ್ಯಳಾದ ಅವಳ ಎದುರು ಯಾರೂ ಪ್ರತಿಭಟಿಸುತ್ತಿಲ್ಲ. ಬೆಂಕಿಗೆ ಬೀಳುವ ಒಣಹುಲ್ಲಿನಂತೆ ಜನರು ಅವಳನ್ನು ಹಿಂಬಾಲಿಸುತ್ತಿದ್ದಾರೆ.

ಮಹಾರಾಜ : ನೀನು ಅವಳನ್ನು ದುಷ್ಟಳೆನ್ನುವೆ, ಮತ್ತೆ ದಿವ್ಯಳೆನ್ನುವೆ! ಇದು ಹೇಗೆ ಸಾಧ್ಯ? ಅವಳೇನಾದರೂ ಸ್ವರ್ಗದ ದಿವ್ಯಶಕ್ತಿಯೇ ಆಗಿದ್ದರೆ ಅವಳು ಈ ನಗರಕ್ಕೆ ಹಾಕುತ್ತಿರುವ ಶಾಪವನ್ನು ಯಾರೂ ತಡೆಯುವುದಕ್ಕಾಗುವುದಿಲ್ಲ. ಅಂತಹವಳನ್ನು ಸೆರೆಮನೆಗೆ ಕಳುಹಿಸುವುದು ಹೇಗೆ? ನಿನ್ನದು ಮಂತ್ರಿಗೆ ಇರಬೇಕಾದ ಬುದ್ಧಿವಂತಿಕೆಯ ಮಾತಲ್ಲ. ಮಂತ್ರಿಯ ಸಲಹೆ ಎಲ್ಲ ಕಾರಣಗಳ ಪೂರ್ವಾಪರಗಳನ್ನು ಪ್ರಶಾಂತವಾಗಿ ಪರಿಶೀಲಿಸಿ, ಯಾವ ಭಾವೋದ್ವೇಗಗಳಿಗೂ ಒಳಪಡದೆ ತೀರ್ಮಾನವನ್ನು ನೀಡುವಂತಿರ

ಬೇಕು. ಆದರೆ ನೀನು ಯಾವುದೋ ಅಗೋಚರ ಭೀತಿಗೆ ಒಳಪಟ್ಟು ಮಾತನಾಡುತ್ತಿರುವಂತೆ ಕಾಣುತ್ತಿದೆ. ರಾಜನಿಗೆ ಸಲಹೆ ನೀಡಲು ನೀವು ಅರ್ಹರಲ್ಲ.

ಸಚಿವ : ಮಹಾಪ್ರಭು, ಇದು ನಿರ್ಭೀತವಾಗಿ ತೀರ್ಪು ನೀಡುವಂತಹ ಪ್ರಕರಣವಲ್ಲ. ಆಕೆ ನಮ್ಮೆಲ್ಲರ ಹೃದಯಗಳಲ್ಲಿಯೂ ಭಯ ಭೀತಿಗಳನ್ನು ತುಂಬಿಬಿಟ್ಟಿದ್ದಾಳೆ. ನಾಗರಿಕ ಸಭ್ಯತೆಗಳ ಎಲ್ಲೆಯನ್ನು ಮೀರಿ ಸಾಮಾನ್ಯ ಮೌಲ್ಯಗಳ ನಿಯಂತ್ರಣಕ್ಕೆ ಸಿಕ್ಕದೆ, ಲಿಂಗವಿವೇಚನೆಯ ಜಾಗೃತಿಯೂ ಇಲ್ಲದೆ, ಅವಳು ಹೆಂಗಸೆಂಬುದನ್ನು ಮರೆತು ಬೀದಿಗಳಲ್ಲಿ ನಿರ್ಭೀತಳಾಗಿ ನಡೆಯುತ್ತಾ ಅಪರಿಚಿತವಾದ ಈ ನಗರದಲ್ಲಿ ಅಜಾತಶತ್ರುವಿನಂತೆ ಇದ್ದಾಳೆ. ಅವಳ ಜೊತೆ ಸೈನ್ಯವೇ ವ್ಯವಹರಿಸಲಿ ಪ್ರಭು!

ಮಹಾರಾಜ : ಗೆಳೆಯ, ಸಚಿವರ ಬುದ್ಧಿವಂತಿಕೆಯೆಲ್ಲ ದಿವಾಳಿಯಾಗಿ ರಾಜ್ಯದಲ್ಲಿರುವ ಕಾನೂನುಗಳನ್ನು ಜಾರಿಗೊಳಿಸಲು ಸಾಧ್ಯವಿಲ್ಲದಾಗ ಮಾತ್ರ ಸಂದರ್ಭವನ್ನು ನಿಯಂತ್ರಿಸಲು ಸೈನ್ಯವನ್ನು ಬಳಸಬೇಕು. ಇದೇನು ಹುಚ್ಚುತನ ಈಗ? ಹೆಂಗಸೊಬ್ಬಳು ಅರಮನೆಯ ಬಾಗಿಲಿಗೆ ಬಂದು ರಾಜನಿಂದ ನ್ಯಾಯ ಕೇಳುತ್ತಿದ್ದಾಳೆ. ಸಚಿವರು ಅವಳೊಂದಿಗೆ ಸೈನ್ಯವೇ ವ್ಯವಹರಿಸಲಿ ಎನ್ನುತ್ತಿದ್ದಾರೆ. ಇದರಲ್ಲಿ ಏನೋ ನಿಗೂಢತೆ ಅಡಗಿದೆ. ಆಕೆಯ ಹಕ್ಕೊತ್ತಾಯ ನ್ಯಾಯಪರವಾಗಿದ್ದರೆ, ಅದೆಂತಹ ಬೆಲೆ ತೆತ್ತಾದರೂ ಸರಿ ಅವಳಿಗೆ ಅದನ್ನು ಒದಗಿಸಲೇಬೇಕು. ನಾನು ಅವಳನ್ನು ತಕ್ಷಣ ನೋಡಬೇಕು.

ಮಹಾರಾಣಿ : ಪ್ರಭುಗಳೇ, ನೀವು ಅವಳನ್ನು ನೋಡುವುದು ಬೇಡ. ನಾನು ಇಂದು ಅಪಶಕುನದ ದುಃಸ್ವಪ್ನಗಳನ್ನು ನೋಡಿದ್ದೇನೆ. ಈ ಹೆಂಗಸೇ ನಮ್ಮನೆಲ್ಲಾ ಹಾಳುಮಾಡುವವಳು. ನಮ್ಮ ಮಂತ್ರಿಗಳು ಬುದ್ಧಿವಂತರು. ಅವರ ಮಾತಿಗೆ ಬೆಲೆಕೊಡಿ ಪ್ರಭು. ನಾನು ನಿಮ್ಮನ್ನು ಬೇಡುತ್ತೇನೆ, ಅವರ ಮಾತಿಗೆ ಬೆಲೆಕೊಡಿ.

ಮಹಾರಾಜ : (ಸ್ವಗತ) ನಾನು ರಾಜನಲ್ಲವೆ? ಪ್ರಭು, ಒಡೆಯ, ರಕ್ಷಕನೆಂದು ನಂಬಿರುವ ನನ್ನ ಪ್ರಜೆಗಳಿಗೆ ನ್ಯಾಯದ ಕಾರಂಜಿಯ ನೀರಿನ ಬುಗ್ಗೆಯನ್ನು ನೀಡಿ ತಣಿಸಲಾರೆನೆ? [ಕನ್ನಗಿ ಪ್ರವೇಶಿಸುತ್ತಾಳೆ. ಅರಮನೆಯ ರಕ್ಷಕದಳದ ಮುಖಂಡನೂ ಬರುತ್ತಾನೆ]

ಕನ್ನಗಿ : (ರಾಜನನ್ನು ಕುರಿತು) ನೀವು, ನೀವು ಈ ದೇಶದ ಜನರ ತಂದೆಯೆ? ನ್ಯಾಯವನ್ನು ಎತ್ತಿ ಹಿಡಿಯುವ ನ್ಯಾಯದೇವರೆ? ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸುವ ಪ್ರಭುಗಳೆ? ಈ ರಾಜ್ಯವನ್ನು ಆಳಲು ನೀವು ದೈವಾಜ್ಞಿತರಾಗಿರುವವರೆ?

ರಕ್ಷಕದಳದ ಮುಖಂಡ : ಮಹಾಸ್ವಾಮಿ, ಇವಳನ್ನು ತಡೆಯಲು ನಾವು ಬಹಳ ಪ್ರಯತ್ನಮಾಡಿದೆವು. ಆದರೆ ತಡೆಯಲಾಗಲಿಲ್ಲ.

ಮಹಾರಾಜ : ಯೋಚಿಸಬೇಡಿ. ಅವಳನ್ನು ಮಾತನಾಡಲು ಬಿಡಿ.

ಕನ್ನಗಿ : (ರಾಜನಿಗೆ ಬೆರಳು ತೋರಿಸುತ್ತಾ) ನೀವು ಪ್ರಸಿದ್ಧರಾದ ಪಾಂಡ್ಯರಾಜರ ವಂಶಸ್ಥರೇ?

ಮಹಾರಾಜ : ಈ ಪ್ರಸಿದ್ಧ ರಾಜನ ವಂಶದ ವಾರಸುದಾರನೇ ನಾನು. ನನ್ನ ಸ್ವಂತ ಭುಜಬಲದಿಂದ ರಾಜನಾಗಿದ್ದೇನೆ. ನನ್ನ ಸೈನ್ಯದ ಕಲಿತನದಿಂದ, ನನ್ನಾಳ್ವಿಕೆಯ ನ್ಯಾಯಪರತೆಯಿಂದ, ನನ್ನ ಪ್ರಜೆಗಳ ವಿಶ್ವಾಸದಿಂದ ರಾಜನಾಗಿರುವೆನು.

ಕನ್ನಗಿ : ಹಾಗಿದ್ದಲ್ಲಿ ನ್ಯಾಯನೀಡಬೇಕಾದ ಸಂದರ್ಭದಲ್ಲಿ ರಾಣಿಯ ಅಂತಃಪುರದಲ್ಲಿ ಏಕೆ ಅವಿತುಕೊಂಡಿರುವಿರಿ? ನಿಮ್ಮ ಅರಮನೆಗೆ ಏಕೆ ಇಷ್ಟು ಅಧಿಕ ರಕ್ಷಕ ಪಡೆ? ನಿಮ್ಮ ಮಂತ್ರಿಗಳೇಕೆ ಅವರ

ಬುದ್ಧಿವಂತಿಕೆಯನ್ನೆಲ್ಲಾ ಬಳಸಿ ಮೂರ್ಖತನದಿಂದ ನನ್ನನ್ನು ಬೆದರಿಸುತ್ತಿದ್ದಾರೆ? ನಿಮ್ಮ ಆಳ್ವಿಕೆಯ ನ್ಯಾಯ ಪರತೆ ಇದೇ ಏನು? ಹಾಗಾದರೆ ನೀನು ರಾಜನಲ್ಲ. ಪ್ರಜಾಹಿಂಸಕ, ಕಳ್ಳ!

ಸಚಿವ : ಅಪರಿಚಿತಳೇ, ನೀನು ಬೀದಿಯಲ್ಲಿ ಇರಲಿಲ್ಲವೆ? ನಿನ್ನ ಸೊಕ್ಕಿನ ಮಾತುಗಳಿಂದ ರಾಜರನ್ನು ನಿಂದಿಸುತ್ತ ಜನರನ್ನು ಭಯಪಡಿಸುತ್ತ ಇರಲಿಲ್ಲವೆ? ಮಹಾರಾಜರನ್ನು ಸಂಬೋಧಿಸುವಾಗ ಎಚ್ಚರಿಕೆಯಿಂದಿರು.

ಮಹಾರಾಜ : ತಾರುಣ್ಯದ ಹೆಣ್ಣೇ, ಗಂಡನನ್ನು ಕಳೆದುಕೊಂಡ ದುಃಖದಲ್ಲಿ ಮತಿಹೀನಳಾಗಿರುವೆಯಾ? ಅಥವಾ ದುಷ್ಟರ ಆಕ್ರಮಣಕ್ಕೆ ಸಿಕ್ಕಿ ನಿನಗೆ ಅನ್ಯಾಯವಾಗಿದೆಯೋ? ಅಕಾರಣವಾಗಿ ನಮ್ಮನ್ನು ನಿರಂಕುಶರೆಂದು ಜರಿಯುವುದು ಸರಿಯಲ್ಲ. ನೀನು ನ್ಯಾಯಕ್ಕೆ ಅರ್ಹಳೇ ಆದರೆ ಖಂಡಿತ ನಿನಗೆ ಅದನ್ನು ಒದಗಿಸುತ್ತೇವೆ. ನಮ್ಮ ರಾಜ್ಯಾಧಿಕಾರಕ್ಕೆ ಒಳಪಡುವ ಎಂತಹ ತಪ್ಪನ್ನಾದರೂ ಸರಿ, ಸರಿಪಡಿಸುತ್ತೇವೆ. ನೀನು ರಾಜನಿಂದ ನ್ಯಾಯವನ್ನು ಅಪೇಕ್ಷಿಸಿದರೆ ರಾಜನಿಗೆ ಸಲ್ಲಬೇಕಾದ ಗೌರವ ಮರ್ಯಾದೆಗಳನ್ನು ಮೊದಲು ಸಲ್ಲಿಸಬೇಕು. ಮುಖ ನೋಡಿದರೆ ಉತ್ತಮಳಂತೆ ಕಾಣುವೆ, ಮಾತು ಒರಟಾದರೂ ಹೃದಯ ಒಳ್ಳೆಯದಿದ್ದಂತೆ ಕಾಣುತ್ತಿದೆ. ನೀನು ರಾಜನಿಂದ ಅಪೇಕ್ಷಿಸುವುದಾದರೂ ಏನು?

ಕನ್ನಗಿ : ನನ್ನ ಗಂಡನನ್ನು ಅನ್ಯಾಯವಾಗಿ ಕೊಲ್ಲಲಾಗಿದೆ. ನಿಮ್ಮ ನಗರದಲ್ಲಿ ನನ್ನ ಗಂಡನಿಗೆ ಸಿಗದೇ ಹೋದ ನ್ಯಾಯವನ್ನು ಕೇಳಲು ಬಂದಿದ್ದೇನೆ. ಅಷ್ಟೇ ಅಲ್ಲ, ನನ್ನ ಗಂಡನ ಕೊಲೆಗೆ ಕಾರಣರಾದ ನಿಮ್ಮ ಮೇಲೆ ಸೇಡು ತೀರಿಸಿಕೊಳ್ಳಲು ಬಂದಿದ್ದೇನೆ.

ಮಹಾರಾಜ : ಇದು ರಾಜನಿಂದ ನ್ಯಾಯವನ್ನು ಕೇಳುವ ವಿಧಾನವಲ್ಲ. ಆದರೂ ನೀನು ಕೇಳುವುದು ಏನು ಎಂಬುದನ್ನು ವಿವರಿಸು. ನೀನು ಯಾರು? ಎಲ್ಲಿಂದ ಬಂದೆ? ನಿನ್ನ ಗಂಡ ಯಾರು? ಅವನು ಹೇಗೆ ಸತ್ತನು? ಅವನ ಸಾವಿಗೆ ನಾವು ಕಾರಣವೆಂದು ಹೇಗೆ ಆರೋಪಿಸುವೆ?

ಕನ್ನಗಿ : (ಗಟ್ಟಿಯಾಗಿ) ನಾನು ಪುಹರ್ ನಗರದ ಪ್ರಸಿದ್ಧ ವ್ಯಾಪಾರಿ ರಾಜಕುಮಾರನ ಮಗಳು. ನನ್ನ ಹೆಸರು ಕನ್ನಗಿ ಎಂದು. ನನ್ನ ಗಂಡನ ಹೆಸರು ಕೋವಲನ್ ಎಂದು. ಸಭ್ಯ ವಂಶಸ್ಥರಾದ ನಾವು ವಿಧಿವಶದಿಂದ ನಿಮ್ಮ ಈ ದೋಷಾರೋಪಿತ ನಗರಕ್ಕೆ ನಮ್ಮ ಭವಿಷ್ಯವನ್ನು ಹಸನು ಮಾಡಿಕೊಳ್ಳಲು ಸುರಕ್ಷಿತವಾದ ಸ್ಥಳವೆಂದು ಬಯಸಿ ಬಂದೆವು. ನನ್ನ ಅಮೂಲ್ಯವಾದ ಕಾಲ್ಕಡಗವನ್ನು ಮಾರಿ ವ್ಯಾಪಾರ ಮಾಡಿ ಬದುಕಲು ಬಂದೆವು. ನನ್ನ ಗಂಡ ನನ್ನ ಕಾಲ್ಕಡಗವನ್ನು ನಿಮ್ಮ ರತ್ನವ್ಯಾಪಾರಿಗೆ ಮಾರಲು ಬಂದರು. ಅವರ ಮೇಲೆ ಅರಮನೆಯಿಂದ ಅದನ್ನು ಕದ್ದಿರುವ ಆರೋಪ ಮಾಡಲಾಗಿದೆ ಮತ್ತು ಸ್ಥಳದಲ್ಲಿಯೇ ಕೊಲ್ಲಲಾಗಿದೆ. ನಿಮ್ಮ ಈ ಕ್ರೂರ ಕೃತ್ಯಕ್ಕೆ ನಾನು ಈಗ ಪ್ರತೀಕಾರ ಬಯಸಿ ಬಂದಿದ್ದೇನೆ.

ಮಹಾರಾಜ : ಕಳ್ಳನನ್ನು ಕೊಲ್ಲುವುದು ರಾಜಧರ್ಮವಲ್ಲವೆ?

ಕನ್ನಗಿ : ಅನ್ಯಾಯದ ರಾಜನೇ, ನೀನು ಕಳ್ಳನನ್ನು ಕೊಲ್ಲಲಿಲ್ಲ. ಒಬ್ಬ ಸಭ್ಯ ನಿರಪರಾಧಿಯನ್ನು ಕಳ್ಳನೆಂದು ಬಗೆದು ಕೊಂದು ನೀನೇ ಕಳ್ಳನಾಗಿರುವೆ.

ಮಹಾರಾಜ : ನಾವು ನಿನ್ನ ದೋಷಾರೋಪಿತ ಅಸಭ್ಯ ಮಾತುಗಳನ್ನು ನಿನ್ನ ನೋವಿನ ತೀವ್ರತೆಯನ್ನು ಗಮನಿಸಿ ಕ್ಷಮಿಸಬಲ್ಲೆವು. ನಮ್ಮ ತಾಳ್ಮೆ ಮತ್ತು ಕರುಣೆಗಳಿಗೆ ಎಲ್ಲೆ ಇಲ್ಲ. ಆದರೆ ನಿನ್ನ ಗಂಡನನ್ನು ಕಾಲ್ಕಡಗದ ಸಹಿತ ಹಿಡಿಯಲಾಗಿದೆ. ಅದೂ ಕಳ್ಳರೇ ಇಲ್ಲದ ಈ ನಾಡಿನಲ್ಲಿ ಕಳ್ಳತನಕ್ಕೆ ಕಾರಣವಿಲ್ಲದೆ ಹೊರಗಿನಿಂದ ಬಂದ ಕಳ್ಳನನ್ನು ಹಿಡಿದು ಶಿಕ್ಷಿಸದಿದ್ದರೆ ಈ ಕಳ್ಳತನದ ರೋಗ ಇಡೀ ರಾಜ್ಯವನ್ನೆಲ್ಲಾ ಆವರಿಸಿಕೊಳ್ಳುತ್ತದೆ.

ಕನ್ನಗಿ : ನನ್ನ ಗಂಡನೇ ಕಳ್ಳನೆಂಬುದಕ್ಕೆ ನಿಮಗಿರುವ ಆಧಾರವೇನು?

ಸಚಿವ : ಮಹಾರಾಣಿಯವರ ಕಾಲ್ಕಡಗ ಅವನ ವಶದಲ್ಲಿ ಇದ್ದದ್ದೇ ಆಧಾರ ಮತ್ತು ಅದು ತನ್ನದು ಎಂದು ಒಪ್ಪಿಕೊಂಡಿದ್ದಾನೆ. ಇದರಿಂದ ಅವನಾಗಿ ಅವನೇ ತಾನು ಕಳ್ಳನೆಂಬುದನ್ನು ಒಪ್ಪಿಕೊಂಡಂತೆ. ಇದಿಷ್ಟು ಆಧಾರ ಸಾಲದೆ?

ಕನ್ನಗಿ : ಕಾಲ್ಕಡಗ ಅವರ ವಶದಲ್ಲಿದ್ದುದೇ ಅವರನ್ನು ಹೇಗೆ ಕಳ್ಳನೆಂದು ಸಾಬೀತುಪಡಿಸುತ್ತದೆಯೇ?

ಮಹಾರಾಜ : ಕಳ್ಳತನ ಮಾಡಿದ ವಸ್ತು ಕಳ್ಳನ ವಶದಲ್ಲಿರುವುದು ಅವನನ್ನು ಕಳ್ಳನೆಂದು, ದುರಾತ್ಮನೆಂದು ಸಾಬೀತುಪಡಿಸುವುದಿಲ್ಲವೆ?

ಕನ್ನಗಿ : ಅವರು ಕಾಲ್ಗಡಗ ಕದ್ದುದ್ದು ಎಂದು ಒಪ್ಪಿಕೊಂಡರೆ? ಅದು ಮಹಾರಾಣಿಯವರದೇ ಎಂಬುದು ನಿಮಗೆ ಗೊತ್ತೆ? ಅದು ನನ್ನದೆಂದು ನಾನು ಹೇಳುತ್ತೇನೆ.

ಮಹಾರಾಜ : ಪ್ರೀತಿಯ ಹೆಣ್ಣೇ, ಈ ಕಾಲ್ಕಡಗವನ್ನು ತಯಾರಿಸಿದ ರತ್ನವ್ಯಾಪಾರಿ ಇದನ್ನು ನೋಡಿದ ತಕ್ಷಣ ಗುರುತಿಸಿದ್ದಾನೆ. ಒಡವೆಯನ್ನು ತಯಾರಿಸಿದವನು ಅದು ಯಾರದೆಂದು ಗುರುತಿಸುವುದಕ್ಕಾಗುವುದಿಲ್ಲವೆ?

ಕನ್ನಗಿ : ಮೂರ್ಖರಾಜನೇ, ಸುಭದ್ರವಾದ ನಿಮ್ಮ ಅರಮನೆಯಿಂದ ಕದ್ದ ಒಡವೆಯನ್ನು ಅದನ್ನು ತಯಾರಿಸಿದ ವ್ಯಾಪಾರಿಗೇ ಮಾರುವಷ್ಟು ಕಳ್ಳ ಅವಿವೇಕಿ ಎಂದು ಭಾವಿಸುವೆಯಾ? ರತ್ನ ವ್ಯಾಪಾರಿಯೇ ಕಳ್ಳನಾಗಿದ್ದು ತನ್ನ ಕಳ್ಳತನದ ಪಾಪಭೀತಿಯಿಂದ ಮುಕ್ತನಾಗಲು ನನ್ನ ಗಂಡನ ಮೇಲೆ ಏಕೆ ಅದನ್ನು ಆರೋಪಿಸಿರಬಾರದು?

ಮಹಾರಾಜ : ನಮ್ಮ ರತ್ನವ್ಯಾಪಾರಿ ಪ್ರಾಮಾಣಿಕನು ಮತ್ತು ಬಹಳ ದೀರ್ಘಕಾಲದಿಂದ ನಮ್ಮ ಸೇವೆ ಮಾಡುತ್ತಿದ್ದಾನೆ. ಅವನ ಪ್ರಾಮಾಣಿಕತೆಯ ಬಗ್ಗೆ ನಮಗೆ ನಂಬಿಕೆ ಇದೆ.

ಕನ್ನಗಿ : ಅದನ್ನು ನಾನು ಈಗ ಸ್ಪಷ್ಟವಾಗಿ ನೋಡುತ್ತಿದ್ದೇನೆ. ಅವನ ಅಪರಾಧಕ್ಕೆ ನೀವು ಮೂರ್ಖತನದ ಸಹಭಾಗತ್ವವನ್ನು ನೀಡುತ್ತಿದ್ದೀರಿ. ನೀವು ಒಬ್ಬ ಮೂರ್ಖನನ್ನು ನಂಬಿದ್ದೀರಿ. ನಿರಪರಾಧಿಯಾದ ನನ್ನ ಗಂಡನ ಮೇಲೆ ಕಳ್ಳತನದ ಆರೋಪ ಮಾಡಿದ ಪ್ರಧಾನ ಆರೋಪಿ ನೀವು ಪ್ರಾಮಾಣಿಕನೆಂದು ನಂಬಿರುವ ರತ್ನವ್ಯಾಪಾರಿಯೆ!

ಸಚಿವ : ಹೇ ಹೆಣ್ಣೇ, ನಿನ್ನ ಬಾಯಿ ಬಿಗಿಹಿಡಿಯದಿದ್ದರೆ ರಕ್ಷಕರಿಂದ ನಿನ್ನನ್ನು ಇಲ್ಲಿಂದ ಹೊರಗೆ ಓಡಿಸಬೇಕಾಗುತ್ತದೆ.

ಕನ್ನಗಿ : (ಸಚಿವನನ್ನು ನೋಡುತ್ತಾ) ಬಹುಶಃ ನನ್ನನ್ನು ಅರಮನೆ ಪ್ರವೇಶಿಸಲು ತಡೆದಂತೆ ಅಲ್ಲವೆ? (ಮಹಾರಾಣಿಯ ಕಡೆ ತಿರುಗಿ) ದುರದೃಷ್ಟದ ಮಹಾರಾಣಿಯವರೇ, ನಿಮ್ಮ ಕಾಲ್ಕಡಗ ಎಂದು ಕಳೆದುಹೋಯಿತೆಂದು ಹೇಳುವಿರಾ?

ಮಹಾರಾಣಿ : ಸುಮಾರು ಹತ್ತು ದಿನಗಳ ಹಿಂದೆ.

ಕನ್ನಗಿ : ನಾನು ನನ್ನ ಗಂಡ ನಿನ್ನೆಯಷ್ಟೇ ಈ ನಗರಕ್ಕೆ ಬಂದಿದ್ದೇವೆ. ಇದಕ್ಕೆ ಆಧಾರವಿದೆ. ನಿನ್ನೆ ಬಂದ ನನ್ನ ಗಂಡ ಹತ್ತು ದಿನಗಳ ಹಿಂದೆ ಕಳುವಾಗಿರುವ ರಾಣಿಯ ಕಾಲ್ಕಡಗವನ್ನು ಕದಿಯಲು ಹೇಗೆ ಸಾಧ್ಯ?

ಸಚಿವ : ಜಾಣ ಕಳ್ಳನಿಗೆ ಅದು ಸುಲಭ. ಅವನು ಬೇರೊಬ್ಬನಿಂದ ಈ ಕೆಲಸ ಮಾಡಿಸಿರಬಹುದು. ಅರಮನೆಯ ಸೇವಕರಿಗೆ ಲಂಚಕೊಟ್ಟು ಕಳವು ಮಾಡಿಸಿರಬಹುದು. ಸಕಾಲದಲ್ಲಿ ನಗರಕ್ಕೆ ಬಂದು ಮಾಲು ಪಡೆದಿರಬಹುದು. ಆದ್ದರಿಂದ ಕಳ್ಳತನ ಮಾಡಿಸಿದವನೂ ಮಾಡಿದವನಂತೆ ಕಳ್ಳನೇ ಸರಿ.

ಕನ್ನಗಿ : ನೀವು ಕಳ್ಳನನ್ನು ಪತ್ತೆ ಮಾಡಿದ ಬಗೆ ಹೇಗೆ? ಅವನೇ ಕಳ್ಳನೆಂಬುದನ್ನು ನಿಮಗೆ ಮೊದಲು ತಿಳಿಸಿದವರು ಯಾರು? ಸುದ್ದಿ ತಿಳಿದ ತಕ್ಷಣ ನೀವು ಏನು ಕ್ರಮ ತೆಗೆದುಕೊಂಡಿರಿ?

ಮಹಾರಾಜ : ನಮ್ಮ ರತ್ನವ್ಯಾಪಾರಿ ಇಂದು ಬೆಳಿಗ್ಗೆ ಅರಮನೆಗೆ ಬಂದು ಯಾರೋ ಒಬ್ಬ ಅಪರಿಚಿತ ವ್ಯಕ್ತಿ ಕಾಲ್ಕಡಗ ಒಂದನ್ನು ಮಾರಲು ಅವನ ಮನೆಬಾಗಿಲಿನಲ್ಲಿರುವುದಾಗಿಯೂ, ಆ ಕಾಲ್ಕಡಗವೇ ಅಂತಃಪುರದಲ್ಲಿ ಕಳುವಾಗಿರುವುದೆಂದೂ ತಿಳಿಸಿದನು.

ಕನ್ನಗಿ : ಕಾಲ್ಕಡಗ ಕಳುವಾಗಿದ್ದ ವಿಷಯ ಅವನಿಗೆ ತಿಳಿಸಲಾಗಿತ್ತೆ? ಇಲ್ಲವಾದರೆ ಅರಮನೆಯಲ್ಲಾಗಿದ್ದ ಕಳ್ಳತನದ ಅರಿವು ಅವನಿಗೆ ಹೇಗೆ ಗೊತ್ತು?

ಮಹಾರಾಣಿ : ನಾನು ಕಳ್ಳತನದ ವಿಷಯ ಅವನಿಗೆ ತಿಳಿಸಿಲ್ಲ. ಕಳ್ಳತನ ಆದಮೇಲೆ ಅವನು ಅರಮನೆಗೆ ಬಂದಿಲ್ಲ.

ಮಹಾರಾಜ : (ರಾಣಿಯನ್ನು ಕುರಿತು) ನೀನೇ ಅವನಿಗೆ ಸುದ್ದಿ ಮುಟ್ಟಿಸಿರಬೇಕೆಂದು ನಾನು ಭಾವಿಸಿದ್ದೆ.

ಸಚಿವ : ಮಹಾಪ್ರಭು, ಈ ವಿಷಯದಲ್ಲಿ ರತ್ನವ್ಯಾಪಾರಿಗೆ ಕಳ್ಳತನದ ಸುದ್ದಿ ಮುಟ್ಟಿಸದೇ ಇರುವುದು ಮಹತ್ವದ ವಿಚಾರವಲ್ಲ. ಅರಮನೆಯಲ್ಲಿ ಅದು ಎಲ್ಲರಿಗೂ ತಿಳಿದಿತ್ತು. ಪ್ರಾಮಾಣಿಕನಾದ ನಮ್ಮ ರತ್ನವ್ಯಾಪಾರಿ ಯಾರಿಂದಲಾದರೂ ವಿಷಯ ತಿಳಿದುಕೊಂಡಿರಬಹುದು. ಅರಮನೆಯಲ್ಲಿ ಕಳುವಾದ ಕಾಲ್ಕಡಗವನ್ನು ನೋಡಿದ ತಕ್ಷಣ ತಮಗೆ ಸುದ್ದಿಯನ್ನು ಮುಟ್ಟಿಸಿರುವುದು ಅವನ ಕರ್ತವ್ಯ.

ಕನ್ನಗಿ : ಆದರೆ ಆ ಕಳ್ಳತನದ ವಿಷಯ ಅವನಿಗೆ ಯಾರೂ ತಿಳಿಸದಿದ್ದರೆ, ಅವನೇ ಕಳ್ಳನಾಗಿದ್ದರೆ ಮಾತ್ರ ಅವನು ಅದನ್ನು ಗುರುತಿಸಲು ಸಾಧ್ಯ.

ಸಚಿವ : ನಾನು ನಿನಗೆ ಹೇಳುತ್ತಿದ್ದೇನೆ, ಇದು ಸಾಮಾನ್ಯ ಲೋಕಜ್ಞಾನ. ರತ್ನ ವ್ಯಾಪಾರಿ ಪ್ರಾಮಾಣಿಕ ವ್ಯಕ್ತಿ, ಅರಮನೆಯ ಎಲ್ಲರಂತೆ ಅವನು ಕಳ್ಳನನ್ನು ಹುಡುಕುತ್ತಿದ್ದ.

ಕನ್ನಗಿ : ಕಳ್ಳನು ರತ್ನ ವ್ಯಾಪಾರಿಯ ಮನೆಯಲ್ಲಿದ್ದಾನೆಂಬುದನ್ನು ಕೇಳಿದಾಗ ನೀವು ಏನು ಮಾಡಿದಿರಿ?

ಮಹಾರಾಜ : ನಾವು ಅವನೊಂದಿಗೆ ರಕ್ಷಕರನ್ನು ಕಳುಹಿಸಿ, ಕಳ್ಳನ ಕೈಯಲ್ಲಿ ಇರುವ ಆಭರಣವನ್ನು ನಮ್ಮದೆಂದು ಖಚಿತಪಡಿಸಿಕೊಂಡು ವಶಪಡಿಸಿಕೊಳ್ಳುವಂತೆ ಆದೇಶಿಸಿದೆವು. ಅವನು ತಾನೇ ಅವರ ಯಜಮಾನನೆಂದು ಹೇಳಿದನಂತೆ. ಅನಂತರ ಅವನನ್ನು ವಿಚಾರಣೆಗೆ ಒಳಪಡಿಸಿ ನ್ಯಾಯ ಸ್ಥಾಪಿಸುವತ್ತ ಸಾಗಿದ್ದಾರೆ. ರಕ್ಷಕ ಮುಖಂಡನು ಉಳಿದ ಕಥೆಯನ್ನು ಹೇಳುತ್ತಾನೆ.

ರಕ್ಷಕದಳದ ಮುಖಂಡ : ನಾವು ಅಲ್ಲಿಗೆ ಹೋದಾಗ ಆ ಮನುಷ್ಯ ರತ್ನವ್ಯಾಪಾರಿಯ ಕಾರ್ಯಾಗಾರದಲ್ಲಿ ಕುಳಿತಿದ್ದ. ರತ್ನವ್ಯಾಪಾರಿ ಅವನೇ ಕಳ್ಳನೆಂದು ನಮಗೆ ತೋರಿಸಿದ. ನಾನು ಅವನ ಹತ್ತಿರಕ್ಕೆ ಹೋದೆ. ಕಾಲ್ಕಡಗವನ್ನು ತೋರಿಸುವಂತೆ ಕೇಳಿದೆ. ಅವನು ತೋರಿಸಿದ ಮತ್ತು ಅದು ತನ್ನ ಮಡದಿಯದು ಎಂದು ಹೇಳಿದ. ಆದರೆ ನನಗೆ ಗೊತ್ತಿತ್ತು ಅದು ಮಹಾರಾಣಿಯರದೆಂದು.

ಕನ್ನಗಿ : ಅದು ಮಹಾರಾಣಿಯರದೇ ಎಂದು ನಿನಗೆ ಹೇಗೆ ಗೊತ್ತು?

ರ.ದ.ಮುಖಂಡ : ನಾನೊಬ್ಬ ಪ್ರಾಮಾಣಿಕ ಸ್ವಾಮಿನಿಷ್ಠ ಸೇವಕ. ನಾನು ಅಂತಃಪುರದ ರಕ್ಷಕನಾಗಿ ಅವರೊಡನೆ ಮಾತನಾಡುವಾಗಲೆಲ್ಲ ಅವರ ಕಾಲುಗಳನ್ನು ಮಾತ್ರ ನೋಡುತ್ತಿದ್ದೆ, ಅವರ ದಿವ್ಯ ಮುಖವನ್ನಲ್ಲ. ಆದ್ದರಿಂದ ನಾನು ಆ ಕಾಲ್ಕಡಗ ಮಹಾರಾಣಿಯವರದೇ ಎಂದು ಗುರುತಿಸಬಲ್ಲೆನಾದೆ.

ಸಚಿವ : ಚೆನ್ನಾಗಿ ಹೇಳಿದೆ ಗೆಳೆಯ, ಮುಂದುವರಿಸು.

ಕನ್ನಗಿ : ನೀವು ಆಭರಣವನ್ನು ನೋಡಿದ ತಕ್ಷಣ ಕಳ್ಳನ ಮೇಲೆ ಕಳ್ಳತನದ ಆರೋಪ ಮಾಡಿದಿರಾ?

ರ.ದ.ಮು : ಇಲ್ಲ. ಹಾಗೆ ಮಾಡದಂತೆ ರತ್ನವ್ಯಾಪಾರಿ ಸೂಚನೆ ನೀಡಿದ್ದ. ಅವನ ಮೇಲೆ ನೇರವಾಗಿ ಕಳ್ಳತನದ ಆರೋಪ ಮಾಡಿದರೂ, ಸಂಶಯ ತೋರಿಸಿದರೂ ಅವನು ತಪ್ಪಿಸಿಕೊಳ್ಳಲು ಪ್ರಯತ್ನಿಸಬಹುದೆಂಬ ಎಚ್ಚರಿಕೆಯನ್ನು ನೀಡಿದ್ದ. ಆದ್ದರಿಂದ ನಾವು ರಾಜರು ಈ ಕಾಲ್ಕಡಗಕ್ಕೆ ಹೆಚ್ಚಿನ ಬೆಲೆಯನ್ನು ನಿಗದಿ ಮಾಡಲು ನಮ್ಮನ್ನು ಸಂಧಾನಕ್ಕೆ ಕಳುಹಿಸಿದ್ದಾರೆಂದು ನಟನೆ ಮಾಡಿದೆ.

ಕನ್ನಗಿ : ಒಬ್ಬ ಮನುಷ್ಯನನ್ನು ಅವನ ತಪ್ಪು ಸಾಬೀತು ಮಾಡದೆ ಕೊಲ್ಲುವುದಕ್ಕೆ ನಿನಗೆ ನಾಚಿಕೆಯಾಗಲಿಲ್ಲವೆ? ಅವರು ನಿಮ್ಮನ್ನು ನಂಬಿದ್ದರಿಂದ ನೀವು ಹೇಡಿತನದ ಹೊಡೆತ ಹೊಡೆದಿರಿ. ನೀವು ನಿಮ್ಮ ರಾಜನ ಗೌರವ ಮತ್ತು ನ್ಯಾಯಪರತೆಯನ್ನು ರಕ್ಷಿಸುವುದು ಹೀಗೇ ಏನು?

ರ.ದ.ಮು : ಆ ಮನುಷ್ಯನ ಮುಖ ಗೌರವಯುತವೂ, ಪ್ರಾಮಾಣಿಕವಾಗಿಯೂ ಇತ್ತು. ಅವನನ್ನು ನೋಡಿದರೆ ಕಳ್ಳನಂತೆ ಕಾಣುತ್ತಿರಲಿಲ್ಲ. ಅವನ ದೇಶದಲ್ಲಿ ಅವನು ಸ್ವಯಂಕೃತಾಪರಾಧದಿಂದ ಅನುಭವಿಸಿದ ಅವಿವೇಕದ ದುರ್ವಿಧಿಯ ಕಥೆಯನ್ನು ಹೇಳಿದ. ಅವನ ಹೆಂಡತಿಯ ಕೊನೆಯ ಆಭರಣವಾದ ಅಮೂಲ್ಯವಾದ ಕಾಲ್ಕಡಗವನ್ನು ಅನಿವಾರ್ಯವಾಗಿ ಮಾರಬೇಕಾಗಿ ಬಂದ ದುಸ್ಥಿತಿಯನ್ನು ವಿವರಿಸಿದ. ಆದರೆ ರತ್ನವ್ಯಾಪಾರಿ ಇದನ್ನು ನಂಬಲಿಲ್ಲ. ಅವನು ದುರಾತ್ಮನೆಂಬ ಭರವಸೆಯನ್ನು ಮಾತ್ರ ನಮಗೆ ನೀಡಿದ. ಅಲ್ಲದೆ ಜಾಣತನದ ಇಂತಹ ಮಾತುಗಳಿಂದ ಜನರನ್ನು ವಂಚಿಸುವ ಇವನನ್ನು ನಂಬಬೇಡಿ ಎಂದ. ಆ ಮನುಷ್ಯನ ಮೇಲೆ ಕಳ್ಳತನದ ಆರೋಪ ಮಾಡಲಾಗಿದೆ ಎಂಬ ಅನುಮಾನ ಅವನ ಮನಸ್ಸಿಗೆ ಬರುವಷ್ಟರಲ್ಲಿ ನಾವು ಅವನನ್ನು ಕೊಂದಿದ್ದೆವು. ಅವನು ಅಮಾಯಕನೆಂದು ನಮ್ಮನ್ನು ಬೇಡುತ್ತಲೇ ಇದ್ದ. ಆದರೆ ನಾವು "ಕಳ್ಳನಿಂದ ಆಭರಣ ವಶಪಡಿಸಿಕೊಂಡು ಅವನನ್ನು ಕೊಂದುಹಾಕಿರಿ" ಎಂಬ ರಾಜಾಜ್ಞೆಯನ್ನು ಜಾರಿಗೊಳಿಸಲೇ ಬೇಕಾಗಿತ್ತು. ನ್ಯಾಯಾನ್ಯಾಯದ ವಿವಕ್ಷಣೆಯ ತೀರ್ಪು ನೀಡುವ ಅಧಿಕಾರ ನಮ್ಮ ಕೈಯಲ್ಲಿ ಇರಲಿಲ್ಲ.

ಮಹಾರಾಜ : ಬಹುಶಃ ನಮ್ಮ ರಕ್ಷಕರು ಆತುರಪಟ್ಟಿರಬಹುದು. ಆದರೆ ಕಳವು ಮಾಡಿದ್ದ ಮಾಲು ಅವನು ವಶದಲ್ಲಿತ್ತು ಎಂಬುದು ದಿಟ. ಆದ್ದರಿಂದ ಅವನು ಪ್ರಾಣದ ಬೆಲೆಯನ್ನು ತೆರಲೇಬೇಕಾಯಿತು. ಯುವಹೆಣ್ಣೇ, ಈಗಲಾದರೂ ನಾವು ನ್ಯಾಯಪರರಾದವರು ಎಂಬುದನ್ನು ಒಪ್ಪಿಕೊಳ್ಳುವೆಯಾ? ನಿನ್ನ ದುಃಖವನ್ನು ಶಮನಗೊಳಿಸಲು ನಮ್ಮ ಇತಿಮಿತಿಯಲ್ಲಿ ಪ್ರಯತ್ನಿಸುತ್ತೇವೆ. ಅಮಾಯಕರನ್ನು ಶಿಕ್ಷಿಸುವುದು ನಮ್ಮ ಉದ್ದೇಶವಲ್ಲ. ನಿನ್ನ ಗಂಡನ ಅಪರಾಧಗಳಿಗಾಗಿ ನೀನು ಕಷ್ಟಪಡದಂತೆ ನಾವು ನೋಡಿಕೊಳ್ಳುತ್ತೇವೆ.

ಕನ್ನಗಿ : ನೀವು ನನ್ನ ದುಃಖಕ್ಕೆ ಕಾರಣರಾದವರು. ಅದನ್ನು ಶಮನಗೊಳಿಸಲು ಏನೂ ಮಾಡಬಲ್ಲಿರಿ? ನಿಮ್ಮಿಂದ ನನ್ನ ಗಂಡನನ್ನು ಬದುಕಿಸುವುದಕ್ಕೆ ಆಗುತ್ತದೆಯೆ? ಅವರ ಕೊಲೆಗೆ ನೀವೇ ಕಾರಣರು ಎಂದು ನಾನು ನೇರವಾಗಿ ಆರೋಪಿಸುತ್ತಿದ್ದೇನೆ. ಅವರಿಗೆ ನಿರಾಕರಿಸಿದ ನ್ಯಾಯವನ್ನು ನನಗೆ ನೀಡುವಂತೆ ಒತ್ತಾಯಿಸುತ್ತಿದ್ದೇನೆ. ನಿಮ್ಮ ಕರುಣೆಯ ಸಹಾಯವನ್ನು ನಾನು ಒಪ್ಪಿಕೊಳ್ಳುತ್ತೇನೆಂದು ಭಾವಿಸಿದ್ದಿರಾ?

ಮಹಾರಾಜ : ಅವನಲ್ಲದೆ ಬೇರೆಯವನು ಕಾಲ್ಕಡಗ ಕದ್ದಿದ್ದಾನೆಂಬುದಕ್ಕೆ ಸಾಕ್ಷಿಯೇನು? ನಿನ್ನ ಯಜಮಾನ ಅಮಾಯಕ ಎಂಬುದನ್ನು ನೀನು ಸಾಬೀತುಪಡಿಸಬೇಕು.

ಕನ್ನಗಿ : ಅವರು ತಪ್ಪಿತಸ್ಥರೆಂದು ನೀವೇ ಸಾಬೀತು ಮಾಡದೇ ಇರುವಾಗ ನಾನು ಏಕೆ ಅವರು ಅಮಾಯಕರು ಎಂದು ಸಾಬೀತು ಮಾಡಬೇಕು?

ಸಚಿವ : ಯುವಹೆಣ್ಣೇ, ಶಬ್ದಚಮತ್ಕಾರ ಮಾಡಬೇಡ. ಮಹಾರಾಣಿಯವರ ಕಾಲ್ಕಡಗ ಅವನ ಕೈಯಲ್ಲಿತ್ತು.

ಕನ್ನಗಿ : ಮಹಾರಾಣಿಯ ಕಾಲ್ಕಡಗ. ಅದು ಮಹಾರಾಣಿಯದೇ ಎಂದು ನೀನು ಹೇಗೆ ಹೇಳುವೆ?

ಸಚಿವ : ಹೌದು. ಅದು ಮಹಾರಾಣಿಯರದೇ!

ಕನ್ನಗಿ : ಹಾಗಿದ್ದರೆ ಅದನ್ನು ನನಗೆ ತೋರಿಸಿ.

ಮಹಾರಾಣಿ : ಇಲ್ಲಿದೆ ನೋಡು [ಕಾಲ್ಕಡಗವನ್ನು ಕನ್ನಗಿಗೆ ಕೊಡುತ್ತಾಳೆ]

ಕನ್ನಗಿ : [ಅದನ್ನು ಪರೀಕ್ಷಿಸಿ] ನೀವು ಇದನ್ನು ಖಚಿತವಾಗಿ ನಿಮ್ಮದು ಎನ್ನುತ್ತೀರಾ?

ಮಹಾರಾಣಿ : ಹೌದು.

ಕನ್ನಗಿ : ಆದರೆ ನೀನು ಹೇಳುತ್ತಿರುವುದು ಶುದ್ಧ ಸುಳ್ಳು. ಏಕೆಂದರೆ ಇದು ನನ್ನದು. ನನ್ನ ತಾಯಿ ಮದುವೆಯ ಸಂದರ್ಭದಲ್ಲಿ ಇದನ್ನು ನನಗೆ ಕೊಟ್ಟಿದ್ದರು. ಇದರ ಒಂದೊಂದು ಬಂಗಾರದ ಗೆರೆಯನ್ನು, ಚಿತ್ರವನ್ನು, ಕಲ್ಲನ್ನು ನಾನು ಗುರುತಿಸಬಲ್ಲೆ. ನೀನೇ ಕಳ್ಳಿ.

ಮಹಾರಾಜ : ನಿನ್ನ ದುಃಖವನ್ನು ಗ್ರಹಿಸಿ ನಿನ್ನ ಬಗ್ಗೆ ನಾವು ಸಹಾನುಭೂತಿಯಿಂದ ಇದ್ದೆವು. ನಿನ್ನ ಗಂಡನ ಅಪರಾಧವನ್ನು ದೃಢಪಡಿಸಲು ಸಾಕಷ್ಟು ಪ್ರಯತ್ನಪಟ್ಟೆವು. ಆದರೆ ನೀನು ಹುಚ್ಚಿಯಾಗಿದ್ದೀಯಾ ಮತ್ತು ನಮ್ಮ ತಾರ್ಕಿಕ ನಿಲುವನ್ನು ಒಪ್ಪುತ್ತಿಲ್ಲ. ನಿನ್ನ ಪ್ರೀತಿ ಗಂಡನ ದೋಷಗಳನ್ನು ಒಪ್ಪಿಕೊಳ್ಳದಷ್ಟು ಕುರುಡಾಗಬಾರದು. ನಿನ್ನ ಭಾಷೆ ಫಿರ್ಯಾದಿದಾರರು ರಾಜನನ್ನು ಸಂಬೋಧಿಸಬೇಕಾದ ಶೈಲಿಯಲ್ಲಿ ಇಲ್ಲ. ಸ್ವಾಮಿನಿಷ್ಠೆ ಇಲ್ಲದ ದಂಗೆಕೋರರು ಬಳಸುವ ದುರಹಂಕಾರದ ಒರಟು ಶೈಲಿಯಲ್ಲಿದೆ. ನಿನ್ನ ಮಾತುಗಳನ್ನು ನಾವಿನ್ನು ಸಹಿಸಲಾರೆವು.(ರಕ್ಷಕನನ್ನು ಕುರಿತು) ಇವಳನ್ನು ಹೊರಕ್ಕೆ ಎಳೆದುಕೊಂಡು ಹೋಗು.

ಕನ್ನಗಿ : ಮಹಾರಾಜರೇ, ಒಂದು ಗಳಿಗೆ! ಇಲ್ಲಿಯವರೆಗೂ ನಿಮ್ಮದೇ ಮೇಲ್ಗೈಯಾಗಿದೆ. ನೀವು ಅನುಮಾನದ ಲಾಭವನ್ನು ನನ್ನ ಗಂಡನಿಗೆ ನೀಡುವುದರಲ್ಲಿ ವಿಫಲರಾದರೂ ಸಹ ನನ್ನ ವಾದಗಳಿಗೆ ಜಾಣ್ಮೆಯ ಉತ್ತರಗಳನ್ನು ನೀಡಿದ್ದೀರಿ. ನಿಮ್ಮ ಮಾತುಗಳ ಹಿಂದೆ ನಿಮ್ಮ ಸೈನ್ಯದ ಬಲ ಅಡಗಿದೆ ಮತ್ತು ನಿಮ್ಮ ಸಚಿವರುಗಳ ಜಾಣಾಕ್ಷತನ ಎದ್ದು ಕಾಣುತ್ತಿದೆ. ನನ್ನ ಗಂಡ ಸತ್ತಿದ್ದಾನೆ. ಅವರ ಧ್ವನಿ ಎಂದೆಂದಿಗೂ ಕೇಳಿಸದು. ಆದ್ದರಿಂದ ಸ್ವಯಂ ಸಮರ್ಥನೆಗೆ ಅವುಗಳನ್ನು ನಿರೀಕ್ಷಿಸುವಂತಿಲ್ಲ. ಆದರೆ ನಾನು ಅವರ ಹೆಂಡತಿಯಾಗಿ ನನ್ನ ಪಾತಿವ್ರತ್ಯದ ಮೇಲೆ ಮತ್ತು ಸತ್ತ ಗಂಡನ ಗೌರವದ ಮೇಲೆ ಆಣೆ ಮಾಡಿ ಹೇಳುತ್ತೇನೆ, ಈ ಕಾಲ್ಕಡಗ ನನ್ನದು. ಇದನ್ನು ಈಗಲೇ ನಿಮ್ಮೆದುರಿಗೆ ದೃಢೀಕರಿಸುತ್ತೇನೆ. ನೀವು ಹಿರಿದು ಎಂದು ಹೇಳಿಕೊಳ್ಳುವ ನ್ಯಾಯವನ್ನು ನಾನು ಒಪ್ಪುವುದಿಲ್ಲ. ಆದರೆ ಇತಿಹಾಸದ ಆಚೆಗಿನ ಪುಟಗಳಲ್ಲಿ ನಿಮ್ಮ ನ್ಯಾಯ ವಿವಕ್ಷಣೆಯ ತೀರ್ಪು ಮಾಡಲಾಗುವುದು. ಮುಂದಿನ ಅಗಣಿತ ಪರಂಪರೆಗಳು ನಿಮ್ಮನ್ನು ನಿಂದಿಸುತ್ತಾರೆ. ನಿಮ್ಮ ಅನ್ಯಾಯದ ಆಳ್ವಿಕೆ ನೀಚತನದ್ದೆಂದು ಹಳಿಯುತ್ತಾರೆ. ನೀನು ಮರೆವಿನ ಕೂಪದಲ್ಲಿ ಬಲಹೀನ ಮತ್ತು ದುರ್ಗುಣಿ ರಾಜನೆಂಬ ಅಪವಾದದಲ್ಲಿ ಮುಳುಗುವೆ. ಈ ರಾಜವಂಶದ ವಾರಸುದಾರತ್ವಕ್ಕೆ ಅನರ್ಹ, ಅಯೋಗ್ಯ ಎನ್ನಿಸಿಕೊಳ್ಳುವೆ. ಹೆಂಡತಿಯ ಮನದಾಸೆಯನ್ನು ತಣಿಸಲು ಪ್ರಾಮಾಣಿಕ ವ್ಯಕ್ತಿಯೊಬ್ಬನನ್ನು ಕೊಂದು ಅವನ ಐಶ್ವರ್ಯವನ್ನೆಲ್ಲಾ ದೋಚಿದ ಎಂಬ ಲೋಕಾಪವಾದ ಶಾಶ್ವತವಾಗಿ ನಿಮ್ಮ ಹೆಸರಿನ ಜೊತೆಯಲ್ಲಿ ಉಳಿದುಬಿಡುತ್ತದೆ.

ಮಹಾರಾಜ : ಇದಕ್ಕೆ ಸಾಕ್ಷಿ ಏನು? ಇದು ನಿನ್ನದೇ ಕಾಲ್ಕಡಗ ಎಂಬುದಕ್ಕೆ ಸಾಕ್ಷಿಕೊಡು. ಇಲ್ಲವಾದರೆ ನಿನ್ನ ಅಸಹನೆಗೆ ಗಂಡನ ಪಾಡೇ ನೀನೂ ಅನುಭವಿಸಬೇಕಾಗುತ್ತದೆ.

ಕನ್ನಗಿ : ಏನು? ನಾನು ಸಾಕ್ಷ್ಯಕೊಡಬೇಕೆ? ಕೊಟ್ಟರೆ ನೀವು ಏನು ಮಾಡುತ್ತೀರಿ?

ಮಹಾರಾಜ : ನೀನು ಎಳ್ಳಷ್ಟೂ ಸಂಶಯಾಸ್ಪದ ಇಲ್ಲದಂತೆ ನಾನು ಒಬ್ಬ ಪ್ರಾಮಾಣಿಕ ನಿರಪರಾಧಿ ಮನುಷ್ಯನನ್ನು ಕೊಂದಿರುವೆನೆಂಬುದನ್ನು ದೃಢಪಡಿಸಿದರೆ, ನಾನು "ನ್ಯಾಯಯುತವಾಗಿ ರಾಜ್ಯವಾಳಲು ಸಾಧ್ಯವಿಲ್ಲದ ರಾಜನೆಂದು ಒಪ್ಪಿ ಆ ವ್ಯಕ್ತಿಗೆ ನೀಡಿದ ಶಿಕ್ಷೆಯನ್ನೇ ಅನುಭವಿಸುತ್ತೇನೆ" ಎಂದು ನಿನಗೆ ದೃಢಪಡಿಸುತ್ತೇನೆ. ಇದನ್ನು ನನ್ನ ಹಿರಿಯರ, ಪೂರ್ವಿಕರೆಲ್ಲರ ಗೌರವದ ಮೇಲೆ ಪ್ರಮಾಣಮಾಡಿ ಹೇಳುತ್ತಿದ್ದೇನೆ. ನನ್ನ ಕೈಗಳಿಂದಲೇ ನನ್ನ ತಲೆಯನ್ನು ಕತ್ತರಿಸಿಕೊಂಡು ತಪ್ಪಿಗೆ ತಕ್ಕ ಶಿಕ್ಷೆಯನ್ನು ನಾನೇ ವಿಧಿಸಿಕೊಂಡು ಅನುಭವಿಸುತ್ತೇನೆ.

ಮಹಾರಾಣಿ : ಮಹಾಪ್ರಭು, ಎಂತಹ ಘೋರವಾದ ಮಾತುಗಳನ್ನಾಡುತ್ತಿದ್ದೀರಿ. ಅವಳು ದುಷ್ಟ ಹೆಂಗಸು ಮತ್ತು ನೀವಾಗಿ ನೀವು ಮಾಡದ ತಪ್ಪಿಗೆ ಸಿಕ್ಕಿಹಾಕಿಕೊಳ್ಳಲಿ ಎಂಬುದೇ ಅವಳ ಇಷ್ಟ. ನೀವು ಅವಳೇನೋ ದೈವಾಂಶಸಂಭೂತೆಯೆಂಬಂತೆ ಮಾತನಾಡುತ್ತಿದ್ದೀರಿ.

ಸಚಿವ : ಆಲೋಚನಾರಹಿತವಾದ ಆತುರದ ಮಹಾರಾಜರ ಮಾತುಗಳು ನಮ್ಮನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸುತ್ತಿವೆ. ಮಹಾಪ್ರಭು ನಿಮ್ಮ ಮಾತುಗಳನ್ನು ತಡವಾಗುವ ಮೊದಲೇ ವಾಪಸ್ಸು ತೆಗೆದುಕೊಳ್ಳಿ.

ಮಹಾರಾಜ : ಏನು! ನಾನು ಆಡಿದ ಮಾತುಗಳನ್ನು ವಾಪಸ್ಸು ಪಡೆಯಬೇಕೆನ್ನುವಷ್ಟು ನಮ್ಮ ಮಂತ್ರಿಗಳು ಭೀತರಾದರೆ! ಗೆಳೆಯ, ಭಯಪಡಬೇಡ. ಆಕೆ ನನ್ನನ್ನು ಅಪರಾಧಿಯೆಂದು ದೃಢಪಡಿಸಿದರೆ ನನ್ನ ಕಾನೂನಿನಂತೆ ನಾನು ಸಾಯಲೇಬೇಕು. ಇಲ್ಲವಾದರೆ ನನ್ನ ಖ್ಯಾತಿ ಮುಂದಿನ ರಾಜರುಗಳಿಗೆಲ್ಲಾ ಆದರ್ಶವಾಗಿ ಪ್ರಕಾಶಿಸುವುದು. [ಕನ್ನಗಿ ಕಡೆ ತಿರುಗಿ] ನೀನೇನಾದರೂ ನಿನ್ನ ಗಂಡನ ಅಮಾಯಕತೆಯನ್ನು ಮತ್ತು ನನ್ನ ಅಪರಾಧವನ್ನು ದೃಢಪಡಿಸದಿದ್ದರೆ ಅದಕ್ಕೆ ತಕ್ಕ ಬೆಲೆಯನ್ನು ತರಬೇಕಾಗುತ್ತದೆ. ನಿನ್ನ ಗಂಡ ಪ್ರಾಮಾಣಿಕ ವ್ಯಕ್ತಿಯೆಂಬ ತಪ್ಪುಮಾಹಿತಿ ನೀಡಿದ, ರಾಜರನ್ನು ದ್ರೋಹಿ ಎಂದು ಆರೋಪಿಸಿದ, ಅಯೋಗ್ಯನಾದ ಕಾರಣಕ್ಕೆ ಸಹಕಾರ ನೀಡಿದ ದಂಗೆಕೋರಳು ನೀನು ಎಂಬುದಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ.

ಕನ್ನಗಿ : ದುರದೃಷ್ಟದ ರಾಜನೇ, ಇದೆಲ್ಲವೂ ನನ್ನ ಕನಸಿನಲ್ಲಿ ನಡೆದುಹೋಗಿರುವ ಪೂರ್ವ ಘಟನೆಗಳೆಂದು ನಿಮಗೆ ಗೊತ್ತಿಲ್ಲ. ನನ್ನ ಕನಸು ನನಸಾಗಿ ವಿಧಿಯ ಪೂರ್ವಯೋಜನೆಯಂತೆ ಈ ಘಟನೆಗಳೆಲ್ಲ ಪುನರಾವರ್ತಿಸಿವೆ. ಇದು ನನ್ನ ಹಿಂದಿನ ಅನುಭವವನ್ನು ಪುನಃ ಸ್ಮರಿಸಿಕೊಳ್ಳುವುದಷ್ಟೆ! ನನ್ನ ದುರ್ವಿಧಿಗೆ ನೀವು ಸಾಧನವಾದಂತೆ ನಿಮ್ಮ ಜಾರುವಿಕೆಗೆ ನಾನು ಸಾಧನವಾದೆ! ನಿಮ್ಮ ಕೈಗಳಿಂದಲೇ ನೀವು ಕೊಲೆಗೆ ಈಡಾದ ತಕ್ಷಣ ಈ ನಿಮ್ಮ ಸುಂದರ ನಗರದಲ್ಲಿ ದುರಂತ ಸಂಭವಿಸುತ್ತದೆ. ಸಾವು-ನೋವುಗಳಾಗಿ ಸರ್ವನಾಶವಾಗುತ್ತದೆ. ಪ್ರಳಯಾಗ್ನಿ ಹತ್ತಿಕೊಂಡು ೧೫ ದಿನಗಳವರೆಗೆ ಹಗಲಿರುಳು ಬಿಡುವಿಲ್ಲದೆ ಉರಿಯಲಾರಂಭಿಸುತ್ತದೆ. ನಾನು ಬೆಟ್ಟದ ತುದಿಯ ಏಕಾಂತದಲ್ಲಿ ದೇವರಥವನ್ನು ಹತ್ತಿ ನನ್ನ ಗಂಡನನ್ನು ಸಂಧಿಸುವ ದಿನ ಪ್ರಳಯಾಗ್ನಿ ನಂದಿಹೋಗುತ್ತದೆ. ಆ ನಂತರವೇ ನನ್ನ ಕೋಪಾಗ್ನಿಯೂ ಶಮನವಾಗುವುದು.

ಮಹಾರಾಣಿ : ತಲೆಯನ್ನು ಕಳೆದುಕೊಂಡ ಹುಚ್ಚು ಹೆಂಗಸಿನ ಪ್ರತೀಕಾರದ ಮಾತುಗಳಿವು.

ಸಚಿವ : ಮಹಾಪ್ರಭು, ಇವಳನ್ನು ಹೊರಕ್ಕೆ ಎಳೆದುಕೊಂಡು ಹೋಗಲು ಅನುಮತಿ ಕೊಡಿ. ಈ ವ್ಯವಹಾರದ ಮುಕ್ತಾಯವನ್ನು ನೋಡಲು ಜನರು ಅರಮನೆಯ ಹೊರಗೆ ಗುಂಪುಸೇರಿದ್ದಾರೆ. ಅವರು ಕಾನೂನಿನ ನಿಯಂತ್ರಣ ಮೀರುತ್ತಿದ್ದಾರೆ. ಈ ಹೆಂಗಸಿನ ಬಗ್ಗೆ ತಮ್ಮ ತಾಳ್ಮೆ ಮುಂದುವರಿದರೆ ಅದೇ

ತಮ್ಮ ಬಲಹೀನತೆಯಾಗಿ ಪರಿಣಮಿಸುವ ಸಾಧ್ಯತೆಯೂ ಇದೆ. ಅದು ರಕ್ತಕ್ರಾಂತಿಯಲ್ಲಿ, ಈ ಹೆಣ್ಣು ನುಡಿದ ಭವಿಷ್ಯದ ಪ್ರಳಯಾಗ್ನಿಯ ಆಘಾತದಲ್ಲಿಯೇ ಮುಗಿಯಬಹುದು.

ಮಹಾರಾಜ : [ಬಹಳ ಉದ್ರೇಕಿತನಾಗಿ] ಆದರ ಸಾಕ್ಷಿ! ಸಾಕ್ಷಿ ಎಲ್ಲಿ?

ಕನ್ನಗಿ : ಓಹೋ! ನೀವು ಈಗ ಬಹಳ ಉದ್ರೇಕಗೊಂಡಿರುವಿರಿ. ನೀವು ಇನ್ನೂ ಮೂರ್ಖತನದ ವಿಶ್ವಾಸವನ್ನು ನಂಬಲಾರಿರಿ. ಯಾರನ್ನು ನೀವು ಪ್ರೀತಿಪಾತ್ರರಾದ ಪ್ರಜೆಗಳು ಎಂದು ಕರೆಯುತ್ತಿದ್ದಿರೋ ಆ ಜನರಿಗೇ ಈಗ ಹೆದರುತ್ತಿರುವಿರಿ. ಯಾವ ನ್ಯಾಯನಿಷ್ಠೆಯ ಬಗ್ಗೆ ಜಂಬ ಕೊಚ್ಚಿಕೊಳ್ಳುತ್ತಿದ್ದಿರೋ. ಅದೇ ನ್ಯಾಯನಿಷ್ಠೆಗೆ ನೀವೀಗ ಹೆದರುತ್ತಿರುವಿರಿ! ನಿಯಮವೆಂಬುದು ಇಕ್ಕೆಲದ ನುಣುಪಿನ ಕತ್ತಿಯಂತೆ. ಅದು ಕತ್ತರಿಸುವವನನ್ನು ಮತ್ತು ಕತ್ತರಿಸಲ್ಪಡುವವನನ್ನು ಒಟ್ಟಿಗೆ ಏಕಕಾಲದಲ್ಲಿ ಕತ್ತರಿಸಬಲ್ಲದು. ನೀವು ತಪ್ಪಿತಸ್ಥರು ಎಂಬ ಅನುಮಾನ ನಿಮ್ಮ ಎದೆಯನ್ನು ಪ್ರವೇಶಿಸಿದೆ. ಆದ್ದರಿಂದಲೇ ನೀವು ಭಯಪಡುತ್ತಿರುವಿರಿ. ಈಗೆಲ್ಲಿ ನಿಮ್ಮ ಆತ್ಮಸ್ಥೈರ್ಯ? ನಿಮ್ಮ ಮೂರ್ಖತನದ ಹೊಗಳಿಕೆಯ ಬಿರುದು ಬಾವಲಿಗಳು ಮತ್ತು ಅಧಿಕಾರ ಬಲಗಳು ಎಲ್ಲಿ ಹೋದವು?

ಮಹಾರಾಜ : ಹೆಣ್ಣೇ, ನೀನು ಯಾರಾದರೂ ಸರಿ ನನ್ನನ್ನು ಹಿಂಸಿಸಬೇಡ. ನೀನು ಒಳ್ಳೆಯವಳಾಗಿರು ಅಥವಾ ಕೆಟ್ಟವಳಾಗಿರು. ಅದು ಸರಿಯಿರಲಿ ಅಥವಾ ತಪ್ಪಿರಲಿ, ದೈವೀಕವಾಗಿರಲಿ ಅಥವಾ ಪೈಶಾಚಿಕವಾಗಿರಲಿ, ಮೊದಲು ನನಗೆ ಸಾಕ್ಷಿಕೊಡು. ನಾನೇನಾದರೂ ತಪ್ಪು ಮಾಡಿದ್ದರೆ ರಾಜನ ಪಾಲಿನ ಕರ್ತವ್ಯವನ್ನು ನಿರ್ಲಕ್ಷಿಸಿದ್ದರೆ ದಿವ್ಯವಾದ ಸಾವನ್ನು ಅಪ್ಪಿಕೊಳ್ಳುತ್ತೇನೆ.

ಕನ್ನಗಿ : ಹೌದು ಜಡಮನುಷ್ಯನೇ, ನೀನು ಮಹಾ ಅಪರಾಧವನ್ನೇ ಮಾಡಿರುವೆ. ಏನೂ ತಪ್ಪು ಮಾಡದೆ ನನ್ನ ಗಂಡ ಸತ್ತಂತೆ ನೀನೂ ಅದಕ್ಕೆ ತಕ್ಕ ಬೆಲೆ ಕೊಡಬೇಕು.

ಮಹಾರಾಜ : ಹಾಗಿದ್ದರೆ ನಾನು ನಿನ್ನನ್ನು ಬೇಡಿಕೊಳ್ಳುತ್ತೇನೆ. ಅದು ಬೇಗ ನಡೆಯಲಿ!

ಕನ್ನಗಿ : ನಿನ್ನ ನೋವೇ ನನ್ನ ವಿಜಯ. ಅದನ್ನು ಇನ್ನೂ ಸ್ವಲ್ಪಕಾಲ ಮುಂದುವರಿಸಬಾರದೆ? ಏಕೆ ಇಷ್ಟು ಆತುರಪಡುತ್ತೀರಿ?

ಮಹಾರಾಜ : [ಹತಾಶನಾಗಿ] ಎಲ್ಲಿ ಸಾಕ್ಷಿ? ಇಲ್ಲ... ನಾನು ನಿನ್ನನ್ನು ಕೊಲ್ಲುತ್ತೇನೆ.

ಕನ್ನಗಿ : ನಿನಗೂ ಒಂದು ಆತ್ಮಸಾಕ್ಷಿ ಎಂಬುದು ಇದೆಯಲ್ಲ! ನೀನು ದುರ್ಬಲನಾದರೂ ದುರಾತ್ಮನಲ್ಲ. ನೀನು ನಿನ್ನ ವಿಧಿಗೆ ಬಲಿಯಾದೆ.

ಮಹಾರಾಜ : ಸಭ್ಯ ಹೆಣ್ಣೇ, ನನ್ನ ಇಡೀ ಜೀವನವನ್ನು ಒಳ್ಳೆಯದಕ್ಕಾಗಿಯೇ ಸವೆಸಿದ್ದೇನೆ. ನಾನು ಅದಕ್ಕೆ ಒಮ್ಮೆ ವಿಫಲನಾದರೂ ಸರಿ ತಕ್ಕ ಬೆಲೆಕೊಡಲು ಸಿದ್ಧ. ನನ್ನ ಮೇಲೆ ಕೃಪೆಯಿಟ್ಟು ನಾನು ಹೇಗೆ ವಿಫಲನಾಗಿದ್ದೇನೆ ಎಂಬುದನ್ನು ವಿವರಿಸು.

ಕನ್ನಗಿ : ಬೇರೆಯವರನ್ನು ಹೆದರಿಸುವಲ್ಲಿ ವಿಫಲರಾದಾಗ ನೀವು ಬೇಡಿಕೊಳ್ಳುತ್ತೀರಿ. ನೀನೊಂದು ಕ್ರಿಮಿಗೆ ಸಮ; ನಾನು ಅದನ್ನು ಕಾಲಿನಿಂದ ತುಳಿದುಹಾಕಬಲ್ಲೆ! ನೀನು ಅವಿಧೇಯತೆಗಿಂತ ಕೀಳಾಗಿರುವೆ! ನೀನು ಶೂರನಂತೆ ಸಾಯುವುದಿಲ್ಲ, ಹೇಡಿಯಂತೆ ಸಾಯುವೆ!

ಮಹಾರಾಜ : ನೀನು ತಕ್ಷಣ ನನ್ನ ನ್ಯಾಯ ವಿಫಲತೆಗೆ ಸಾಕ್ಷಿ ಒದಗಿಸದಿದ್ದರೆ ಇಬ್ಬರೂ ಒಟ್ಟಿಗೇ ಸಾಯುತ್ತೇವೆ. ಜಗತ್ತು ನಾನೊಬ್ಬ ಹೆಂಗಸನ್ನು ಕೊಂದೆ ಎಂದು ಆಡಿಕೊಳ್ಳಲಿ. [ಕತ್ತಿ ಎಳೆಯುತ್ತಾನೆ]

ಕನ್ನಗಿ : ನನ್ನ ಗಂಡನಿಂದ ವಶಪಡಿಸಿಕೊಂಡ ಕಾಲ್ಕಡಗ ಇದೇ ಏನು?

ಮಹಾರಾಜ : ಹೌದು.

ಕನ್ನಗಿ : [ಮಹಾರಾಣಿಯನ್ನು ಕುರಿತು] ನೀನು ನಡೆಯುವಾಗ ಕಾಲ್ಕಡಗ ಶಬ್ದ ಮಾಡುವಂತಾಗಲು ಮ್ಮ ರತ್ನವ್ಯಾಪಾರಿ ಯಾವ ಬಗೆಯ ಕಲ್ಲುಗಳನ್ನು ಬಳಸುತ್ತಾನೆ?

ಮಹಾರಾಣಿ : ನನಗೆ ಗೊತ್ತು! ಇದನ್ನು ನಾನು ಶಂಕಿಸಿದ್ದೆ! ಓ ದೇವರೆ!

ಮಹಾರಾಜ : ಪ್ರಿಯಕರಳೇ, ಕೇಳಿದ ಪ್ರಶ್ನೆಗೆ ಉತ್ತರಕೊಡು. ಯಾವ ಕಲ್ಲುಗಳನ್ನು ಬಳಸಿದ್ದನು.

ಮಹಾರಾಣಿ : ಪ್ರಭುಗಳೇ, ಮುತ್ತುಗಳನ್ನು!

ಕನ್ನಗಿ : ಮುತ್ತುಗಳು! ನಿರ್ಗತಿಕ ಮತ್ತುಗಳು! ನಮ್ಮ ದೇಶದಲ್ಲಿ ಪ್ರತಿ ರೈತನ ಮಡದಿ ಮತ್ತು ೂನುಗಾರನ ಹೆಂಡತಿ ಉಪಯೋಗಿಸುವ ಮುತ್ತುಗಳು. ಇಂತಹವುಗಳನ್ನು ಪಾಂಡ್ಯರಾಜ್ಯದ ಹಾರಾಣಿಯೂ ಉಪಯೋಗಿಸುವುದೆ? ಈಗ ಕೇಳಿ. ಎಲ್ಲ ಲೋಕಗಳ ದೇವತೆಗಳನ್ನು ಮತ್ತು ಇನ್ನೂ ನ್ಮ ಪಡೆಯದ ಎಲ್ಲಾ ತಲೆಮಾರುಗಳನ್ನು ಈ ನಗ್ನಕೃತ್ಯಕ್ಕೆ ಸಾಕ್ಷಿಗಳಾಗಿ ಆಹ್ವಾನಿಸುವೆನು. ಯಾವುದನ್ನು ೀವು ನಿಮ್ಮದು ಎಂದುಕೊಂಡಿರುವಿರಿ ಆ ಕಾಲ್ಕಡಗ, ನನ್ನ ಕೈಯಲ್ಲಿ ಇರುವ ಕಾಲ್ಕಡಗದಲ್ಲಿ ಇರುವುದು ುತ್ತುಗಳಲ್ಲ! ಈ ಪ್ರಾಚೀನ ನಗರದ ನಿರ್ಗತಿಕ ರಾಜನೇ ನೋಡು! [ಕಾಲ್ಕಡಗವನ್ನು ಎರಡು ಕೈಗಳಿಂದ ಗ್ಗಿಸಿ ಒಡೆಯುತ್ತಾಳೆ] ನನ್ನ ಕಾಲ್ಕಡಗದಲ್ಲಿ ತುಂಬಿರುವುದು ಮಾಣಿಕ್ಯಗಳು! ನೀನು ಹರಿಸಿದ ನನ್ನ ಗಂಡನ ಮಾಯಕ ರಕ್ತದಂತೆ ಕೆಂಪಿನವು. [ತನ್ನೆಲ್ಲ ಶಕ್ತಿಯನ್ನು ಬಳಸಿ ಒಡೆದ ಕಾಲ್ಕಡಗದಿಂದ ಕೆಂಪು ಮಾಣಿಕ್ಯಗಳು ೊರಚೆಲ್ಲಿ ಹರಡಿಕೊಳ್ಳುತ್ತವೆ]

ಮಹಾರಾಜ : ನಾನು ರಾಜನಲ್ಲ! ನಾನು ದುರಾತ್ಮನು! ನಾನು ಕಳ್ಳನು! [ಕತ್ತಿಯಿಂದ ತಿವಿದುಕೊಂಡು ಾಯುತ್ತಾನೆ.]

[ಮುಗಿಯಿತು]

ಪ್ರೊ। ಎನ್. ಚಂದ್ರಪ್ಪ, ಕನ್ನಡ ವಿಭಾಗ, ವಿ. ವಿ. ಪುರಂ ಕಲಾ ಮತ್ತು ವಾಣಿಜ್ಯ ಕಾಲೇಜು, ಕೆ. ಆರ್. ರಸ್ತೆ, ಬೆಂಗಳೂರು - ೫೬೦ ೦೦೪.

ಬೆಂಕಿಯ ಮಾತು

ಪಂಜಾಬಿ : ಅಮೃತಾ ಪ್ರೀತಮ್
ಅನು : ಆರ್. ಲಕ್ಷ್ಮೀನಾರಾಯಣ

ಇದು ಬೆಂಕಿಯ ಮಾತು
ನೀನು ಇದನ್ನು ನನಗೆ ಹೇಳಿದ್ದೆ.
ಇದು ನೀನು ಎಂದೋ ಹೊತ್ತಿಸಿದ್ದ
ಬದುಕಿನ ಅದೇ ಸಿಗರೇಟು.
ಕಿಡಿಯನ್ನು ನೀನು ಕೊಟ್ಟಿದ್ದೆ.
ಈ ಹೃದಯ ಸದಾ ಉರಿಯುತ್ತಿತ್ತು
ಕಾಲ ಲೇಖನಿ ಹಿಡಿದು ಏನೋ
ಲೆಕ್ಕ ಬರೆಯುತ್ತಿತ್ತು.
ಈ ಲೆಕ್ಕದ ಪುಸ್ತಕ ನೋಡು:
ಹದಿನಾಲ್ಕು ನಿಮಿಷಗಳಾಯಿತೆಂದು ಬರೆದಿದೆ
ಆದರೆ ಈ ಲೇಖಣಿಯನ್ನು ಕೇಳು
ಹದಿನಾಲ್ಕು ವರ್ಷಗಳಾಯಿತು!
ನನ್ನ ಈ ದೇಹದಲಿ ನಿನ್ನ ಉಸಿರಾಡುತಿತ್ತು
ಈ ಭೂಮಿ ಅದಕೆ ಸಾಕ್ಷಿ
ಹೊಗೆ ಹೊಮ್ಮುತ್ತಿತ್ತು.
ವಯಸ್ಸಿನ ಸಿಗರೇಟು ಉರಿದಾಯಿತು.
ನನ್ನ ಒಲವಿನ ಸುಗಂಧ
ನಿನ್ನ ಉಸಿರಲ್ಲಿ ಸ್ವಲ್ಪ
ಗಾಳಿಯಲಿ ಸ್ವಲ್ಪ ಬೆರೆತಾಯಿತು.
ನೋಡಿದು ಕೊನೆಯ ತುಣುಕು
ಬೆರಳುಗಳಿಂದ ಹಿಡಿಯದಿರು ಅದನು

ನನ್ನ ಒಲವಿನ ತುದಿ
ಎಲ್ಲಾದರೂ ನಿನ್ನ ಬೆರಳ ಸೋಕೀತು.
ಬದುಕಿನ ಬಗ್ಗೆ ಈಗ ದುಃಖವಿಲ್ಲ.
ಈ ಬೆಂಕಿಯನ್ನು ಸಂಭಾಳಿಸು.
ನಿನ್ನ ಕೈ ಕ್ಷೇಮವಾಗಿರಲೆಂದು ಬೇಡುತ್ತೇನೆ.
ಈಗ ಉಳಿದಿರುವ ಸಿಗರೇಟನ್ನು ಉರಿಸಿಬಿಡು.

ಆರ್. ಲಕ್ಷ್ಮೀನಾರಾಯಣ, ಹರ್ಷ ನಿಲಯ, ಜಯನಗರ ೧ನೇ ಕ್ರಾಸ್, ಕೋಲಾರ - ೫೬೩ ೧೦೧.

ಪ್ರೊ। ಸಾಜಿದಾ ಜೈದೀ

ಉರ್ದು ಸಾಹಿತ್ಯ ಕ್ಷೇತ್ರದಲ್ಲಿ ಕಾದಂಬರಿ, ಕಾವ್ಯ, ನಾಟಕ, ಅನುವಾದ ಹೀಗೆ ವಿವಿಧ ಪ್ರಕಾರಗಳಲ್ಲಿ ಕೃಷಿ ನಡೆಸಿ ಅಪಾರ ಮನ್ನಣೆ ಪಡೆದಿರುವ ಪ್ರೊ। ಸಾಜಿದಾ ಜೈದೀ ಅವರು ೧೯೨೬ರ ಮೇ ೧೮ರಂದು ಉತ್ತರ ಪ್ರದೇಶದ ಮೀರತ್‌ನಲ್ಲಿ ಜನಿಸಿದರು.

ಬಿ.ಎಡ್., ಎಂ.ಎಡ್., ಎಂ.ಫಿಲ್. ಪದವಿಗಳನ್ನು ಪಡೆದಿರುವ ಶಿಕ್ಷಣ ತಜ್ಞೆ. ೧೯೫೫ರಲ್ಲಿ ಅಲಿಘಡ್ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕಿಯಾಗಿ, ರೀಡರ್ ಆಗಿ, ನಂತರ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ.

ಸಾಜಿದಾ ಅವರು ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರವಲ್ಲದೆ ಶಿಕ್ಷಣ ಕ್ಷೇತ್ರದಲ್ಲೂ ಅನೇಕ ಕೃತಿಗಳನ್ನು, ಲೇಖನಗಳನ್ನು ರಚಿಸಿದ್ದಾರೆ. ಕುರುಕ್ಷೇತ್ರ ವಿಶ್ವವಿದ್ಯಾಲಯ ಹಾಗೂ ನವದೆಹಲಿಯ ಜಮಿಯಾ ಮಿಲಾ ಶಿಕ್ಷಣ ಕಾಲೇಜುಗಳ ಶಿಕ್ಷಣ ನಿಕಾಯದ ಸದಸ್ಯೆಯಾಗಿದ್ದುದಲ್ಲದೆ, ಅಲಿಘಡ್ ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲಿನ ಸದಸ್ಯೆಯೂ ಆಗಿ ಸೇವೆ ಸಲ್ಲಿಸಿದ್ದಾರೆ. ಅನೇಕ ರಾಷ್ಟ್ರೀಯ, ಅಂತರ ರಾಷ್ಟ್ರೀಯ ವಿಚಾರ ಸಂಕಿರಣಗಳ ಸದಸ್ಯೆಯಾಗಿಯೂ ಸೇವೆಗೈದಿದ್ದಾರೆ. ಆಕಾಶವಾಣಿ, ದೂರದರ್ಶನ ಹಾಗೂ ಲಂಡನ್ನಿನ ಬಿ.ಬಿ.ಸಿ.ಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

'Atish-e-sayyal', 'Joo-e-Naghma', 'Sail-e-Majeed', 'Sail-e-Subuk Daram', ಇವರ ಕವಿತಾ ಸಂಕಲನಗಳು.

ಟಿ. ರಿಟಿಗನ್‌ನ 'Deep Blue Sea', ಆರ್ನಾಡ್ ವೀಕರನ 'The four Seasons', ಈ ಡಾರನ 'La Musica', ಜೀನ್‌ಕೊಯಿಟೀಯ ('The Infernal Machine' ನಾಟಕವನ್ನು ಉರ್ದುವಿಗೆ ಭಾಷಾಂತರಿಸಿ ಪ್ರಕಟಿಸಿದ್ದಾರೆ) 'Moj-e-Hawa Phechan' ಇವರ ಕಾದಂಬರಿ. 'Teach me driving' ಏಕಾಂತ ನಾಟಕವಾದರೆ, 'There are no boundaries' ಇವರ ಪದ್ಯನಾಟಕ.

ಪಶ್ಚಾತ್ಯ ಹಾಗೂ ಯುರೋಪಿನ ಅನೇಕ ದೇಶಗಳಲ್ಲಿ ಪ್ರವಾಸ ಕೈಗೊಂಡು ಅಲ್ಲಿನ ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಂಡಿದ್ದಾರೆ.

ಉರ್ದು ಸಾಹಿತ್ಯದಲ್ಲಿ ತಮ್ಮದೇ ಹೆಜ್ಜೆ ಗುರುತನ್ನು ಮೂಡಿಸಿರುವ ಲೇಖಕಿಯ ಕವಿತೆಗಳನ್ನು ಓದಿದಾಗ, ಆಕೆ ನಮ್ಮೆಲ್ಲರಿಗೂ ಹತ್ತಿರವಾಗುತ್ತಾರೆ.

ಸಂಜೆ

ಉರ್ದು : ಪ್ರೊ। ಸಾಜಿದಾ ಜೈದೀ
ಅನು : ಅಂದನೂರು ಶೋಭ

ಸಂಜೆ ಕಪ್ಪಿಕ್ಕಿದೆ, ಸೂರ್ಯ ಮುಳುಗಿದ್ದಾನೆ
ಅಲೆವ ಕಾಲುಗಳ ಮೇಲಿನ ಕಲೆಗಳು ಜೋಮು ಹಿಡಿದಿವೆ
    ಪುಸ್ತಕಗಳು, ಸ್ನೇಹಿತರು, ಜೊತೆಗಾರರು
    ಸಂಬಂಧಿಕರು, ಸಂಭಾಷಣೆಗಳು, ವಾದಗಳು
    ಚಿಕ್ಕ ದೊಡ್ಡ ತಿಳಿದ ತಿಳಿಯದ
    ಅರಿವಿನ ಭಾರ
    ಹೊರೆಯಾದ ಭಾವಗಳು , ವಿಚಾರಗಳು
    ಜೀವಿತ ಕಾಲವನು ಒಪ್ಪಿಸುವ ಹಂಬಲವು
    ಪ್ರೀತಿಯ ಒಂದು ತೀಕ್ಷ್ಣ ಗಳಿಗೆಗಾಗಿ
    ಅಲೆಯುವ ಆ ಕಣ್ಣುಗಳ ನೋಟಕ್ಕಾಗಿ
ಅರಿವಿನ ಈ ಗಾಯಗಳು
ಜ್ಞಾನದ ಮಚ್ಚೆಗಳು
ಹೃದಯದಲ್ಲಿನ ಮುಳ್ಳುಗಳು
ನೋಯುವ ಕಣ್ಣುಗಳು
ಉರಿಯುವ ತುಟಿಗಳು
ಎಲ್ಲವೂ ನೆರಳು -
    ನೆರಳುಗಳು ನಡೆದವು ಬೆಳಕ ಜೊತೆಯಲಿ
    ಕತ್ತಲದರ ರೆಕ್ಕೆಗಳ ಬಿಚ್ಚಿಕೊಳ್ಳುವಾಗ
    ಅಸ್ಪಷ್ಟ ಶೂನ್ಯದಲಿ ಮುಳುಗುವುವು.

ಬೆಂಕಿಯ ಸ್ರಾವ

ಉರ್ದು : ಪ್ರೊ। ಸಾಜಿದಾ ಜೈದೀ
ಅನು : ಅಂದನೂರು ಶೋಭ

ತಣ್ಣನೆಯ ಉಸಿರಾಟದಿಂದ ಸುತ್ತುವರಿದ
ಈ ಒಂಟಿತನದ ಮಂಜಿನ ವಾತಾವರಣದಲಿ
ನಾ ಉರಿಯುವೆ
ವಿವೇಕದ ಹೆಜ್ಜೆಗುರುತಿನ ಬೆಂಕಿಯಲಿ
    ಅಂತಃಸತ್ವದ ಮೊಳಕೆ,
    ಸೃಷ್ಟಿ ಸ್ಥಿತಿಯ ನಿಯತಿ,
    ಈ ಜೀವನದ ಏಕೈಕ ಒಡೆತನ.
ಶುದ್ಧವಿದು, ಸೈಜವಿದು
ಕರುಣಾ ಶೂನ್ಯವಿದು, ಹಿಂಸಾ ಘಾತಕವಿದು

ಬೆಂಕಿಯ ಸ್ರಾವ ಮೇರೆಯಿಲ್ಲದ ಸಾಗರ
ಶತಮಾನಗಳ ಮುಳುಗಿಸುವುದು
ಕಾಲಗಳ ತನ್ನಲ್ಲೆ ಅಡಗಿಸಿ
ಯುಗಗಳ ನುಂಗುವುದು.
ಘಟನೆಗಳ [illegible]ರದ ಸರಪಳಿಗಳ ಕರಗಿಸುವುದು
ಇಲ್ಲಿ ಕೂಡುವುವು ಕಾಲ
ಎಲ್ಲವನೂ ಕಮರಿರುವ ಅನಂತತೆ
ಕಳೆಯುವ ಕ್ಷಣಗಳು ಅದರ ಉರಿಯಲ್ಲಿ ಉಡುಗುವುವು
ಬಿಸಿಯ ತಾಪಕೆ ಕಾಯಗಳು ಕರಗುವುವು
    ಈ ಬೆಂಕಿ ನನ್ನ ಸೃಷ್ಟಿಕಾರ್ಯ
    ನನ್ನ ಉದ್ರೇಕದ ಜ್ವಾಲೆಗಳು
    ನನ್ನ ಭಾವಗಳ ಅಗ್ನಿಕುಂಡ

ಈ ಜ್ವಾಲೆಗಳಿಗೆ ಶಿಲ್ಪವಾಗಿವೆ
ನನ್ನ ಚಿಂತನೆಗಳ ಜ್ವಲಿಸುವ ಉತ್ಥಾನ
ಈ ಬೆಂಕಿ ನನ್ನ ಸೃಷ್ಟಿಕರ್ತ
ಆತ್ಮ ನಿರಾತ್ಮಗಳ
ಇರುವಿಕೆ ಇಲ್ಲದಿರುವಿಕೆಗಳ
ದೇಹ ಆತ್ಮಗಳ
ಬೇರ್ಪಡಿಸುವ ಮರಳುಗೋಡೆಗಳ
ಕೆಡವಿದೆ ಇದು.
ಬಟ್ಟಬಯಲಿನ ಕಿಟಕಿ ತೆರೆದು ಬಯಲು ಮಾಡಿದೆ
ಭಯಂಕರ ದೃಶ್ಯವನು ಬೋಧಿಸಿದೆ ನನಗೆ
ಇರುವುದಿರಲಿ, ಇಲ್ಲದಿರುವಿಕೆಯ
ಬೀಜಸತ್ವವ ಹೊರುವ ಬ್ರಹ್ಮವಿದ್ಯೆಯ
ಈ ಬೆಂಕಿಯ ಹರವಿನ ಬಯಲಲಿ
ನಾನೇ ಸೃಷ್ಟಿಕರ್ತ
ನಾನೇ ಸೃಷ್ಟಿಕಾರ್ಯ
ಇದಿನ್ನೂ ಮುಗಿದಿಲ್ಲ
ಇನ್ನೂ ಕೈಗೆಟುಕಿಲ್ಲ.

ಬಂಧನ

ಉರ್ದು : ಪ್ರೊ। ಸಾಜಿದಾ ಜೈದೀ
ಅನು : ಅಂದನೂರು ಶೋಭ

ಏಕಾಂತ ಸಂಜೆಗಳ ಪಿಸುದನಿಯ ಕೇಳು
ನೀ ನನಗೇನಾಗಬೇಕೆಂದು ನೀನೆ ಅರಿಯುವೆ.
ನಿನ್ನಿರುವಿಕೆಯ ಪ್ರಫುಲ್ಲ ತಂಗಾಳಿ ಅಂದು ನನ್ನದು
ನಿನ್ನೀ ದಣಿದ ಭಾವಗಳ ಉದುರೆಲೆಗಳೂ ನನ್ನದು
ನಿನ್ನೀ ಹೊಳೆವ ಕಣ್ಣುಗಳ ಪ್ರೀತಿಯ ಸಂದೇಶವೂ ನನ್ನದು
ಈ ಕಣ್ಗಳಲಿ ತುಂಬಿದ ಕಟುವಾಸ್ತವವೂ ನನ್ನದೇ.

ನಿನ್ನೀ ಅಧರಗಳ ಮೃದು ಮಾತಿನ ಹೂಮಳೆಯೂ ನನ್ನದು
ಈ ತುಟಿಗಳ ಬರಿದಾದ ದಿನಚರಿಯ ಗಡಸು ಮುದ್ರೆಯೂ ನನ್ನದೇ
ನಿನ್ನ ತೀವ್ರಾಭಿಲಾಷೆಯ ಚಿಂತನೆಗಳು ನನ್ನವು
ನಿನ್ನ ವಿಷಣ್ಣತೆಯೂ ನನ್ನದು
ನಿನ್ನ ಕಹಿ ಮಾತುಗಳೂ ನನ್ನವು
ನಿನ್ನ ತೀವ್ರ ಭಾವಪ್ರವಾಹವೂ ನನ್ನದೇ

ನಿನ್ನಾತ್ಮದ ಕಿಡಿಗಳು ನನ್ನೀ ಹೃದಯದಲಿ ಉರಿಯಾಗಿ ಕುಣಿಯುವುವು
ನಿನ್ನ ಹಾದಿಯ ಮುಳ್ಳುಗಳು ನನ್ನ ಕಾಲಲಿ ರಕ್ತ ಬರಿಸುವುವು
ನೀ ಕುಡಿವ ವಿಷವು ನನ್ನ ನರಗಳಲಿ ಚಲಿಸುವುದು
(ನಿನ್ನೆದೆಯ ನೋವಿನ ಬಾಣಗಳು ನನ್ನೆದೆಯ ಕಿತ್ತು ತಿನ್ನುವುವು)

ನಿನ್ನೀ ನಿರಾಶೆಯ ಯಾತನೆಗಳು
ನಿನ್ನೀ ಭಾವನೆಗಳ ಗಾಯಗಳು
ಪ್ರತಿಯೊಂದು ಬರೆ, ಪ್ರತಿಯೊಂದು ನೋವು
ಪ್ರತಿ ಬಳಲಿಕೆ, ಉಭಯಸಂಕಟ

ನಿನ್ನ ಜೀವನಕೆ ಹೊರೆಯಾಗುವುದೆಲ್ಲವೂ
ನನ್ನ ಇಬ್ಬಗೆಯ ಇರುವಿಕೆಯ ಅಂಶಗಳು

ನನ್ನ ಅಸ್ತಿತ್ವ -
ನಿನ್ನಿರುವಿಕೆಯ ಐಕ್ಯಕೇಂದ್ರವದು
ನಿನ್ನೀ ಯಾತನೆಯ ನೆರಳಿದು
ನಿನ್ನೀ ನೋವಿನ ದಿನಗಳ ಪ್ರತಿಬಿಂಬ
ಈ ಕಬ್ಬಿಣದ ಪರದೆಯ ಮೂಲಕ ಆಲಿಸುವೆ
ಕಾಲದ ಮರುಭೂಮಿಯಲಿ ಅಲೆವ
ನಿನ್ನ ಹೃದಯ ತುಂಬಿದ ಶಬ್ದಗಳ ಪ್ರತಿಧ್ವನಿ .
ನೀನು ..... ನಾನು?
ನಾವಿಬ್ಬರು ... ಸಹ ಪ್ರಯಾಣಿಕರೇ?
ಇಲ್ಲ -
ಈ ಹುಚ್ಚೆದ್ದ ಜೀವನದಿ ದಾರಿ ತಪ್ಪಿದ
ನೋವು
ಬವಣೆ
ಬಯಕೆ
ಯಾತನೆ ... ಗಳ
ಸಮಗ್ರ ಅನುಭವದ ದುರಂತಕ್ಕೆ
ಕಟ್ಟಿಹಾಕಿದ ಎರಡು ದಿವ್ಯ ಆತ್ಮಗಳೆ?

ಆಂದನೂರು ಶೋಭ, ಉಪನಿರ್ದೇಶಕರು, ಅಂಚೆ ಮತ್ತು ದೂರಶಿಕ್ಷಣ ಸಂಸ್ಥೆ, ಬೆಂಗಳೂರು ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು ಕ್ಯಾಂಪಸ್, ಬೆಂಗಳೂರು - ೫೬೦ ೦೦೧.

ಆಧುನಿಕ ಮರಾಠಿ ಕಾವ್ಯದ ಹರಿಕಾರ - ಮರ್ಡೇಕರ

ಚಂದ್ರಕಾಂತ ಪೋಕಳೆ

ಮರ್ಡೇಕರರ ಕವಿತೆ ಪಾರಂಪರಿಕ ಪಾರ್ಶ್ವಭೂಮಿಯ ಹಿನ್ನೆಲೆಯಲ್ಲಿ ಹೊಸ ರೀತಿಯ ಅಭಿವ್ಯಕ್ತಿ ಕಂಡುಕೊಂಡಿತು. ಅವರ ಕವಿತಾ ಸಾಮರ್ಥ್ಯ ಹಾಗೂ ಸೀಮೆ ಅತ್ಯಂತ ಆಳವೂ, ವಿಸ್ತೃತವೂ ಆದದ್ದು. ಕೆಲವರಿಗದು ಶ್ರೇಷ್ಠವೂ, ಇನ್ನು ಕೆಲವರಿಗೆ ಅತ್ಯಂತ ಅಶ್ಲೀಲವೂ ಎನಿಸಿ ಸಾಕಷ್ಟು ವಿವಾದಕ್ಕೆಡೆ ಮಾಡಿಕೊಟ್ಟಿತು. ಹೀಗಾಗಿ ಮರಾಠಿ ಕಾವ್ಯಪ್ರಪಂಚ ಈಗಲೂ ಮರ್ಡೇಕರರ ಕಾವ್ಯವನ್ನು ಸರಿಯಾಗಿ ವಿಮರ್ಶೆ ಮಾಡಲಿಲ್ಲ. ಯೋಗ್ಯವಾದ ಮೌಲ್ಯಮಾಪನವೂ ನಡೆಯಲಿಲ್ಲೆಂಬ ಮಾತನ್ನು ಎಲ್ಲ ಕಾವ್ಯಾಸಕ್ತರು ಒಪ್ಪಿಕೊಳ್ಳುತ್ತಾರೆ. ಅವರ ಕಾವ್ಯವನ್ನು ವಸ್ತುನಿಷ್ಠ ವಿಮರ್ಶೆಗೊಳಪಡಿಸುವ ಕಾಲ ಕೂಡಿಬಂದಿಲ್ಲೆನ್ನುವದು ಕೆಲ ವಿಮರ್ಶಕರ ಹೇಳಿಕೆ.

ಮರ್ಡೇಕರರ ಮರಾಠಿ ಕವಿತೆಗಳನ್ನು ವಿವೇಚನೆಗೊಳಪಡಿಸುವಾಗ, ಅದರ ಹಿಂದಿನ ಇಂಗ್ಲಿಷ ಕವಿತೆಯ ಪ್ರೇರಣೆಯನ್ನು ಅರ್ಥ ಮಾಡಿಕೊಳ್ಳುವುದು ಯೋಗ್ಯವೇನೋ. ಅವರ ಕವಿತೆಗಳನ್ನು ಅರ್ಥೈಸಲು ಭಿನ್ನ ಮಾರ್ಗವೇ ಹಿಡಿಯಬೇಕಾಗುತ್ತದೆ.

ಮರ್ಡೇಕರರ ಕವಿತೆ ಪೌರಾತ್ಯ ಹಾಗೂ ಪಾಶ್ಚಾತ್ಯ ಎರಡೂ ಪರಂಪರೆಯನ್ನು ಮೈಗೂಡಿಸಿಕೊಂಡಿದೆ. ಈ ಎರಡರಲ್ಲೂ ಪಾಶ್ಚಾತ್ಯ ಪ್ರಭಾವವೇ ಹೆಚ್ಚಾಗಿರುವಂತೆ ಕಾಣುತ್ತದೆ. ಆಂಗ್ಲ ನವ್ಯಕಾವ್ಯ ಹಾಗೂ ಮರ್ಡೇಕರರ ಕಾವ್ಯ ಎರಡೂ ಒಂದೇ ರೀತಿಯದು. ಮರ್ಡೇಕರ ಇಂಗ್ಲಿಷ, ಮರಾಠಿ ಎರಡರಲ್ಲೂ ಕಾವ್ಯ ನಿರ್ಮಿಸಿದರು. ಹಾಪಕಿನ್ಸ್, ಇಲಿಯಟ್ ಹಾಗೂ ಎಡೆನ್ ಕವಿಯ ಪ್ರಭಾವ ಈ ಕವಿಯ ಮೇಲಾಗಿದೆ. ಇದಕ್ಕೆ ಉದಾಹರಣೆಯಾಗಿ 'ಕಾಹೀ ಕವಿತಾ' 'ಆಣಕಿ ಕಾಹೀ ಕವಿತಾ' ನೋಡಬಹುದು. ಆಧುನಿಕ ಜೀವನ ಮೌಲ್ಯವನ್ನು ಹೊಸ ಪದ್ಧತಿಯಲ್ಲಿ ಅಭಿವ್ಯಕ್ತಿಗೊಳಿಸಿದ್ದೇ ಮರ್ಡೇಕರ. 'ಕಾಹೀ ಕವಿತಾ'ದಲ್ಲಂತೂ ನವ್ಯ ಕಾವ್ಯದ ಜೊತೆಗೆ ಜ್ಞಾನೇಶ್ವರ-ತುಕಾರಾಮರಂತಹ ಸಂತ ಪರಂಪರೆಯ ಛಾಪು ಕಾಣಬಹುದು.

ಮರ್ಡೇಕರರ ಕಾವ್ಯಪಿಂಡ ಮೂಲತಃ ಚಿಂತನಾಪರ. ಆಂತರಿಕ-ಬಾಹ್ಯ ಜೀವನದಿಂದ ಹಿಡಿದು ಬ್ರಹ್ಮಾಂಡದಂತಹ ಶಾಶ್ವತ ಮೌಲ್ಯದ ಬಗ್ಗೂ ಅವರ ಕಾವ್ಯ ಯೋಚಿಸುತ್ತದೆ. ಹಲವು ಸಲ ಜೀವನದ ತಾತ್ವಿಕ ಮೀಮಾಂಸೆಯನ್ನೂ ಮಾಡುತ್ತದೆ. ಜ್ಞಾನೇಶ್ವರ ಹಾಗೂ ಮರ್ಡೇಕರರ ಭಾವೋತ್ಕಟತೆ ಒಂದೇ ರೀತಿಯದು. ಮರ್ಡೇಕರರ ಕಾವ್ಯ ಪ್ರತಿಭೆಗೆ ಬಹುಮುಖ ಆಯಾಮಗಳಿವೆ. ಆದರೂ ವ್ಯಕ್ತಿಗತ ಭಾವಶಕ್ತಿಯನ್ನು ಕೇಂದ್ರವಾಗಿಸಿಕೊಂಡು ಕಲ್ಪನೆ ಗರಿಗೆದರುತ್ತದೆ.

ಪ್ರಯೋಗಶೀಲತೆ ಇದು ಮರ್ಡೇಕರರ ಕಾವ್ಯದ ಇನ್ನೊಂದು ವೈಶಿಷ್ಟ್ಯ. ಕಾವ್ಯವನ್ನು ಪುನರ್‌ಸೃಷ್ಟಿ ಮಾಡುವಂಥ ತಾಕತ್ತು ಈ ಪ್ರತಿಭಾವಂತ ಕವಿಗಳಲ್ಲಿರುತ್ತದೆ. ಕಲಾತ್ಮಕ ಸಾಹಸ ಕೈಕೊಳ್ಳುವ ಇಂಥ ಇನ್ನೊಬ್ಬ ಕವಿ ಮರಾಠಿ ಕಾವ್ಯ ಜಗತ್ತಿನಲ್ಲಿ ದೊರಕಲಾರ ಎಂದು ವಿಮರ್ಶಕರು ಭಾವಿಸುತ್ತಾರೆ.

ಅವರ ಕಾವ್ಯ ಪರಸ್ಪರ ವಿರೋಧಿ ತತ್ವವನ್ನು ಒಗ್ಗೂಡಿಸುವ ಪ್ರಯತ್ನ ಮಾಡುತ್ತದೆ. ಭೂತ-ವರ್ತಮಾನ; ಧರ್ಮ-ವಿಜ್ಞಾನ, ಪರಂಪರೆ-ಆಧುನಿಕತೆ-ಇಂಥ ವೈರುಧ್ಯ ಸಂಗತಿಗಳು ಎದುರಾಗುತ್ತವೆ. ಹೀಗಾಗಿ ಲಯ ಬದ್ಧ ಸೂತ್ರಕ್ಕಿಂತ ತಾರ್ಕಿಕ ಸೂತ್ರದಲ್ಲೇ ಅವರ ಕಾವ್ಯ ಮಾತಾಡುತ್ತದೆ.

'ಕಾಹೀ ಕವಿತಾ' ಸಂಗ್ರಹದಲ್ಲಿ ಸಾಮಾಜಿಕ ಪ್ರಜ್ಞೆ ಅತ್ಯಂತ ದಟ್ಟವಾಗಿ ಮೂಡಿಬಂದಿದೆ. ಆದರೆ 'ಆಣಕೀ ಕಾಹೀ ಕವಿತಾ'ದಲ್ಲಿ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಅರಿವು ಎರಡು ಸಮ್ಮಿಲಳನಗೊಂಡಿದೆ. 'ಶಿಶಿರಾಗಮಾ' ಎಂಬ ಸಂಗ್ರಹದಲ್ಲಿಯ ಕವಿತೆಗಳು 'ರವಿ ಕಿರಣ ಮಂಡಳ'ದ ಪ್ರಭಾವಕ್ಕೊಳಗಾದವುಗಳು. ಯಶವಂತ, ಜೂಲಿಯನ್, ಗಿರೀಶ್ವರ ಕಾವ್ಯಕ್ಕೆ ಸಮೀಪದಲ್ಲಿ ನಿಸರ್ಗ ಕವಿತೆಗಳಲ್ಲಿ ಬಾಲಕವಿಯ ಛಾಯೆಯೂ ಇದೆ. ಚಿಂತನಶೀಲ ಸಾಲುಗಳಲ್ಲಿ ಕೇಶವಸುತರ ನೆನಪು ಮೂಡುತ್ತದೆ.

ಮರ್ಡೇಕರರ ಕಾವ್ಯವು ಆ ಕಾಲಖಂಡದ ಕಾವ್ಯದ ವೈಶಿಷ್ಟ್ಯವನ್ನು, ಭಾಷಾ ಸಾಮರ್ಥ್ಯವನ್ನು ಬಿಂಬಿಸುತ್ತದೆ. ಕಾವ್ಯದೊಳಗಿನ ಸಾಮಾಜಿಕ ಅರಿವು ಸಾಮ್ಯವಾದೀ ಒಲವನ್ನು ತೋರಿಸುವಂತಹುದು. ವಿಜ್ಞಾನ, ಬೌದ್ಧಿಕತೆ, ಮೂಲಭೂತ ಅವಶ್ಯಕತೆ, ಪೊಳ್ಳು ಅಧ್ಯಾತ್ಮದ ಬಗೆಗಿನ ವಿರೋಧ ಇದು ಅವರ ಬಹುತೇಕ ಕವಿತೆಯ ವಸ್ತು.

'ಆಣಕಿ ಕಾಹೀ ಕವಿತಾ' ಅಧ್ಯಾತ್ಮಪರವಾದುದು. ಇಲ್ಲಿ ಅಧ್ಯಾತ್ಮ ಭಾವ-ಅನುಭಾವ ಸಂಬಂಧವಿದ್ದರೂ 'ಆಧ್ಯಾತ್ಮಿಕ ಅನುಭೂತಿ' ಮಾತ್ರವಿಲ್ಲ. ವಿಮರ್ಶಕರ ಪ್ರಕಾರ ಅವರ ಕವಿತೆಯಲ್ಲಿ 'ಆಧ್ಯಾತ್ಮಿಕ ವಾಸ್ತವ'ವಿಲ್ಲ.

ಆದರೂ ಮರ್ಡೇಕರರಷ್ಟು ಅರ್ಥಪೂರ್ಣ, ಉತ್ಕಟ ಭಾವ ಕವಿತೆಯನ್ನು ಆಧುನಿಕ ಕಾಲಖಂಡದ ಯಾವ ಕವಿಯೂ ರಚಿಸಲಿಲ್ಲ. ಅವರ ಭಾವ ಕವಿತೆಯಲ್ಲಿ ಆಲೋಚನೆ, ಭಾವನೆ ಹಾಗೂ ಸಂವೇದನೆ ಮೂರೂ ಮುಪ್ಪುರಿಗೊಂಡಿದ್ದು ಸತ್ಯ. ಮರಾಠಿ ಕಾವ್ಯ ಪರಂಪರೆಯನ್ನು, ವಿಕಾಸದ ಸೋಪಾನವನ್ನು ಏರಿಸಿದ್ದು ಖಂಡಿತವಾಗಿಯೂ ಮರ್ಡೇಕರ. ಪ್ರಥಮ ದರ್ಜೆಯ ಪ್ರತಿಭಾಶಕ್ತಿ ಹೊಂದಿದ ಒಬ್ಬ ಕವಿ ಕಲ್ಪನಾಶಕ್ತಿ ಸೀಮಿತವಾಗಿದ್ದರೂ ಮೌಲಿಕವಾದ ಸಾಹಿತ್ಯ ನಿರ್ಮಿಸಬಲ್ಲ ಎನ್ನುವದಕ್ಕೆ ಮರ್ಡೇಕರ ಒಂದು ಜ್ವಲಂತ ನಿದರ್ಶನ. ಆಧುನಿಕ ಕವಿತೆ ಸುದೀರ್ಘವಾದ ಚಿಂತನಾಪರ ಕಾವ್ಯ ರಚಿಸಲಿಲ್ಲ ಎಂಬ ಕೂಗು ಮರಾಠಿಯಲ್ಲಿ ಕೇಳಿಬರುತ್ತಿತ್ತು. ಮೇಲೆ ಉದ್ಧರಿಸಿದ ಎರಡೂ ಕವಿತಾ ಸಂಗ್ರಹಗಳು ವಿವಿಧ ಆಯಾಮಗಳನ್ನು ತೆರೆದಿಡಬಲ್ಲ ಚಿಂತನಶೀಲ ಕಾವ್ಯವೇ ಆಗಿವೆ.

ಈ ಹಿನ್ನೆಲೆಯಲ್ಲಿ ಮರಾಠಿಯ ಆಧುನಿಕ ಕಾವ್ಯಕ್ಕೆ ಹೊಸ ದಿಕ್ಕು ತೋರಿಸಿದ ಅತ್ಯಂತ ಶ್ರೇಷ್ಠ ಕವಿ ಎಂಬ ಹೆಗ್ಗಳಿಕೆಯನ್ನು ಮರ್ಡೇಕರ ಪಡೆದುಕೊಂಡಿದ್ದಾರೆ.

ಮರ್ಡೇಕರರ ಕಾವ್ಯವನ್ನು ಅರ್ಥ ಮಾಡಿಕೊಳ್ಳುವದೂ ಒಂದು ರೀತಿಯ ಛಾಲೆಂಜ್. ಈ ಸವಾಲು ಸ್ವೀಕರಿಸುವ ರಸಿಕ ನಿರಂತರವಾಗಿ ಕಾವ್ಯೋದ್ಯೋಗದಲ್ಲಿ ತೊಡಗಿಕೊಂಡವನಿರಬೇಕು. ವೈಚಾರಿಕ ಶಿಸ್ತನ್ನು ಅಳವಡಿಸಿಕೊಂಡಿರಬೇಕು. ಬರೀ ಉತ್ಸಾಹವಿದ್ದರೆ ಸಾಲದು.

'ಒಂದು ಜನಾಂಗದ ಕಣ್ಣು ತೆರೆಯಿಸಿದ' ಕವಿ ಅಡಿಗರ ಕಾವ್ಯವನ್ನು ಮರ್ಡೇಕರರ ಕಾವ್ಯದೊಂದಿಗೆ ಹೋಲಿಸಿನೋಡುವುದು ತೌಲನಿಕ ದೃಷ್ಟಿಯಿಂದ ಅತ್ಯಂತ ಕುತೂಹಲಕಾರಿಯಾದ ಸಂಗತಿ. ಈ ಕವಿದ್ವಯರು ಪರಂಪರೆಯನ್ನು ಒರೆಗಲ್ಲಿಗೆ ಹಚ್ಚಿ ಪರೀಕ್ಷೆಗೊಳಪಡಿಸುವ ಧಾರ್ಷ್ಟ್ಯವನ್ನು ತೋರಿದವರು. ಇಬ್ಬರೂ ಆಂಗ್ಲ ಕವಿಗಳನ್ನು ತಮ್ಮ ಕಾವ್ಯಗುರುಗಳಾಗಿ ಸ್ವೀಕರಿಸಿದವರು. ಭಾರತೀಯ ಪ್ರಾಚೀನ ಪರಂಪರೆಗೆ ಹೊಸ ಮುಖ ನೀಡಿದ ಪ್ರತಿಭಾವಂತರು.

ಆಧುನಿಕ ಕನ್ನಡ ಕಾವ್ಯ ಅಡಿಗರನ್ನೂ, ಮರಾಠಿ ಕಾವ್ಯ ಮರ್ಡೇಕರರನ್ನೂ ಎಂದೂ ಮರೆಯುವ ಹಾಗಿಲ್ಲ.

ಮರ್ಡೇಕರರ ಕವಿತೆ ಪ್ರತಿ ಓದಿಗೆ ಹೊಸ ಅರ್ಥವನ್ನು ನೀಡುತ್ತದೆ. ಅದು ಹೆಚ್ಚೆಚ್ಚು ಜಟಿಲವಾಗಿದ್ದರಿಂದ ಆಹ್ವಾನವನ್ನೂ ನೀಡುತ್ತದೆ. ಕವಿತೆಯ ಸ್ವರೂಪ ಅತ್ಯಂತ ಗೋಜಲುಮಯವಾಗಿದ್ದರಿಂದ ತಟ್ಟನೆ ಅನುಭವದ ತೆಕ್ಕೆಗೆ ದಕ್ಕುವದಿಲ್ಲ. ಕವಿತೆಯ ರಚನೆಯೂ ಸಹ ಅತ್ಯಂತ ಸಂಯಮದ ರೀತಿಯದು. ಮಿತವಾದ ಅಕ್ಷರ ಬಳಕೆ. ಅವರು ಬರೆದ ಕವಿತೆಯ ಕಾಲವು ರಾಜಕೀಯ, ಸಾಮಾಜಿಕ ದೃಷ್ಟಿಯಿಂದ ಬದಲಾವಣೆಯದ್ದು. ಬೌದ್ಧಿಕವಾದ, ಸೂಕ್ಷ್ಮ ಸಂವೇದನಾಶೀಲವಾದ ಈ ಕವಿಯ ಮೇಲೆ ಅದು ಸಾಕಷ್ಟು ಆಳವಾದ ಪರಿಣಾಮ ಬೀರಿತು. ಹೀಗಾಗಿ ಅನುಭವ ಕ್ಷೇತ್ರವೂ ವೈವಿಧ್ಯಮಯ. ನಿರಂತರವಾಗಿ ನಡೆಯುವ ಆತ್ಮಶೋಧ ಬೆರಗುಗೊಳಿಸುವಂತಹುದು.

ಕವಿತೆಯ ಕೆಲವು ಸ್ಯಾಂಪಲ್ಲುಗಳು-

೧. 'ದೇವರೇ, ನನ್ನ ಎಲುಬುಗಳನ್ನು ಹದ್ದುಗಳು ತಿಂದು ತೃಪ್ತವಾಗಬೇಕು.'

೨. 'ಈ ಟೇಬಲ್ಲು, ಈ ಕುರ್ಚಿ, ಮೂಗು ಉರಿವ ಈ ಮಿರ್ಚಿ
ಇದೆಲ್ಲ ಆಭಾಸದ ಬರ್ಚಿ, ಏಕೆ ಕೊಲ್ಲುತ್ತಿದೆ?'

೩. 'ಆಗಸಕ್ಕೆ ದುರ್ಬೀನು ಹಚ್ಚಿ, ಪರಮಾಣುರಾಶಿಯನ್ನು ಒಡೆಯಿರಿ.
ನಾವು ಹಪಾಪಿಯೇ? ಉಪವಾಸಿಯೇ?'

೪. 'ದೀಪದ ರಾತ್ರಿ ಪಂಕ್ಚರಾದರೂ
ಯಾರೋ ಕತ್ತಲೆಗೆ ಪಂಪ್ ಹೊಡೆಯುತ್ತಿದ್ದಾರೆ.
ನಗುವ ಹುಚ್ಚು ಹಿಡಿದರೂ
ಕಣ್ಣೀರು ಮಾತ್ರ ನಿಚ್ಚಳವಾಗಿ ಬೊಗಳುತ್ತಿದೆ'.

೫. 'ಇಲ್ಲಪ್ಪ, ನಾನಿನ್ನು ತಾಳಲಾರೆ
ಯಾಕೆಂದರೆ, ನನ್ನ ಟೊಳ್ಳು ಎಲುಬಿನಲ್ಲಿ
ಅಸಾಧ್ಯ ರಕ್ತಕ್ಷಯ...'

ಕಳೆದ ನಾಲ್ವತ್ತು ವರ್ಷಗಳಿಂದ ಕವಿತೆ, ಸಮೀಕ್ಷೆ-ಈ ಎರಡೂ ಕ್ಷೇತ್ರಗಳು ಮರ್ಡೇಕರರ ನೆನಪು ಮಾಡಿಕೊಳ್ಳುತ್ತಿವೆ. ಮರ್ಡೇಕರರು ತನ್ನ ಕಾಲದ ಬದುಕಿನ ಸೂಕ್ಷ್ಮಸ್ಪಂದನಗಳನ್ನು, ಸಂವೇದನೆಗಳನ್ನು ಕಿವಿಗೊಟ್ಟು ಆಲಿಸಿದರು. ಬದಲಾಗುತ್ತಿರುವ ಜೀವನ ಕ್ರಮವನ್ನು ಗ್ರಹಿಸಿದರು. ಹೀಗಾಗಿ ಅವರ ಕವಿತೆಗಳಲ್ಲಿ

ಸಾಮಾಜಿಕ, ಆಧ್ಯಾತ್ಮಿಕ ವಿಭಿನ್ನ ಪಾಲನೆ ನೆಲೆಯನ್ನು ಕಾಣುವದು ಸಾಧ್ಯವಾಯಿತು. ಬದುಕಿನ ವಿವಿಧ ವಿಸಂಗತಿಗಳ ಸೂಕ್ಷ್ಮಚಿತ್ರಣವನ್ನು ಕವಿತೆಗಳಲ್ಲಿ ಸೆರೆ ಹಿಡುವ ಯಶಸ್ವಿ ಪ್ರಯತ್ನ ಮಾಡಿದರು. ಈ ದೃಷ್ಟಿಕೋನವೇ ಮರಾಠಿಯಲ್ಲಿ ಹೊಸ ಕವಿತೆಗೆ(ನವ್ಯಕವಿತಗೆ) ನಾಂದಿ ಹಾಡಿತು. ಇದು ಅಂತರ್ಮುಖಿ ಹಾಗೂ ಮಿತಭಾಷಿಯಾದ ಕವಿತೆಗೆ ಜನ್ಮ ನೀಡಿತು. ಮರ್ಡೇಕರರು ವಾಸ್ತವವನ್ನು ಯಥಾವತ್ತಾಗಿ ಚಿತ್ರಿಸುವ ಯತ್ನ ಮಾಡಿದರು. ಗಾಡಗೀಳ ಎಂಬ ವಿಮರ್ಶಕರು-ಮರ್ಡೇಕರರನ್ನು 'ಎರಡನೇ ಕೇಶವಸುತ' ಎಂದು ಗೌರವಿಸುತ್ತಾರೆ. (ಕೇಶವಸುತರು ಮರಾಠಿಯ ಅತ್ಯಂತ ಶ್ರೇಷ್ಠ ಕವಿ. ಬಂಡುಕೋರ ಪ್ರವೃತ್ತಿ, ಪ್ರಬಲ ಆತ್ಮವಿಶ್ವಾಸ, ಕವಿತೆಯ ರಚನೆ ನಾಟ್ಯಮಯ ರೀತಿಯದು).

ಕೆಲವು ವಿಮರ್ಶಕರು, ಮರ್ಡೇಕರರ ಕವಿತೆಯನ್ನು ಆಂಗ್ಲಕಾವ್ಯದ ಪ್ರಭಾವದಿಂದ ಹುಟ್ಟಿದ್ದು, ಅನುಕರಣೆಯ ರೀತಿಯದು, ಆಡಂಬರದ್ದು ಎಂದು ಉಗ್ರವಾಗಿ ವಿರೋಧಿಸಿದರು. ಇದಕ್ಕೆ ಉತ್ತರವಾಗಿ ಪ್ರಭಾವ ಹಾಗೂ ಅನುಕರಣೆ ಎರಡೂ ಭಿನ್ನ-ಭಿನ್ನವಾದದ್ದು ಎಂದು ಇನ್ನು ಕೆಲ ವಿಮರ್ಶಕರು ಸಮರ್ಥನೆ ನೀಡಿದರು.

ಮರ್ಡೇಕರರ ಮೇಲೆ ದೇಶಿ ಹಾಗೂ ಪಾಶ್ಚಾತ್ಯ ಎರಡೂ ರೀತಿಯ ಪ್ರಭಾವವಿದೆ. ಅವರು ಆಂಗ್ಲ ಕಾವ್ಯಶೈಲಿಯನ್ನು ಆತ್ಮಸಾತ್ ಮಾಡಿಕೊಂಡಿದ್ದರು, ತಮ್ಮ ಸ್ವಂತಿಕೆಯನ್ನು ಎಂದೂ ಬಿಟ್ಟುಕೊಟ್ಟಿಲ್ಲ. ಮರಾಠಿಯ ದೇಶಿ ವಾಸನೆ ಉಳಿಸಿಕೊಂಡರು. ಇದಕ್ಕೆ ಉತ್ತರವೆಂದರೆ ಅವರು ತುಕಾರಾಮ, ರಾಮದಾಸ ಪರಂಪರೆಯನ್ನು ಉಳಿಸಿಕೊಂಡಿದ್ದು. 'ಕವಿತೆಯ ವೇಷ ಎಂಥದ್ದೆ ಇರಲಿ, ಪಿಂಡ ಮಾತ್ರ ದೇಶಿ' ಎಂದು ವಿಮರ್ಶಕರ ಅಂಬೋಣ.

ಇನ್ನೊಂದು ಟೀಕೆ ಎಂದರೆ, ಮರ್ಡೇಕರರ ಕವಿತೆ ಅಶ್ಲೀಲವಾಗಿದೆ, ಕಠಿಣವಾಗಿದೆ, ವೈಫಲ್ಯದಿಂದ ಕೂಡಿದೆ ಎನ್ನುವದು. ಜತೆಗೆ ಯಂತ್ರಯುಗದ ವಿಫಲತೆ, ವಿರೂಪ ಸತ್ಯದ ದರ್ಶನ ಮಾಡಿಸುತ್ತದೆ ಎಂಬ ಆರೋಪವನ್ನು ಹೊರಬೇಕಾಯಿತು. ಆದರೆ ಈ ಕವಿತೆಗಳು ಭವಿಷ್ಯಮುಖಿಯಾದ ಚಿರಂತನ ಸೌಂದರ್ಯವುಳ್ಳದ್ದಾಗಿವೆ ಎಂಬ ಉತ್ತರ ನವ್ಯಕವಿಯ ಪರವಾಗಿದ್ದವರಿಂದ ಬಂತು. 'ಪರಿಸ್ಥಿತಿಯ ಆಸಿಡ್ ಕುಡಿದು, ಮನಗೊಂಡಿದೆ ಬಂಜರು ಭೂಮಿ/ಇಂಥ ನೆಲದಲ್ಲಿ ಎಂದಾದರೂ ಹುಟ್ಟೀತೇ ತೆಂಗು-ಬಕುಳದ ಸೀಮೆ' ಎಂದು ಸ್ವತಃ ಕವಿಯೇ ಉತ್ತರಿಸುತ್ತಾರೆ. ಮರ್ಡೇಕರರ ಮೇಲೆ ಮಾಡಿದ ಆರೋಪಗಳೆಲ್ಲ ಪೂರ್ವಗ್ರಹದಿಂದ ಕೂಡಿದ್ದು ಎಂಬ ವಾದವೂ ಇದೆ.

ವೈವಿಧ್ಯಮಯವಾದ ಅನುಭವದಿಂದ ಮರ್ಡೇಕರರ ಕಾವ್ಯ ಬಹುಮುಖಿಯಾದದ್ದು. ಈ ಅನುಭವ ಅಂತರಾಳದಲ್ಲಿರುವ ಸಂಬಂಧವನ್ನೂ ಸಮರ್ಥವಾಗಿ ಶೋಧಿಸುತ್ತದೆ. ಆದರೂ ಅವರ ಕಾವ್ಯ ಭವ್ಯ ದರ್ಶನವನ್ನು ನೀಡುವುದಿಲ್ಲ. ಹೀಗಾಗಿ ಉತ್ಕಟ ಕಾವ್ಯಾನುಭವ ಈ ಕವಿತೆ ನೀಡುವದಿಲ್ಲ ಎಂಬ ವಿಮರ್ಶಕರ ಹೇಳಿಕೆ ಮರಾಠಿ ಸಮೀಕ್ಷೆ ಒಪ್ಪಿಕೊಳ್ಳುತ್ತಿದೆ. ಅವರ ಕವಿತೆಯಲ್ಲಿ ಭಾವನೆ, ಬುದ್ಧಿ ಎರಡರ ಸಮ್ಮಿಳನವಿದ್ದರೂ ಅದು ಪ್ರಮುಖವಾಗಿ ಬೌದ್ಧಿಕ ಪ್ರಧಾನವಾಯಿತು. ಇದು ಈ ಕವಿಯ Limitations!

ಇವತ್ತಿಗೂ ಮರ್ಡೇಕರರ ಕೆಲವು ಕವಿತೆಗಳು ನಿಗೂಢವಾಗಿಯೇ ಇವೆ. ವಿಮರ್ಶಕರರನ್ನು ಕೆಣಕಿ ಸವಾಲು ಹಾಕುತ್ತಲೂ ಇವೆ. ಜನ ಸಾಮಾನ್ಯರಿಗಂತೂ ಮರ್ಡೇಕರ ಇನ್ನೂ ಅರ್ಥವಾಗಲೇ ಇಲ್ಲ.

ಹಾಗೆ ನೋಡಿದರೆ ಮರ್ಡೇಕರರ ಕವಿತೆಗೆ ದೇಶಿ ಹಾಗೂ ಪಾಶ್ಚಾತ್ಯ ಧೋರಣೆಯ ಸಮ್ಮಿಶ್ರಣದಿಂದಲೇ

ಬಲ ಬಂದಿದ್ದು. ಇಂಥ ಧೋರಣೆಯಿಂದ ಲಾಭ-ಹಾನಿ ಎರಡೂ ಆಗುವದು ಸಹಜ. ಕೆಲವು ನ್ಯೂನತೆಗಳು ಇವರ ಕವಿತೆಗಳಲ್ಲಿದ್ದರೂ ಅವರೊಬ್ಬ ಶ್ರೇಷ್ಠ ಕವಿ ಎನ್ನುವದು ನಿರ್ವಿವಾದ. ಮರಾಠಿ ಕಾವ್ಯದಲ್ಲಿ ವೈಚಾರಿಕ ಕ್ರಾಂತಿಯಾಗಲು ಈ ಕವಿಯೇ ಪ್ರಮುಖ ಕಾರಣವೆಂದರೂ ತಪ್ಪಲ್ಲ. ಯಾಕೆಂದರೆ ಆ ಕವಿತೆಗಳಲ್ಲಿ ಬಳಸಲಾದ ಭಾಷೆ, ಪ್ರತಿಮೆ ಎಲ್ಲವೂ ಹೊಸದು. ಆದರೂ ಛಂದಸ್ಸಿನ ಹಳೆ ಪರಂಪರೆಯನ್ನು ಸಂಪೂರ್ಣ ಕೈಬಿಡಲಿಲ್ಲ. ಕ್ರಮೇಣ ಈ ಹೊಸ ಕಾವ್ಯ ಮರಾಠಿ ಕಾವ್ಯ ಪ್ರಪಂಚದಲ್ಲಿ ರೂಢಿಯಾಗಿ ಅದು ಅತ್ಯಂತ ತೀಕ್ಷ್ಣವೂ, ಸಂವೇದನಾಶೀಲವೂ ಆಯಿತು. ಜತೆಗೆ ಕಾವ್ಯಕ್ಕೆ ವೈಶ್ವಿಕ ಸಂದರ್ಭವೂ ಪ್ರಾಪ್ತಿಯಾಯಿತು.

---

* **ಚಂದ್ರಕಾಂತ ಪೋಕಳೆ, ಬಿ. ಎಸ್. ವಿ. ಪಿ. ಕಾಲೇಜು, ಬೇಡಕಿಹಾಳ - ೫೯೧ ೨೧೪.**

ಜ್ಞಾನಪೀಠ ಪ್ರಶಸ್ತಿ ವಿಜೇತ ಖ್ಯಾತ ತೆಲುಗು ಕವಿ ಡಾ। ಸಿ. ನಾರಾಯಣರೆಡ್ಡಿ

ಭಾರತೀಯ ಜ್ಞಾನಪೀಠ ಪ್ರಶಸ್ತಿ ಪಡೆದ ತೆಲುಗಿನ ಸಾರಸ್ವತ ಲೋಕದ ದಿಗ್ಗಜರಲ್ಲಿ ಎರಡನೆಯವರು ಪದ್ಮಭೂಷಣ ಡಾ। ಸಿ. ನಾರಾಯಣರೆಡ್ಡಿ ಅವರು. ಇವರು ತೆಲುಗಿನ ಸಾಹಿತ್ಯಕ್ಷೇತ್ರ ಹಾಗೂ ಚಲನಚಿತ್ರಗಳೆರಡರಲ್ಲೂ ಅತ್ಯಂತ ಜನಪ್ರಿಯರು. 'ಸಿನಾರೆ' ಇವರ ಕಾವ್ಯನಾಮ ಮತ್ತು ಸಂಕ್ಷಿಪ್ತನಾಮ. ಇವರು ಕಾವ್ಯ, ನಾಟಕ, ವಿಮರ್ಶೆ, ಪ್ರಬಂಧ, ಅನುವಾದ ಮೊದಲಾದ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಅದ್ಭುತ ಕೃಷಿ ಮಾಡಿ, ಸುಮಾರು ಅರವತ್ತು ಮೌಲಿಕ ಕೃತಿಗಳನ್ನು ರಚಿಸಿ, ತೆಲುಗು ಸಾರಸ್ವತ ಲೋಕದ ಶ್ರೇಷ್ಠತೆಯನ್ನು ಮತ್ತು ಸುಮಾರು ಮೂರು ಸಾವಿರ ಚಲನಚಿತ್ರಗೀತೆಗಳನ್ನು ರಚಿಸಿ ತೆಲುಗು ಬಣ್ಣದ ಲೋಕದ ಔನ್ನತ್ಯವನ್ನು ವೃದ್ಧಿಸಿದ್ದಾರೆ. ವೃತ್ತಿಯಲ್ಲಿ ಅಧ್ಯಾಪಕರಾಗಿ, ವಿಶ್ವವಿದ್ಯಾಲಯಗಳ ಉಪಕುಲಪತಿಗಳಾಗಿ, ನಾಡು-ನುಡಿ, ಸಾಂಸ್ಕೃತಿಕ ಸಂಬಂಧಗಳ ಪದಾಧಿಕಾರಿಯಾಗಿ, ಪ್ರತಿನಿಧಿಯಾಗಿ, ಸಲಹೆಗಾರರಾಗಿ ನಾಡಿನ-ರಾಷ್ಟ್ರದ-ವಿಶ್ವದ ಮಹತ್ವದ ವ್ಯಕ್ತಿಯಾಗಿದ್ದಾರೆ.

ಡಾ। ಸಿ. ನಾರಾಯಣರೆಡ್ಡಿ ಅವರು ತೆಲಂಗಾಣದ ಕರೀಂನಗರ ಜಿಲ್ಲೆಯ ಸಿರಿಸಿಲ್ಲಾ ತಾಲ್ಲೂಕಿನ 'ಹನುಮಾಜಿಪೇಟ' ಎಂಬ ಗ್ರಾಮದ ರೈತಕುಟುಂಬದಲ್ಲಿ ೧೯೩೧ರ ಜುಲೈ ೨೯ರಂದು ಜನಿಸಿದರು. ಅವರ ವಿದ್ಯಾಭ್ಯಾಸ ಕ್ರಮವಾಗಿ ಹನುಮಾಜಿಪೇಟ, ಸಿರಿಸಿಲ್ಲಾ, ಕರೀಂನಗರ ಹಾಗೂ ಹೈದರಾಬಾದ್‌ಗಳಲ್ಲಿ ನಡೆಯಿತು. ೧೯೫೨ರಲ್ಲಿ ಹೈದರಾಬಾದ್ ಆರ್ಟ್ಸ್ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು, ೧೯೫೪ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ತೆಲುಗು ಎಂ. ಎ. ಪದವಿಯನ್ನು ಪಡೆದರು. ನಂತರ "ಆಧುನಿಕಾಂಧ್ರ ಕವಿತ್ವಮು: ಸಂಪ್ರದಾಯಮುಲು-ಪ್ರಯೋಗಮುಲು" ಎಂಬ ವಿಷಯದ ಮೇಲೆ ಸಂಶೋಧನೆ ಮಾಡಿ ೧೯೬೨ರಲ್ಲಿ ಪಿಹೆಚ್‌ಡಿ. ಪದವಿಯನ್ನು ಪಡೆದರು.

ಡಾ। ಸಿ. ನಾರಾಯಣರೆಡ್ಡಿ ಅವರು ೧೯೫೪ರಲ್ಲಿ ಸಿಕಂದರಬಾದ್ ಕಲೆ ಮತ್ತು ವಿಜ್ಞಾನ ಕಾಲೇಜಿನಲ್ಲಿ ಉಪನ್ಯಾಸಕರಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. ೧೯೬೩ರಲ್ಲಿ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ತೆಲುಗು ರೀಡರ್ ಆಗಿ ಸೇರಿ, ೧೯೭೬ರಲ್ಲಿ ಪ್ರಾಧ್ಯಾಪಕರಾಗಿ ೧೯೮೧ರವರೆಗೆ

ಸೇವೆ ಸಲ್ಲಿಸಿದರು. ೧೯೮೧ರಲ್ಲಿ ಆಂಧ್ರಪ್ರದೇಶ ಸರ್ಕಾರದ 'ಅಧಿಕಾರ ಭಾಷಾ ಸಂಘ' ದ ಅಧ್ಯಕ್ಷರಾಗಿ ೧೯೮೫ರವರೆಗೆ ಸದರಿ ಪದವಿಯಲ್ಲಿ ಸೇವೆ ಸಲ್ಲಿಸಿದರು. ೧೯೮೫ರ ನಂತರ ತೆಲುಗು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ, ೧೯೯೩ರಿಂದ ಆಂಧ್ರ ಪ್ರದೇಶ ಸರ್ಕಾರದ ಸಂಸ್ಕೃತಿ ಮತ್ತು ಭಾಷಾ ಸಲಹೆಗಾರರಾಗಿ ಸೇವೆ ಸಲ್ಲಿಸಿದ ಇವರು ಪ್ರಸ್ತುತ ಆಂಧ್ರಪ್ರದೇಶ ಸಾಂಸ್ಕೃತಿಕ ಮಂಡಳಿ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಮತ್ತು ರಾಜ್ಯಸಭಾ ಸದಸ್ಯರೂ ಆಗಿದ್ದಾರೆ.

ತೆಲುಗು ಕಾವ್ಯಕ್ಷೇತ್ರದಲ್ಲಿ ೧೯೨೦ರ ವೇಳೆಗೆ ಆರಂಭವಾದ ನವೋದಯ ಕಾವ್ಯಪರಂಪರೆಯಲ್ಲಿ ಆವಿರ್ಭವಿಸಿದ ಪ್ರಮುಖ ಕವಿ ಡಾ। ಸಿ. ನಾರಾಯಣರೆಡ್ಡಿ ಅವರು, ನವೋದಯ ಕಾವ್ಯಪರಂಪರೆಯಲ್ಲಿ ಕಾವ್ಯ ರಚನೆಯನ್ನು ಪ್ರಾರಂಭಿಸಿ, ಪ್ರಣಯ ತತ್ವ ಪ್ರತಿಪಾದನೆಯನ್ನು ಸಾರುತ್ತಾ ನಡೆದು, ಮುಂದೆ ಅಭ್ಯುದಯ ಕಾವ್ಯಮಾರ್ಗವನ್ನು ಅನುಸರಿಸಿ, ನಂತರ ವಿಪ್ಲವಕಾವ್ಯ ತೆಲುಗು ಕಾವ್ಯದ ಮೇಲೆ ತನ್ನ ಪ್ರಭಾವ ಬೀರಿದಾಗ ಅದರಿಂದ ಸ್ವಲ್ಪ ದೂರ ಸರಿದರೂ ಪ್ರಗತಿಪರತ್ವವನ್ನು ಕೈಬಿಡದೆ ತಮ್ಮದೇ ಆದ ನಿಲುವು ತಳೆದು ಮಾನವತಾವಾದವನ್ನು ಪ್ರತಿಪಾದಿಸಿ ಸಮನ್ವಯ ಮಾರ್ಗವನ್ನು ಅನುಸರಿಸಿದ್ದಾರೆ.

ಸುಮಾರು ೬೦ ವೈವಿಧ್ಯಮಯ ಮೌಲಿಕ ಕೃತಿಗಳನ್ನು ರಚಿಸಿರುವ ಡಾ। ರೆಡ್ಡಿ ಅವರ ಕೃತಿಗಳ ಪೈಕಿ ಸುಮಾರು ೪೫ ಕಾವ್ಯಕೃತಿಗಳೇ ಇವೆ. ಈ ಪೈಕಿ 'ಸ್ವಪ್ನಭಂಗಂ' (ಗೇಯಕಾವ್ಯ), 'ನಾಗಾರ್ಜುನ ಸಾಗರಂ' (ಗೇಯಕಾವ್ಯಂ), 'ಕರ್ಪೂರ ವಸಂತರಾಯಲು' (ಗೇಯಕಾವ್ಯ), ದಿವ್ವೆಲ ಮುವ್ವಲು (ಕವನಸಂಕಲನ), 'ಋತುಚಕ್ರಂ' (ಗೇಯಕಾವ್ಯ), 'ಮಧ್ಯತರಗತಿ ಮಂದಹಾಸಂ' (ಕವನಸಂಕಲನ), ಮರೋಹರಿವಿಲ್ಲು (ಕವನಸಂಕಲನ), 'ಮಂಟಲೂ-ಮಾನವುಡೂ' (ಕವನಸಂಕಲನ), 'ಉದಯಂ ನಾ ಹೃದಯಂ' (ಕವನ ಸಂಕಲನ), 'ತೇಜಸ್ಸು ನಾ ತಪಸ್ಸು' (ಕವನ ಸಂಕಲನ), ಭೂಮಿಕ (ಕಾವ್ಯ), ಮಂಥನಂ (ಕಾವ್ಯ), 'ವಿಶ್ವಂಭರಾ' (ಸಮಗ್ರ ಕಾವ್ಯ), ರೆಕ್ಕಲು (ಕವನ ಸಂಕಲನ), ನಡಕನಾತಲ್ಲಿ (ಕವನ ಸಂಕಲನ), 'ಕವಿತ ನಾ ಚಿರುನಾಮ' (ಕವನ ಸಂಕಲನ), 'ವ್ಯಕ್ತಿತ್ವಂ' (ಕವನ ಸಂಕಲನ), 'ಸಿನಾರೆತೆಲುಗುಗಜಳ್ಳು' 'ಪ್ರಪಂಚಪದುಲು' 'ಕಲಂ ಸಾಕ್ಷಿಗಾ', 'ಭೂಗೋಳಮಂತ ಮನಿಷಿಬೊಮ್ಮ', 'ಪಾಟಲೋ ಏಮುಂದಿ-ನಾಮಾಟಲೋ ಏಮುಂದಿ', 'ಮಟ್ಟೀ ಮನಿಷಿ ಆಕಾಶಂ' (ಸಮಗ್ರ ಕಾವ್ಯ), 'ಗದಿಲೋ ಸಮುದ್ರಂ' (ಕವನ ಸಂಕಲನ) ಇತ್ಯಾದಿ ಮುಖ್ಯವಾದವು.

ಡಾ। ಸಿ. ನಾರಾಯಣರೆಡ್ಡಿ ಅವರ 'ಋತುಚಕ್ರಂ' ಗೇಯ ಕಾವ್ಯಕೃತಿಗೆ ೧೯೬೫ರಲ್ಲಿ ಆಂಧ್ರಪ್ರದೇಶ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 'ಮಂಟಲೂ-ಮಾನವುಡೂ' (ಜ್ವಾಲೆಗಳು ಮತ್ತು ಮಾನವ) ಕವನ ಸಂಗ್ರಹಕ್ಕೆ ೧೯೭೪ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 'ವಿಶ್ವಂಭರಾ' ಸಮಗ್ರ ಕಾವ್ಯಕೃತಿಗೆ ೧೯೮೦ರಲ್ಲಿ ಕಲ್ಕತ್ತದ ಭಾರತೀಯ ಭಾಷಾ ಪರಿಷತ್ತಿನ 'ಬಿಲ್ವಾರ ಪ್ರಶಸ್ತಿ', ೧೯೮೨ರಲ್ಲಿ ತ್ರಿವೇಂಡ್ರಂನ 'ಕುಮಾರನ್ ಆಸಾನ್ ಪ್ರಶಸ್ತಿ', ೧೯೮೨ರಲ್ಲಿ ಸೋವಿಯಟ್ ಲ್ಯಾಂಡ್ ನೆಹರೂ ಪ್ರಶಸ್ತಿ ಹಾಗೂ ೧೯೮೮ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ.

ಡಾ. ಸಿ. ನಾರಾಯಣ ರೆಡ್ಡಿ ಅವರು ಶ್ರೇಷ್ಠ ಕವಿ ಮಾತ್ರವಲ್ಲ, ಒಳ್ಳೆಯ ಗಾಯಕರೂ ಆಗಿದ್ದಾರೆ.

ಇವರು ತಮ್ಮ ಬಿ.ಎ. ಪದವಿ ತನಕ ಉರ್ದು ಮಾಧ್ಯಮದಲ್ಲಿ ಅಭ್ಯಾಸ ಮಾಡಿದ್ದೊಂದು ವಿಶೇಷ. ನಂತರ ಇದರ ಲಾಭವನ್ನು ಅವರು ಸಾಹಿತ್ಯ ಮತ್ತು ಇತರ ರೀತಿಗಳಲ್ಲಿ ಪರೋಕ್ಷವಾಗಿ ನಾಡಿಗೆ ನೀಡಿದ್ದಾರೆ. ೧೯೮೦ರಲ್ಲಿ ರಚಿತವಾದ 'ವಿಶ್ವಂಭರಾ' ಸಮಗ್ರಕಾವ್ಯಕೃತಿಗೆ ೧೯೮೮ರಲ್ಲಿ ಜ್ಞಾನಪೀಠ ಪ್ರಶಸ್ತಿ ಲಭಿಸಿದ ಮೇಲೂ ಅನೇಕ ಮೌಲಿಕ ಕೃತಿಗಳನ್ನು ರಚಿಸಿದ್ದು, ಇಂದಿಗೂ ಅವರು ತಮ್ಮ ವೃತ್ತಿ-ಪ್ರವೃತ್ತಿಗಳ ಮೂಲಕ ಕ್ರಿಯಾಶೀಲರಾಗಿ ನಾಡು-ನುಡಿಗಳ ಸೇವೆ ಮಾಡುತ್ತಿದ್ದಾರೆ.

ಹಿತವಿಲ್ಲದ ಮತವೇಕೆ?

ತೆಲುಗು : ಡಾ। ಸಿ. ನಾರಾಯಣ ರೆಡ್ಡಿ
ಅನು : ಮಾರ್ಕಂಡಪುರಂ ಶ್ರೀನಿವಾಸ

ಮಹಾತ್ಮರು ಸತ್ತರು ಮತಕ್ಕಾಗಿ.
ಸಾಮಾನ್ಯರು ಸಾಯುತ್ತಿದ್ದಾರೆ ಕೂಳಿಗಾಗಿ.
ಒಣಗಿದ ಬಾಯಿಗೆ ಹಸಿಯನ್ನು ಎಟುಕಿಸಲಾರದ
ಸೀಳಿದ ಗೂಡಿಗೆ ಚಿಗುರೆಟುಕಿಸಲಾರದ
ಮತವೇಕೆ ಮಹಾಶಯಾ!
ಬೊಗಸೆ ಸಿಹಿಸೀರಿಗಾಗಿ
ತಳಮಳಿಸುತ್ತಿರುವ ಹೊಟ್ಟೆಗಳನ್ನು
ಉದ್ಧರಣೆಯ ಗಂಗಾಜಲದಿಂದ
ಉದ್ಧರಿಸಲಾರೆ ಸ್ವಾಮಿ!
ಕವಳಾ ರಾಮಚಂದ್ರಾ ಅನ್ನುತ್ತಿದ್ದರೆ
ಆತ್ಮಗಳ ಗೋಳೇಕೆ?
ಎಲ್ಲವು ಕುದುರಿದ ಬಳಿಕ
ಅಂಗಾಂಗಗಳು ಕುಗ್ಗಿಬಿದ್ದ ಬಳಿಕ
ಅರೆತಟ್ಟೆ ಗಂಜಿಯನ್ನದಿಂದ
ಹಸಿವು ಶಿಖರ ಮುಟ್ಟಿದ ಬಳಿಕ -
ನೋಡಿಕೊಳ್ಳೋಣ ಸೋಹಂ ಅಹಂ
ಸೂಕ್ತಿಗಳ ಮಾರುಮೊಳಗು.
ರಮಣಿಯನ್ನೂ ಅರಸೊತ್ತಿಗೆಯನ್ನೂ
ಮಗನನ್ನೂ ಕುಲೀನತೆಯನ್ನೂ
ಗುಳ್ಳೆಯಂತೆ ಊದಿಬಿಟ್ಟ ಬುದ್ಧಿಗೆ ನಮಸ್ಕಾರ
ಮರದ ಕೆಳಗೆ ಚಿಗುರುಹಾಕಿದ ಆ ಸಿದ್ಧಿಗೆ ನಮಸ್ಕಾರ.

ಮತವಿದೆಯಾ ಬುದ್ಧಿಗೆ?
ಕುಲವಿದೆಯಾ ಸಿದ್ಧಿಗೆ?
ಮಾಣಿಕ್ಯ ವೀಣಾಸ್ವರದಲ್ಲಿ
ಮಾತಂಗ ಕನ್ಯಾಸ್ಮರಣೆ.
ಅಗ್ರವರ್ಗಗಳ ಕೊಬ್ಬಿನ ಉರಿಗಳಲ್ಲಿ
ಅಂತಿಮವರ್ಣಗಳ ದಹನ.
ರಾಮಸುಧಾರಸದಲ್ಲಿ ಹೊಟ್ಟೆತುಂಬಿ
ರಮ್ಯವಾಗಿ ತೇಗುತ್ತಿರುವ ಭಕ್ತಾಗ್ರಣಿ!
ಒಂದು ಹೊತ್ತು ತಿನ್ನುತ್ತೀಯಾ
ದಿಕ್ಕುಗೆಟ್ಟ ಶಬರಿ ಎಂಜಲನ್ನು.
ಇಷ್ವಾಕ್ಕೂ ಯಾವ ಮತ ಕೆಟ್ಟದ್ದೆಂದು?
"ಈಶ್ವರ ಅಲ್ಲಾ ತೇರೇ ನಾಮ್"
"ಎಲ್ಲರಿಗೂ ಸನ್ಮತಿ" ಕೊಡೆಂದು.
ಅದೇ ಅದೇ ನಾನು ಅನ್ನುತ್ತಿರುವುದು
ಆಮತಿ - ಸನ್ಮತಿ ಅನುಕ್ಷಣ
ಆತ್ಮಹತ್ಯೆ ಮಾಡಿಕೊಳ್ಳುತ್ತಿರುವೆಯೆಂದು.
ಇತಿಹಾಸವೇ! ಹೊರಬೀಳು.
ಮತದ ಹೆಸರಿನಲ್ಲಿ ನಡೆದ ಮೆರವಣಿಗೆಗಳನ್ನು
ಕಮರಿದ ಶವಗಳ ಕಂಪನ್ನು
ವಿಂಗಡಿಸಿ ತೋರಿಸು.
ಆಗಲ್ಲದೆ ತೂರಿಬರದು
ನಿಜವಾದ ನಾಳೆಯ ನಾಳೆ.

ನನ್ನನಗಲಿ ಹೋಗಬೇಡಿ

ತೆಲುಗು : ಡಾ। ಸಿ. ನಾರಾಯಣ ರೆಡ್ಡಿ
ಅನು : ಮಾರ್ಕಂಡಪುರಂ ಶ್ರೀನಿವಾಸ

ನನ್ನನಗಲಿ ಹೋಗಬೇಡಿ
ನನ್ನ ಬೆನ್ನೇರಿ ನಡೆವ ನೆರಳುಗಳೇ!
ನನ್ನ ಒಡಹುಟ್ಟುಗಳಂತೆ ನೀವು
ಕತ್ತಲ ಕರುಳು ಕಡಿದುಕೊಂಡು ಬರದಿದ್ದರೂ
ಮುಂಜಾನೆ ಫಲಕದ ಮೇಲೆ ಕದಲಿಕೆಯ ಅ ಆ ಗಳು
ಕಲೆತು ತಿದ್ದಿಕೊಂಡಿದ್ದೇವೆ ನಾವು.
ಆಕಾಶದ ಮೆಟ್ಟಿಲೇರುತ್ತಿರುವ ಸೂರ್ಯನನ್ನು
ಬೊಗಸೆಯಂತೆ ಬಿಚ್ಚಿಕೊಂಡ ಬೆರಳುಗಳಿಂದ ಅಭಿಷೇಕಿಸುತ್ತಾ
ಮರಳಲ್ಲಿ ಮೈಬಿಸಾಡಿಕೊಂಡಿದ್ದೇವೆ ನಾವು.

ನಾನು ಮಳೆಯಲ್ಲಿ ನೆನೆದರೆ
ನಿಮ್ಮ ಮೈ ತುಂಬಾ ಹನಿ ಹೊಳೆಯುತ್ತವೆ.
ನಾನು ಬಿಸಿಲಲ್ಲಿ ನಡೆದರೆ
ನಿಮ್ಮ ಬಾಯಿತುಂಬಾ ಆವಿ ಏಳುತ್ತದೆ.
ಗಾಳಿಗರಗಸದಲ್ಲಿ ಕೊಯ್ದು ಕಡಿದುಹೋಗದ
ಗಮನಬಂಧ ನಮ್ಮದು.
ಗುಡುಗಿನ ವಾಂತಿಗಳಿಂದ ಹಳಸಿಹೋಗದ
ಶಿರಸ್ನೇಹ ನಮ್ಮದು.

ಚೋಟುದ್ದದವನನ್ನು ಮರದಷ್ಟು ಚಿತ್ರಿಸಿದ
ಕುಂಚಗಳು ನೀವು.
ಕತ್ತಲಾದರೂ ನೀವು ನನ್ನನಗಲಿ ಹೋಗಲಿಲ್ಲ.
ನನ್ನ ಬದಿಯಲ್ಲೇ ಬಿದ್ದಿದ್ದೀರಿ.

ಗಡ್ಡೆಗಟ್ಟಿದ ಕಪ್ಪು ಶ್ವಾಸದಂತೆ
ಬೆಳಗಾಯಿತೋ ಇಲ್ಲವೋ
ಮತ್ತೆ ನನ್ನೊಂದಿಗೇ ನಿಮ್ಮ ಸಹಗಮನ.
ಹೆಜ್ಜೆಯಂತೆ ಆಶಯದಂತೆ ತಳ್ಳಿಕೊಂಡು ಹೋಗುವ
ಅಧಿಚೇತನ ನಮ್ಮದು.
ಆಚರಣೆ ಶಿರಸ್ಕವಾಗಿ ಹೆಣೆದುಕೊಂಡುಹೋಗುವ
ಐಕ್ಯಭಾವ ನಮ್ಮದು.

ನೆನಪಿದೆಯಾ ನಿಮಗೆ
ಎಳೆತನ ಎಳೆಬಿಸಿಲಲ್ಲಿ
ನಿಮ್ಮನ್ನು ಹಿಡಿದುಕೊಳ್ಳುವುದಕ್ಕೆ
ಮೊಣಕಾಲು ನಡುಗುವಂತೆ ಧುಮುಕುವವನು.
ಪರಬ್ರಹ್ಮ ಪದಾರ್ಥದಂತೆ ನೀವು
ಪಟ್ಟು ಬೀಳುವವರಲ್ಲ.
ಅಮಾಯಕ ಜೀವಿಯಂತೆ ನಾನು
ಸೊರಗಿ ಬಳಲಿ ನಿಮ್ಮ ಎದೆಯಲ್ಲಿ ಮುಖವಿಟ್ಟು
ನಿದ್ರೆ ಹಾಲು ಕುಡಿಯುವವನು.
ಇನ್ನೂ ನಾವು ಮನುಷ್ಯನಂತೆ ಇದ್ದೇನೆಂದರೆ
ಅದು ಆ ಹಾಲಿನ ಬಲವೇ.

ನನ್ನ ಜ್ವಲನಕ್ಕೆ ಧೂಪ ನೀವು
ನನ್ನ ಚಲನಕ್ಕೆ ರೂಪ ನೀವು.
ಕಾಗದದ ಮೇಲೆ ನನ್ನ ಬೆರಳುಗಳು ತುಳಿಯುವ ಪಥಚಲನಕ್ಕೆ
ಲಯಗಳು ನೀವು.
ಸಜೀವ ಸಂಚಾರ ಕ್ರಿಯೆಗಳು ನೀವು.
ಯಾಕೆ ಅಗಲಿ ಹೋಗುತ್ತಿದ್ದೀರಿ ನನ್ನನ್ನು ಹಟಾತ್ತಾಗಿ.
ನನ್ನ ಸುತ್ತೂ ಒಂಟಿಸ್ತಂಭದ ಮಹಡಿ ನಿಂತಿದೆಯಾ?
ಸ್ವಚ್ಛಂದವಾಗಿ ಬೆಳೆವ ನನ್ನ ತಲೆಯ ಮೇಲೆ
ಘನತೆವೆತ್ತ ಕಿರೀಟ ಇಳಿಬಿದ್ದಿದೆಯಾ?
ಪ್ರತಿಬಿಂಬಗಳು ಮೊಳೆಯದ ನಿಲುವುಗನ್ನಡಿಗಳ ನಡುವೆ
ನನ್ನನ್ನು ನಾನೇ ನೋಡಿಕೊಳ್ಳುತ್ತಿರುವೆನಾ?
ಮಣ್ಣಿನ ವಾಸನೆ ಬಡಿವ ನನ್ನ ಚರ್ಮದೊಳಗಿಂದ
ಸಿಂಥಟಿಕ್ ಸೆಂಟ್ ಹೊರಸೂಸುತ್ತಿದೆಯಾ?

ಮುಕ್ತ ಛಂದಸ್ಸಿನಂತೆ ಓಡುವ ನನ್ನ ಆಲೋಚನೆಗಳು
ಮ್ಯೂಜಿಯಂನೊಳಕ್ಕೆ ಮರಳುತ್ತಿವೆಯಾ?
ನನ್ನ ಬೊಂಬೆ ಬದಲಾಗಿದೆಯಾ?
ನನ್ನ ಜನ್ಮ ಬದಲಾಗಿದೆಯಾ?
ಕೀರ್ತಿ ಜಲತಾರಾ ಲೇಪದಿಂದ ನನ್ನ ಮೂರ್ತಿ ಬದಲಾಗಿದೆಯಾ?
ಆದರ ಬೇಡ ಬೇಡ
ನನ್ನ ನಿಸರ್ಗ ರೂಪಕ್ಕೆ ಈ ಶೃಂಗಾರ ಬೇಡ.
ಬಂಗಾರದ ವಿಗ್ರಹದಂತೆ ನಡುಮನೆಯಲ್ಲಿ ನಿಂತುಕೊಳ್ಳುವ
ಈ ದುಬಾರಿ ಬದುಕುಬೇಡ
ಎಲ್ಲವನ್ನು ಕಡಿದುಕೊಂಡು ನಿಮ್ಮೊಂದಿಗೆ ಬರುತ್ತೇನೆ
ನಿಲ್ಲಿ ದಯಪಿಟ್ಟು ನಿಲ್ಲಿ
ನನ್ನ ಬೆನ್ನೇರಿ ನಡೆಯುವ ನೆರಳುಗಳೇ
ನನ್ನನಗಲಿ ಹೋಗಬೇಡಿ.

---

* ಮಾರ್ಕಾಂಡಪುರಂ ಶ್ರೀನಿವಾಸ, ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು - ೫೬೦ ೦೦೨.

ಚತುರ್ಥಾಶ್ರಮ

ತಮಿಳು : ಚೂಡಾಮಣಿ ರಾಘವನ್

ಅನು : ಗೀತಾ ವಿಜಯಕುಮಾರ್

ತಲೆ ಎತ್ತಿ ನೋಡಿದೆ. ಮೋಡ ಮುಸುಕಿದ ಬಾನು. ಸೀಳು ಸೀಳಾಗಿ ಬಿರುಕು ಬಿಟ್ಟಂತಿದೆ.

ಇರುಳು ಮುಸುಕುತ್ತಿದೆ. ಮಳೆ ಹೊಯ್ಯಬಹುದೇನೋ?

ಶಂಕರಿ ನೆನೆದುಬಿಡುವಳೋ ಏನೋ, ಬಯಲಲ್ಲಿ ಅವಳನ್ನು ಮಲಗಿಸಿದ್ದೇವಲ್ಲ?

ನನಗೇನು ಭ್ರಮೆಯೋ? ಬಯಲಲ್ಲಿ ಮಲಗಿರುವ ಅವಳು ಜೀವಂತವಾಗಿರುವಳೇ? ಚಿತೆಯಲ್ಲಿ ಉರಿದ ಅವಳೀಗ ಕೇವಲ ನೆನಪು ಮಾತ್ರ. ಬೂದಿಯಾಗಿರುವ ಹೆಣಕ್ಕೆ ಮಳೆಯಾದರೇನು? ಬಿಸಿಲಾದರೇನು?

ಅವಳು ಸತ್ತಿರುವಳೆಂಬ ಅನಿಸಿಕೆಯೇ ನಮಗಿನ್ನೂ ರೂಢಿಯಾಗಿಲ್ಲ. ನನ್ನನ್ನು ನಾನೇ ಸಂಭಾಳಿಸಿಕೊಳ್ಳಬೇಕು. ಅವಳ ಸಾವಿನ ವಾಸ್ತವಿಕತೆಯನ್ನು ಹೀರಿಕೊಂಡು ನನ್ನೊಳಗೆ ತುಂಬಿಟ್ಟುಕೊಳ್ಳಬೇಕು.

ಅಷ್ಟಕ್ಕೂ ಬೆಂಕಿ ಇಟ್ಟವನು ನಾನೇ ತಾನೇ.

ಶಂಕರಿಗೆ ಮಗನಿದ್ದಾನೆ ಆದರೂ ಅವಳ ಅಂತಿಮ ಸಂಸ್ಕಾರ ಮಾಡಿದ್ದು ನಾನೇ.

ನನ್ನ ಹೆಂಡತಿ ಶಂಕರಿ ತೀರಿಕೊಂಡಳು. ಶಂಕರಿ ತೀರಿಕೊಂಡಳು. ಮೂರನೇ ಮಹಡಿಯಿಂದ ಬಿದ್ದು ನನ್ನ ಹೆಂಡತಿ ಶಂಕರಿ ತೀರಿಕೊಂಡಳು.

ಮಾತಿನ ಜಾಲದಲ್ಲೇ ನಾನವಳಿಗೆ ಸಮಾಧಿಕಟ್ಟುತ್ತಿದ್ದೇನೋ ಏನೋ?

ಅವಳನ್ನು ಯಾವುದೇ ಸಮಾಧಿಯಲ್ಲಿ ಅಡಗಿಸಿಡಲು ಸಾಧ್ಯವೇ?

ಅವಳ, ಅವಳ ಪೂರ್ಣತೆ, ಅವಳಹುಟ್ಟು, ಅವುಗಳನ್ನು.

ಅವಳನ್ನು ಯಾವುದರಲ್ಲೂ ಅಡಗಿಸಲಾಗದು! ಬಂಧಿಸಲಾಗದು! ಅವಳೊಂದು ಸ್ವತಂತ್ರ ಜೀವಿ. ಬಂಧನ, ಬಿಡುಗಡೆ ಇವುಗಳೆಲ್ಲ ನಾವಾಗಿಯೇ ಮಾಡಿಕೊಳ್ಳೋ ಅಂಥದ್ದು ತಾನೇ? ಅವಳು ಕಟ್ಟುಪಾಡಿಗೆ ಮೀರಿದವಳು.

ಮಳೆ ತುಂತುರಾಗಿ ಬೀಳುತ್ತಿದೆಯೇ?

ಸೆಟೆದು ನಿಂತು ನೋಡಿದೆ. ಆಗಸ ಮೊದಲಿಗಿಂತಲೂ ತಿಳಿಯಾಗಿತ್ತು. ಹಾಗಾದರೆ ಕೆನ್ನೆ ಮೇಲೆ ಬಿದ್ದ ಹನಿ?

ನಿನಗಾಗಿ ಅಳುತ್ತಿದ್ದೇನೆಯೋ ಅಥವಾ ನನಗಾಗಿಯೋ?

ಯಾರಿಗಾಗಿ ನನ್ನ ಈ ಕಣ್ಣೀರು?

ನಿನ್ನೆ ಅವಳು ತೀರಿಕೊಂಡಳು.

ನೀನು ಬಹಳ ಕಾಲ ಬಾಳಿಬದುಕಲಿಲ್ಲವೆಂದೇ ನಾನು ಕಣ್ಣೀರು ಸುರಿಸುತ್ತಿರುವುದು ಶಂಕರಿ?

ಇಲ್ಲ ನನಗೋಸ್ಕರವೇ ಅಳುತ್ತಿದ್ದೇನೆ. ನಿನ್ನನ್ನು ಕಳೆದುಕೊಂಡು ದೊಡ್ಡ ನಷ್ಟವನ್ನು ಅನುಭವಿಸುತ್ತಿದ್ದೇನೆಂದು ಅಳುತ್ತಿದ್ದೇನೆ. ಇನ್ನೆಲ್ಲಿ ನನಗೆ ನಿನ್ನಂಥಾ ನಿಧಿ ದೊರಕೀತು? ಎಂದು ಕೊರಗುತ್ತ ದುಃಖಿಸುತ್ತಿದ್ದೇನೆ.

ನಾನು ಬಹಳ ಸ್ವಾರ್ಥಿಯಾಗಿಬಿಟ್ಟೆ. ಹಾಗಿಲ್ಲದಿದ್ದಲ್ಲಿ ಈ ರೀತಿ ಮುಕ್ತಾಯಗೊಂಡಿರುತ್ತಿತ್ತೇ?

ಶಂಕರಿ ಸ್ನೇಹಿತನ ಮಗಳಾಗಿ, ನನ್ನ ವಿದ್ಯಾರ್ಥಿನಿಯಾಗಿ, ಹೆಂಡತಿಯಾಗಿ, ಸಾಹಿತಿ ಶಂಕರಿ, ವಯಸ್ಸಿನಲ್ಲಿ ನನಗಿಂತ ಹೆಚ್ಚು ಕಡಿಮೆ ಇಪ್ಪತ್ತು ವರ್ಷಕ್ಕೆ ಚಿಕ್ಕವಳು. ಹಾಗಿದ್ದರೂ ನನ್ನನ್ನು ಇಷ್ಟಪಟ್ಟು ಮದುವೆಯಾದವಳು.

"ಶಂಕರಿ, ನೀನೇನು ಮಾಡ್ತಿದೀಯ ಅನ್ನೋದು ನಿನಗೆ ತಿಳಿದಿದೆ ತಾನೇ"?

"ಗೊತ್ತಿದೆ ಪ್ರೊಫೆಸರ್! ನಾನು ಯಾವುದನ್ನೂ ಗೊತ್ತಿಲ್ಲದೆ ಮಾಡೋದಿಲ್ಲ" ನಗುತ್ತಲೇ ಹೇಳಿದ್ದಳು.

ಆಗ ಅವಳ ವಯಸ್ಸು ಮೂವತ್ತೆಂಟು. ಎಷ್ಟೋ ವರ್ಷಗಳಿಂದ ಕಂಡಿದ್ದ ಸ್ನೇಹಿತನ ಮಗಳೆಂದು, ತಿಳಿದು ಪರಿಚಯವಾದವಳು. ಅವಳ ರೂಪು ಆ ನಗು ಎಲ್ಲವೂ ನನಗೆ ಚಿರಪರಿಚಿತ. ಅವಳು ಸುಂದರಿಯೇ ಅಲ್ಲವೇ ಎಂಬುದನ್ನು ನನ್ನಿಂದ ಹೇಳಲು ಸಾಧ್ಯವಿಲ್ಲ. ನೋಡುವವರ ಕಣ್ಣಿಗೆ ಕಾಣುವ ಸುಂದರತೆ ಅದು. ಸೌಂದರ್ಯ ಅನ್ನೋದು, ದೃಶ್ಯಮಯ ಕವಿತೆಯಂತೆ. ಅವರವರ ಮನೋಭಾವಕ್ಕೆ ತಕ್ಕಂತೆ ಅರ್ಥವಾಗುವ ಕವಿತೆಯಂತೆ ಎಂದು ಅವಳು ಹೇಳಿದಾಗ, ಪರಿಚಿತ ಹೆಣ್ಣೊಂದು ಒಮ್ಮೆಗೇ ನಾನು ಹುಡುಕುತ್ತಿದ್ದ ಒಗಟಿನ ಅರ್ಥವಂತೆ, ಭವ್ಯವಾದ ದರ್ಶನವಾದಂತೆ ನನಗನ್ನಿಸಿತ್ತು. ಐವತ್ತಾರರವರೆಗೆ ಒಂಟಿ ಜೀವನದಲ್ಲಿಯೇ ತೃಪ್ತಿಹೊಂದಿದ್ದ ನನ್ನ ಹೃದಯದಲ್ಲಿ ಆಗ ಮೂಡಿದ ಪ್ರೇಮ ಒಂದು ಆಶ್ಚರ್ಯ ಅಂತಲೇ ಹೇಳಬೇಕು. ಅದು ಪ್ರೇಮವೇ ಆಗಿರಬೇಕೆಂದು ನನ್ನ ಅನಿಸಿಕೆ. ಏಕೆಂದರೆ ನಮ್ಮ ಸಂಸಾರ ಮುದಿಯನೋರ್ವನ ಕಾಲ ಸರಿದ ಮದುವೆಯಂತಿರದೆ ಎರಡು ಜೀವಗಳ ಬೆಸುಗೆಯಿಂದುಂಟಾದ, ಪರಿಪೂರ್ಣ ಕುಟುಂಬವಾಗಿತ್ತು ನಮ್ಮಿಬ್ಬರ ದಾಂಪತ್ಯ.

ಗಂಟಲೊಳಗೆ ಏನೋ ಸಿಕ್ಕಿಕೊಂಡಂತಾಯ್ತು. ಕಾಲುಗಳು ಶಕ್ತಿಹೀನವಾಗಿ, ನಡುಗಲಾರಂಭಿಸಿತು. ನನ್ನೆಲ್ಲ ಶಕ್ತಿಯನ್ನು ಅವಳೊಂದಿಗೆ ಕೃಷ್ಣಘಾಟಿಯಲ್ಲಿ ಸುಟ್ಟು ಬಂದುಬಿಟ್ಟಂತೆನಿಸಿತು. ಆಕಾಶ ಚೆನ್ನಾಗಿಯೇ ತಿಳಿಯಾಗಿದ್ದರೂ, ಬೆಳಗಿನ ಹನ್ನೊಂದಾಗಿದ್ದರೂ ಇನ್ನೂ ಸೂರ್ಯನ ಬಿಸಿಲು ಹೊರಬಿದ್ದಿರಲಿಲ್ಲ. ಕಾರ್ತೀಕದ ಹಿತವಾದ ದಿನವಾಗಿದ್ದರೂ, ನನ್ನ ಬೋಳು ನೆತ್ತಿಯಿಂದ ಒಂದೇಸಮನೆ ಬೆವರು ಸುರಿಯಲಾರಂಭಿಸಿತು.

ಸ್ಮಶಾನದಿಂದ ಬಹಳಷ್ಟು ದೂರ ನಡೆದಿರಬೇಕು? ಇಷ್ಟು ಹೊತ್ತಿಗಾಗಲೇ ಬಸ್ ಅಂಗಡಿ ಸಾಲಿನಲ್ಲಿ ಭರದಿಂದ ವ್ಯಾಪಾರದ ವಹಿವಾಟು ಪ್ರಾರಂಭವಾಗಿಬಿಟ್ಟಿತ್ತು. ಆಯಾಸ ತಡೆಯಲಾರದೆ ಒಂದು ಡಿಪಾರ್ಟ್‌ಮೆಂಟ್ ಅಂಗಡಿಯ ಮುಂದೆ ಹೋಗಿ ಕುಳಿತುಕೊಂಡೆ.

ಎದೆ ತುಂಬಿಬಂತು. ಗಾಳಿಯಲ್ಲಿ ಸಲೀಸಾಗಿ ಬಿಡುಗಡೆ ಹೊಂದಿದ ಶಂಕರಿ, ನನ್ನೆದೆಯಲ್ಲಿ ಮಾತ್ರ ಏಕೆ ಭಾರವಾಗಿದ್ದಾಳೆ?

ನನ್ನನ್ನು ಅವಳು ಸದಾ ಪ್ರೊಫೆಸರ್ ಅಂತಲೇ ಕರೆಯುತ್ತಿದ್ದಳು. ನಾನೀಗ ನಿನ್ನ ಗಂಡ, ಈಗ್ಲೂ ನಿನಗೆ ನಾನು ಬರೀ ಪ್ರೊಫೆಸರೋ! ನಾನವಳನ್ನು ಕೇಳಿದ್ದೆ.

ಬರೀ ಪ್ರೊಫೆಸರ್! ಎಲ್ಲಾ ವಿಧದಲ್ಲೂ ಪ್ರೊಫೆಸರ್ ಎಂದು ಅವಳೆಂದಾಗ, ಅವಳ ಹೂ ನಗ ನನ್ನನ್ನು ತಲೆ ತಗ್ಗಿಸುವಂತೆ ಮಾಡಿತ್ತು.

ಎಲ್ಲ ರೀತಿಯಲ್ಲೂ ಪ್ರೊಫೆಸರ್ ದಿಟ. ಓರ್ವ ಪ್ರೊಫೆಸರನಾಗಿ ಉದಾತ್ತಚಿಂತನೆಯಿಂದ ಅಧ್ಯಯನ ಮಾಡುವವನೆಂದು ನನ್ನನ್ನು ಗುರುತಿಸಿ, ಎಲ್ಲ ವಿಧದಲ್ಲೂ ನನ್ನನ್ನು ಗೌರವ ಸ್ಥಾನದಲ್ಲಿಟ್ಟು ಆ ಮಾನದಂಡದಿಂದಲೇ ಇದೀಗ ನನ್ನನ್ನು ಅಳೆದು ನೋಡಿ, ನನ್ನಲ್ಲಿ ಪ್ರೀತಿಯನ್ನು ನೆಟ್ಟಿದ್ದಳು. ನನ್ನನ್ನು ಮದುವೆಯಾದುದರ ಪ್ರಮುಖ ಕಾರಣವೂ ಅದೇ ಆಗಿತ್ತು. ಪುಸ್ತಕಗಳ ಬಗ್ಗೆ ಚರ್ಚೆ, ತಾತ್ವಿಕ ಚಿಂತನೆ,ವಾದ ವಿವಾದಗಳಂತಹ ಕ್ರಿಯಾತ್ಮಕ ಸ್ಪಂದನದಲ್ಲಿ ಸಮಾನ ಅಭಿರುಚಿ ಹೊಂದಿದ ನಾವಿಬ್ಬರು ಸಮಯದ ಪರಿಜ್ಞಾನವಿರದೆ ತನ್ಮಯರಾಗಿಬಿಡುತ್ತಿದ್ದೆವು. ಕೆಲವೊಮ್ಮೆ ಕೇವಲ ನನ್ನನ್ನು ಮಾತ್ರ ಮಾತನಾಡಗೊಟ್ಟು, ಅವಳು ಸುಮ್ಮನೆ ಕುಳಿತು ನನ್ನ ಮಾತುಗಳನ್ನು ಆಲಿಸುವಳು. "ನೀವು ಮಾತನಾಡಿದಾಗ ಈ ಫಿಲಾಸಫರನ ಸಂಕೀರ್ಣ ವಿಚಾರಗಳೂ ಸುಲಭವಾಗಿ ಅರ್ಥವಾಗಿಬಿಡುತ್ತೆ ಪ್ರೊಫೆಸರ್" ಎಂದು ನನ್ನನ್ನು ಬಾಯಿತುಂಬಾ ಹೊಗಳುವಳು. ನಿಮ್ಮೊಡನೆ ನಾನು ಬಹಳ ಸಂತೋಷದಿಂದಿದ್ದೇನೆ ಎಂದು ನನ್ನಲ್ಲಿಯೇ ಕರಗಿಹೋಗಿ ಬಿಡುವಳು.

"ಹಲೋ ಪ್ರೊಫೆಸರ್"!

ದಿಗ್ಭ್ರಮೆಗೊಂಡೆ, ನಂತರ ಎದುರುನಿಂತ ಆಕೃತಿಯನ್ನು ಕಂಡು ತಲೆದೂಗಿದೆ. ಮೆಲ್ಲನೆ 'ಹಲೋ' ಎಂದೆ.

ಮೂರ್ತಿ ನಿಂತಿದ್ದ. ಆಯಕರ ಇಲಾಖೆಯಲ್ಲಿ ಆತ ಅಧಿಕಾರಿ. ಇಲ್ಲಿಯತನಕ ನಾನವನನ್ನು ಏಕವಚನದಲ್ಲಿ ಸಂಬೋಧಿಸಿದರೂ. ಅವನಿಗೂ ವಯಸ್ಸು ಐವತ್ತಕ್ಕೆ ಸಮೀಪಿಸಿತ್ತು.

ಶಂಕರಿಗಿಂತ ಏಳು ವರ್ಷಕ್ಕೆ ದೊಡ್ಡವನು. ನನಗಿಂತ ಮೊದಲು ಶಂಕರಿಯನ್ನು ಮದುವೆಯಾಗಿದ್ದವನು.

"ನಿಮ್ಮ ಪಕ್ಕದಲ್ಲಿ ಕುಳಿತುಕೊಳ್ಳಬಹುದೇ"? ಎಂದ.

'ಧಾರಾಳವಾಗಿ'.

ಅವನು ಕುಳಿತುಕೊಂಡ. ವಯಸ್ಸು ಐವತ್ತು ಸಮೀಪಿಸಿದ್ದರೂ, ಯೌವನ ಮಾಸದ ರೂಪು. ದಟ್ಟವಾದ ಕರಿ ಕೂದಲಲ್ಲಿ ಇದೀಗ ಅಲ್ಲಿ ಇಲ್ಲಿ, ಒಂದೊಂದು ನೆರೆಕೂದಲು ಕಾಣಿಸಿಕೊಳ್ಳಲಾರಂಭಿಸಿದೆ. ಇದೀಗ ಮುಖ ಬಾಡಿ ಸೊರಗಿತ್ತು.

"ಸ್ಮಶಾನಕ್ಕೆ ಬಂದಿದ್ದೆ. ವಿಷಯ ತಿಳಿದು ಮನೆಗೇ ಓಡಿಬರಬೇಕೆಂದು ಚಡಪಡಿಸಿದೆ. ಧೈರ್ಯ ಸಾಲಲಿಲ್ಲ" ಎಂದ.

"ಯಾಕೆ ಹಾಗೆ, ನಾನು ಅರ್ಥಮಾಡಿಕೊಳ್ತಿದ್ದೆ"

"ಮೂರನೇ ಮಹಡಿಯಿಂದ ಜಾರಿ ಬಿದ್ದುಬಿಟ್ಟಳಂತೆ"

"ಹೌದು"

"ಎಷ್ಟೊಂದು ನರಳಿದ್ದಳೋ ಏನೋ ಅಂತ ಯೋಚಿಸಿದ್ರೇನೇ ಎದೆ ಒಡೆದುಹೋಗುತ್ತೆ"

"ಅವಳು ಅಷ್ಟೇನು ಕಷ್ಟಪಡಲಿಲ್ಲ, ಕ್ಷಣದಲ್ಲೇ ಪ್ರಾಣ ಹೊರಟುಹೋಯಿತು"

"ಅಬ್ಬಾ. ಥ್ಯಾಂಕ್ಯೂ, ಪ್ರೊಫೆಸರ್?"

ಸ್ವಲ್ಪ ಹೊತ್ತು ಇಬ್ಬರೂ ಮೌನವಾಗಿದ್ದೆವು.

"ಶಂಕರಿಯ ಬಗ್ಗೆ, ನನಗಿನ್ನೂ ಇಷ್ಟೊಂದು ವ್ಯಾಮೋಹವೇ ಅಂತ ತಾವು ಭಾವಿಸಬಹುದು" ಎಂದ ಮೂರ್ತಿ.

"ಇದರಲ್ಲಿ ಆಶ್ಚರ್ಯವೇನಿದೆ? ಶಂಕರಿ ಎಲ್ಲರಿಗೂ ಆತ್ಮೀಯಳಾಗಿಯೇ ಇದ್ದಳು"

"ಹಾಗಿದ್ದರೂ, ನಾನವಳನ್ನು ಹೋಗಗೊಟ್ಟವನಲ್ಲವೇ"?

"ಹೋಗಗೊಡೋದಕ್ಕೆ ಧೈರ್ಯಬೇಕು. ಪ್ರೀತಿ ಬೇಕು".

"ಆದರೂ ನಾನವಳನ್ನು ಹೋಗಗೊಟ್ಟಿದ್ದು ಪ್ರೀತಿಗಾಗಿಯೋ ಅಲ್ಲವೋ ಅನ್ನೋದು ನನಗೆ ತಿಳಿದಿಲ್ಲ ಪ್ರೊಫೆಸರ್. ವಿವಾಹ ವಿಚ್ಛೇದನೆ ಬೇಕು ಅಂತ ಅವಳು ನನ್ನನ್ನು ಕೇಳಿದಾಗ, ನನ್ನಾಲ್ಲುಂಟಾದ ಭಾವನೆ ಯಾವುದೆಂದು ಖಚಿತವಾಗಿಯೂ ನನಗೆ ತಿಳಿದಿರಲಿಲ್ಲ. ನನ್ನನ್ನು ಬಿಟ್ಟು ಹೋಗ್ತೀನಿ ಅಂತಾಳಲ್ಲಾ ಅನ್ನೋ ಕೋಪಕ್ಕೆ ನಾನವಳನ್ನು ಹೋಗಗೊಟ್ಟಿದ್ದಿದ್ದರೆ, ಅದು ಹೇಗೆ ತಾನೇ ಪ್ರೀತಿಯಾಗುತ್ತೆ?"

ಸ್ವಲ್ಪ ಹೊತ್ತಿನ ಮೌನದ ನಂತರ ಅವನು ಮುಂದುವರೆಸಿದ.

"ಅದರಲ್ಲೂ ನಿಮ್ಮನ್ನು ಮದುವೆಮಾಡಿಕೊಳ್ತೀನಿ, ಇಷ್ಟಪಟ್ಟಿದೀನಿ ಅಂತ ಅವಳು ಹೇಳಿದಾಗ, ನನ್ನೊಡನೆ ಅಷ್ಟೊಂದು ಅನ್ಯೋನ್ಯವಾಗಿ ಬಾಳುವೆ ಮಾಡಿದ ನಂತರವೂ ನನ್ನ ಹಾಗೂ ಅವಳ ಬಗ್ಗೆ ಎಲ್ಲರೂ ಹೇಗೆ ಮಾತನಾಡಿಕೊಳ್ಳುತ್ತಿದ್ದರು ಅನ್ನೋದು ತಮಗೂ ಗೊತ್ತು. ಅಲ್ವೆ ಪ್ರೊಫೆಸರ್".

"ಹೌದು, "ರತಿ ಮನ್ಮಥ" ಅಂತ ಕೆಲವರು ಕುಹಕದಿಂದ ನುಡಿದರೆ, ಕೆಲವೊಬ್ಬರು ಅಸೂಯೆಯಿಂದ ನಿಮ್ಮಿಬ್ಬರ ಬಗೆ ಮಾತನಾಡುತ್ತಿದ್ದುದು ನನಗೂ ಗೊತ್ತು".

ಮೂರ್ತಿ ನಿಟ್ಟುಸಿರುಬಿಟ್ಟರು. ದಿಟವಾಗಿಯೂ ಶಂಕರಿ ಹಾಗೂ ಅವನು ಅನ್ಯೋನ್ಯವಾಗಿ ಬಾಳಿದುದರ ಬಗ್ಗೆ ಯಾವೊಂದು ಉಪಮೆಯನ್ನು ಕೊಡಲೂ ಸಾಧ್ಯವಿಲ್ಲ. ದೈಹಿಕ ದೈವತ್ವಕ್ಕೆ ಲೈಂಗಿಕ ಜೀವನ ಮುಕುಟಪ್ರಾಯ ಎಂಬುದನ್ನು ಸಾಬೀತುಪಡಿಸಿದ ದಂಪತಿಗಳವರು.

"ನನ್ನೊಡನೆ ಅವಳು ಅದೇ ರೀತಿ ಬಾಳಿದ್ದಳು. ನನ್ನಿಂದ ವಿಚ್ಛೇದನೆ ಪಡೆದು, ತನಗಿಂತ ಇಪ್ಪತ್ತು ವರ್ಷ ಹಿರಿಯನಾದವನೊಬ್ಬನನ್ನು ವಿವಾಹಮಾಡಿಕೊಳ್ಳಬಯಸಿದಾಗ, ನನಗೆಷ್ಟು ಸಿಟ್ಟು ಬಂದಿರಲಿಕ್ಕಿಲ್ಲ. ನನಗೆಷ್ಟೊಂದು ಅಸೂಯೆ ಉಂಟಾಗಿರಬೇಡ. ಆ ಕಾರಣಕ್ಕಾಗಿಯೇ ಏನೋ, ಕೊನೆಯಲ್ಲಿ ನಾನು ವಿವಾಹ ವಿಚ್ಛೇದನಕ್ಕೆ ಸಮ್ಮತಿಸಿದ್ದು! ನನ್ನನ್ನು ಬಿಟ್ಟು ಬೇರೆಯವನನ್ನು ಬಯಸುವ ಇವಳೊಡನೆ ಏಕೆ ಬಾಳ ಬೇಕೆಂದೆನಿಸಿತೋ ಏನೋ! ಅದೇನು ಪ್ರೀತಿ ಅಲ್ಲವಲ್ಲ, ಕೋಪಾ ತಾನೇ? ಆತ್ಮಾಭಿಮಾನಕ್ಕೆ ದೊಡ್ಡ ಪೆಟ್ಟು ತಾನೇ"?

"ಇರಬಹುದು, ನಿಮ್ಮ ಸಮವಯಸ್ಕನೊಬ್ಬನನ್ನಲ್ಲದೆ, ಓರ್ವ ಮುದುಕನನ್ನು ಬಯಸಿ ಹೋಗುತ್ತೇನೆಂದಾಗ, ಆತ್ಮಸಮ್ಮಾನಕ್ಕೆ ಪೆಟ್ಟಾಗಿರಬಹುದಾಗಿತ್ತು. ಆದರೆ ಇದೇನು ನಿಜವಾದ ಪೈಪೋಟಿ ಏನೂ ಆಗಿರಲಿಲ್ಲವಲ್ಲ ಅಂತ ತಾವು ಒಂದು ವೇಳೆ ಭಾವಿಸಿಕೊಂಡಿರುತ್ತಿದ್ದರೆ, ಖಂಡಿತವಾಗಿಯೂ ಅಂಥಾ ದೊಡ್ಡ ಪೆಟ್ಟೇನೂ ಉಂಟಾಗಿರಲಾರದು".

"ನಿಜ, ನಮ್ಮನ್ನು ನಾವು ಅರ್ಥ ಮಾಡಿಕೊಳ್ಳೋದು ಕಷ್ಟ. ಆದರೆ ಒಂದು ಮಾತು, ನಮ್ಮ ವಿವಾಹ ವಿಚ್ಛೇದನೆಯ ನಂತರ, ಒಂದು ವರ್ಷ ಕಳೆದ ಮೇಲೆ, ಅವಳು ತಮ್ಮನ್ನು ಮದುವೆ ಮಾಡಿಕೊಂಡ ಮೇಲೆ, ನನ್ನ ಮನದೊಳಗೆ ಬೇರಿನ್ನ್ಯಾವ ಭಾವನೆ ಹುಟ್ಟಿದ್ದರೂ, ಇಲ್ಲಿಯವರೆಗೂ ಮನದ ಮೂಲೆಯಲ್ಲೆಲ್ಲೋ ಒಂದು ರೀತಿಯ ಪ್ರೀತಿ ಇದ್ದೇ ಇತ್ತು. ಅವಳು ತೀರಿಕೊಂಡ ಸುದ್ದಿ ತಿಳಿದ ಮೇಲೆ, ಮನಸ್ಸಿಗೇನೂ

ಸಂತೋಷವಾಗಲಿಲ್ಲ. ಸ್ಮಶಾನಕ್ಕೆ ಬಂದು ಗುಂಪಿನಲ್ಲೊಂದಾಗಿ, ಯಾರಿಗೂ ಗೊತ್ತಾಗದ ಹಾಗೆ, ಒಂದೇ ಸಲ ಕಣ್ಣಿನಿಂದ ಆ ದೇಹವನ್ನು ನೋಡಿ ಹೋಗಬೇಕೆನ್ನುವ ತವಕವನ್ನು ನನ್ನಿಂದ ಹತ್ತಿಕ್ಕಲು ಸಾಧ್ಯವಾಗಲಿಲ್ಲ".

ಇಬ್ಬರೂ ಅದೇಕ್ಷಣ ನೆನಪಿನಾಳದಲ್ಲಿ ಮುಳುಗಿಹೋದೆವು.

ಅಂಗಡಿಯ ಸಿಬ್ಬಂದಿಯೋರ್ವ ನಮ್ಮನ್ನು ಆಪಾದಮಸ್ತಕ ನೋಡಿದ. ನಂತರ ಏನಾದರೂ ತೆಗೆದುಕೊಳ್ಳಬೇಕಿತ್ತೇ? ಎಂದು ಪ್ರಶ್ನಿಸಿದ. ಅವನ ನೋಟ ಹಾಗೂ ಪ್ರಶ್ನೆಯಲ್ಲಿ ಹಾಗಿಲ್ಲದಿದ್ದಲ್ಲಿ ನೀವಿನ್ನು ಎದ್ದು ಹೊರಡಬಹುದಲ್ಲವೇ? ಎನ್ನುವ ಅರ್ಥ ಹುದುಗಿದ್ದಂತಿತ್ತು.

ನಾವು ಎದ್ದು ಹೊರಟೆವು.

"ನೀವೀಗ ಎಲ್ಲಿಗೆ ಹೋಗಬೇಕು? ಮನೇಗಾ?" ಅಂತ ಮೂರ್ತಿ ಪ್ರಶ್ನಿಸಿದ.

"ಬೇರೇನು ಕೆಲಸವಿಲ್ಲ. ಮನೆಗೆ ಹೋಗೋಕೇನವಸರ? ಈಗ ಅಲ್ಲಿ ಯಾರಿದ್ದಾರೆ ಅಂತ?" ಎಂದೆ.

"ನನಗ್ಯಾಕೋ ಮನಸ್ಸು ಸರಿಯಿಲ್ಲ. ನಿಮ್ಮೊಡನೆ ಸ್ವಲ್ಪ ಹೊತ್ತು ಶಂಕರಿ ಬಗ್ಗೆ ಮಾತನಾಡಿಕೊಂಡಿದ್ರೆ ಮನಸ್ಸಿಗೆ ಸ್ವಲ್ಪ ಹಿತವೆನಿಸಬಹುದು ಅಂತೆನಿಸುತ್ತಿದೆ".

"ಮಾತನಾಡಬಹುದು"

"ಗುರಿಯಿಲ್ಲದೆ ಅಲೆದಾಡೋ ಬದಲು, ಹೋಟೇಲಿಗೆ ಹೋಗಿ ಕುಳಿತುಕೊಳ್ಳೋಣವೇ?"

"ನಮ್ಮಿಂದ ಈಗ ಏನನ್ನೂ ತಿನ್ನೋಕಾಗೊದಿಲ್ಲ ಅನ್ನೋದು ನಮಗೆ ಗೊತ್ತು. ಆದರೆ ಆರ್ಡರ್ ಮಾಡಿ, ತಿನ್ನದೆ ಮಾತನಾಡುತ್ತ ಕುಳಿತುಕೊಂಡರೆ ಎದ್ದು ಹೋಗಿ ಅಂತ ಹೇಳಲಾರರೇನೋ ಅಲ್ವೆ!"

ಒಳಗಡೆ ಹೋಗಿ ಒಂದು ಮೇಜಿನ ಬಳಿ ಕುಳಿತುಕೊಂಡೆವು. ಮೂರ್ತಿ ಯಾವುದೋ ತಿಂಡಿಯನ್ನು ಆರ್ಡರ್ ಮಾಡಿದ, ಅದೇನೆಂದು ನನಗಂತೂ ತಿಳಿಯಲಿಲ್ಲ. ಬಹುಶಃ ಅವನಿಗೇನಾದರೂ ತಿಳಿಯಿತೇ ಅನ್ನೋದು ಅನುಮಾನ. ತಿಂಡಿ ತುಂಬಿದ ತಟ್ಟೆಯನ್ನು ಮಾಣಿ ನಮ್ಮ ಮುಂದೆ ತಂದಿಟ್ಟ, ಅದನ್ನು ಕಂಡು ನಾವು ಶೂನ್ಯದಲ್ಲಿ ನಮ್ಮ ದೃಷ್ಟಿಯನ್ನು ನೆಟ್ಟೆವು.

ತಟ್ಟನೆ ಮೂರ್ತಿ ಕೇಳಿದ "ಅವಳು ಕಾಲೇಜಿನಲ್ಲಿ ಓದುವಾಗ ತಾವು ಸಾಹಿತ್ಯದ ಪ್ರೊಫೆಸರರಾಗಿದ್ರಿ ಅಲ್ಲವೆ? ಆಗಲೇ ಆಕೆಗೆ ತಮ್ಮ ಮೇಲೆ ಪ್ರೀತಿ ಉಂಟಾಗಿತ್ತೇ? ಅದಕ್ಕೆಂದೇ ಕೊನೆಯಲ್ಲಿ ನನ್ನನ್ನು ಬಿಟ್ಟು ತಮ್ಮನ್ನು ವರಿಸಿದಳೇ? "

"ಇಲ್ಲ. ಅವಳು ನನ್ನ ವಿದ್ಯಾರ್ಥಿನಿಯಾಗಿದ್ದಾಗ, ಕೇವಲ ವಿದ್ಯಾರ್ಥಿನಿಯಾಗಿ ಮಾತ್ರ ಇದ್ದಳು. ಆ
ನಂತರವೇ ಅವಳ ಮನಸ್ಸು ನನ್ನ ಕಡೆ ವಾಲಿತು ಅಂತ ಅವಳಿಂದ ಕೇಳಿಯೇ ನನಗೆ ಗೊತ್ತಾದದ್ದು."
"ಕಾಲೇಜಿನಲ್ಲಿ ನೀವು ನನಗೆ ಪಾಠ ಹೇಳಿಕೊಡುತ್ತಿದ್ದಾಗ, ಪ್ರೊಫೆಸರ್ ಜ್ಞಾನಸುಂದರಂ ತರಹ
ಬೇರಿನ್ನ್ಯಾರಾದರೂ ಇರಲು ಸಾಧ್ಯವೇ? ಅಂತ ನಿಮ್ಮ ಬಗ್ಗೆ ನಾನು ಅನೇಕ ಸಲ ಯೋಚಿಸಿದ್ದೆ. ನಿಮ್ಮ
ಅರಿವು, ಜ್ಞಾನ ನಿಮ್ಮನ್ನು ಆ ರೀತಿ ಹೊಗಳುವಂತೆ ಮಾಡಿತ್ತು. ಇದೀಗ ಇಷ್ಟು ವರ್ಷಗಳ ನಂತರ, ಈ
ನಮ್ಮ ಗುಣಗಳೇ ನನಗೀಗ ಅತ್ಯಾವಶ್ಯಕವೆನಿಸಿದೆ ಪ್ರೊಫೆಸರ್. ಹಿಂದೆ ನಾನು ಹೊಗಳಿದ್ದ ಆ ಗುಣಗಳ
ಬಗ್ಗೆಯೇ ಪುನಃ ಪರ್ಯಾಲೋಚಿಸಿ, ಅವುಗಳನ್ನು ಇಷ್ಟಪಟ್ಟು ಬಂದಿದ್ದೇನೆ."

"ತನಗಿಂತ ಅಷ್ಟೊಂದು ದೊಡ್ಡವರೊಬ್ಬರನ್ನು, ತನಗೆ ಶಿಕ್ಷಕರಾಗಿದ್ದವರನ್ನು, ಎಷ್ಟೋ ವರ್ಷ ತನ್ನಪ್ಪನ ಆತ್ಮೀಯ ಸ್ನೇಹಿತರಾಗಿದ್ದವರನ್ನು ಆ ರೀತಿ ದಿಢೀರ್ ಅಂತ, ಓರ್ವ ಒಳ್ಳೆ ಪತಿಯಾಗಬಹುದೆಂದು ಅವಳ ಮನಸ್ಸಿಗೆ ಅನ್ನಿಸಿರಬಹುದೇ?" ಮೂರ್ತಿ ಪ್ರಶ್ನಿಸಿದ.

"ನೀವು ಅವಳನ್ನು ಸರಿಯಾಗಿ ಅರ್ಥಾನೇ ಮಾಡಿಕೊಳ್ಳಲಿಲ್ಲ ಅಂತ ಕಾಣುತ್ತೆ, ಮೂರ್ತಿ!"

"ನನಗರ್ಥಾನೇ ಆಗ್ತಾ ಇಲ್ಲ ಪ್ರೊಫೆಸರ್. ದೇಹ ಮನಸ್ಸು ಬೆಸೆದಂತೆ ನನ್ನೊಡನೆ ಬಾಳಿದ ಅವಳು, ನನ್ನ ಎರಡು ಮಕ್ಕಳಿಗೆ ತಾಯಿಯಾದವಳು, ಕೊನೆಯಲ್ಲಿ ನನ್ನನ್ನು ವಿವಾಹ ವಿಚ್ಛೇದನೆ ಏಕೆ ಕೇಳಿದಳು ಅನ್ನೋದೇ ನನಗಿನ್ನೂ ಅರ್ಥವಾಗಿಲ್ಲ. ನಿಮ್ಮ ಬಗ್ಗೆ ಅವಳಿಗದೇನು ಆಕರ್ಷಣೆ?"

"ನನ್ನೊಡನೆ ಪುಸ್ತಕಗಳ ಬಗ್ಗೆ ಚರ್ಚೆ ಮಾಡಬಹುದು, ಕ್ಲಿಷ್ಟವಾದ ವಿಚಾರಗಳ ಬಗ್ಗೆ ಚರ್ಚಿಸಿ, ತನ್ನೆಲ್ಲ ಅನುಮಾನಗಳನ್ನು ಪರಿಹರಿಸಿಕೊಳ್ಳಬಹುದೆಂದು, ಗಂಡ ಹೆಂಡಿರಾಗಿ ರಾತ್ರಿ ನಾವು ನಮ್ಮ ಮಲಗುವ ಕೋಣೆಯೊಳಗಿದ್ದಾಗ ಮಾನವೀಯ ಮೌಲ್ಯಗಳ ಬಗ್ಗೆ ವಸುವಿನ ಅನಿಸಿಕೆ ಹಾಗೂ ಕೀಟ್ಸನ ಅನಿಸಿಕೆಯ ಬಗ್ಗೆ ಚರ್ಚಿಸಿ ಯಾರ ವಿಚಾರಧಾರೆ ಉತ್ತಮ ಎಂದು ಮಾತನಾಡಿಕೊಳ್ಳುತ್ತಿದ್ದೆವು ಅಂತ ಹೇಳಿದರೆ, ಇದೇ ಬಹುಶಃ ನಮ್ಮಿಬ್ಬರ ನಡುವಿನ ದೊಡ್ಡ ಆಕರ್ಷಣೆ ಎಂದರೆ ತಮ್ಮಿಂದ ಇದನ್ನು ಅರ್ಥಮಾಡಿಕೊಳ್ಳೋದಕ್ಕಾಗುತ್ತದೆಯೇ?"

ಅವನು ಸ್ವಲ್ಪ ಹೊತ್ತು ನನ್ನನ್ನು ಆಶ್ಚರ್ಯದಿಂದ ದಿಟ್ಟಿಸಿದ ನಂತರ ಮೆಲುದನಿಯಲ್ಲಿ ಸಿಳ್ಳೆ ಹಾಕುತ್ತ, ಮೇಜನ್ನು ಕುಟ್ಟುತ್ತ ಯೋಚನಾಮಗ್ನನಾದ.

"ಈಗ ಅರ್ಥವಾಗ್ತಾ ಇದೆ", ಯೋಚಿಸುತ್ತಲೇ ಹೇಳಿದ "ವಿವಾಹ ವಿಚ್ಛೇದನೆ ಬೇಕು ಅಂತ ಹೇಳುವ ಸ್ವಲ್ಪ ದಿನಗಳ ಮೊದಲಿನಿಂದಲೂ, ಅವಳು ಬದಲಾಗಿದ್ದಳು ಅಂತಲೇ ನನ್ನ ಭಾವನೆ. ಏಕೆಂದರೆ ಒಂದು ಸಂಜೆ ಆಫೀಸಿನಿಂದ ಹಿಂದಿರುಗಿದ ನಾನು ಅವಳ ಕೈ ಹಿಡಿದು ಪ್ರೀತಿಯಿಂದ ಸಿನೇಮಾಗೆ ಹೋಗಿಬರೋಣವೇ ಎಂದಾಗ ಯಾರೋ ಒಬ್ಬ ಚಿಂತಕರ ಹೆಸರನ್ನು ಹೇಳಿ, ಅವರ ಭಾಷಣ ಸಂಜೆ ಅಡೆಯಾರ್‌ನಲ್ಲಿ ಏಳುಗಂಟೆಗಿದೆ, ಅಲ್ಲಿಗೆ ಹೋಗೋಣವೇ ಎಂದಿದ್ದಳು. ಮತ್ತೊಂದು ದಿನ ರಾತ್ರಿ ಬಹಳ ಉದ್ವಿಗ್ನಳಾಗಿ ಕೈಯಲ್ಲೊಂದು ಪುಸ್ತಕ ಹಿಡಿದು, ಇದನ್ನು ಓದಿ ನೋಡಿ, ಎಂಥಾ ಉದಾತ್ತವಾದ ಸಾಹಿತ್ಯ! ಇದರಲ್ಲಿ ಎಷ್ಟೊಂದು ತತ್ವ ಅಡಗಿದೆ ನೋಡಿ, ಕೆಲವೊಬ್ಬ ಚಿಂತಕರುಗಳಿಗೆ ನೇರವಾಗಿ ತಮ್ಮ ವಿಚಾರಗಳನ್ನು ಮಂಡಿಸುವ ಕಲೆ ಸಾಧಿಸಿಬಿಟ್ಟಿರುತ್ತೆ ಎಂದಿದ್ದಳು. ನನಗ್ಯಾಕೋ ಅವಳ ವರ್ತನೆ ರುಚಿಸಲಿಲ್ಲ. ಅವಳ ಮಾತುಗಳೇ ನನಗರ್ಥವಾಗಲಿಲ್ಲ. ನಮ್ಮಿಬ್ಬರ ನಡುವಿನ ಸಂಬಂಧ ಒಟ್ಟಾರೆ ಹಿಂದಿನಂತಿಲ್ಲ ಅಂತ ನನಗನ್ನಿಸಿತು. ನನ್ನೊಡನೆ ಅವಳಿದ್ದಾಗ, ಅವಳ ದೇಹ ಮಾತ್ರ ನನ್ನೊಡನಿದ್ದು, ಮನಸ್ಸು ಬೇರೆಲ್ಲೋ ಹಾರಾಡುತ್ತಿದೆಯೇನೋ ಅಂತ ಹಲವಾರು ಸಲ ನನಗನ್ನಿಸಿದ್ದುಂಟು. ಈ ನಾವು ಬಾಳಿದ ಅನ್ಯೋನ್ಯ ಬಾಳ್ವೆಯ ನಂತರ ನಮಗೆ ವ್ಯತ್ಯಾಸ ತಿಳಿದುಬರೋದಿಲ್ಲವೇ? ಹಿಂದಾಗಿದ್ದರೆ ಆಗಸದಲ್ಲಿ ಬೆಳದಿಂಗಳು ಚೆಲ್ಲಿದ್ದಾಗ ಮೈಯಲ್ಲಿ ನವಿರೇಳುವುದು. ಆದರೀಗ? ಶಂಕರಿ ಕೇಳಿದ್ದಳು ಈ ಚಂದ್ರನ ಮೇಲೆ ಮಾನವ ಹೋಗಿ ಇಳಿದದ್ದಾಯ್ತು. ಅದೊಂದು ಅದ್ಭುತವಾದ ಸಾಧನೆ ಅನ್ನೋದೇನೋ ದಿಟ. ಆದರೆ ಇನ್ನೂ ಪ್ರಪಂಚದಲ್ಲಿ ಜಾತಿ ಧರ್ಮಗಳ ಬಗೆಗೆ ನಡೆವ ಶೋಷಣೆಗಳ ಬಗ್ಗೆ ಓದಿದಾಗ, ಹಲವಾರು ಶತಮಾನಗಳ ಹಿಂದೆ, ಕ್ರಿಶ್ಚಿಯನ್ನರು ತಾವು ಆಕ್ರಮಿಸಿಕೊಂಡಿದ್ದ ಸ್ಥಳಗಳಲ್ಲಿ ನಡೆಸಿದ ಅಕ್ರಮಗಳ ಬಗ್ಗೆ ಓದುತ್ತಿದ್ದೇನೇನೋ ಎಂದೆನಿಸುತ್ತೆ. ಹಾಗಾದರೆ ಇವೆರಡರಲ್ಲಿ ಯಾವುದು ಮನುಷ್ಯನನ್ನು ಯಥಾವತ್ತಾಗಿ ಪ್ರತಿಬಿಂಬಿಸುತ್ತೆ ಹೇಳಿ ನೋಡೋಣ."

ನೀವು ಆ ಪ್ರಶ್ನೆಗೆ ಏನು ಉತ್ತರ ಹೇಳಿದಿರಿ?

ಬಾಯಿಗೆ ಬಂದ ಉತ್ತರ ನೀಡಿದ್ದೆ.

ನಾನು ವಿಷಾದದಿಂದ ನಕ್ಕೆ. ಅವನನ್ನು ನೋಡಿದ್ರೆ ನನಗೆ ಅಯ್ಯೋ ಪಾಪ ಎಂದೆನಿಸಿತು.

"ಕೊನೆಯದಾಗಿ ಒಂದು ರಾತ್ರಿ ನಾವಿಬ್ಬರೂ ಒಟ್ಟಿಗಿದ್ದಾಗ ಒಂದು ಮುಖ್ಯವಾದ ವಿಷಯವನ್ನು ಚರ್ಚಿಸುವವಳಂತೆ ನನ್ನನ್ನು ನೋಡಿ, 'ದೇವರನ್ನು ಕರುಣಾಸಾಗರನೆಂದೆನ್ನುತ್ತೇವೆ. ಆದರೆ ಪ್ರಪಂಚದ ರೀತಿನೀತಿಗಳನ್ನು ಗಮನಿಸಿದಾಗ ಮನಸ್ಸಿನೊಳಗೆ ನಿಜವಾದ ಕರುಣೆ ಉಳ್ಳವರು ದೇವರನ್ನುವನೊಬ್ಬನನ್ನು ನಂಬೋದಕ್ಕಾಗೋದಿಲ್ಲ ಅಂತ ತೀರ್ಮಾನಕ್ಕೆ ನಾವು ಬರಬೇಕಾಗುತ್ತೆ. ಇದಕ್ಕೆ ನೀವೇನಂತೀರಾ' ಎಂದು ಕೇಳಿದ್ದಳು. ಅಂದು ನನಗೆ ಬಂದಿದ್ದ ಸಿಟ್ಟನ್ನು ಏನೂಂತ ಹೇಳಲಿ ಪ್ರೊಫೆಸರ್?"

"ನೀನು ಈ ರೀತಿ ಏನಾದರೂಂದು ಹರಟ್ತಾನೇ ಇದ್ದರೆ ನಿನ್ನನ್ನು ಕರ್ಕೊಂಡು ಹೋಗಿ ಹುಚ್ಚಾಸ್ಪತ್ರೇಗೆ ಸೇರಿಸಿ ಬಂದುಬಿಡ್ತೀನಿ ಅಂತ ಕೂಗಾಡಿದೆ. ಆಗ ಅವಳು ನನ್ನನ್ನು ನೋಡಿದ ನೋಟ! ಆ ನೋಟದಿಂದಲೇ ಅವಳು ನನ್ನಿಂದ ದೂರಾದಳು ಅನ್ನೋದು ನನಗೆ ಇದೀಗ ಅರ್ಥವಾಗ್ತಾ ಇದೆ."

ದೇಹಸುಖವನ್ನು ಅವಳೊಡನಿದ್ದು ಅನುಭವಿಸಿದವನು ನಾನು. ನನ್ನಿಂದ ಅದನ್ನು ಮಾತ್ರ ಕೊಡಲು ಸಾಧ್ಯವಾಗಿತ್ತು. ಆದರೆ ದೇಹಸುಖವನ್ನು ಮೀರಿ ಉದಾತ್ತಳಾದ ಅವಳಿಗೆ ಜೊತೆಯಾಗಲು ನನ್ನಿಂದ ಸಾಧ್ಯವಾಗಲಿಲ್ಲ.

"ಪ್ರೊಫೆಸರ್, ನಿಮ್ಮೊಡನಿದ್ದಾಗ ನನ್ನ ಚಿಂತನೆಗಳು ದೀಪ ಹಚ್ಚಿ ಬೆಳಗಿದಂತಾಗುತ್ತದೆ" ಎಂದಿದ್ದಳು ಶಂಕರಿ.

"ಪ್ರೊಫೆಸರ್ ಈ ಪಾಶ್ಚಿಮಾತ್ಯ ದಾರ್ಶನಿಕ ಹೇಳೋದ್ರಲ್ಲಿ ನಮ್ಮ ಶಂಕರರ ಜಗತ್‌ಮಿಥ್ಯಾ ತಾತ್ಪರ್ಯ ಪ್ರತಿಧ್ವನಿಸುತ್ತಿರುವಂತಿದೆ ಅಲ್ಲವೇ" ಎನ್ನುವಳು.

"ಪ್ರೊಫೆಸರ್ ನಾಲ್ಕು ಜನ ಸೇರಿಕೊಂಡು ನಿಷ್ಕಲ್ಮಶ ಮನದಿಂದ ಸಂತೋಷವಾಗಿ ನಕ್ಕು ನಲಿಯುವುದಕ್ಕಿಂತ ಈ ಪ್ರಪಂಚದಲ್ಲಿ ಬೇರಿನ್ನ್ಯಾವ ಸುಂದರ ದೃಶ್ಯವೂ ಇರಲಾರದೇನೋ ಅಲ್ವ. ಇದರ ಮರ್ಮವನ್ನರಿಯದ ಜನ ಈ ಪ್ರಪಂಚದಲ್ಲಿ ಒಬ್ಬರನ್ನೊಬ್ಬರನ್ನು ಪೀಡಿಸಿ, ಯಾಕೆ ಜೀವನವನ್ನೇ ನರಕವನ್ನಾಗಿಸ್ತಾರೋ ಏನೋ. ಇದರ ಬಗ್ಗೇನೇ ಸ್ವಲ್ಪ ಮಾತನಾಡೋಣವೇ" ಎಂದೆನ್ನುವಳು.

ಪ್ರೊಫೆಸರ್ ಬೆಳದಿಂಗಳು ಎಷ್ಟೊಂದು ಚೆನ್ನಾಗಿದೆ ಅಲ್ವಾ? ಈ ಸಂತೋಷವಾದ ಸಮಯದಲ್ಲಿ ಕವಿತೆಯನ್ನು, ಇನ್ನ್ಯಾವುದಾದರೂ ಪದ್ಯವನ್ನು ಓದಬೇಕು ಅಂತ ಅನ್ನಿಸೋದಿಲ್ವೆ? ಬನ್ನಿ ಜೊತೆಯಾಗಿ ಓದೋಣ ಎನ್ನುವಳು. ಸರಿ ಶಂಕರಿ ಎಂದೆನ್ನುವೆ. ಆಗ ಅವಳ ಮುಖ ಪ್ರಾಜ್ವಲ್ಯಮಾನವಾಗಿ ಹೊಳೆಯುವುದು.

ನಿಮ್ಮ ಬಗ್ಗೆ ಅವಳಿಗೇನು ಆಕರ್ಷಣೆ ಅಂತ ಇವನು ಕೇಳಿದನಲ್ಲಾ.

"ಅವಳು ತುಂಬ ಸ್ವತಂತ್ರಳಾದವಳು ಪ್ರೊಫೆಸರ್" ಎಂದ ಮೂರ್ತಿ.

"ಹೌದು" ಎಂದೆ.

ನನ್ನಿಂದ ಅವಳ ಮನಸ್ಸು ಬೇರ್ಪಟ್ಟಮೇಲೆ ವಿಚ್ಛೇದನ ಪಡೆದುಬಿಡಬೇಕೆಂದು ಯೋಚಿಸಿದಳು ಅಂತ ಕಾಣುತ್ತೆ. ಅನಂತರ ಅವಳು ನನ್ನೊಡನೆ ಎಂದೂ ಹೆಂಡತಿಯಾಗಿ ಬಾಳಲಿಲ್ಲ. ತನಗೆ ಅತೃಪ್ತಿಯನ್ನುಂಟುಮಾಡುವ, ಯಾವುದರೊಂದಿಗಾಗಲೀ ಒಪ್ಪಂದ ಮಾಡಿಕೊಳ್ಳೋದು ಅವಳ ಜಾಯಮಾನಕ್ಕೆ ಬಂದಿರಲಿಲ್ಲ. ಅವಳನ್ನು ಯಾವುದರಿಂದಲೂ ಕಟ್ಟುಪಾಡಿಗೆ ಒಳಪಡಿಸಲು ಸಾಧ್ಯವಿರಲಿಲ್ಲ. ಆಕೆ ಸ್ವತಂತ್ರಜೀವಿ.

"ಹೌದು"

ಇದಾದನಂತರವೇ ಅವಳಿಗೆ ನಿಮ್ಮನ್ನು ಮದುವೆಯಾಗಬೇಕೆಂಬ ಬಯಕೆ ಉಂಟಾದಂತೆ ತೋರಿ ಬರುತ್ತದೆ. ಅದಕ್ಕೆ ನೇರವಾಗಿಯೇ ವಿಚ್ಛೇದನೆ ಬೇಕು ಅಂತ ನನ್ನನ್ನು ಕೇಳಲು ಸಾಧ್ಯವಾಗಿರಬೇಕು.

"ಅದನ್ನು ಕೊಡೋ ಹಿರಿತನ ನಿಮ್ಮದು ಇತ್ತಲ್ಲ" ಎಂದೆ ನಾನು. ಪರಸ್ಪರ ಸಮ್ಮತಿಸಿಯೇ ಅವನು ವಿಚ್ಛೇದನೆ ಮಾಡಲು ಒಪ್ಪಿಕೊಂಡಿದ್ದ. ಅದಕ್ಕೆ ಪೂರ್ವ ನಿರ್ಧಾರವಾಗಿಯೇ ಅವರೀರ್ವರೂ ವಿಚ್ಛೇದನೆಯ ಮೊದಲು ಒಂದು ವರ್ಷ ಪ್ರತ್ಯೇಕ ಸ್ಥಳಗಳಲ್ಲಿ ವಾಸಿಸಿ ನ್ಯಾಯಾಲಯದಲ್ಲಿ ದಾಖಲಿಸಿದ್ದರು.

ಇದರಲ್ಲಿ ಹಿರೀತನವೇನು ಬಂತು ಪ್ರೊಫೆಸರ್? ಅವಳು ನಿಮ್ಮನ್ನು ಮದುವೆಯಾದ ನಂತರ ಒಂದು ದಿನವಾದ್ರೂ, ಅವಳ ಸಾಮಾನ್ಯ ಸ್ನೇಹಿತನಂತೆ ಬಂದು ಹಳೆಯದನ್ನೆಲ್ಲ ಮರೆತು, ಯೋಗಕ್ಷೇಮ ವಿಚಾರಿಸಿದ್ದೇನೆಯೇ? ನನ್ನನ್ನು ವಿಚ್ಛೇದನೆ ಮಾಡಿ ಬೇರೊಬ್ಬನನ್ನು ಮದುವೆಯಾದವಳಲ್ಲ ಅನ್ನೋ ಒಂದೇ ಕಾರಣಕ್ಕಾಗಿ ನಮ್ಮ ಮಗ ಮಗಳು ಇಬ್ಬರೂ ಇನ್ನು ಮುಂದೆ ನಾವವಳ ಮುಖ ನೋಡೋದಿಲ್ಲ ಅಂತ ಹೇಳಿ, ಅವಳನ್ನು ಸಂಪೂರ್ಣವಾಗಿ ಮರೆತು ದೂರಾಗಿಸಿದರು. ಕಡೆಯಲ್ಲಿ ನಾನು ಬಂದು ನೋಡದೇ ಇರೋದಕ್ಕೆ ಕಾರಣ, ನಾನು ಅವರುಗಳ ತರಹ ಅಲ್ಪ ಮನಸ್ಸಿನವನಾಗಿದ್ದೆ ಅಂತ ತಾನೇ?

"ನಿಮ್ಮ ಮನಸ್ಸು ಸಂಕುಚಿತ ಅಂತ ಯಾರಿಂದ ಹೇಳೋಕಾಗುತ್ತೆ ಮೂರ್ತಿ? ನೀವೊಂದು ವೇಳೆ ಸಂಕುಚಿತ ಮನಸ್ಸಿನವರಾಗಿರುತ್ತಿದ್ದರೆ ವಿಧವೆ ಶಂಕರಿಯನ್ನು ಮದುವೆ ಮಾಡಿಕೊಂಡಿರುತ್ತಿದ್ದಿರೇ?"

ತಟ್ಟೆಗಳನ್ನು ಕೊಂಡೊಯ್ಯಲು ಬಂದ ಮಾಗೆ ಅವು ಇನ್ನೂ ಮುಟ್ಟಲ್ಪಡದಿರುವುದನ್ನು ಕಂಡು ನಮ್ಮನ್ನೇ ದಿಟ್ಟಿಸಿದ.

"ಇನ್ನು ಸ್ವಲ್ಪ ಹೊತ್ತು ಬಿಟ್ಟುಕೊಂಡು ಕಾಫಿ ತೊಗೊಂಡು ಬಂದು ಬಿಡಪ್ಪಾ, ಅಷ್ಟರಲ್ಲಿ ಇವು ಖಾಲಿಯಾಗಿರುತ್ತೆ" ಎಂದ ಮೂರ್ತಿ, ಮಾಗೆ ಹೊರಟುಹೋದ?

ಶಂಕರಿಯ ನೆನಪಿನಲ್ಲಿ ಶೋಕದಿಂದ ಭಾರವಾದ ತಲೆಯನ್ನು ಕೈಗಳಿಂದ ಒತ್ತಿ ಹಿಡಿದುಕೊಂಡೆ.

ಮೂರ್ತಿ ಮುಂದುವರೆಸಿದ. ನಾನು ಶಂಕರಿಯನ್ನು ಮದುವೆಯಾದಾಗ ಎಂದೂ ನನ್ನ ಮನಸ್ಸಿಗೆ ನಾನೊಬ್ಬ ವಿಧವೆಯನ್ನು ಮದುವೆಯಾಗ್ತಿದ್ದೀನಿ ಅಂತ ಅನ್ನಿಸಿರಲಿಲ್ಲ. ಅವಳ ಮೊದಲ ಮದುವೆ ಬಗ್ಗೆ ಇದೀಗ ಸ್ವಲ್ಪ ಸ್ವಲ್ಪ ಮನಸ್ಸಿಗರ್ಥವಾಗ್ತಾ ಇದೆ. ನಿಮಗಿದರ ಬಗ್ಗೆ ತಿಳಿದಿದೆ ಅಂತ ಅಂದ್ಕೊಳ್ತೀನಿ ಪ್ರೊಫೆಸರ್.

ಮೆಲ್ಲನೆ ತಲೆಯ ಮೇಲಿನ ಕೈಯನ್ನು ಸರಿಸಿ, ತಲೆ ಎತ್ತಿದೆ. "ನಾನು, ಅವರಪ್ಪನ ಸ್ನೇಹಿತನಲ್ಲವೇ? ಆ ಕುಟುಂಬದ ಬಗ್ಗೆ ನನಗೆ ಚೆನ್ನಾಗಿಯೇ ಗೊತ್ತು. ಶಂಕರಿ ಮನೋಹರನನ್ನು ಮದುವೆಯಾದಾಗ ನಾನು ಮದುವೆಗೆ ಹೋಗಿ ವಧುವರರನ್ನು ಆಶೀರ್ವದಿಸಿ ಬಂದಿದ್ದೆ. ಅವಳು ನಿಮ್ಮನ್ನು ಮದುವೆಯಾದಾಗಲೂ ಆಶೀರ್ವಾದ ಮಾಡಿದ್ದೇನೆ.

ಮೂರ್ತಿ ಮೆಲ್ಲನೆ ನಕ್ಕ.

"ಎರಡೂ ಸಲ ನನ್ನ ಆಶೀರ್ವಾದ ಹೇಗೆ ವಿಫಲವಾಯ್ತು ಅಂತ ಯೋಚಿಸಿ ನಗ್ತಿದ್ದೀರಾ ಮೂರ್ತಿಗಳೇ?" ಎಂದೆ.

"ಇಲ್ಲ, ಇಲ್ಲ, ಹಾಗೇನಿಲ್ಲ" ಎಂದ ಅವನು.

ಆದರೆ ಅವನ ಅಭಿಪ್ರಾಯ ಅದೇ ಆಗಿತ್ತು ಅನ್ನೋದು ಮಾತ್ರ ನನಗೆ ತಿಳಿಯದೇ ಹೋಗಲಿಲ್ಲ.

ತಟ್ಟನೆ ನನ್ನತ್ತ ತಿರುಗಿ "ಪ್ರೊಫೆಸರ್ ನನಗೆ ಆ ಮದುವೆ ಬಗ್ಗೆ ಕೆಲವೊಂದು ವಿವರಗಳನ್ನು ಹೇಳ್ತೀರಾ?" ಎಂದ.

"ಹೇಳೋದಕ್ಕೆ ಅಂತಾ ಹೆಚ್ಚಿನ ವಿಷಯವೇನಿಲ್ಲ. ತನ್ನ ಹದಿನಾರರ ಹರೆಯದಲ್ಲಿ ತನಗವನ ಮೇಲೆ ಪ್ರೀತಿಯುಂಟಾಗಿದೆ ಎಂದು ಹಟಮಾಡಿ ಅವನನ್ನು ಮದುವೆಯಾಗಿದ್ದಳು. ಅವಳಪ್ಪ ಕೊನೆಯದಾಗಿ

ತನ್ನೊಪ್ಪಿಗೆ ನೀಡುವ ಮೊದಲು ನನ್ನೊಡನೆ ಚರ್ಚಿಸಿದ್ದ. ನವಜಾತ ಮಗು ಮೊದಲ ಬಾರಿಗೆ ಕಣ್ಣು ತೆರೆದಾಗ, ತನ್ನನ್ನು ತಾನೇ ಪ್ರೀತಿಸತೊಡಗುತ್ತಂತೆ. ಅದನ್ನು ತಡೆಯೋಕಂತೂ ಸಾಧ್ಯವಿಲ್ಲ. ಒಪ್ಪಿಗೆ ಇದೆ ಅಂತ ಹೇಳಿಬಿಡಿ ಅಂತ ನಾನೇ ಅವರಿಗೆ ಬುದ್ಧಿವಾದ ಹೇಳಿದ್ದೆ".

"ನನಗರ್ಥವಾಗಲಿಲ್ಲ".

ಆಗ ಅವಳಿಗಿನ್ನೂ ಎಳೆವಯಸ್ಸು. ಪ್ರತಿಯೊಂದನ್ನೂ ಕುತೂಹಲ, ಆಶ್ಚರ್ಯ, ಹೊಸತನದಿಂದ ಕಾಣುವ ಹಂಬಲದ ವಯಸ್ಸು. ಹೃದಯ ಪ್ರೇಮದಿಂದ ತುಡಿದ ವಯಸ್ಸು. ಪ್ರತಿದಿನವೂ ಹೊಸ ಅನುಭವಕ್ಕೆ ಕಾತರಿಸುವ ವಯಸ್ಸು. ಅವಳ ಆ ಪರವಶತೆಗೆ ಆಕಾರ ನೀಡಿದವನು ಮನೋಹರ. ಅವನ ಸಾಮೀಪ್ಯ ಅವಳಲ್ಲಿ ಅನುರಾಗ ಮೂಡಿಸಿತ್ತು. ಹೊಸದಾಗಿ ಅರಳಿದ ಪ್ರೇಮದ ಗುಂಗು ಅವನ ಕಣ್ಣುಗಳಲ್ಲಿಯೂ ಪ್ರತಿಬಿಂಬಿಸುತ್ತಿತ್ತು. ಅವನದೂ ಅದೇ ಪ್ರಾಯ. ಅವಳ ಕನಸಿನ ಬಿಂಬವೇ ಅವನಾಗಿದ್ದ. ಅವಳಿಗೆ ಮನೋಹರನಲ್ಲಿ ಪ್ರೀತಿಗಿಂತ ದೈಹಿಕ ಆಕರ್ಷಣೆಯೇ ಅಧಿಕವಾಗಿತ್ತು. ಅವಳ ಭಾವನೆಗಳಲ್ಲಿ ಆಗ ಉದಯಿಸಿದ್ದು ಪ್ರೇಮ ದಿಟ. ಯೌವನದಲ್ಲಿ ಚಿಗುರಿದ ಭಾವನೆ ಅದು. ಅವಳ ಮದುವೆಯಲ್ಲಿ ಪ್ರೇಮ ಕನಸನ್ನು ಮದುವೆಯಾಗಿತ್ತು. ಹೀಗಾಗಿ ಲೈಂಗಿಕ ಆಕರ್ಷಣೆಯೇ ಆ ಮದುವೆಯ ಪ್ರಮುಖ ಕಾರಣವಾಗಿತ್ತು ಅಂತ ಯೋಚಿಸೋದಕ್ಕೆ ನಿಮಗೆ ಸ್ವಲ್ಪ ಕಷ್ಟವಾಗಬಹುದು."

ಆ ಮನೋಹರ ಬೇಗ ಸತ್ತು ಹೋದ ಅಲ್ವಾ!

ಹೌದು ಲುಕೋಮಿಯಾ!

ಆಗ ಅವನ ವಯಸ್ಸೆಷ್ಟು?

ಇಪ್ಪತ್ತೊಂದು!

ಅಯ್ಯೋ ಪಾಪ, ಅಲ್ಪಾಯುಷಿ.

ಒಂದು ವಿಧದಲ್ಲಿ ನೋಡಿದರೆ ಆ ವಯಸ್ಸಿನಲ್ಲಿ ಅವನು ಹೋಗಿದ್ದೇ ಒಳ್ಳೆಯದಾಯಿತು ಅಂತ ಅನ್ನಿಸುತ್ತೆ. ಶಂಕರಿಯ ಮನಸ್ಸಿನ ಹೊಸ ಭಾವನೆಗಳು, ಪ್ರೇಮದ ಅಮಲು ಇಂಗಿಹೋದ ಮೇಲೆ ಅವನಿಗೂ ಎಲ್ಲರಂತೆ ವಯಸ್ಸಾಗಿ ತಲೆ ನೆರೆತು ಉಳಿದುಕೊಂಡಿದ್ದರೆ, ಅಪಸ್ವರವೆದ್ದಿರೋದು. ಕನಸುಗಳಿಗೆ ಎಂದೂ ಮುಪ್ಪು ಬರಬಾರದು ನೋಡಿ, ಮಿ. ಮೂರ್ತಿ.

ಪುನಃ ಮೌನ ಕವಿಯಿತು.

ಮುದುಕರಿಬ್ಬರೂ ಒಂದು ಹೆಣ್ಣಿನ ಮಾಜಿ ಪ್ರಿಯಕರರ ಬಗೆಗೆ ಮಾತನಾಡಿಕೊಂಡಿರುವರು. ಅವಳ ನೆನಪಿನಲ್ಲಿಯೇ ಅವರುಗಳು ಜೊತೆಯಾಗಿ ವೇದನೆಯನ್ನು ಹಂಚಿಕೊಂಡು ಕುಳಿತಿರುವರು. ಆದರೆ ಹೋಟೆಲಿನಲ್ಲಿ ಕುಳಿತು ತರಿಸಿಕೊಂಡ ತಿಂಡಿಯನ್ನು ಮುಟ್ಟದೇ ಕುಳಿತ ಇವರನ್ನು ನೋಡಿದಾಗ ಅವರ ಭಾವನೆ ಅರಿಯುವುದು ಇತರರಿಗೆ ಕಷ್ಟವಾಗಬಹುದು.

ಮಾಣಿ ಕಾಫಿಯೊಡನೆ ಬಂದ. ಅವನ ಹುಬ್ಬು ಕೊಂಕಿತು. "ಏನ್ಸಾರ್! ಇನ್ನೂ ತಿಂದೇ ಇಲ್ಲ!"

ಮೂರ್ತಿಯೇ ಮೊದಲು ಸಂಭಾಳಿಸಿಕೊಂಡರು. ನಮಗೆ ಹಸಿವಾಗಿಲ್ಲಪ್ಪಾ, ಈ ತಟ್ಟೆಗಳನ್ನು ತೊಗೊಂಡು ಹೋಗಿಬಿಡು. ನಾವು ಹಣ ಕೊಟ್ಟುಬಿಡ್ತೀವಿ. ಭಯಪಟ್ಟುಕೊಳ್ಳಬೇಡ. ಕಾಫಿ ಇಟ್ಟು ಬಿಲ್ ತೊಗೊಂಡುಬಂದು ಕೊಟ್ಟುಬಿಡು.

ಮಾಣಿ ತಟ್ಟೆಗಳನ್ನೆತ್ತಿಕೊಂಡು ಹೊರಟ.

"ಬೇಗಾಮ್ರ ಮಾಡಿ, ನಾವು ಕಾಫೀನ ಹೀರಲೇಬೇಕು ಅಂತ ಕಾಣುತ್ತೇ ಪ್ರೊಫೆಸರ್!"

ಮೂರ್ತಿ ಕಾಫಿ ರುಚಿ ನೋಡಿದ. ನಾನು ಲೋಟವನ್ನೆತ್ತಿಕೊಂಡು ತುಟಿಯಂಚಿಗೆ ಹಿಡಿದೆ.

ಇಷ್ಟು ಹೊತ್ತಿಗೆ ದೇಹ ಉರಿದು ಭಸ್ಮವಾಗಿಬಿಟ್ಟಿರುತ್ತೆ!

ಲೋಟ ಕೆಳಗಿಟ್ಟುಬಿಟ್ಟೆ. ಎದೆಯಾಳದಿಂದ ಹೊರಹೊಮ್ಮಿದ ದುಃಖವನ್ನು ನುಂಗೋದ್ರಲ್ಲೇ ಹೊಟ್ಟೆ ತುಂಬಿಬಿಟ್ಟಿತು.

ಏನಾಯ್ತು ಪ್ರೊಫೆಸರ್?

ಸಾಧ್ಯವಾಗ್ತಾ ಇಲ್ಲ, ಕ್ಷಮಿಸಿಬಿಡಿ.

ಶಂಕರಿ ಸತ್ತು ಹೋದಳು. ಇದೀಗ ನಾನು ನಡೆದಾಡುವ ಹೆಣ ಮಾತ್ರ!

ಅವನೇ ಹಣ ಕೊಟ್ಟು ಇಬ್ಬರೂ ಹೋಟೆಲ್‌ನಿಂದ ಹೊರಟು ಲಿಸ್ ಚರ್ಚ್ ರೋಡ್‌ನಲ್ಲಿ ನಡೆಯಲಾರಂಭಿಸಿದೆವು.

"ಮನೋಹರ, ನಾನು, ನೀವು ಈ ಮೂವರಲ್ಲಿ ಅವಳಿಗೆ ಬಲವಾದ ನೆಲೆ ದೊರಕಿದ್ದು ತಮ್ಮೊಬ್ಬರಿಂದ ಮಾತ್ರ ಅಂತ ನನ್ನ ಭಾವನೆ" ಎಂದ ಮೂರ್ತಿ.

ನನ್ನ ಜೋತುಬಿದ್ದ ದೇಹವನ್ನು ಆಪಾದಮಸ್ತಕವಾಗಿ ದಿಟ್ಟಿಸಿದ ಮೂರ್ತಿ.

ಅವನ ನೋಟದಲ್ಲಿ ಒಂದು ರೀತಿಯ ಕನಿಕರವಿತ್ತು.

"ಇಲ್ಲ ಕಡೆಯದಾಗಿ ನನ್ನನ್ನೂ ಬಿಟ್ಟುಬಿಡುವ ಯೋಚನೆಯಿಂದ ನನ್ನ ಹತ್ತಿರಾನು ವಿಚ್ಛೇದನೆ ಕೇಳಿದ್ದಳು" ಎಂದೆ ಮೆಲ್ಲನೆ ಶಾಂತವಾಗಿ.

ತಕ್ಷಣ ಅವನ ನಡಿಗೆ ನಿಂತುಬಿಟ್ಟಿತು. ರಸ್ತೆಯಲ್ಲಿನ ವಾಹನ ಸಂಚಾರ ಕಂಡು ನಾನೆಂದೆ "ಮೂರ್ತಿ ಫುಟ್‌ಪಾತ್ ಮೇಲೆ ಬನ್ನಿ!"

ಆತ ನನ್ನನ್ನು ಒಂದು ರೀತಿಯಲ್ಲಿ ದಿಟ್ಟಿಸಿದ. ಅವನ ಮುಖದಲ್ಲಿನ ಆಶ್ಚರ್ಯ ಕರಗಲು ಸ್ವಲ್ಪ ಹೊತ್ತೇ ಹಿಡಿಯಿತು.

"ಏನೂ, ನಿಮ್ಮ ಹತ್ತಿರಾನೂ ವಿವಾಹ ವಿಚ್ಛೇದನೆ ಕೇಳಿದಳೇ?" ಅವನ ದನಿಯಲ್ಲಿ ಅಪನಂಬಿಕೆ ಬಿಂಬಿಸಿತ್ತು.

"ಹೌದು".

"ಏಕೆ?" ಅವನ ಮುಗುಳ್ನಗೆಯಲ್ಲಿ ಕುಹಕ ಬೆರೆತಿತ್ತು.

ನಾಲ್ಕನೆಯದಾಗಿ ಬೇರಿನ್ನ್ಯಾರಾದರನ್ನು ತನ್ನ ನಲವತ್ಮೂರನೇ ವಯಸ್ಸಿನಲ್ಲಿ ಮದುವೆಯಾಗ ಬಯಸಿದ್ದಳೇ?

ಅಯ್ಯೋ ಮುಠ್ಠಾಳ! ಎಂದೆ ನಾನು ಮೃದುವಾಗಿ.

"ಇದೇನಿದು ಪ್ರೊಫೆಸರ್, ನನ್ನನ್ನು ಬೈತಾ ಇದೀರಲ್ಲ". ಅವನ ಮುಖ ಕೆಂಪಾಗಿತ್ತು.

ಮತ್ತಿನ್ನೇನು, ನೀವು ಅವಳನ್ನು ಸರಿಯಾಗಿ ಅರ್ಥಾನೇ ಮಾಡಿಕೊಳ್ಳಲಿಲ್ಲ.

ಹಾಗಾದರೆ ಇಷ್ಟು ವಯಸ್ಸಾದ ನಂತರವೂ ಅವಳು ವಿವಾಹ ವಿಚ್ಛೇದನೆ ಯಾಕೆ ಬಯಸಿದಳು?

"ಏಕಾಂತದಿಂದಿರೋದಕ್ಕಾಗಿ", ಸ್ವಲ್ಪ ಹೊತ್ತು ಮೌನವಾಗಿದ್ದು ಹೇಳಿದೆ.

ಅರ್ಥವಾಗಲಿಲ್ಲ.

ಆ ಜೀವ ಪರಿಪಕ್ವತೆಗೆ ಹದಗೊಂಡಿತ್ತು ಮಿ.ಮೂರ್ತಿ. ನನ್ನ ಮನದೊಳಗೆ ಶಂಕರಿ ನಿಂತಳು.

ಮೂಳೆಗಳೆದ್ದು ಕಾಣುವ ಸೊರಗಿದ ಮುಖದಲ್ಲಿ ಗುಳಿ ಬಿದ್ದ ಶಾಂತವಾದ ಕಣ್ಣುಗಳು ಭಾವನಾಶೂನ್ಯವಾಗಿ ನನ್ನನ್ನೇ ದಿಟ್ಟಿಸಿದವು. ನನ್ನ ವಿದ್ವತ್ತಿಗೆ ಮನ್ನಣೆ ಇತ್ತು, ನನಗರ್ಥವಾದೀತೆಂದು ನಂಬಿ ಅವಳು ತನ್ನ ಭಾವನೆಯನ್ನು ನನ್ನ ಮುಂದೆ ತೆರೆದಿಟ್ಟಿದ್ದಳು.

ನನ್ನನ್ನು ವಿಚ್ಛೇದನೆ ಮಾಡಿಬಿಡಿ, ಪ್ರೊಫೆಸರ್! ಇಲ್ಲಿಂದ ಹೊರಟುಹೋಗಬಯಸುತ್ತಿದ್ದೇನೆ. ಏಕಾಂತದಲ್ಲಿ ಬಾಳಲಿಚ್ಛಿಸುತ್ತಿದ್ದೇನೆ. ಇಷ್ಟರವರೆಗೆ ಬಂಧನದೊಳಗಿದ್ದುಕೊಂಡೇ ನಾನು ಪಡೆಯಬೇಕಾದ ಪಕ್ವತೆಯನ್ನು ಪಡೆದುಕೊಂಡಿದ್ದೇನೆ. ಇನ್ನು ಏಕಾಂತದಲ್ಲಿಯೇ ನನ್ನ ಪಕ್ವತೆ ಫಲಗೊಳ್ಳೋದು. ನನ್ನನ್ನು ನಾನು ಅರ್ಧಂಬರ್ಧ ಬಿಟ್ಟುಬಿಡೋದಕ್ಕಾಗೋದಿಲ್ಲ, ದಯವಿಟ್ಟು ನನ್ನನ್ನು ಹೋಗಗೊಡಿ.

"ಸ್ಪಷ್ಟವಾಗಿ ಹೇಳಿ ಪ್ರೊಫೆಸರ್, ನನಗಿನ್ನೂ ಸರಿಯಾಗಿ ಅರ್ಥವಾಗ್ತಾ ಇಲ್ಲ" ಎಂದ ಮೂರ್ತಿ.

ಹೊರಗಡೆ ಚೆನ್ನಾಗಿಯೇ ಬಿಸಿಲೇರಿತ್ತು. ಬೆನ್ನುಹುರಿಯಿಂದ ಬೆವರ ಹನಿಯೊಂದು ಜಾರಿ ಬಿದ್ದ ಅನುಭವವಾಯ್ತು.

ನಾನು ದೀರ್ಘವಾಗಿ ಆಲೋಚಿಸುತ್ತಾ ಹೇಳಿದೆ.

ಪ್ರತಿಯೊಬ್ಬ ವ್ಯಕ್ತಿಯೂ ಈ ಪ್ರಪಂಚದಲ್ಲಿ ಒಂಟಿ ಮೂರ್ತಿ. ಹಲವಾರು ಸಂಬಂಧಗಳು ಹುಟ್ಟಿಕೊಂಡರೂ, ಅವುಗಳಿಂದ ಹೊರಬಿದ್ದು, ಒಂಟಿತನದಲ್ಲೇ ತನ್ಮಯರಾಗಿ ಬಿಡೋದ್ರಲ್ಲೆ ಮುಕ್ತಿ ಇರೋದು. ಮೂರ್ಖರಿಂದ ಇದನ್ನು ಅರ್ಥಮಾಡಿಕೊಳ್ಳೋದಕ್ಕಾಗೋದಿಲ್ಲ. ಆದರೆ ಶಂಕರಿಗಿದು ಅರ್ಥವಾಗಿತ್ತು. ಹಂತಹಂತವಾಗಿ ಬೆಳೆದುಬಂತ ಅವಳು ತನ್ನ ಪೂರ್ಣತೆಯಲ್ಲೇ ಮುಕ್ತಿಯನ್ನು ಕಂಡುಕೊಂಡ ಪೂರ್ಣಜೀವಿ. ಆರಂಭದಲ್ಲಿ ಭಾವನೆಗಳು ಉಕ್ಕೇರುತ್ತಿದ್ದ ವಯಸ್ಸಿನಲ್ಲಿ ಅವಳು ಮನೋಹರನೊಂದಿಗಿದ್ದಳು. ಇದಾದ ಮೇಲೆ ಭಾವನೆಗಳು ಕಡಿಮೆಯಾಗಿ ದೈಹಿಕ ಸಂಬಂಧ ಹುಟ್ಟಿಕೊಂಡಾಗ ಅವಳು ನಿಮ್ಮೊಡನೆ ಬಾಳಿದಳು. ನಮ್ಮ ಮೂವರೊಂದಿಗೂ ಸಹಜ ದಾಂಪತ್ಯ ನಡೆಸದೇ ಇದ್ದರೂ, ನಿಮ್ಮೊಡನೆ ಸಂಸಾರ ಮಾಡಿದಾಗಲೇ ಅವಳು ಮಕ್ಕಳನ್ನು ಪಡೆದದ್ದು ಎಂಬುದನ್ನು ಗಮನಿಸಿದಾಗ ಇದರಲ್ಲೇನು ಪ್ರಮುಖ ಅಂಶ ಅಡಗಿದೆ ಎಂದೆನಿಸುತ್ತೆ. ಒಡನಾಡಿಯಾಗಿ, ಹೆಣ್ಣಾಗಿ, ತಾಯಾಗಿ ಅವಳು ಪೂರ್ಣಳಾದಳು. ಅನಂತರ ಅವನ್ನೆಲ್ಲ ದಾಟ ಮುನ್ನಡೆದಾಗ ಅರಿವು ಚಿಂತನೆ ಹೃದಯವೈಶಾಲ್ಯತೆ ಉಂಟಾದಾಗ ಅವಳು ನನ್ನೊಡನೆ ಬಾಳಿದಳು. ಆ ಸಮಯದಲ್ಲೇ ಪಕ್ವತೆಯ ಗರಿಷ್ಠ ಮಟ್ಟವೆನ್ನುವಂತೆ ಏಕಾಂತದಲ್ಲಿ ತನ್ನ ತಾನರಿವ ಪ್ರಯತ್ನದಲ್ಲಿ ವೈವಾಹಿಕ ಬಂಧನವನ್ನು ಕಿತ್ತೊಗೆದು, ಸ್ವತಂತ್ರಳಾಗುವ ಬಯಕೆ ಅವಳಿಗುಂಟಾಗಿರಬೇಕು. ಪೂರ್ಣತೆಯನ್ನು ಹೊಂದಿದ ಒಂದು ಜೀವ ಆ ಹಂತವನ್ನು ತಲುಪಿದಾಗ, ಯಾವ ರೀತಿ ಇರುತ್ತೆ? ಬಂಧು, ಬಳಗ, ಕರ್ತವ್ಯ, ವಿವಾಹ, ಕುಟುಂಬ ಇವೆಲ್ಲವನ್ನು ತೊರೆದು ಅವುಗಳನ್ನು ಅನುಭವಿಸಿ ಅದನ್ನು ಮೀರಿ ಉನ್ನತ ಮಟ್ಟಕ್ಕೇರಲು ಎಲ್ಲರಿಂದಲೂ ಬಿಡುಗಡೆ ಹೊಂದಿ ಏಕಾಂತ ಬಯಸಿ ಅವಳು ನನ್ನನ್ನು ವಿಚ್ಛೇದನ ಕೇಳಿದ್ದಳು.

ಆಶ್ಚರ್ಯ!

ಹಾಗೆ ನೋಡುವುದಾದರೆ ಇದರಲ್ಲಿ ಆಶ್ಚರ್ಯವೇನಿದೆ ಮಿ. ಮೂರ್ತಿ? ನಮ್ಮ ಪೂರ್ವಜರು ಹಿಂದೆಯೇ ಮಾನವರಿಗೆ ಬ್ರಹ್ಮಚರ್ಯ ಮೊದಲಾದ ನಾಲ್ಕು ಆಶ್ರಮಗಳನ್ನು ವಿಧಿಸಿರಲಿಲ್ಲವೇ? ಇದು ಒಂದು ಹೆಣ್ಣಿಗೆ ಸಂಬಂಧಿಸಿದ ಆಶ್ರಮವಿಧಿ ಅಂತ ಅಂದುಕೊಳ್ಳಿ. ಮೊದಲು ಮೂರು ಆಶ್ರಮಗಳನ್ನು ಅನುಭವಿಸಿ ಶಂಕರಿ ನಾಲ್ಕನೆಯದಕ್ಕೆ ಸಿದ್ಧಳಾಗಿದ್ದಳು. ಅದಕ್ಕೆ ದಾರಿಮಾಡಿಕೊಡಬೇಕೆಂದು ನನ್ನನ್ನು ಕೇಳಿಕೊಂಡಿದ್ದಳು.

ನೀವು ಅದಕ್ಕೆ ಸಮ್ಮತಿಸಿರಬೇಕಲ್ಲವೆ? ತಮಗದನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವಿತ್ತು.

ನಾನು ಅರೆಘಳಿಗೆ ಯೋಚಿಸಿ, ನಂತರ ಮಾತನಾಡಿದೆ. ಅರಿವಿದ್ದು ಏನು ಪ್ರಯೋಜನ?

ಯಾಕೆ?

ನಾನವಳಿಗೆ ಸೋತುಹೋದೆ ಮೂರ್ತಿ! ಅವಳು ಪ್ರತಿಯೊಂದು ಹಂತವನ್ನೂ ಬಾಳಿ, ಅನುಭವಿಸಿ ಅದರಿಂದ ಬಿಡುಗಡೆ ಹೊಂದಿಯೇ ಹೊರಬಂದಳು. ನಾನು ನನ್ನ ಐವತ್ತನೆಯ ವಯಸ್ಸಿನಲ್ಲಿ ಪ್ರಪ್ರಥಮವಾಗಿ ಉಂಟಾದ ಸಂಬಂಧದೊಳಗೇ ಮುಳುಗಿ, ನನ್ನನ್ನು ನಾನೇ ಕಳೆದುಕೊಂಡುಬಿಟ್ಟೆ. ಅರಿವಿನೊಂದಿಗೆ ನನ್ನಲ್ಲಿ ಒಂದು ರೀತಿಯ ವ್ಯಾಮೋಹವು ಬೇರೂರಿಬಿಟ್ಟಿತ್ತು. ಅದಕ್ಕೇ ನಾನವಳನ್ನು ಅರ್ಥಮಾಡಿಕೊಂಡರೂ ಅವಳನ್ನು ಹೋಗಗೊಡಲು ಬೇಕಾದ ಪಕ್ವತೆಯನ್ನು ಹೊಂದಲಾರದೇ ಹೋದೆ. ಅವಳಲ್ಲಿನ ಅತಿಯಾದ ವ್ಯಾಮೋಹ ನನ್ನನ್ನು ಕುರುಡನನ್ನಾಗಿಸಿಬಿಟ್ಟಿತ್ತು.

ಅವನು ನನ್ನನ್ನು ದಿಟ್ಟಿಸಿದ.

ನಾನು ಆಗಲೇ ನಿಮ್ಮೊಡನೆ ಹೇಳಿದೆನಲ್ಲಾ ಮಿ. ಮೂರ್ತಿ, ಅವಳನ್ನು ಹೋಗಗೊಡೋ ಹಿರಿತನ ನಿಮ್ಮಲ್ಲಿತ್ತು ಅಂತ. ನಾನು ಅವಳನ್ನು ಹೋಗಗೊಡಲೊಪ್ಪಲಿಲ್ಲ. ಮೂರ್ತಿ ಅವಳು ಬಯಸಿದ ಬಿಡುಗಡೆಯಲ್ಲಿ ಬಾಳಲು ನಾನವಳಿಗೆ ಅವಕಾಶ ಮಾಡಿಕೊಡಲಿಲ್ಲ. ನಾನವಳ ಪರಿಪೂರ್ಣತೆಗೆ ಅಡ್ಡಿಯಾದೆ. ವಿವಾಹ ವಿಚ್ಛೇದನೆ ಕೊಡೋದಿಲ್ಲ ಅಂತ ಅವಳಿಗೆ ಖಡಾಖಂಡಿತವಾಗಿ ಹೇಳಿಬಿಟ್ಟೆ.

ಅವನು ಆಶ್ಚರ್ಯದಿಂದ ನನ್ನನ್ನೇ ದಿಟ್ಟಿಸಿದ.

ನನ್ನ ವೇದನೆ ತುಂಬಿದ ಮಾತು, ಕುಸಿಯುವ ದೇಹ ಆಗಲೇ ಅವನಿಗೆ ಸರ್ವಸ್ವವನ್ನೂ ತಿಳಿಸಿರಬೇಕೆಂದು ಕೊಳ್ಳುತ್ತೇನೆ.

ಕಣ್ಣುಮಿಟುಕಿಸದೇ ಅವನು ನನ್ನ ಮುಂದೆ ಕಲ್ಲಾಗಿ ನಿಂತಿದ್ದ. ನಾನವನನ್ನು ತಲೆ ಎತ್ತಿ ದಿಟ್ಟಿಸಿದೆ. ಹೃದಯ ತುಂಬಿ ಬಂತು.

ನಿಮಗೆ ಗೊತ್ತು ಮೂರ್ತಿ - ಅವಳೊಂದು ಸ್ವತಂತ್ರಜೀವಿ, ಅವಳನ್ನು ಯಾವುದರಿಂದಲೂ ಕಟ್ಟುಪಾಡಿಗೆ ಸಿಕ್ಕಿಸಲು ಸಾಧ್ಯವಿರಲಿಲ್ಲ!

ಮೂರ್ತಿ ಈಗಲೂ ಮಾತನಾಡಲಿಲ್ಲ.

ನಾನು ಅವಳನ್ನು ಹೋಗಗೊಡಲಿಲ್ಲ.

ಅದಕ್ಕೋಸ್ಕರ ಅವನ ಸ್ವರ ಪಾತಾಳಕ್ಕಿಳಿಯಿತು............!

ಹೌದು! ಅದಕ್ಕಾಗಿಯೇ, ಅವಳು ತಪ್ಪಿಸಿಕೊಂಡು ಹೋಗಿಬಿಟ್ಟಳು.

ಅವನು ಜೊತೆಯಲ್ಲಿ ಬರ್ತಾ ಇದಾನೋ ಇಲ್ವೋ ಅನ್ನೋದನ್ನು ಗಮನಿಸದೆ ನಾನು ಮುನ್ನಡೆದೆ.

---

* ಗೀತಾ ವಿಜಯಕುಮಾರ್, ೬೭೨ "ಸೌರಭ", ೧೭ನೇ ಅಡ್ಡ ರಸ್ತೆ, ಜೆ. ಪಿ. ನಗರ ಆರನೇ ಹಂತ, ಬೆಂಗಳೂರು- ೫೬೦ ೦೭೮.

ಪೆರಿಯಾರ ಬಿಟ್ಟುಹೋದ ಊರುಗೋಲು

ತಮಿಳು : **ಈರೋಡು ತಮಿಳ್ಬನ್**

ತಂದೆ ಪೆರಿಯಾರರ ಊರುಗೋಲು
ಗಾಂಧೀಜೀಯವರು ಬಿಟ್ಟು ಹೋದ ಊರುಗೋಲಿನ ಥರ
ಅಹಿಂಸೆಯ ಮಾತಾಡಲರಿಯದು, ಏಕೆಂದರೆ,
ಅದು ಅಪ್ಪಟ ಕರುಣೆ ಅಲ್ಲ; ಬಾದುಗೆ ಅನುಭವ ಪದವದು
ಸಾಮಾಜಿಕ ಅನ್ಯಾಯವ ಬಡಿದೋಡಿಸಲು
ನಾಡಿನ ಉದ್ದಗಲಕ್ಕೆ ಕಾಲು ಚಾಚಲು ಬಳಸಿದ್ದಲ್ಲವೇ?
ಅದು, ಮೌನವ್ರತಾಚರಣೆಯ ಸಂಸ್ಕೃತಿಯದಲ್ಲ
ಮಹಾನ್ ಕಾವ್ಯ - ಪುರಾಣ ಕಟ್ಟುಕಥೆಗಳನ್ನೆಲ್ಲ
ಕೆದರಿ, ಬಿಡಿಸಿ, ಜಾಲಾಡಿಸಿ ನ್ಯಾಯಾನ್ಯಾಯ ತಪಾಸಣೆ ಗೈದಿದೆ.

ಬೋಧಿ ಮಾಧವ ಕುಳಿತು ಜ್ಞಾನೋದಯ ಗಳಿಸಿದಂಥ
ದೊಡ್ಡಾಲದಮರದ ರೆಂಬೆಯ ಕೋಲು,
ಪೆರಿಯಾರರು ಬಳಸಿದ ಊರುಗೋಲು - ಅದನ್ನು
ಮುರಿಯಲು ಬಯಸಿದ್ದವರಲ್ಲ
ನೆಗೆದುಬಿದ್ದರು. ಇನ್ನು ಅದ ನೋಡಿದ ಸನಾತನಿಗಳು
ಬೆವರಿಳಿಸಿದ್ದುಂಟು.

ಇನ್ನೆಷ್ಟು ಕಾಲ ಮೌಢ್ಯದ ಮಂಡಿಗಳು
ಮೊಣಕಾಲೂರುತ್ತಾ ನೆಲಕ್ಕೆ ಮಣಿದಾವು?
ಅಯ್ಯೋ! ಅವರು ಬಳಸಿದ ಊರುಗೋಲಿನಿಂದ
ಮೆಲ್ಲನೆ ತಾಗಿಸಿಕೊಂಡರೆ,
ಸಾಕು. ಇನ್ನು ಸತ್ತೆವೆಂದು ಸಮ್ಮತಿ ತಿಳಿಸಿದವು
ಮರಣ ಶಯ್ಯೆಯಲ್ಲಿ ಅಂಗಾತ ಪುಸುಗಟ್ಟಿದ
ಅಂಧಾನುಕರಣೆಗಳು.

ದಿಟದ-ಗಟ್ಟಿತನದ ಮಾತುಗಳನ್ನೇ ಆಡಿದವರು
ಊರುಗೋಲಿನ ದೆಸೆಯಿಂದ
ಮೆಲ್ಲನೆ ಸದ್ದಡಗಿಸಿ ಗುಸುಗುಸೆಂದು ಆಡಿದವರೆಲ್ಲ
ಅಂಪರ - ದಲಿತರು ಹಿಂದುಳಿದವರೆಲ್ಲರೂ ಬಲಿಷ್ಠರಾದರು
ಅವರೆಲ್ಲರಿಗೂ ಗಟ್ಟಿತನ ಸಿದ್ಧಿಸಿತು.

ಕೆಲವೊಮ್ಮೆ ಪೆರಿಯಾರರ ಊರುಗೋಲು
ಅವರಿಗೆ ಮೂರನೇ ಕೈಯೇ ಆಯಿತು.
ಸಾಮಾನ್ಯರ ಎಡಗೈ ಬಲಗೈಯಂಥದ್ದಾಗಿರದೆ
ಅನ್ಯಾಯ - ಅವ್ಯವಸ್ಥೆಗಳನ್ನು ಬಗ್ಗು ಬಡಿಯುವ
ಓಬವ್ವನ ಒನಕೆಯೇ ಆಯಿತೆನ್ನಬೇಕು.

ಆತುರಗೊಂಡು ಅವರದನ್ನು ಮೇಲೆತ್ತಿದಾಗ
ಶೂದ್ರಾತಿಶೂದ್ರರ ಪಾಲಿಗೆ ಲಭಿಸಿದ್ದ ಅಪನಿಂದೆ - ಅಪಮಾನಗಳು
ಗಾಳಿಪಾಲಾದವು; ಅವರು ಮಾನವರಾದರು. ಅಷ್ಟೇ ಅಲ್ಲ ...,
ಕಾಳಗದಲ್ಲಿ ಅದೇ ದೊಣ್ಣೆಯ ಬೀಸುತ್ತಾ, ಸುತ್ತುತ್ತಾ ‘ವರಸೆ ‘ನಡೆಸಿದಾಗ
ಮನುಧರ್ಮದ ಅಸ್ಥಿಪಂಜರಕ್ಕೇ ಮಾರಣ ಪೆಟ್ಟಾಯಿತು
ಅಂದರೆ,
ಯಾವ ‘ಪುತ್ತೂರಿನ ಬೋನ್‌ಸೆಟ್ಟ’ ರಿಂದಲೂ
ಅದನ್ನು ಒಪ್ಪ ಮಾಡಲಿಕ್ಕಾಗದೆ,
ಎದ್ದು ನಿಲ್ಲಲೂ ಸಹ ಅಶಕ್ತವಾಯಿತು.

ಕಾಳಗ ಮುಗಿಸಿ, ಜಾಗ ಖಾಲಿ ಮಾಡಿದಾಗ
ಪೆರಿಯಾರರು ನಮಗೆ ತಂದುಕೊಟ್ಟು
ಬಿಟ್ಟುಹೋದ ಅದೇ ಊರುಗೋಲು ಇದೀಗ
ದ್ರಾವಿಡ ಜನಾಂಗದವರ ಭಾಗದ
ಬೆನ್ನುಮೂಳೆಯೇ ಆಗಿ ಉಳಿದುಕೊಂಡಿದೆ,
ಚಿಂತನಾಕ್ರಾಂತಿಗೆ ನಾಂದಿ ಹಾಡುತ್ತದೆ.

"ಕನ್ನಡ ಸಾಹಿತ್ಯ ಮತ್ತು ಕೈಗಾರಿಕೀಕರಣ"

ವಿಚಾರ ಸಂಕಿರಣ : ೩೦.೧.೧೯೯೪ ಚಿತ್ರದುರ್ಗ

ಕನ್ನಡ ಸಮಾಜ-ಸಂಸ್ಕೃತಿಯ ವಿನ್ಯಾಸಗಳು ಮತ್ತು ಕೈಗಾರಿಕೀಕರಣ

ಡಾ। ನಿ. ಮುರಾರಿ ಬಲ್ಲಾಳ

ಪ್ರಬಂಧ ಮಂಡನೆಗೆ ಕೊಟ್ಟ ವಿಷಯದ ಬಗ್ಗೆ ನನಗೆ ಜಿಜ್ಞಾಸೆಯಿದೆ. 'ಕನ್ನಡ ಸಮಾಜ - ಸಂಸ್ಕೃತಿ' ಎಂಬ ಶೀರ್ಷಿಕೆ ಭಾಷಾವಾರು ಗಡಿಯನ್ನು ಸೂಚಿಸುತ್ತದೆ. ಆದರೆ, ಸ್ವಾತಂತ್ರ್ಯಾನಂತರ ಭಾವನಾತ್ಮಕವಾಗಿ ಚಾಲ್ತಿಗೆ ಬಂದ 'ಕನ್ನಡ ನಾಡು-ನುಡಿ' ಎಂದು ಇಂದು ಗುರುತಿಸಲ್ಪಡುವ ಗಡಿಯ ಚೌಕಟ್ಟನ್ನು ಸಂಸ್ಕೃತಿಗೂ ಹೊಂದಿಸಲು ಸಾಧ್ಯವೇ ಎಂದು ನಾವು ಯೋಚಿಸಬೇಕಾಗಿದೆ. ಭಾರತೀಯ ಸಂಸ್ಕೃತಿಯ ಒಟ್ಟು ಸಂದರ್ಭದಲ್ಲಿ ಕನ್ನಡ ಸಂಸ್ಕೃತಿಯನ್ನು ನಿರ್ದಿಷ್ಟವಾಗಿ ಪ್ರತ್ಯೇಕಿಸಿ ಗುರುತಿಸುವುದು ಸ್ವಲ್ಪ ಕಷ್ಟ ಅಂತ ನನ್ನ ಅನ್ನಿಸಿಕೆ. ಕರ್ನಾಟಕದ ಭೌಗೋಳಿಕ ಗಡಿಯ ಸುತ್ತಲಿರುವ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳಗಳು ಕನ್ನಡ ನಾಡು-ನುಡಿಯ ಜತೆ ಅಂತರ್‌ಸಂಬಂಧ ಹೊಂದಿದ್ದು, ಒಂದಕ್ಕೊಂದು ಸತತವಾಗಿ ಅಂತರ್‌ಪ್ರಭಾವ ಬೀರುತ್ತಾ, ಒಂದರೊಳಗೊಂದು ಬಿಡಿಸಲಾರದ ರೀತಿಯಲ್ಲಿ ಸೇರಿಕೊಂಡಿವೆ. ಆದ್ದರಿಂದ ಕರ್ನಾಟಕವನ್ನು ಒಂದು ಪ್ರತ್ಯೇಕ ಸಾಂಸ್ಕೃತಿಕ ಉಪಖಂಡ ಎಂದು ಗ್ರಹಿಸುವುದು ಸ್ವಲ್ಪ ಕಷ್ಟ.

'ಕೈಗಾರಿಕೀಕರಣ' ಎಂಬ ಪದವನ್ನು ಕೂಡಾ ನಾವು ಸ್ಪಷ್ಟವಾದ ಅರ್ಥದಲ್ಲಿ ವ್ಯಾಖ್ಯಾನಿಸಬೇಕಾಗುತ್ತದೆ. ಕೈಗಾರಿಕೀಕರಣವನ್ನು ಆಧುನಿಕೀಕರಣದ ಜತೆ ಸಮೀಕರಿಸುವುದು ಅಷ್ಟು ಸಮಂಜಸವಲ್ಲ. ಹಾಗೆ ನೋಡಿದರೆ, ಪಾಶ್ಚಾತ್ಯರಾಷ್ಟ್ರಗಳಲ್ಲಿ ೧೮-೧೯ನೇ ಶತಮಾನಗಳಲ್ಲಿ ಆದ ಬೃಹತ್ ಪ್ರಮಾಣದ ಕೈಗಾರಿಕೀಕರಣ ಕರ್ನಾಟಕದಲ್ಲಿ ಆಗಿದೆಯೇ ಎಂಬುದನ್ನು ವಿಮರ್ಶಿಸಬೇಕು. ಕೈಗಾರಿಕೀಕರಣದ ಆರಂಭದ ಹಂತದಲ್ಲಿ ಅದು ಇಡಿಯ ಸಂಸ್ಕೃತಿಯನ್ನೇ ಒಳಗೊಳ್ಳುತ್ತಿದ್ದ ರೀತಿಯನ್ನು ಕಂಡು ಯುರೋಪಿನ ಚಿಂತನಶೀಲರು ಎಷ್ಟು ಕಳವಳಗೊಂಡಿದ್ದರು ಎಂದರೆ, ಪ್ರಸಿದ್ಧ ತತ್ವಜ್ಞಾನಿ ಎ. ಎನ್. ವೈಟ್‌ಹೆಡ್, ವಿಜ್ಞಾನಿ ಜೆ. ಬಿ. ಎಸ್.ಹಾಲ್ಡೇನ್, ಬರ್ನಾಲ್ ಮೊದಲಾದವರು ವಿಜ್ಞಾನದ ಬೆಳವಣಿಗೆಯಲ್ಲಿದ್ದ ಅಮಾನವೀಯ ಅಂಶಗಳನ್ನು ಕಂಡು, ವಿಜ್ಞಾನವು ಕೇವಲ ತಂತ್ರಜ್ಞಾನದ ವಿವೇಚನಾರಹಿತ ವಿಸ್ತರಣೆಯೇ ಆದರೆ ಇದನ್ನು ತಿರಸ್ಕರಿಸಿ ನಾವು ಪುನಃ ನಿಸರ್ಗದ ಮಡಿಲಿಗೆ ಹಿಂತಿರುಗುವುದು ಒಳ್ಳೆಯದು; ಇಲ್ಲವಾದಲ್ಲಿ ವಿಜ್ಞಾನದ ಮಾನವೀಕರಣದ ಬಗ್ಗೆಯಾದರೂ ತುರ್ತಾಗಿ ಗಮನಹರಿಸಬೇಕೆಂದು ಖೇದದಿಂದ ನುಡಿಯುತ್ತಾರೆ. ಯಾಕೆಂದರೆ, ಕೈಗಾರಿಕೀಕರಣ ಅಥವಾ ವ್ಯಾಪಕ ಅರ್ಥದಲ್ಲಿ ತಾಂತ್ರಿಕತೆ ಬದಲಾದಂತೆ ಉತ್ಪಾದನಾ ಸಂಬಂಧಗಳೂ ಬದಲಾಗುವುದರಿಂದ ಅದು ಸಂಸ್ಕೃತಿಯ ಮೇಲೆ ಮತ್ತು ನೈಸರ್ಗಿಕ ಪರಿಸರದ ಮೇಲೆ ಗಾಢವಾದ ಪರಿಣಾಮ ಬೀರುವುದನ್ನು ನೋಡುತ್ತೇವೆ. ಈ ಎಲ್ಲ ಸಂಗತಿಗಳೂ ಒಂದಕ್ಕೊಂದು ಹೆಣೆದುಕೊಂಡಿರುವ

ಸಂಬಂಧಗಳಾದ್ದರಿಂದ ಉತ್ಪಾದನಾ ಕ್ರಮದಲ್ಲಿ ಬದಲಾವಣೆ ಆದಂತೆ ಬದುಕಿನ ಕ್ರಮ, ಸಮಾಜ ನಿರ್ಮಿತಿ, ಸಾಮಾಜಿಕ ಸಂಬಂಧಗಳು, ಅವುಗಳೊಳಗಿನ ಅಂತರ್‌ಜಾಲಗಳು, ಅಂತರ್ ಪ್ರಕ್ರಿಯೆಗಳು ಎಲ್ಲವೂ ಬದಲಾಗುತ್ತವೆ. ಹೊಸ ಮೌಲ್ಯಗಳು ಹುಟ್ಟಿಕೊಳ್ಳುತ್ತವೆ. ಈ ದೃಷ್ಟಿಯಲ್ಲಿ ಪರಿಶೀಲಿಸಿದಾಗ, ಕೈಗಾರಿಕೀಕರಣ ಅಥವಾ ತಾಂತ್ರಿಕತೆ ವಿಶಾಲವಾದ ಅರ್ಥದಲ್ಲಿ ಭಾರತದ ಒಟ್ಟು ಸಂಸ್ಕೃತಿಯ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದರೂ ಕೂಡಾ, ಸಾಂಸ್ಕೃತಿಕವಾಗಿ ಅಲ್ಲೋಲ ಕಲ್ಲೋಲ ಆಗುವಂಥ ಮಟ್ಟದ ಕೈಗಾರಿಕೀಕರಣ ಕರ್ನಾಟಕದಲ್ಲಿ ಆರಂಭದ ಹಂತದಲ್ಲಿ ಆಗಿದೆಯೇ ಎಂಬುದನ್ನು ಯೋಚಿಸಬೇಕು.

'ಸಂಸ್ಕೃತಿ' ಎಂಬ ಪದವನ್ನು ನಾವು ಯಾವ ಅರ್ಥದಲ್ಲಿ ಬಳಸುತ್ತೇವೆ ಎಂಬುದನ್ನು ಸ್ಪಷ್ಟವಾಗಿ ನಿರೂಪಿಸಬೇಕಾಗಿದೆ. ಹೆಚ್ಚಿನ ಸಂದರ್ಭದಲ್ಲಿ 'ಸಂಸ್ಕೃತಿ' ಎಂಬ ಪದವನ್ನು ಕೇವಲ ವಿವಿಧ ಕಲಾಪ್ರಕಾರಗಳು, ಸಾಹಿತ್ಯ, ಧರ್ಮ, ಭಾಷೆಗಳಿಗೆ ಸೀಮಿತಗೊಳಿಸಿ ಬಳಸಲಾಗುತ್ತದೆ. ಆದರೆ 'ಸಂಸ್ಕೃತಿ' ಪದದ ವ್ಯಾಪ್ತಿ ಇಷ್ಟೇ ಅಲ್ಲ. ಹಾಗಾದರೆ ಸಂಸ್ಕೃತಿ ಅಂದರೇನು? ಪ್ರಾಣಿಗಳು, ತಾವಿದ್ದ ಪರಿಸರದ ಜತೆ ಹೊಂದಿಕೊಂಡು ಬಾಳುತ್ತಿದ್ದರೆ, ಸ್ವಯಂ ಪ್ರಜ್ಞೆಯಿಂದ ಮನುಷ್ಯ ಮಾತ್ರ ತನ್ನ ಬಾಳಿಗೆ ಅನುಕೂಲವಾಗುವಂತೆ ಪರಿಸರವನ್ನೇ ಮಾರ್ಪಾಟುಮಾಡಿ ಹೊಂದಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ತನ್ನ ಬುದ್ಧಿಶಕ್ತಿಯಿಂದ ತನಗೆ ಬೇಕಾದ್ದನ್ನು ಸೃಷ್ಟಿಸಿಕೊಳ್ಳುತ್ತಾನೆ. ಈ ಎಲ್ಲ ಮಾರ್ಪಾಟುಗಳ ಒಟ್ಟು ಸ್ವರೂಪವನ್ನೇ ಅಥವಾ ಪ್ರಕ್ರಿಯೆಯನ್ನೇ ಸಂಸ್ಕೃತಿ ಎಂದು ಕರೆಯಬಹುದು. ಈ ಮಾರ್ಪಾಟುಗಳು ಮೂರ್ತ (Concrete) ಮತ್ತು ಅಮೂರ್ತ (obstract) ನೆಲೆಗಳಲ್ಲಾಗುತ್ತವೆ. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಮನುಷ್ಯ ಚಟುವಟಿಕೆಯಿಂದಾಗುವ ಎಲ್ಲ ಬದಲಾವಣೆಗಳು ಭೌತಿಕ ಅಥವಾ ಮೂರ್ತ ಬದಲಾವಣೆಗಳು. ಮಾನಸಿಕ ಸ್ತರದಲ್ಲಿ ಮತ್ತು ಸಮಾಜ ದಲ್ಲಾಗುವ ಪರಿವರ್ತನೆಗಳು ಅಮೂರ್ತ ಅಥವಾ ಅಭೌತಿಕ ಬದಲಾವಣೆಗಳು.

ಮನುಷ್ಯ ಒಟ್ಟು ಮೂರು ಸ್ತರಗಳಲ್ಲಿ ಸೃಷ್ಟಿ ಮಾಡುತ್ತಾ ಬದಲಾವಣೆಗೆ ಕಾರಣವಾಗುತ್ತಾನೆ. ಮೊದಲನೆಯದಾಗಿ ತನ್ನ ಕರಕೌಶಲ್ಯದಿಂದ ಸೃಷ್ಟಿಸಿದ ಹಸ್ತ ಶಿಲ್ಪಗಳು (arte facts). ಕುಂಬಾರನ ಮಡಿಕೆಯಿಂದ ಹಿಡಿದು ಇಂದಿನ ಆಧುನಿಕ ತಾಂತ್ರಿಕತೆಯ ಫಲವಾಗಿ ಮೂಡಿಬಂದ ಎಲ್ಲ ಸೃಷ್ಟಿಯನ್ನು ಇದು ಒಳಗೊಳ್ಳುತ್ತದೆ. ಎರಡನೆಯದಾಗಿ-ಮನಸ್ಸಿನಿಂದ ಜನಿಸಿದ ಹೊಸ ಹೊಸ ಚಿಂತನಗಳು, 'ಐಡಿಯಾಲಜಿ'ಗಳು, ನೀತಿ-ನಿಯಮಗಳು, ಸರಿ-ತಪ್ಪು ಕಲ್ಪನೆಗಳು, ಕಲೆ, ಸಂಗೀತ, ಸಾಹಿತ್ಯ, ಧರ್ಮ ಇತ್ಯಾದಿ. ಇವನ್ನು Mentifacts ಎಂದು ವರ್ಗೀಕರಿಸುತ್ತಾರೆ. ಮೂರನೆಯದಾಗಿ-ಸಮಾಜರಚನೆ, ಕೂಡುಕಟ್ಟು, ಗುಂಪು, ವರ್ಗ, ಜಾತಿ, ಸಂಪ್ರದಾಯಗಳು, 'ರಿಚುವಲ್ಸ್'ಗಳು, ಸಾಮಾಜಿಕ ಸಂಬಂಧ ಮುಂತಾದವುಗಳು. ಇದನ್ನು Sociofacts ಎಂದು ಕರೆಯಬಹುದು. ಈ ಮೂರು ನೆಲೆಗಳಲ್ಲಿ ಮನುಷ್ಯನಿಂದಾಗುವ ಸೃಷ್ಟಿ- ಮಾರ್ಪಾಟುಗಳ ಒಟ್ಟು ಮೊತ್ತವನ್ನೇ ಸಂಸ್ಕೃತಿಯೆಂದು ಕರೆಯಬಹುದು. ಆದ್ದರಿಂದ ವ್ಯಾಪಕ ಅರ್ಥದಲ್ಲಿ ಸಂಸ್ಕೃತಿ ಎಂದರೆ ಮನುಷ್ಯ ಈ ಭೂಮಿಯಲ್ಲಿ ಹುಟ್ಟದಿರುತ್ತಿದ್ದರೆ ಏನೆಲ್ಲ ಇರುತ್ತಿರಲಿಲ್ಲವೋ ಆ ಎಲ್ಲ ಸಮಗ್ರ ಕೃತಿಗಳ ಮೊತ್ತವೇ ಆಗಿದೆ.

ಇನ್ನು, ಭೌತಿಕ ಅಥವಾ ತಾಂತ್ರಿಕತೆಯು ಅಭೌತಿಕವಾದ ಸಂಸ್ಕೃತಿ-ಮೌಲ್ಯ - ಸಮಾಜಗಳ ಮೇಲೆ ಪ್ರಭಾವ ಬೀರುವುದೋ ಅಥವಾ ಅಭೌತಿಕ ಮೌಲ್ಯಗಳು ಭೌತಿಕ ಬದಲಾವಣೆಯ ದಿಕ್ಕನ್ನು ನಿರ್ಧರಿ ಸುತ್ತದೆಯೋ ಎಂಬುದರಲ್ಲಿ ಸಾಕಷ್ಟು ವಾಗ್ವಾದವಿದೆ. ಮಾರ್ಕ್ಸ್‌ನ ಅಭಿಪ್ರಾಯದಂತೆ, ಭೌತಿಕವು ಅಭೌತಿಕದ ಮೇಲೆ ಪ್ರಭಾವ ಬೀರಿ ಹೊಸ ಮೌಲ್ಯ, ಹೊಸ ಚಿಂತನಗಳ ಸೃಷ್ಟಿಗೆ ಕಾರಣವಾಗುತ್ತದೆ. ಹಾಗಾಗಿ ಮರ್ಕ್ಸ್‌ನ ಸಿದ್ಧಾಂತದಲ್ಲಿ ಭೌತಿಕವೇ ಪರಮವಾಗುತ್ತದೆ. ಆದರೆ ಮ್ಯಾಕ್ಸ್ ವೆಬೆರ್‌ನಂತಹ ಅನೇಕ

ಸಮಾಜಶಾಸ್ತ್ರಜ್ಞರು ಭೌತಿಕ - ಅಭೌತಿಕಗಳೆರಡೂ ಪರಸ್ಪರ ಪ್ರಭಾವ ಬೀರುತ್ತಿರುತ್ತವೆ ಎಂದು ಅಭಿಪ್ರಾಯ ಪಡುತ್ತಾರೆ. ಉದಾಹರಣೆಗೆ, ಭಾರತದಲ್ಲಿ ಅಭೌತಿಕ ಮೌಲ್ಯಗಳ ಪ್ರಭಾವ ಗಾಢವಾಗಿದ್ದದ್ದರಿಂದಲೇ ತಾಂತ್ರಿಕತೆಯ ಆವಿಷ್ಕಾರಗಳು ಎದ್ದು ಕಾಣುವಂತೆ ಪ್ರಬಲವಾಗಿ ಮುನ್ನಡೆಯಲಿಲ್ಲ. ಯುರೋಪಿನಲ್ಲಿ ಪ್ರೊಟೆಸ್ಟಾಂಟ್ ಧರ್ಮದಿಂದ ವಿಜ್ಞಾನಕ್ಕೆ ಬಹಳಷ್ಟು ಪುರಸ್ಕಾರ ಸಿಕ್ಕಿದೆ. ಜಗತ್ತನ್ನು ಧರ್ಮದ ಮೂಲಕ ಹತೋಟಿಯಲ್ಲಿಟ್ಟುಕೊಂಡು ತಮ್ಮ ಮತವನ್ನು ಪ್ರಬಲಗೊಳಿಸಲಿಕ್ಕಾಗಿಯೇ ಪ್ರೊಟೆಸ್ಟಾಂಟರು ೧೮-೧೯ನೆಯ ಶತಮಾನಗಳಲ್ಲಿ ವಿಜ್ಞಾನದ ಮುನ್ನಡೆಯನ್ನು ಪ್ರೋತ್ಸಾಹಿಸಿದರು. ಹಾಗಾಗಿ ಅಲ್ಲಿ ಭೌತಿಕ ವಿಜ್ಞಾನ, ಕೈಗಾರಿಕೀಕರಣದ ಗಮನಾರ್ಹ ಮುನ್ನಡೆಗೆ ಅಭೌತಿಕ ಧರ್ಮದ ಪ್ರಭಾವ ಕೂಡ ಕಾರಣವಾಯಿತು.

ಸಮಾಜ ರಚನೆಯ ಸ್ವರೂಪಕ್ಕೂ ಸಾಂಸ್ಕೃತಿಕ ಮೌಲ್ಯಗಳಿಗೂ ಬಹಳಷ್ಟು ಅಂತರ್‌ಸಂಬಂಧವಿದೆ. ಮೌಲ್ಯಗಳಿಗೆ ದೊರೆಯುವ ಪ್ರಾಮುಖ್ಯತೆಗನುಗುಣವಾಗಿ ಸಮಾಜದಲ್ಲಿ ವಿಭಿನ್ನ ಸ್ತರಗಳು ನಿರ್ಮಾಣವಾಗುವುದನ್ನು ಗಮನಿಸಿಬಹುದು. ಜ್ಞಾನಕ್ಕೆ, ಆಧ್ಯಾತ್ಮಿಕತೆಗೆ ಶ್ರೇಷ್ಠ ಪುರಸ್ಕಾರ ದೊರೆತಂತೆಲ್ಲ ಜ್ಞಾನಿಗಳು, ವಿದ್ವಜ್ಜನರು ಶ್ರೇಷ್ಠರಾಗುತ್ತಾರೆ. ಅಲ್ಲಿ ಪರಾಕ್ರಮ ಒಂದು ಮೌಲ್ಯವಾಗಿ ಎರಡನೆಯ ಸ್ಥಾನ ಪಡೆಯುತ್ತದೆ. ಬುಡಕಟ್ಟು ಜನಾಂಗಗಳಲ್ಲಿ ಈ ರೀತಿಯ ಸ್ತರಗಳನ್ನು ಗಮನಿಸಬಹುದು. ಅಲ್ಲಿ 'ಮೆಜೀಶಿಯನ್' ಹೆಚ್ಚಿನ ಸಂದರ್ಭಗಳಲ್ಲಿ ಅಗ್ರಸ್ಥಾನ ಪಡೆಯುತ್ತಾನೆ. ಶೌರ್ಯ-ಪರಾಕ್ರಮಗಳನ್ನು ತೋರಿಸುವ, ರಕ್ಷಣೆಕೊಡುವ ನಾಯಕ ಎರಡನೇ ಸ್ಥಾನ ಪಡೆಯುತ್ತಾನೆ.

-೨-

ಸುಮಾರು ೧೯ನೆಯ ಶತಮಾನದವರೆಗೆ ಕರ್ನಾಟಕದಲ್ಲಿ ಮಾತ್ರವಲ್ಲ ಇಡೀ ಭಾರತದ ಹಳ್ಳಿಗಳಲ್ಲಿ ಗ್ರಾಮ ಚೌಕಟ್ಟಿನ ಒಳಗೆ ಮತ್ತು ಜಾತಿಯ ಕೂಡುಕಟ್ಟಿನ ಒಳಗೆಯೇ ಸಮಾಜಕ್ಕೆ ಗಟ್ಟಿಯಾದ ಸ್ವಯಂ ಸಂಘಟಿತ ಸ್ವರೂಪವಿತ್ತು. ಪ್ರತೀ ಗ್ರಾಮವೂ ತನ್ನಲ್ಲೇ ತಾನು ಪರಸ್ಪರಾವಲಂಬಿಯಾದ ಅವಯವಗಳಿಂದ ಕೂಡಿದ ಜೀವಂತ ಸಮಷ್ಟಿಯಂತೆ ವಿಕಾಸವಾದ ಒಂದು ಸ್ವತಂತ್ರ ಘಟಕವಾಗಿತ್ತು. ಹಾಗಾಗಿ ಪ್ರತಿಯೊಂದು ಸಮಾಜಕ್ಕೂ ಶತಮಾನಗಳಿಂದ ಅನುಸ್ಯೂತವಾಗಿ ವಿಕಾಸವಾಗುತ್ತ ಬಂದ ಅವು ಅವುಗಳದೇ ಆದ ಕಟ್ಟು-ಕಟ್ಟಳೆ, ರೀತಿ-ರಿವಾಜುಗಳು, ಧಾರ್ಮಿಕ ನಂಬಿಕೆಗಳು, ಕಲೆ - ಸಂಸ್ಕೃತಿಗಳು ಇದ್ದವು. ಇವು ಸ್ವಯಂ ಸಂಘಟಿತ ಜೀವಂತ ಸಮಷ್ಟಿಯನ್ನು ವ್ಯವಸ್ಥಿತವಾಗಿ ಹಿಡಿದಿಡುವ ಕೇಂದ್ರ ಅಥವಾ ತಿರುಳಾಗಿದ್ದು ಸಮಾಜಕ್ಕೆ ಆಳವಾದ ಮೂರನೆಯ ಸಾಂಸ್ಕೃತಿಕ ಆಯಾಮವನ್ನು ಒದಗಿಸಿತ್ತು. ದಟ್ಟವಾದ ಸಾಂಸ್ಕೃತಿಕ ಪದರು-ಒಳಪದರುಗಳಿಗೆ ಕಾರಣವಾಗಿತ್ತು. ಕಳೆದ ಒಂದು ಶತಮಾನದಿಂದೀಚೆಗೆ ಸಮಾಜದ ಈ ಸ್ವರೂಪ ಸಂಪೂರ್ಣ ಬದಲಾಗಿದೆ. ಈ ಬದಲಾವಣೆಗೆ ಪ್ರಮುಖ ಕಾರಣ ಕೈಗಾರಿಕೀಕರಣ ಮತ್ತು ಅದು ಸೃಷ್ಟಿಸಿದ ಹೊಸ ಉತ್ಪಾದನಾ ಸಂಬಂಧಗಳು ಎನ್ನಬಹುದು. ಇದರ ಪರಿಣಾಮವಾಗಿ ಹಳೆಯ ಸಮಾಜದ ದಟ್ಟವಾದ ಮೌಲ್ಯಗಳು ಬುಡಮೇಲಾದವು. ಹೊಸ ಉತ್ಪಾದನಾ ವಿಧಾನವೇ ಕೇಂದ್ರೀಕರಣದ ಸ್ವರೂಪದ್ದಿರುವುದರಿಂದಾಗಿ, ಅನಿವಾರ್ಯವಾಗಿ ಕೈಗಾರಿಕಾ ಕೇಂದ್ರಗಳಾದ ಪೇಟೆ-ಪಟ್ಟಣಗಳು ಆರ್ಥಿಕ-ಸಾಮಾಜಿಕ ಚಟುವಟಿಕೆಗಳ ಪ್ರಬಲವಾದ ಕೇಂದ್ರಗಳಾಗಿ ರೂಪುಗೊಂಡವು. ಆಧುನಿಕ ಸಂಪರ್ಕ ಸಾಧನಗಳಿಂದಾಗಿ ಹೊಸ ಹೊಸ ಪ್ರದೇಶಗಳ ಸಂಪರ್ಕವು ಹೆಚ್ಚುತ್ತಾ ಅವು ಪ್ರಭಾವ ಬೀರಲು ಆರಂಭಿಸಿದಂತೆ, ಅವುಗಳ ಆಕರ್ಷಣೆಯಿಂದಾಗಿ ಜನರು ಪೇಟೆಗೆ ವಲಸೆ ಹೋಗಲು ಆರಂಭಿಸಿದರು. ಹಳೆಯ ಸಾಮಾಜಿಕ ವ್ಯವಸ್ಥೆ, ಜಾತಿ-ಪಂಗಡಗಳ ಸಂಬಂಧಗಳು, ವಂಶ, ಕುಲ, ಮನೆತನ, ರಕ್ತಸಂಬಂಧಗಳೆಲ್ಲ ಸಡಿಲಾಗಲು ಆರಂಭಿಸಿದುವು. ಕೈಗಾರಿಕೀಕರಣದ ಪ್ರಭಾವದಿಂದಾಗಿ ಮುಖ್ಯವಾಗಿ ನಾವು ಸಮಾಜದಲ್ಲಿ ಎರಡು ರೀತಿಯ

ಚಲನೆಯನ್ನು ಗಮನಿಸಬಹುದು. ಜಾತಿಕಟ್ಟನ್ನು ಮೀರುವ ಊರ್ಧ್ವಮುಖದ ಸಂಸ್ಕೃತಾನುಸರಣ ಚಲನೆ ಒಂದು ನಿಟ್ಟಿನಲ್ಲಿ ನಡೆದರೆ, ಇನ್ನೊಂದು ಕಡೆಯಲ್ಲಿ ವಿಭಿನ್ನಪ್ರದೇಶಗಳಿಗೆ ಸಮಾನಾಂತರ ಚಲನೆಗೂ ಚಾಲನೆ ಸಿಕ್ಕಿತು. ಈ ದ್ವಿಗತಿಯ ಚಲನೆಯು ಎಲ್ಲಾ ಹಳೆಯ ಮೌಲ್ಯಗಳನ್ನೂ, ಸಂಪ್ರದಾಯಗಳನ್ನೂ ಸಡಿಲುಗೊಳಿಸಿದ್ದರಿಂದ ಹಳೆಯ ಪರಂಪರೆ, ಕೂಡುಕಟ್ಟಿನ ವ್ಯವಸ್ಥೆಯಿಂದ ಈ ಚಲನೆಯನ್ನು ನಿರ್ಬಂಧಿಸುವುದು ಕಷ್ಟವಾಯಿತು.

ಕುಲಕಸುಬುಗಳೇ ಮೂಲವಾದ ಪಾರಂಪರಿಕ ಅರ್ಥವ್ಯವಸ್ಥೆಯಲ್ಲಿ, ಕುಟುಂಬದೊಳಗೇನೇ ಎಲ್ಲ ಸದಸ್ಯರಿಗೂ ಉದ್ಯೋಗವೂ ಇದ್ದದ್ದರಿಂದ ಮತ್ತು ಸಮಾಜದ ಹೆಚ್ಚಿನ ಉತ್ಪಾದನೆಯು ಕುಟುಂಬದ ವಿಕೇಂದ್ರೀಕೃತ ವ್ಯವಸ್ಥೆಯೊಳಗೇ ನಡೆಯುತ್ತಿದ್ದುದರಿಂದ, ಕುಟುಂಬದ ಸದಸ್ಯರ ನಡುವೆ ಪರಸ್ಪರ ಅವಲಂಬನೆಯಿತ್ತು. ಕುಟುಂಬದ ಬೇರೆ ಬೇರೆ ಸದಸ್ಯರು ಒಂದೇ ಕೇಂದ್ರದ ಸುತ್ತ ಹೆಣೆದುಕೊಂಡಿರುವ ಜೀವಕೋಶದ ವಿಭಿನ್ನ ಅವಯವಗಳಂತೆ ಕೆಲಸ ಮಾಡುತ್ತಿದ್ದರು. ಹಾಗಾಗಿ ಅವಿಭಕ್ತ ಕುಟುಂಬ ವ್ಯವಸ್ಥೆ ತುಂಬ ಗಟ್ಟಿಯಾಗಿತ್ತು. ಆದರೆ, ಕೈಗಾರಿಕೀಕರಣದಿಂದಾಗಿ ವಿಕೇಂದ್ರೀಕೃತ ನೆಲೆಯಲ್ಲಿದ್ದ ಉತ್ಪಾದನಾ ವ್ಯವಸ್ಥೆಯು ಕೇಂದ್ರೀಕೃತ ರಾಷ್ಟ್ರತನ್ನ ವ್ಯವಸ್ಥೆಯಾಗಿ ಪರಿವರ್ತನೆಯಾದಾಗ ಅವಿಭಕ್ತ ಕುಟುಂಬದ ಸದಸ್ಯರು, ಕೈಗಾರಿಕಾ ಕೇಂದ್ರ ಬಿಂದುಗಳಾದ ಪಟ್ಟಣಗಳಿಗೆ ಕೆಲಸಕ್ಕಾಗಿ ಮಾತ್ರವಲ್ಲದೆ, ಹೆಚ್ಚಿನ ವೈಯಕ್ತಿಕ ಸ್ವಾತಂತ್ರ್ಯಕ್ಕಾಗಿ ಕೂಡಾ ವಲಸೆಹೋಗುವ ಆಕರ್ಷಣೆಗೆ ಒಳಗಾದರು. ಕುಟುಂಬದ ದಟ್ಟ ಸಂಬಂಧಗಳು ಸಡಿಲುಗೊಳ್ಳುತ್ತಾ, ಪರಸ್ಪರ ಅವಲಂಬನೆಯೆಂಬುದು ಹೊರೆ ಎಂಬ ಮನೋಭಾವ ಮೂಡಲು ಆರಂಭವಾಯಿತು. ಒಬ್ಬ ವ್ಯಕ್ತಿಗೆ ಕುಟುಂಬದ ಹೊರಗೆ ಸ್ವತಂತ್ರವಾಗಿ ಹಣ ಸಂಪಾದನೆ ಮಾಡುವುದು ಸಾಧ್ಯವಾದಾಗ, ಅವನ ವೈಯಕ್ತಿಕ ಆಸಕ್ತಿ, ಸ್ವಾರ್ಥ, ಸ್ವಾತಂತ್ರ್ಯಪ್ರಿಯತೆ ಹೆಚ್ಚಾಯಿತು. ಹಾಗಾಗಿ ಜನ, ಕುಟುಂಬದ ಚೌಕಟ್ಟನ್ನು ಮೀರಿ ತ್ವರಿತಗತಿಯಲ್ಲಿ ವಲಸೆಹೋಗಲು ಶುರುಮಾಡಿದರು. ಇದರ ಪರಿಣಾಮವಾಗಿ, ಇಂದು ಒಂದು ಕುಟುಂಬದ ಒಬ್ಬ ಸದಸ್ಯ ಭಾರತದ ಹೊರಗಿದ್ದರೆ, ಇನ್ನೊಬ್ಬ ಭಾರತದೊಳಗೆ ಅನ್ಯರಾಜ್ಯದಲ್ಲಿರುವ ಸಾಧ್ಯತೆ ಸಾಮಾನ್ಯವಾಗಿದೆ; ಮತ್ತು ಪರಸ್ಥಳದಲ್ಲಿರುವ ಕುಟುಂಬದ ಈ ಸದಸ್ಯರೆಲ್ಲರೂ ಬಹುತೇಕವಾಗಿ ಕರ್ನಾಟಕದಲ್ಲಿರುವ ತಮ್ಮ ಮೂಲಕುಟುಂಬದ ಸದಸ್ಯರ ಜತೆ ಸಂಪರ್ಕವಿಟ್ಟುಕೊಂಡಿದ್ದು ಪರಸ್ಪರ ಪ್ರಭಾವ ಬೀರುತ್ತಿರುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಕನ್ನಡ ಜನಾಂಗಗಳು ತಮ್ಮ ಶುದ್ಧ ಸ್ವರೂಪವನ್ನು ಉಳಿಸಿಕೊಳ್ಳಲು ಸಾಧ್ಯವೇ? ಯಾವುದೇ ಪ್ರಾದೇಶಿಕ ವೈಶಿಷ್ಟ್ಯತೆಯನ್ನು, ದೇಶೀಯತೆಯನ್ನು ಅವುಗಳ ಅಪ್ಪಟ ಸ್ವರೂಪದಲ್ಲಿ ಈ ಸಂಕೀರ್ಣ ಆಧುನಿಕ ಸಮಾಜದಲ್ಲಿ ಕಾಣುವುದು ಕಷ್ಟವಲ್ಲವೇ? ಜಾನಪದ ಸಂಸ್ಕೃತಿ, ದೇಶೀ ಸಂಸ್ಕೃತಿ ಎಂಬುದು ಕೇವಲ ಪಳೆಯುಳಿಕೆಯಂತೆ 'ಡಾಕ್ಯುಮೆಂಟೇಶನ್' (ದಾಖಲೆ) ವಸ್ತುವಾಗಿ ಇಂದು ಉಳಿಯುತ್ತಿದೆಯೇ ವಿನಾ ಬದುಕಿನ ಪ್ರಧಾನ ಪ್ರವಾಹವಾಗಿ ಉಳಿದಿಲ್ಲ. ನಮ್ಮ ಜನರ ಜೀವನಕ್ರಮ, ಆಚಾರ-ವಿಚಾರಗಳು, ಉಡುಪು, ಆಚಾರ-ವಿಚಾರಗಳು, ಉಡುಪು, ಆಹಾರ-ವಿಹಾರ ಕ್ರಮಗಳು, ಚಿಂತನೆ, ಧರ್ಮಾಚರಣೆ-ಯಾವುದರಲ್ಲೂ ಇಂದು ಕರ್ನಾಟಕದ ಛಾಪು ಪ್ರಧಾನ ವಾಹಿನಿಯಾಗಿ ಹರಿಯುವುದು ಕಾಣುವುದಿಲ್ಲ. ಉತ್ತರ ಭಾರತದ ಆಚಾರಗಳು, ಉಡಿಗೆ-ತೊಡಿಗೆಗಳು, ಸಾರ್ವಜನಿಕ ಗಣೇಶೋತ್ಸವದಂತಹ ಧರ್ಮಾಚರಣೆಯ ಸಾರ್ವಜನಿಕೀಕರಣದ ಅನೇಕ ಮುಖಗಳು ಕರ್ನಾಟಕದ ಸಂಸ್ಕೃತಿಯ ಜತೆ ಹಾಸು ಹೊಕ್ಕಾಗಿ ಸೇರಿಕೊಂಡಿವೆ. ಇದರ ಜತೆ ಪಾಶ್ಚಾತ್ಯ ಚಿಂತನೆ, ಜೀವನಕ್ರಮ, ತಳಕು ಪಳಕು ನಮ್ಮ ಮನೆಯ ಪಡಸಾಲೆಯನ್ನೇ ಹೊಕ್ಕಿದ್ದು ಕನ್ನಡ ಸಂಸ್ಕೃತಿ, ಸಮಾಜ ಎಂಬುದು ಪ್ರತ್ಯೇಕವಾಗಿ ಉಳಿಯುವ ಸಾಧ್ಯತೆಯನ್ನೇ ಕಡಿಮೆ ಮಾಡಿದೆ. ಪ್ರಬಲ ಸಮೂಹ ಮಾಧ್ಯಮಗಳ ದೆಸೆಯಿಂದ ಇಡೀ ಜಗತ್ತೇ ನಮ್ಮ ಡ್ರಾಯಿಂಗ್

ರೂಮಿನಲ್ಲಿ ಹಾಜರಾಗುತ್ತಾ, ನಮ್ಮ ಸಾಂಸ್ಕೃತಿಕ ಆಯ್ಕೆಯ ಸ್ವಾತಂತ್ರ್ಯವನ್ನೇ ಮೊಟಕುಗೊಳಿಸುತ್ತಿದೆ. ಹಾಗಾಗಿ ದೇಶೀ ಕನ್ನಡ ಸಂಸ್ಕೃತಿ-ಸಮಾಜದ ಇಡೀ ತಳಗಟ್ಟೇ ಇಂದು ಅಲುಗಾಡುತ್ತಿದೆ. ಉತ್ತರಭಾರತದ ಅಥವಾ ಪಾಶ್ಚಾತ್ಯ ಸಂಸ್ಕೃತಿಯ 'ಸೂಪರ್ ಸ್ಟ್ರಕ್ಚರ್' ಮೇಲೇಳುತ್ತಿದೆ. ನಮ್ಮ ಕನ್ನಡ ಸಾಹಿತ್ಯ, ಚಿತ್ರಕಲೆ, ವಾಸ್ತುಶಿಲ್ಪ, ಸಂಗೀತ, ಶಿಕ್ಷಣ ಮೊದಲಾದ ಎಲ್ಲಾ ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಈ ಸಾಂಸ್ಕೃತಿಕ ದಾಳಿ ಸರ್ವವ್ಯಾಪಿಯಾಗಿ ಹಬ್ಬುತ್ತಿರುವುದನ್ನು ನಾವು ಗಮನಿಸಬಹುದು. ಉದಾಹರಣೆಗೆ, ಸುಂದರ ವಿನ್ಯಾಸಗಳ ಕಟ್ಟಡಗಳಿಗೆ ಹೆಸರುವಾಸಿಯಾದ ಮೈಸೂರು-ಬೆಂಗಳೂರು ನಗರಗಳು ಇಂದು ತಮ್ಮ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಕಳಕೊಳ್ಳುತ್ತಿದ್ದರೆ, ಅದಕ್ಕೆ ಅಂದಿನ ಸುಂದರ ವಾಸ್ತುಶಿಲ್ಪದ ಕಟ್ಟಡಗಳು ನಾಶವಾಗಿ ಲಾಭಕೇಂದ್ರಿತ ಆಧುನಿಕ ಸಂಸ್ಕೃತಿಯ ಬಳುವಳಿಯಾದ ಶಿಲ್ಪ-ವಿನ್ಯಾಸಗಳೇ ಇಲ್ಲದ ಬೋಳು ಕಾಂಕ್ರೀಟು ಕಟ್ಟಡಗಳು ಯದ್ವಾತದ್ವಾ ಆಗಿ ಇಂದು ಮೇಲೇಳುತ್ತಿರುವುದು ಕೂಡ ಒಂದು ಕಾರಣವೆನ್ನದೆ ವಿಧಿಯಿಲ್ಲ. ಇದೊಂದು ಸಣ್ಣ ನಿದರ್ಶನ ಮಾತ್ರ. ಎಲ್ಲ ಕ್ಷೇತ್ರಗಳಲ್ಲೂ ಇಂದು ಈಗ ಅವ್ಯಾಹತವಾಗಿ ನಡೆಯುತ್ತಿರುವ ಸಾಂಸ್ಕೃತಿಕ ದಾಳಿ ನಮ್ಮದೆನ್ನುವುದನ್ನು ಏನನ್ನು ಉಳಿಸೀತು?

ನಾವು ನಮ್ಮ ಸಂಸ್ಕೃತಿ-ಸಮಾಜದ ಮೇಲೆ ಮುಖ್ಯವಾಗಿ ಇಂದು- ರಾಜ್ಯೇತರ ಭಾರತೀಯ, ಪಾಶ್ಚಾತ್ಯ ಮತ್ತು ಆಧುನಿಕ ಹೀಗೆ-ಮೂರು ರೀತಿಯ ಸಾಂಸ್ಕೃತಿಕ ಪ್ರಭಾವಗಳು ಆಗುತ್ತಿರುವುದನ್ನು ಗಮನಿಸಬಹುದು. ಉದಾಹರಣೆಗೆ, ನಮ್ಮ ಕನ್ನಡನಾಡಿನಲ್ಲಿ ಶಿಷ್ಟಜಾತಿಯವರು ಇಂದು ಹೆಚ್ಚು ಹೆಚ್ಚು ಪಾಶ್ಚಾತ್ಯ ಮತ್ತು ಆಧುನಿಕೀಕರಣದತ್ತ ಆಕರ್ಷಿತರಾಗುತ್ತಿದ್ದರೆ, ಪರಿಶಿಷ್ಟ ಜಾತಿ ಪಂಗಡಗಳು, ಕೆಳವರ್ಗದವರು ಸಂಸ್ಕೃತಾನುಕರಣೆಯ ಪ್ರಕ್ರಿಯೆಗೆ ಒಳಗಾಗಿ ಭಾರತೀಯ ಶಿಷ್ಟ ಸಂಪ್ರದಾಯಗಳನ್ನು ಅನುಸರಿಸಲು ಪ್ರಯತ್ನಿಸುವುದನ್ನು ಕಾಣುತ್ತೇವೆ. ಹಾಗಾಗಿ ಇಂದು ದೇಶೀಯತೆಯನ್ನು ಕೆಳವರ್ಗದಲ್ಲೇ ಹೆಚ್ಚು ಕಾಣಬಹುದೋ ಏನೋ.

ಇಂಗ್ಲೆಂಡಿಗೆ ರೇಡಿಯೋ ಬಂದ ಆರಂಭದಲ್ಲಿ ಸುಮಾರು ೨೦೦ ರೀತಿಯ ಮೂರ್ತ ಬದಲಾವಣೆಗಳು ಸಮಾಜಲ್ಲಿ ಆದದ್ದನ್ನು ಸಮಾಜಶಾಸ್ತ್ರಜ್ಞರು ಪಟ್ಟಿ ಮಾಡಿದ್ದರು. ರೇಡಿಯೋದಂತಹ ಶ್ರಾವ್ಯ ಮಾಧ್ಯಮದ ಪ್ರಭಾವವೇ ಇಷ್ಟಿರುವಾಗ, ಅತ್ಯಾಧುನಿಕ ಸಮೂಹ ಮಾಧ್ಯಮಗಳಾದ ಟಿ.ವಿ. ಮೊದಲಾದ ದೃಶ್ಯ ಮಾಧ್ಯಮಗಳ ಪ್ರಭಾವವು ಸಂಸ್ಕೃತಿ- ಸಮಾಜಗಳ ಮೂಲ ಸ್ವರೂಪವನ್ನೇ ಬದಲಿಸಲಿಕ್ಕಿಲ್ಲವೇ? ಈ ಪ್ರಬಲ ಸಮೂಹ ಮಾಧ್ಯಮಗಳಿಂದಾಗಿ, ಇಂದು ಪ್ರಾದೇಶಿಕ ಬಹುಮುಖೀ ಸಂಸ್ಕೃತಿಗಳು, ಪ್ರಾದೇಶಿಕ ವೈಶಿಷ್ಟ್ಯಗಳು, ವಿಭಿನ್ನ ಆಚಾರ-ವಿಚಾರ-ನಡವಳಿಕೆಗಳು ಎಲ್ಲವೂ ಅವನತಿಯ ಹಾದಿಯಲ್ಲಿವೆ. "ಅಮೇರಿಕಾದ ಆಕ್ರಮಣಕಾರೀ ಸಂಸ್ಕೃತಿಯೊಂದೇ ಆಫ್ರಿಕಾದ ನೂರಾರು ಬುಡಕಟ್ಟು ಜನಾಂಗೀಯ ಸಂಸ್ಕೃತಿಗಳನ್ನು ನಾಶಮಾಡಿದೆ" ಎಂದು ಅಮೇರಿಕಾದ ಪ್ರಸಿದ್ಧ "ಟೈಮ್" ವಾರಪತ್ರಿಕೆ ಇತ್ತೀಚೆ ಪ್ರಕಟಮಾಡಿತ್ತು. ಇಂದು ನಮ್ಮೆದುರಿರುವ ಆರ್ಥಿಕ ನೀತಿಯ ಉದಾರೀಕರಣ, ಜಾಗತೀಕರಣ, ಡಂಕಲ್ ಪ್ರಸ್ತಾಪ ಮುಂತಾದವುಗಳ ಸಾಂಸ್ಕೃತಿಕ ಪರಿಣಾಮಗಳೇನಾಗಬಹುದೆಂದು ನಾವೆಲ್ಲರೂ ಗಂಭೀರವಾಗಿ ಯೋಚಿಸಬೇಕಾಗಿದೆ. ತಾಂತ್ರಿಕತೆಯ ಅತಿರೇಕತೆಯಿಂದ ಮತ್ತು ಇಂದು ಫ್ಯಾಶನ್ ಆಗುತ್ತಿರುವ ಜಾಗತೀಕರಣದ ಪ್ರಭಾವದಿಂದಂತೂ ನಮ್ಮ ಪ್ರಾದೇಶಿಕ ಸಂಸ್ಕೃತಿ, ಭಾಷೆ, ನಡವಳಿಕೆಗಳು, ದೇಶೀ, ಆಯಾಮ ಮತ್ತು ಬೆಚ್ಚಗಿನ ಸಂಬಂಧಗಳನ್ನು ಕಳಕೊಂಡು ಸಾಂಸ್ಕೃತಿಕವಾಗಿ ನಾವು ಅಂತಾರಾಷ್ಟ್ರೀಯ ಹೆದ್ದಾರಿಯಲ್ಲಿ ಬೀಳುತ್ತಿದ್ದೇವೆ; ಮನೆಕಳಕೊಂಡು ಅನಾಥರಾಗುತ್ತಿದ್ದೇವೆ. ನಮ್ಮ ನಡೆ-ನುಡಿ-ಸಂಸ್ಕೃತಿ-ಭಾಷೆಗಳು ಜಾಗತೀಕರಣದ ಅಬ್ಬರದ ಪ್ರಚಾರದ ವಿರುದ್ಧ ನಮ್ಮನ್ನು ನಾವು ಬಚ್ಚಿಟ್ಟುಕೊಳ್ಳುವ ಏಕಮಾತ್ರ ಉಪಾಯ. ನಾವು ಮಾನಸಿಕವಾಗಿ ಬಳಲಿದಾಗ

ನಮಗೆ ಅವು ಮರೆ ಮತ್ತು ರಕ್ಷಣೆ ನೀಡುತ್ತವೆ. ಆದರೆ ದುರದೃಷ್ಟವಶಾತ್ ನಮ್ಮ ಕುಟುಂಬ, ಭಾಷೆ, ಸಂಸ್ಕೃತಿ ಮುಂತಾದ ನಮ್ಮನ್ನು ನಾವು ಗುರುತಿಸಿಕೊಳ್ಳಬಹುದಾದ ಎಲ್ಲ ಚಹರೆಗಳೂ ಜಾಗತೀಕರಣದ ದೆಸೆಯಿಂದಾಗಿ ನಾಶವಾಗುತ್ತ ನ್ಯೂಯಾರ್ಕ್, ಬೆಂಗಳೂರು ಅಥವಾ ನಮ್ಮ ನಮ್ಮ ಊರುಗಳು ಎಲ್ಲವೂ ಒಂದೇ ರೀತಿ-ರಿವಾಜಿನ ಪಡಿಯಚ್ಚಾಗಿ ಏಕರೂಪೀ ಸಂಸ್ಕೃತಿಯಾಗಿ ಬೆಳೆಯುತ್ತಿರುವುದು ಪ್ರಸ್ತುತ ಸಂದರ್ಭದ ಸಾಂಸ್ಕೃತಿಕ ದುರಂತ. ಬದುಕಿನ ವೈವಿಧ್ಯತೆ, ಜೀವನ ಸಂಭ್ರಮವನ್ನೇ ನಾವು ಇದರಿಂದಾಗಿ ಕಳಕೊಳ್ಳುತ್ತಿದ್ದೇವೆ. ಕುಟುಂಬಗಳು ತಮ್ಮ ಗಟ್ಟಿತನವನ್ನು ಕಳಕೊಂಡು ಒಂದೇ ಕುಟುಂಬದ ಸದಸ್ಯರು ಪರಸ್ಪರ ಪರಕೀಯರಾಗುತ್ತಿದ್ದಾರೆ.

- ೨ -

ಕೈಗಾರಿಕೀಕರಣದ ದೆಸೆಯಿಂದ ಇದುವರೆಗೆ ವಿಕೇಂದ್ರೀಕೃತ ನೆಲೆಯಲ್ಲಿದ್ದ ಉತ್ಪಾದನಾ ಕ್ರಮ, ಫ್ಯಾಕ್ಟರಿಗಳ ರಾಕ್ಷತ್ರಸ್ಸವ ಮಾದರಿಯಿಂದಾಗಿ ಕೇಂದ್ರೀಕೃತವಾಗಲು ಆರಂಭವಾಯಿತಷ್ಟೆ. ಇಂಥ ಕೇಂದ್ರೀಕೃತ ಕೈಗಾರಿಕಾ ಕೇಂದ್ರಗಳಲ್ಲಿ ಜನರು ಉದ್ಯೋಗಕ್ಕಾಗಿ ಗುಂಪುಗುಂಪಾಗಿ ಜಮಾಯಿಸಲು ಆರಂಭಿಸಿದರು. ಬೃಹತ್ ಕೈಗಾರಿಕಾ ಫ್ಯಾಕ್ಟರಿಗಳ ಕಟ್ಟಡಗಳ ಒಳಗೆ ನೂರಾರು ಜನರು ಗುಂಪುಗುಂಪಾಗಿ ಕೆಲಸ ಮಾಡುವ ಹೊಸಕ್ರಮ ಬಂತು. ಇದು, ಇದರದೇ ಆದ ಮಾನಸಿಕ-ಸಾಮಾಜಿಕ ಪರಿಣಾಮ ಬೀರಿತು. 'ಮಂದೆ ಪ್ರವೃತ್ತಿ', ಸಾಮಾಜಿಕ ಸ್ಥಿತಿ, ಪೂರ್ವಗ್ರಹಗಳು ಈ ಗುಂಪುಗಳಲ್ಲಿ ಸಾರ್ವತ್ರಿಕವಾಗಿ, ಈ ಮಂದೆಪ್ರವೃತ್ತಿ ಸಮಾಜದ ಸಾಂಸ್ಕೃತಿಕ ಸ್ವರೂಪವನ್ನು ಸಾಕಷ್ಟು ಬದಲುಮಾಡಿತು.

ಇದರ ಜತೆ, ಇನ್ನೊಂದು ಬದಲಾವಣೆಯನ್ನು ಗಮನಿಸಬಹುದು. ಹಿಂದಿನ ಪರಂಪರಾಗತ ಕಸುಬು-ಉಪಕಸುಬುಗಳು ಕೇವಲ ಹೊಟ್ಟೆಹೊರೆಯುವ ಉದ್ಯೋಗಗಳಾಗಿರಲಿಲ್ಲ. ಅವು ಅವರವರ ಬದುಕಿನ ವಿನ್ಯಾಸವಾಗಿತ್ತು, ಜೀವನಕ್ರಮವೇ ಆಗಿತ್ತು ಅಥವಾ ಹೀಗೂ ಹೇಳಬಹುದು: ಪರಂಪರಾಗತ ಕಸುಬು ಉಪಕಸುಬುಗಳು 'ಜೀವನ ಪ್ರವೃತ್ತಿ' (Vocation) ಆಗಿತ್ತು, ಬದುಕಿನ ಜತೆ ಅಂತರ ಸಂಬಂಧ ಹೊಂದಿತ್ತು; ಅವು ಕೇವಲ ಹಣಕ್ಕಾಗಿ ದುಡಿಯುವ ಉದ್ಯೋಗ, ಕೆಲಸ (Job) ಆಗಿರಲಿಲ್ಲ. ಹಾಗಾಗಿ ಅವಕ್ಕೊಂದು ಸಾಂಸ್ಕೃತಿಕ ಆಯಾಮವಿತ್ತು. ಆದರೆ ಬದುಕಿನ ಜತೆ ಹೊಸೆದುಕೊಂಡಿದ್ದ ಈ 'ಜೀವನ ಪ್ರವೃತ್ತಿ' (Vocation) ಎಂಬುದು ಇಂದು ಕೇವಲ ಕೆಲವು ಗಂಟೆಗಳಲ್ಲಿ ಹೊಟ್ಟೆಪಾಡಿಗಾಗಿ ಎಲ್ಲೋ ಅಸಹಜ ಪರಿಸರದಲ್ಲಿ ದುಡಿಯುವ, ನಮ್ಮ ಬದುಕಿಗೆ ನೇರ ಸಂಬಂಧವಿರದ 'ಕೆಲಸ'(Job) ಆಗಿ ಪರಿವರ್ತನೆಯಾದದ್ದರಿಂದ ನಮ್ಮ ಜೀವನಕ್ಕೂ ನಾವು ಮಾಡುವ ಉದ್ಯೋಗಕ್ಕೂ ನೇರ ಸಂಬಂಧವಿಲ್ಲದೆ, ನಮ್ಮ ಮನಸ್ಸನ್ನು ಬೆಚ್ಚಗಿಡುವ ಮಾನಸಿಕ ಭದ್ರತೆ ಮಾಯವಾಯಿತು. ನಮ್ಮ ಕೈಯ್ಯಲ್ಲಿಲ್ಲದ ನಮ್ಮ ಜೀವನದ ಬಗ್ಗೆ ಕಾತರ, ಕಳವಳ, ಆತಂಕಗಳು ಹೆಚ್ಚುತ್ತಾ, ಮನುಷ್ಯನ ಮನಸ್ಸು 'ನ್ಯುರೋಟಿಕ್' ಆಗಿ ಸಮಾಧಾನವನ್ನು ಕಳಕೊಂಡಿತು. ಹಳ್ಳಿ ಜನರು ಪಟ್ಟಣಕ್ಕೆ ವಲಸೆ ಹೋಗಲು ಆರಂಭಿಸಿದಾಗಲೇ ಅವರಿಗೆ ಮಾನಸಿಕ ಭದ್ರತೆ ಕೊಡುತ್ತಿದ್ದ ಸಾಂಸ್ಕೃತಿಕ ಬೇರುಗಳು ಕಿತ್ತೆಸೆಯಲ್ಪಟ್ಟು ಅವರು ತಬ್ಬಲಿಗಳಾದರು. ಇದರ ಜತೆ, ಅವಿಭಕ್ತ ಕುಟುಂಬದ ಭದ್ರತೆಯನ್ನು ಪಟ್ಟಣಕ್ಕೆ ಬಂದು ಅನಿವಾರ್ಯವಾಗಿ 'ನ್ಯೂಕ್ಲಿಯಸ್' ಕುಟುಂಬವಾಗಿ ಬಾಳಲು ತೊಡಗಿದಾಗ ಈ ಮಂದಿ ಕಳಕೊಳ್ಳುವಂತಾಯಿತು. ಪಟ್ಟಣದ ಸಮಾಜವು ಅತಿರೇಕ ಆಧುನಿಕೀಕರಣದ ದೆಸೆಯಿಂದ ಸಂಕೀರ್ಣವಾಗುತ್ತ ಬಂದಂತೆ ಮೊದಲೇ ಸಾಂಸ್ಕೃತಿಕ ಬೇರುಗಳನ್ನು ಕಳಕೊಂಡ ಈ ಮಂದಿಗೆ, ಬೃಹತ್ ನಗರಗಳ ರಾಕ್ಷಸೀ ತಾಂತ್ರಿಕತೆಯು 'ಹಾಂಟ್' (haunt) ಮಾಡಲಾರಂಭಿಸಿ, ಅವುಗಳೆದುರು ತಾನು ಮಾನಸಿಕವಾಗಿ ತೀರ ಕುಬ್ಜ, ನಗಣ್ಯನಾಗುತ್ತ, ನಗರದ

ಏಕತಾನತೆಯ ಸಪ್ಪೆ ಬದುಕು ಅರ್ಥಹೀನವಾಗಲು ಆರಂಭಿಸಿತು. ಇದರ ಜತೆ, ಏಕ ಮಾದರಿಯ ಆಧುನಿಕ ಶಿಕ್ಷಣವೂ ವ್ಯಕ್ತಿತ್ವದ ಸರ್ವಾಂಗೀಣ ವಿಕಾಸವನ್ನು ಕಡೆಗಣಿಸಿ ಕೇವಲ ವಿಷಯಜ್ಞಾನವನ್ನು ಹೇರುವುದರ ಮೂಲಕ ಸಾವಿರಾರು ವರುಷಗಳಿಂದ ಹರಿದುಬಂದ ಜನರ ದೇಶೀ ತಿಳುವಳಿಕೆ-ಪ್ರಾಚೀನರ ಶ್ರೀಮಂತ ಅನುಭವಗಳನ್ನು ಮರೆಸಿ ಅವರನ್ನು ಸಾಂಸ್ಕೃತಿಕ ನೆಲದಿಂದ ಸಂಪೂರ್ಣ ಬುಡಮೇಲು ಮಾಡಿ ಅತುತ್ರರನ್ನಾಗಿ ಮಾಡಿತು. ಆಧುನಿಕತೆಯ ಸಂಕೀರ್ಣತೆಯಲ್ಲಿ ತಮ್ಮನ್ನೇ ತಾವು ಕಳಕೊಂಡ ಇಂಥ ಅನಾಥರಿಗೆ, 'ಸೆನ್ಸ್ ಆಫ್ ಐಡೆಂಟಿಟಿ' (Sense of Identity)ಗಾಗಿ, ಬದುಕಿಗೊಂದು ಅರ್ಥ ತುಂಬಲು ಏನಾದರೊಂದು ಆಲಂಬನೆ- ಆಸರೆ ಬೇಕು. ಜನಾಂಗೀಯ ಪ್ರಜ್ಞೆ ಅಥವಾ 'ರೇಶಿಯಲ್ ಮೆಮರಿ' (racial memory) ಇಂಥವರಿಗೆ ಮಾನಸಿಕ ಭದ್ರತೆಯನ್ನು ಒದಗಿಸುವ ಸುಲಭವಾದ ಊರುಗೋಲಾಗಿ ಬರುತ್ತದೆ. ಹಾಗಾಗಿ ಇವರು ತಮ್ಮ ತಮ್ಮ ಜನಾಂಗೀಯ ಗುಹೆ (ethnic caves) ಗಳಿಗೆ ಮರಳಲು ತವಕಪಡುತ್ತಾರೆ; ತಮ್ಮ ತಮ್ಮ ಧರ್ಮಕ್ಕೆ ಆತುಬೀಳುತ್ತಾರೆ. ಆದರೆ ದುರದೃಷ್ಟವಶಾತ್ ತಮ್ಮ ಸಂಸ್ಕೃತಿಯ ಮೂಲಸತ್ತ್ವದ ಮರೆವಿನಿಂದಾಗಿ, ಧರ್ಮದ ಆಧ್ಯಾತ್ಮಿಕ ತಿರುಳನ್ನು ಬಿಟ್ಟು ಆಡಂಬರದ ಧಾರ್ಮಿಕ ಬಾಹ್ಯಾಚರಣೆಯ ಹೊರಸಿಪ್ಪೆಗೇ ಆತುಬೀಳುತ್ತಾರೆ; ಮತ್ತು ಅನೇಕ ಬಾರಿ ಪ್ರಬಲವಾದ ಕೋಮುವಾದಿಗಳಾಗಿಬಿಡುವ ಸಂಭವವಿದೆ. ಆದರೆ ಈ ಪ್ರವೃತ್ತಿಯು ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನಲ್ಲೇ ನಾವಿಂದು ಗಮನಿಸಬಹುದು.

ಇದರ ಜತೆ, ಇನ್ನೊಂದು ಪ್ರಮುಖ ಬೆಳವಣಿಗೆಯನ್ನು ನಾವು ಗಮನಿಸಬಹುದು. ವಿಭಿನ್ನವರ್ಗದ ಜನರು ಪಟ್ಟಣಗಳಿಗೆ ಆರ್ಥಿಕ ಕಾರಣಕ್ಕಾಗಿ ಮಾತ್ರವಲ್ಲದೆ, ತಮ್ಮ ಜಾತಿಯ ಹಣೆಪಟ್ಟಿಯನ್ನು ಕಳಚಿಕೊಳ್ಳುವ ಸಾಮಾಜಿಕ ಹಂಬಲದಿಂದಲೂ ವಲಸೆಹೋಗುತ್ತಾರೆ. ಪೇಟೆಪಟ್ಟಣಗಳಲ್ಲಿ ಸಾಂಪ್ರದಾಯಿಕ ಜಾತಿ ಕಟ್ಟುಪಾಡುಗಳು ಶಿಥಿಲಗೊಳ್ಳುವುದರಿಂದ ಈ ಮಂದಿಗೆ ಜಾತಿ ಹಣೆಪಟ್ಟಿಯಿಂದ ಬಿಡುಗಡೆ ಸಾಧ್ಯವಾಗುತ್ತದೆ. ಎಲ್ಲಾ ವರ್ಗದ ಜನರೂ ಫ್ಯಾಕ್ಟರಿಯಲ್ಲಿ ಒಟ್ಟಾಗಿ ಒಂದೇ ಅಂತಸ್ತಿನಲ್ಲಿ ದುಡಿಯುವುದು ಅನಿವಾರ್ಯವಾದ್ದರಿಂದ ಜಾತಿ ವ್ಯವಸ್ಥೆ ಇಲ್ಲಿ ಸಡಿಲುಗೊಳ್ಳುತ್ತದೆ. ಮದುವೆ, ಅಂತಸ್ತು, ಆಹಾರ, ವಿಹಾರ, ಉದ್ಯೋಗದ ಆಯ್ಕೆ, ಮಡಿ-ಮೈಲಿಗೆ ಮುಂತಾದವುಗಳಲ್ಲಿನ ಬಹಳಷ್ಟು ವಿಧಿ- ನಿಷೇಧಗಳು ಮಾಯವಾಗಿ, ಜಾತಿ ಸಂಕರ ಆಗುತ್ತದೆ. ಇದನ್ನು ಜನ ಇಷ್ಟಪಡುವುದು ಸಹಜ. ಆದರೆ ಇದರ ಇನ್ನೊಂದು ಮುಖವನ್ನು ನಾವು ಗಮನಿಸಬೇಕು. ಒಂದೆಡೆ ಜಾತಿ ಪದ್ಧತಿಯು ಶಿಥಿಲವಾಗುತ್ತಿದ್ದಂತೆಯೇ, ಇನ್ನೊಂದೆಡೆ ಪ್ರತಿಯೊಬ್ಬನೂ ತನ್ನ ಜಾತಿ ಪಂಗಡಗಳ ಬಗ್ಗೆ ಹಿಂದಿಗಿಂತಲೂ ಹೆಚ್ಚು ಜಾಗೃತನಾಗುತ್ತಿದ್ದಾನೆ; 'ಕಾನ್‌ಶಿಯಸ್' ಆಗುತ್ತಿದ್ದಾನೆ. ಜಾತಿಪದ್ಧತಿಯ ಬದಲು ಜಾತೀಯತೆಯು ಒಂದು ಸಾಮಾಜಿಕ-ರಾಜಕೀಯ ಸಿದ್ಧಾಂತವಾಗಿ ಎಲ್ಲ ವರ್ಗಗಳಲ್ಲೂ ಹಿಂದೆಂದಿಗಿಂತಲೂ ಹೆಚ್ಚು ಪ್ರಬಲವಾಗಿ ಬೇರುಬಿಡುತ್ತಿದೆ. ಪ್ರತೀ ಜಾತಿಯೂ ಪ್ರಬಲ ಸಂಘಟನಾರೂಪ ಪಡೆಯುತ್ತಿದ್ದಂತೆಯೇ, ಜಾತಿ-ಜಾತಿಗಳೊಳಗೆ ಪರಸ್ಪರ ದ್ವೇಷ ಹೆಚ್ಚುತ್ತಿದೆ. ಪ್ರಬಲವಾದ ಜಾತೀಯ ಸಂಘಟನೆಗಳು ಇಂದು ನಗರಗಳಲ್ಲಿ ಹುಟ್ಟಿ ರೂಪುತಳೆಯುತ್ತಿರುವುದು ಒಂದು ವಿಪರ್ಯಾಸವೆನ್ನದೆ ವಿಧಿಯಿಲ್ಲ; ಮತ್ತು ಇವು ಜಾತೀಯ ವಾದವಾಗಿ, ಸಿದ್ಧಾಂತವಾಗಿ ಹಳ್ಳಿಗಳಿಗೆ ಮತ್ತೆ ಮರಳಿ ಹರಿದು ಬರುತ್ತಿವೆ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯ ಬಿಲ್ಲವ, ಮೊಗವೀರ, ಬಂಟ ಮುಂತಾದ ಸಮಾಜಗಳ ಪ್ರಬಲ ಸಂಘಟನೆಗಳ ಕೇಂದ್ರಗಳು ಇರುವುದು ಬೊಂಬಾಯಿಯಲ್ಲಿ. ಬಿಲ್ಲವ ಜಾತಿಗೆ ಸೇರಿದ ಶ್ರೀ ಬಂಗಾರಪ್ಪನವರು ಮುಖ್ಯಮಂತ್ರಿ ಪದವಿಯಿಂದ ಪದಚ್ಯುತರಾದಾಗ 'ಕರ್ನಾಟಕ ಕಾಂಗ್ರೆಸ್' ಎಂಬ ಹೊಸ ಪಕ್ಷ ಆರಂಭಿಸಿದರಷ್ಟೆ. ಈ ಹೊಸ ಪಕ್ಷವನ್ನು ನಾವು ಬೆಂಬಲಿಸಬೇಕೇ ಅಥವಾ ಇನ್ನೊಬ್ಬ ಬಿಲ್ಲವ

ನಾಯಕ ಕಾಂಗ್ರೆಸಿನ ಶ್ರೀ ಜನಾರ್ದನ ಪೂಜಾರಿಯವರ ಜತೆಯೇ ಮುಂದುವರಿಯಬೇಕೇ ಎಂಬ ಬಗ್ಗೆ ಬೊಂಬಾಯಿಯಲ್ಲಿ ಬಿಲ್ಲವ ಸಂಘಟನೆ ಸಭೆ ಸೇರಿ ಚರ್ಚಿಸಿ ತೀರ್ಮಾನಗಳನ್ನು ತೆಗೆದುಕೊಂಡದ್ದು ಇತ್ತೀಚೆಗೆ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಸ್ವಾರಸ್ಯವೆಂದರೆ ಜಾತಿಯ ಹಣೆಪಟ್ಟಿ ಕಳಚಿಕೊಳ್ಳಲು ಪಟ್ಟಣಕ್ಕೆ ಹೋದ ಮಂದಿಯೇ ಜಾತೀಯತೆಯನ್ನು ರಾಜಕೀಯ 'ಐಡಿಯಾಲಜಿ'ಯಾಗಿ ಪರಿವರ್ತಿಸಿ ಹಳ್ಳಿಗೆ ಹಿಂತಿರುಗಿಸುವ ಈ ಪ್ರಕ್ರಿಯೆ, ಕೈಗಾರಿಕೀಕರಣದ ಪ್ರಭಾವದಿಂದಲೇ ಉದ್ಭವವಾದದ್ದು ಎನ್ನಬಹುದು.

ಭಾರತದಲ್ಲಿ ಜಾತೀಯತೆ, ಕೋಮುವಾದಗಳು ಬೇರೆ ಬೇರೆ ನೆಲೆಗಳಿಂದ ಹುಟ್ಟಿದವುಗಳು. ಆದರೆ ಇವೆರಡೂ ಕೂಡ ಕೈಗಾರಿಕೀಕರಣದ ಪ್ರಭಾವದಿಂದ ಉಲ್ಬಣವಾಗಿದೆ. ಬಹುಮಟ್ಟಿಗೆ ಶಾಂತಿ-ಸಮಾಧಾನಗಳಿಂದ ತುಂಬಿದ್ದ ಕನ್ನಡ ನೆಲದಲ್ಲಿ ನೂರು ವರುಷಗಳ ಹಿಂದೆ ಕೋಮು ಸಂಘರ್ಷವನ್ನು ಊಹಿಸಲೂ ಸಾಧ್ಯವಿರಲಿಲ್ಲ. ಆದರೆ ಇಂದು ಸಣ್ಣ ಪುಟ್ಟ ಕಾರಣಗಳಿಗೂ ಕೋಮು ಸಂಘರ್ಷ ನಡೆಯುವುದನ್ನು ನಾವು ವಿಷಾದದಿಂದ ನೋಡುತ್ತಿದ್ದೇವೆ. ಈ ಬೆಳವಣಿಗೆಗೆ ಅನೇಕ ಕಾರಣಗಳಿವೆಯೇನೋ ನಿಜ. ಆದರೆ, ಬದಲಾದ ಉತ್ಪಾದನಾ ಸಂಬಂಧಗಳೂ ಒಂದು ಪ್ರಬಲ ಕಾರಣವಾಗಿದೆ. ಪವರ್ ಲೂಮ್‌ನಲ್ಲಿ, ಗಿರಣಿಗಳಲ್ಲಿ ಮತ್ತು ಇತರ ಸಣ್ಣ ಕೈಗಾರಿಕೆಗಳಲ್ಲಿ ಕರಕುಶಲ ಕೆಲಸಗಾರರಾಗಿ ದುಡಿಯುವವರು ಹೆಚ್ಚಾಗಿ ಮುಸ್ಲಿಮರಾದರೆ, ಇವುಗಳ ಮಾಲೀಕರು ಸಾಮಾನ್ಯವಾಗಿ ಹಿಂದೂಗಳು. ಬೊಂಬಾಯಿ, ಕಾನ್ಪುರ, ಲಕ್ನೊ, ನಮ್ಮ ರಾಜ್ಯದ ರಾಮನಗರ ಮುಂತಾದ ಎಲ್ಲ ಪ್ರದೇಶಗಳಲ್ಲೂ ಈ ಧಣಿ-ಆಳು ಉತ್ಪಾದನಾ ಸಂಬಂಧವನ್ನು ಕಾಣಬಹುದು. ಈ ಸಂಬಂಧದಲ್ಲೇ ಒಂದು ಅಸಹಜ ಬಿಗು ಇದೆ. ಗುಂಪಾಗಿ ಒಂದೇ ಕಟ್ಟಡದ ಒಳಗೆ ದುಡಿಯುವಾಗಲಂತೂ ಇಂಥ ಬಿಗು ಇನ್ನಷ್ಟು ತೀವ್ರವಾಗುತ್ತದೆ. ಹಾಗಾಗಿ ಕರ್ನಾಟಕದ ರಾಮನಗರ ಮುಂತಾದ ಪ್ರದೇಶಗಳಲ್ಲಿ ನಡೆದ ಕೋಮು ಸಂಘರ್ಷವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದರೆ, ಇದು ತೋರಿಕೆಗೆ ಧರ್ಮಸಂಬಂಧಿ ಆಗಿದ್ದರೂ, ಆಳದಲ್ಲಿ ಉತ್ಪಾದನಾ ಸಂಬಂಧಿ ಸಂಘರ್ಷವೂ ಆಗಿದೆ ಎಂಬುದು ವ್ಯಕ್ತವಾಗುತ್ತದೆ.

-೪-

ಕನ್ನಡ ನೆಲದಲ್ಲಿ ಕೈಗಾರಿಕೀಕರಣ ಕ್ರಮೇಣ ಪಾಶ್ಚಾತ್ಯ ಸಂಸ್ಕೃತಿಯನ್ನೂ ಅದರ ಜತೆ ಪಾಶ್ಚಾತ್ಯ ಭಾಷೆಯಾದ ಇಂಗ್ಲೀಷಿನ ವ್ಯಾಮೋಹವನ್ನೂ ನಮ್ಮಲ್ಲಿ ಹೆಚ್ಚಿಸಿ ಕನ್ನಡ ಭಾಷೆಯ ಬೆಳವಣಿಗೆಗೆ ತುಂಬಾ ತೊಡಕಾಗಿದೆ. ಪಾಶ್ಚಾತ್ಯ ಆಚಾರ-ವಿಚಾರಗಳ ಆಕರ್ಷಣೆ ಸಹಜವಾಗಿಯೇ ಇಂಗ್ಲೀಷು ಭಾಷೆಯ ವ್ಯಾಮೋಹವನ್ನು ಹೆಚ್ಚಿಸಿದೆ. ತಾಂತ್ರಿಕ ಸಂಸ್ಕೃತಿಯ ಜತೆ ಬಂದ ಭಾಷೆಯು ಆಧುನಿಕತೆ, ಹೆಚ್ಚಿನ ಆರ್ಥಿಕ ಸಂಪಾದನೆ, ಸಾಮಾಜಿಕ ಪ್ರತಿಷ್ಠೆಗಳನ್ನು ಸುಲಭವಾಗಿ ಒದಗಿಸುವುದರಿಂದ ಅದು ಪ್ರತಿಷ್ಠೆಯ ಭಾಷೆಯಾಗಿ, ಕನ್ನಡ ನೆಲದ ಸಂಸ್ಕೃತಿಯ ಜತೆ ಬೆಸೆದುಕೊಂಡೇ ಬೆಳೆದ ಮಾತೃಭಾಷೆಯನ್ನೇ ಆತನಿಂದ ಕಸಿದುಕೊಂಡು, ಆತನಿಗೆ ಪಿಸುಮಾತಾಡಲೂ ಸಾಧ್ಯವಿಲ್ಲದಂತೆ ಆತನನ್ನು 'ವಿಶ್ವಮಾನವ'ನನ್ನಾಗಿ ಮಾಡಿದೆ. ನಮ್ಮತನವನ್ನು ಬಚ್ಚಿಟ್ಟು ರಕ್ಷಿಸಿಕೊಳ್ಳಲೂ ಅಸಾಧ್ಯವಾಗುವಂತೆ ಮಾಡುವ ಆಡಂಬರ-ಗದ್ದಲದ ವಿಶ್ವಭಾಷೆಯಾಗಿರುವ ಇಂಗ್ಲೀಷಿನ ಹುಚ್ಚನ್ನು ಕನ್ನಡ ಸಮಾಜಕ್ಕೆ ಹಿಡಿಸುತ್ತಿದೆ. ನಮ್ಮ ಅಸಹಾಯಕ 'ಇಂಗ್ಲೀಷು ಮಕ್ಕಳು' ಈ ನೆಲದ ಕಂಪನ್ನು ಹೊರಹೊಮ್ಮಿಸುವ ಕನ್ನಡದ ಮಹಾನ್ ವ್ಯಕ್ತಿಗಳಾದ ಬೇಂದ್ರೆ-ಕಾರಂತ-ಕುವೆಂಪು ಅವರನ್ನು ಓದಲು ಸಾಧ್ಯವಾಗದ ಅತಂತ್ರ ಪರಿಸ್ಥಿತಿಯಲ್ಲಿ ನಮ್ಮ ಸಂಸ್ಕೃತಿಗೇ ಪರಕೀಯರಾಗಿ 'ತ್ರಿಶಂಕು'ಗಳಾಗುವುದು, ಕೈಗಾರಿಕೀಕರಣ ಮತ್ತು ತಾಂತ್ರಿಕ ಪ್ರಗತಿಯು ಕರ್ನಾಟಕದಲ್ಲಿ ಹುಟ್ಟುಹಾಕಿದ ಸಾಂಸ್ಕೃತಿಕ ದುರಂತ. 'ಟ್ವಿಂಕಲ್ ಟ್ವಿಂಕಲ್ ಲಿಟಲ್ ಸ್ಟಾರ್' ಹಾಡುವ ನಮ್ಮ ಮಕ್ಕಳಿಗೆ ತಾಯಿ ಕಲಿಸುವ ಜೋಗುಳ, ನಮ್ಮ ನೆಲದ

ಸಂಸ್ಕೃತಿಯ ಸೊಬಗನ್ನು ಪ್ರತಿಬಿಂಬಿಸುವ ಮಕ್ಕಳ ಹಾಡುಗಳ ರುಚಿಯೇ ತಿಳಿಯದಷ್ಟು ಅವರ ರುಚಿ ಕೆಟ್ಟುಹೋಗಿದೆ. ಈ ಮಕ್ಕಳು ವಿಶ್ವಕುಟುಂಬದ ಸಾಂಸ್ಕೃತಿಕ ದರಿದ್ರರಾಗಿ ಬೆಳೆಯುತ್ತಿದ್ದಾರೆ ಎನ್ನದೆ ವಿಧಿಯಿಲ್ಲ. ಇಂಥ ಸಾಂಸ್ಕೃತಿಕ ದರಿದ್ರರೇ ಮುಂದೆ ಮಾನಸಿಕ ಅಭದ್ರತೆಯಿಂದ ಬಳಲುತ್ತಾ ಆಸರೆಗಾಗಿ ಧರ್ಮದ ಬಾಹ್ಯಶುಷ್ಕ ಆಚರಣೆಯನ್ನು ನೆಚ್ಚಿಕೊಂಡು, ಧರ್ಮದ ಮೂಲ ಆಶಯದ ವಿಸ್ಮೃತಿಯಿಂದ ಕೋಮು ವಾದಿಗಳಾಗುವ ಸಾಧ್ಯತೆಯೂ ಇದೆಯಲ್ಲವೇ?

ಕೈಗಾರಿಕೀಕರಣ-ತಾಂತ್ರಿಕತೆ ಹುಟ್ಟು ಹಾಕಿದ ಪೈಪೋಟೀ ಬದುಕನ್ನು ಪ್ರೋತ್ಸಾಹಿಸುವ ಸರಕು ಸಂಸ್ಕೃತಿ (consumerism) ಎಲ್ಲ ಜೀವನ ಮೌಲ್ಯಗಳನ್ನು ಮಾರಾಟದ ಸರಕನ್ನಾಗಿ ಪರಿವರ್ತಿಸುತ್ತಿರುವುದನ್ನು ನಾವು ಕನ್ನಡ ನೆಲದಲ್ಲೇ ನಮ್ಮ ಕಣ್ಣ ಮುಂದೆ ನೋಡುತ್ತಿದ್ದೇವೆ. ಇಂದಿನ ಪೈಪೋಟೀ ಬದುಕು ಎಲ್ಲ ಮೌಲ್ಯಗಳನ್ನು ಭ್ರಷ್ಟಗೊಳಿಸುವ ಅತ್ಯಂತ ಪ್ರಭಾವಶಾಲೀ ಸಾಧ್ಯತೆಗಳನ್ನು ಪಡೆದಿದೆ. ಎಲ್ಲವನ್ನು ಲಾಭದ ಲೆಕ್ಕಾಚಾರದಲ್ಲೇ ಗ್ರಹಿಸುವ ಗ್ರಾಹಕ ಸಂಸ್ಕೃತಿಯಲ್ಲಿ, ಸತ್ಯ-ಸೌಂದರ್ಯ-ಆನಂದವೇ ಮೊದಲಾದ ಗುಣಾತ್ಮಕ ಮೌಲ್ಯಗಳು ಹಿಂದಕ್ಕೆ ಸರಿಯುತ್ತವೆ. 'ಕಲೆ-ಸಂಸ್ಕೃತಿ' ಮೊದಲಾದ ಲವಲವಿಕೆಯ ವಿಷಯಗಳನ್ನು ಕೂಡ ಈ ಮಾರುಕಟ್ಟೆಯ ಪ್ರಬಲಶಕ್ತಿಗಳು, ಲಾಭದ ದೃಷ್ಟಿಯಲ್ಲಿ ನೋಡುತ್ತವೇ ವಿನಾ ಜೀವನ ಸಂಭ್ರಮದ ದೃಷ್ಟಿಯಿಂದಲ್ಲ. ಆದ್ದರಿಂದಲೇ ನಮ್ಮ ಪ್ರಾಚೀನ ಕಲೆ-ಸಂಸ್ಕೃತಿಗಳನ್ನು ಕೂಡ 'ಗೂಡ್ಸ್'ನ ಹಾಗೆ 'ಕಮ್ಮಡಿಫಿಕೇಶನ್' ಮಾಡಿ ರಫ್ತು ಮಾಡುವ ಬೃಹತ್ ದಂಧೆಯೇ ನಮ್ಮಲ್ಲಿ ಬೆಳೆಯುತ್ತಿದೆ. ದಿಲ್ಲಿಯಲ್ಲಿ ನಡೆದ ಜಾನಪದ ಕಲಾಮೇಳ, 'ಅಪ್ನಾಉತ್ಸವ್' ಅಥವಾ ವಿದೇಶಗಳಲ್ಲಿ ನಾವು ಜರುಗಿಸಿದ ಭಾರತ ಉತ್ಸವಗಳಲ್ಲಿ ಕನ್ನಡನಾಡಿನ ಸುಗ್ಗಿಕುಣಿತ, ಡೊಳ್ಳುಕುಣಿತ, ಕರಗಗಳೇ ಮೊದಲಾದ ಜಾನಪದ ಕಲೆಗಳನ್ನು ಅವುಗಳ ಪರಿಸರ ಸಂದರ್ಭಗಳಿಂದ ಬೇರ್ಪಡಿಸಿ, ಶ್ರೀಮಂತರ ಸುಖ-ಸಂತೋಷಕ್ಕಾಗಿ ನಗರಗಳ ಪಂಚತಾರಾ ಹೋಟೇಲುಗಳಲ್ಲಿ ಪ್ರದರ್ಶಿಸುವುದು ಇದಕ್ಕೊಂದು ನಿದರ್ಶನ. ಆ ಕಲೆ ಮತ್ತು ಕಲಾಕಾರರನ್ನು ಈ ಸ್ಥಾಪಿತ ಹಿತಾಸಕ್ತಿಗಳು ತಮ್ಮ ಭೋಗಕ್ಕಾಗಿ ಅಥವಾ ಲಾಭಕ್ಕಾಗಿ ದುಡಿಸಿಕೊಳ್ಳುತ್ತಿವೆಯೇ ವಿನಾ ಪೋಷಿಸಿ ಬೆಳೆಸುತ್ತಿಲ್ಲ. ಈ ಪ್ಲಾಸ್ಟಿಕ್ ಸಂಸ್ಕೃತಿ ಜೀವಂತ ಕಲೆಯನ್ನು ಕೊಲ್ಲುತ್ತದೆ ಅಥವಾ ಅವನ್ನು ಮೃಗಾಲಯಗಳಲ್ಲಿ ಪ್ರಾಣಿಗಳನ್ನು ರಕ್ಷಿಸಿದಂತೆ ರಕ್ಷಿಸುತ್ತದೆ. ಇದು ಕೈಗಾರಿಕೀಕರಣ-ತಾಂತ್ರಿಕ ಪ್ರಗತಿಯ ರಾವು ಹುಟ್ಟುಹಾಕಿದ ಮೌಲ್ಯಗಳ ಪರಿಣಾಮವೇ ಅಲ್ಲವೇ?

-೫-

ಆರಂಭದ ಹಂತದಲ್ಲಿ ಕೈಗಾರಿಕೀಕರಣವು ಪಾಶ್ಚಾತ್ಯರಾಷ್ಟ್ರಗಳಲ್ಲಿ ಇಂಗ್ಲೀಷು ಲೇಖಕರ ಮೇಲೆ ಪ್ರಭಾವ ಬೀರಿದಷ್ಟು ಕನ್ನಡ ಲೇಖಕರ ಮೇಲೆ ಪ್ರಭಾವ ಬೀರಿದ್ದು ಅಷ್ಟಾಗಿ ಕಾಣುವುದಿಲ್ಲ. ಆಗಿನ ನವೋದಯ ಕಾಲದ ಲೇಖಕರು ಇಂಗ್ಲೀಷು ಲೇಖಕರ ಹಾಗೆ ಈ ಕ್ಷಿಪ್ರ ಬದಲಾವಣೆಯನ್ನು ಎದುರಿಸಲಿಲ್ಲ. ಅವರನ್ನು ಗಾಢವಾಗಿ ಕಲಕುವಷ್ಟು ಬೃಹತ್ ಪ್ರಮಾಣದಲ್ಲಿ ಕ್ಷಿಪ್ರಗತಿಯ ಕೈಗಾರಿಕೀಕರಣವೂ ಕನ್ನಡ ನೆಲದಲ್ಲಿ ಆಗಲಿಲ್ಲ. ಆದರೂ ಆದ ಬದಲಾವಣೆಗಳಿಗೆ ಕನ್ನಡ ಲೇಖಕರು ತಮ್ಮದೇ ಆದ ರೀತಿಯಲ್ಲಿ ಸ್ಪಂದಿಸಿದ್ದಾರೆ. ಹುಬ್ಬಳ್ಳಿಗೆ ಮೊದಲು ಜವುಳಿ ಗಿರಣಿಗಳು ಬಂದಾಗ, ಅದಕ್ಕೆ ಶಿಶುನಾಳ ಶರೀಫರ ಪ್ರತಿಕ್ರಿಯೆ ದ್ವಂದ್ವಾತ್ಮಕವಾಗಿತ್ತು. ಹೊಸದರ ಬಗ್ಗೆ ಕುತೂಹಲ ಆಕರ್ಷಣೆಯ ಜತೆಜತೆಯೇ ಆ ಬಗ್ಗೆ ಹಿಂಜರಿಕೆ, ಜಿಗುಪ್ಸೆಯೂ ಅವರಿಗಿತ್ತು. ಶಿಶುನಾಳರ ಈ ಪ್ರತಿಕ್ರಿಯೆಯು ಆಧುನಿಕೋತ್ತರ (post-modernist) ಬುದ್ಧಿಜೀವಿಗಳಿಗೆ ತಾಂತ್ರಿಕತೆ ಬಗ್ಗೆ ಒಟ್ಟೊಟ್ಟಿಗೇ ಇರುವ ಹಂಬಲ ಮತ್ತು ನಿರಾಕರಣೆಗಳನ್ನು ಪ್ರತಿಬಿಂಬಿಸುತ್ತದೆ. ಕೈಗಾರಿಕೀಕರಣದ ಪ್ರಾರಂಭದ ಹಂತದಲ್ಲಿ ನವೋದಯ ಸಾಹಿತಿಗಳಲ್ಲಿ ವಿದೇಶೀಮೂಲದ ಕೈಗಾರಿಕೀಕರಣ-ತಂತ್ರಜ್ಞಾನ ಸಂಸ್ಕೃತಿಯ

ವಿರುದ್ಧ ಸ್ವದೇಶೀ ಅಭಿಮಾನ ಒಂದೆಡೆ ಮತ್ತು ಕೈಗಾರಿಕೀಕರಣದ ಸ್ವಾಗತ, ಕುತೂಹಲ ಇನ್ನೊಂದೆಡೆ-ಎರಡನ್ನೂ ಜತೆಯಲ್ಲೇ ಕಾಣಬಹುದು. ಮುಖ್ಯವಾಗಿ ನವೋದಯದ ಗಣ್ಯರಾದ ಕುವೆಂಪು-ಕಾರಂತ-ಮಾಸ್ತಿಯವರಲ್ಲಿ ಈ ಜಾಡನ್ನು ಗುರುತಿಸಬಹುದು. ಆದರೆ ಬೇಂದ್ರೆಯವರಲ್ಲಿ ಈ ಜಾಡು ಪ್ರಧಾನವಾಗಿ ವ್ಯಕ್ತವಾಗುವುದಿಲ್ಲ. ಪು. ತಿ. ನರಸಿಂಹಾಚಾರ್ಯರು ಮತ್ತು ನವ್ಯದ ಚಂದ್ರಶೇಖರ ಕಂಬಾರರು ಆಧುನಿಕತೆಯ ಸ್ವೀಕಾರಕ್ಕಿಂತ ಹಳೆಯ ಸ್ಮೃತಿ (nostalgia) ಗೇನೇ ಹೆಚ್ಚು ಒತ್ತುಕೊಟ್ಟಂತೆ ಕಾಣುತ್ತದೆ. ಆದರೆ ನವ್ಯರಲ್ಲಿ ಪ್ರಮುಖರಾದ ಲಂಕೇಶ್, ಅನಂತಮೂರ್ತಿಯವರಲ್ಲಿ ಈ ಆಕರ್ಷಣೆ-ಜಿಗುಪ್ಸೆಯ ದ್ವಂದ್ವವನ್ನು ಸ್ಪಷ್ಟವಾಗಿ ಕಾಣುತ್ತೇವೆ. 'ಅವಸ್ಥೆ' ಕಾದಂಬರಿಯ ಕೃಷ್ಣಪ್ಪ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಹೂವಯ್ಯನ ಮುಂದುವರಿಕೆಯಾಗಿ ಒಂದೇ ವ್ಯಕ್ತಿಯಾಗಿ ಸಾತತ್ಯವನ್ನು ತಡೆಯುತ್ತಾನೆ ಎಂಬ ಸುಬ್ಬಣ್ಣನವರ ಮಾತು ಈ ದ್ವಂದ್ವವನ್ನು ಗಮನದಲ್ಲಿಟ್ಟುಕೊಂಡೇ ಹೇಳಿದ ಮಾತು ಅಂತ ಅನ್ನಿಸುತ್ತದೆ. ಅದೇನೇ ಇರಲಿ, ಇವರೆಲ್ಲರೂ ಕೈಗಾರಿಕೀಕರಣಕ್ಕೆ ಪ್ರತಿಕ್ರಿಯಿಸಿದ ರೀತಿಯಲ್ಲಿಯೇ ದ್ವಂದ್ವಾತ್ಮಕ ಭಾವವನ್ನು ಗುರುತಿಸಬಹುದು. ಮಲೆಗಳಲ್ಲಿ ಮದುಮಗಳು, ಕಾನೂರು ಸುಬ್ಬಮ್ಮ ಹೆಗ್ಗಡಿತಿ, ಚೋಮನ ದುಡಿ, ಮರಳಿಮಣ್ಣಿಗೆ, ಬೆಟ್ಟದಜೀವ, ಗ್ರಾಮಾಯಣ, ಮಿರ್ಜಿ ಅಣ್ಣಾರಾಯರ ನಿಸರ್ಗ ಮೊದಲಾದ ಕಾದಂಬರಿಗಳಲ್ಲಿ ಕೈಗಾರಿಕೀಕರಣದ ಆರಂಭದ ಹಂತದ ಸ್ಥಿತ್ಯಂತರದ ವರ್ಣನೆಯನ್ನು ನಾವು ಗಮನಿಸಬಹುದು.

ನವೋದಯ ಕಾಲದ ಲೇಖಕರಲ್ಲಿ ಮುಖ್ಯವಾಗಿ ಕಾರಂತ ಮತ್ತು ಕುವೆಂಪು ಅವರಲ್ಲಿ ವಿಜ್ಞಾನ-ಕೈಗಾರಿಕೀಕರಣದ ಬಗ್ಗೆ ಹೆಚ್ಚು ಕುತೂಹಲವಿತ್ತು. ಕಾರಂತರ ಕಾದಂಬರಿಗಳಲ್ಲಿ ವಿಶಾಲ ಅರ್ಥದಲ್ಲಿ ವೈಜ್ಞಾನಿಕತೆಯ ಒಳಕೆ ಕಾಣುತ್ತದೆ. ಕುವೆಂಪು ಅವರಂತೂ ವಿಜ್ಞಾನ-ಕೈಗಾರಿಕೀಕರಣಗಳನ್ನು ಆಧುನಿಕೀಕರಣದ ಪ್ರತೀಕವಾಗಿ ತೆಗೆದುಕೊಳ್ಳುವುದರಿಂದ, 'ವಿಜ್ಞಾನ ಸೂರ್ಯ' ಎಂದು ಸಂಬೋಧಿಸಿ ವಿಜ್ಞಾನಕ್ಕೆ ಬಹಳ ಎತ್ತರದ ಸ್ಥಾನ ಕೊಡುತ್ತಾರೆ. ವಿಜ್ಞಾನ-ಆಧುನಿಕತೆ-ಸಮಾನತೆ-ಸ್ವಾತಂತ್ರ್ಯ-ಇವೆಲ್ಲವನ್ನು ಒಂದಕ್ಕೊಂದು ಪೂರಕವಾದ ಅರ್ಥದಲ್ಲಿ ಗ್ರಹಿಸುತ್ತಾರೆ. ಕೆಳಸ್ತರದ ಜನರ ಬಿಡುಗಡೆಗೆ, ಬ್ರಾಹ್ಮಣ ಕಂದಾಚಾರದ ವಿರುದ್ಧ ಹೋರಾಟಕ್ಕೆ ವಿಜ್ಞಾನ ಉತ್ತರವಾಗಬಲ್ಲುದೆಂದು ಭಾವಿಸುತ್ತಾರೆ. ಕುವೆಂಪು ಅವರು ತಮ್ಮ 'ರ್‍ಯಾಡಿಕಲ್' ಘಟ್ಟದಲ್ಲಿ ಬರೆದ ಅನೇಕ ಬರಹಗಳಲ್ಲಿ-ಕಲ್ಕ್ಯಾವತಾರ, ಕೋಗಿಲೆ ಮತ್ತು ಸೋವಿಯತ್ ರಶ್ಯಾ ಮುಂತಾದುವುಗಳಲ್ಲಿ ಹೊಸರೀತಿಯ ಉತ್ಪಾದನಾ ಕ್ರಮ - ಸಮಾನತೆಗಳ ಒಂದು ಬಗೆಯ ಸಮೀಕರಣ ವ್ಯಕ್ತವಾಗುತ್ತದೆ. ನವೋದಯದ ಈ ಚಿಂತನಾಕ್ರಮದಿಂದಾಗಿ ಒಂದು ರೀತಿಯ ಪ್ರಯೋಜನವಾಯಿತೆನ್ನಬಹುದು. ನವೋದಯ ಕಾಲಘಟ್ಟದಲ್ಲೇ ಲೇಖಕರು - ಚಿಂತಕರು ಈ ರೀತಿ ಕೈಗಾರಿಕೀಕರಣಕ್ಕೆ ಪ್ರತಿಕ್ರಿಯಿಸಿದ್ದರಿಂದಲೇ, ಕರ್ನಾಟಕದಲ್ಲಿ ಜಾತೀಯತೆಯ ವಿರುದ್ಧ ಹೋರಾಟಕ್ಕೆ ೬೦-೭೦ ವರುಷಗಳ ಚರಿತ್ರೆಯಿರಲು ಸಾಧ್ಯವಾಯಿತು. ಉತ್ತರದಲ್ಲಿ ಜಾತಿ ಮೀಸಲಾತಿ ಚರ್ಚೆ ಆರಂಭವಾಗುವ ಕೆಲವು ದಶಕಗಳ ಮೊದಲೇ, ಕುವೆಂಪುರಂತಹ ಲೇಖಕರು ಶ್ರೇಣಿ ವ್ಯವಸ್ಥೆಯ ಕೆಡುಕುಗಳ ಬಗ್ಗೆ ಬರೆದರು.

ಆದರೆ ಆಧುನಿಕೋತ್ತರ ವಾಗ್ವಾದಗಳು ದಾರಿ ತಪ್ಪುವುದು ಇಲ್ಲಿ. ಎಲ್ಲವನ್ನು ಕೇಂದ್ರೀಕರಿಸಿ ಕೆಲವೇ ಮಂದಿಗೆ ಅಧಿಕಾರ-ಶಕ್ತಿಯನ್ನು ಕಲ್ಪಿಸುವ ವಿಜ್ಞಾನದ ಬಳಕೆಯ ಇನ್ನೊಂದು ವಿನಾಶಕಾರೀ ರಾಕ್ಷಸೀ ಮುಖವನ್ನು ಅವು ಅಷ್ಟಾಗಿ ಗಣನೆಗೆ ತೆಗೆದುಕೊಳ್ಳಲಿಲ್ಲ. ವಿಜ್ಞಾನದ ಬೆಳವಣಿಗೆಯು ಆಳುವವರ, ರಾಜಕಾರಣಿಗಳ, 'ಬ್ಯೂರೋಕ್ರಾಟ್'ಗಳ, ಕೈಗಾರಿಕೋದ್ಯಮಿಗಳ ಕೈಯನ್ನು ಬಲಪಡಿಸುತ್ತಲೇ ಬಂದಿದೆ. ದುರ್ಬಲರನ್ನು ಬೆಳವಣಿಗೆಯ ಪ್ರಧಾನ ಪ್ರವಾಹದಿಂದ ಹೊರಗಿಡುತ್ತಲೇ ಬಂದಿದೆ. ಧರ್ಮಕ್ಕಿಂತ ಹೆಚ್ಚು 'ಇಂಪರ್ಸನಲ್' ಆಗಿ ವಿಜ್ಞಾನ ಈ ಕೆಲಸ ಮಾಡುತ್ತ ಬರುತ್ತಿದೆ. ಸಾಮಾನ್ಯ ಜನರು ವಿಜ್ಞಾನದ ಪ್ರಯೋಜನ

ಪಡೆಯುವುದಕ್ಕಿಂತ ಹೆಚ್ಚು ಇಂದು ಆಳುವವರು, ಅಧಿಕಾರಿಗಳು, ಕಲಿತ ಪೇಟೆಯ ಮಂದಿ ಸಾಮಾನ್ಯರನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳಲು ವಿಜ್ಞಾನವನ್ನು ಬಳಸುತ್ತಿದ್ದಾರೆ. ಕುವೆಂಪುರಂತಹ ಸಾಹಿತಿಗಳು ವಿಜ್ಞಾನವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಕೇವಲ ಅಮೂರ್ತವಾದ ಮೌಲ್ಯಗಳ ಮೊತ್ತವಾಗಿ. ಅಧಿಕಾರಿಗಳು, ರಾಜಕಾರಣಿಗಳು, ಹಿಟ್ಲರ್, ಸ್ಟಾಲಿನ್‌ರಂತಹ ಸರ್ವಾಧಿಕಾರಿಗಳು, ತಂತ್ರಜ್ಞಾನ-ವಿಜ್ಞಾನವನ್ನು ಯುದ್ಧದ ನೆರವಿಗಾಗಿ, ಮಿಲಿಟರಿ ಶಕ್ತಿಯ ಅಭಿವೃದ್ಧಿಗಾಗಿ, ಅಧಿಕಾರದ ಕೇಂದ್ರೀಕರಣಕ್ಕಾಗಿ ಮತ್ತು ತಮ್ಮ ಅಧಿಕಾರ ಭದ್ರತೆಗಾಗಿ ಮೂರ್ತ ರೂಪದಲ್ಲಿ ದುರುಪಯೋಗಪಡಿಸಿಕೊಳ್ಳುತ್ತಾರೆ. ಕುವೆಂಪುರವರು ವಿಜ್ಞಾನ ಎಂದು ಹೇಳುವುದು ಗೆಲಿಲಿಯೊ, ಚರಕ, ಶುಶ್ರುತರ ಆಶಯದಲ್ಲಿ. ಇಂಥ ಆಶಯಗಳು ಅನೇಕ ಬಾರಿ ಸಂಕೀರ್ಣ ಸಂಗತಿಗಳ ತೀರ ಸರಳೀಕರಣವಾಬಿಡುತ್ತದೆ. ಇಂದಿನ ತಾಂತ್ರಿಕ ಪ್ರಗತಿ ಕುವೆಂಪುರವರ ಆಶಯದ ದಾರಿಯಲ್ಲಿ ಜೀವಪೋಷಕವಾಗಿ ಬೆಳೆಯುತ್ತಿಲ್ಲ. ಧರ್ಮಕ್ಕಿಂತಲೂ ಹೆಚ್ಚು ವಿನಾಶಕಾರೀ ಶಕ್ತಿಯನ್ನು ಪಡೆಯುತ್ತ ಬೆಳೆಯುತ್ತಿದೆ. ಹಾಗಾಗಿ ಇಂದು ನಾವು ವಿಜ್ಞಾನ, ಕೈಗಾರಿಕೀಕರಣ, ತಾಂತ್ರಿಕತೆಗಳನ್ನು ಬಹಳ ಜವಾಬ್ದಾರಿಯಿಂದ, ಎಚ್ಚರಿಕೆಯಿಂದ ಗಮನಿಸಬೇಕಾಗುತ್ತದೆ. ಆಧುನಿಕ ಯುಗದ ಆರಂಭದಲ್ಲಿ ಧರ್ಮವನ್ನು ಪ್ರಶ್ನೆ ಮಾಡಿದಂತೆಯೇ ಇಂದು ನಾವು ವಿಜ್ಞಾನ-ತಂತ್ರಜ್ಞಾನವನ್ನು ಪ್ರಶ್ನೆ ಮಾಡಬೇಕಾಗುತ್ತದೆ.

-೬-

ಒಟ್ಟಿನಲ್ಲಿ, ಕೇವಲ ಕನ್ನಡ ಸಮಾಜ ಮತ್ತು ಸಂಸ್ಕೃತಿಯ ಮೇಲೆ ಕೈಗಾರಿಕೀಕರಣದ ಪ್ರಭಾವದ ಬಗ್ಗೆ ಪ್ರತ್ಯೇಕವಾಗಿ ವಿಮರ್ಶೆ ಮಾಡುವುದೆಂದರೆ, ಆಧುನಿಕ ಜಗತ್ತು ಇಂದು ಎದುರಿಸುತ್ತಿರುವ ಮಹಾಸಮಸ್ಯೆಯ ಒಂದು ಎಳೆಯನ್ನು ಮಾತ್ರ ಪರಿಶೀಲಿಸಿದಂತಾಗುತ್ತದೆ. ಇಂದು ನಮ್ಮೆದುರಿರುವ ಅನೇಕ ಬಿಕ್ಕಟ್ಟುಗಳು ಅದರ ಹಿಂದೆಯಿರುವ ಒಂದು ಬೃಹತ್ ಸಮಸ್ಯೆಯ ವಿಭಿನ್ನ ಮುಖಗಳು ಅಷ್ಟೆ. ಇದು ಮೂಲತಃ ನಮ್ಮ ಗ್ರಹಿಕೆಯ ಸಮಸ್ಯೆಯೇ ಆಗಿದೆ. ವಿಜ್ಞಾನದ ಪ್ರಭಾವದಿಂದ ಭೌತಪ್ರಪಂಚವನ್ನು ನೋಡುವ ಯಾಂತ್ರಿಕ ದೃಷ್ಟಿಕೋನದ ಪರಿಕಲ್ಪನೆಗಳ ಮೂಲಕವೇ ಸತ್ಯವನ್ನು ಕೂಡ ನೋಡಲು ಪ್ರಯತ್ನಿಸುವ ಫಲಶ್ರುತಿಯಾಗಿದೆ. ಹಾಗಾಗಿ ನಾವು ಎಲ್ಲ ಸಂಕೀರ್ಣ ಸಂಗತಿಗಳನ್ನು-ಬದುಕಿನ ಸಂಭ್ರಮ, ಸೌಂದರ್ಯಗಳನ್ನು ಕೂಡ- ಖಂಡದೃಷ್ಟಿಯಿಂದ ಅಂಶಅಂಶಗಳಾಗಿ ವಿಂಗಡಿಸಿ, ಸಂಕೋಚಗೊಳಿಸಿ ನೋಡುವ ಬದಲು, ಸಮಗ್ರವಾಗಿ, ಅಖಂಡದೃಷ್ಟಿಯಿಂದ, ಮೂಲಸಮಸ್ಯೆಯನ್ನೇ ಒಟ್ಟಂದದಲ್ಲಿ ಮತ್ತೆ ಗ್ರಹಿಸಬೇಕಾಗಿದೆ. ಆಗ ಸಮಸ್ಯೆಗೆ ಉತ್ತರ ಅಲ್ಲೇ ಇದೆ.

ಎಲ್ಲವನ್ನು ಬೇರೆ ಬೇರೆಯಾಗಿ ಖಂಡ ದೃಷ್ಟಿಯಿಂದ ನೋಡುವ ಕ್ರಮವನ್ನು ನಮಗೆ ಪಾಶ್ಚಾತ್ಯರು ಕಲಿಸಿಕೊಟ್ಟಿದ್ದು. ವಿಜ್ಞಾನವೂ ಈ ಖಂಡಗ್ರಹಿಕೆಯ ಬಳುವಳಿಯೇ ಆಗಿದೆ. ಆದ್ದರಿಂದಲೇ ವಿಜ್ಞಾನದ 'ಮೆಥಡ್'ನಲ್ಲೇ ಆತ್ಮನಿಷೇಧದ ಬೀಜವಿದೆ. ಈ ಕಾರ್ಟೀಸಿಯನ್-ನ್ಯೂಟೋನಿಯನ್ ವಿಜ್ಞಾನದ ಕಾಲಬಾಧಿತ ಯಾಂತ್ರಿಕ ದೃಷ್ಟಿಯಿಂದ ಸತ್ಯವನ್ನು ಒಟ್ಟಂದದಲ್ಲಿ ಅರಿಯಲಿಕ್ಕೆ ಸಾಧ್ಯವಿಲ್ಲ.

ವಿಶ್ವದ ಎಲ್ಲ ಸಂಗತಿಗಳೂ ಒಂದಕ್ಕೊಂದು ಅಂತರ್ ಪ್ರಭಾವ ಬೀರುತ್ತ ಪರಸ್ಪರ ಹೆಣೆದುಕೊಂಡಿರುವ ಒಂದೇ ಅಖಂಡ ನಿಸರ್ಗಜಾಲವಾಗಿದೆ. ಆದರೆ ವಿಜ್ಞಾನವು ಈ ಅಖಂಡ ಜಾಲವನ್ನು ವಿಭಜಿಸಿ ಪ್ರತ್ಯಪ್ರತ್ಯೇಕವಾಗಿ ನೋಡಲು ಕಲಿಸುವ ಮೂಲಕ, ಒಟ್ಟಂದದಲ್ಲಿ ಸಮಗ್ರವನ್ನು ಗ್ರಹಿಸುವ ನಮ್ಮ ದೃಷ್ಟಿಕೋನವನ್ನೇ ಮರೆಮಾಡಿಸಿದೆ. ಬದುಕಿನ ಸತ್ವವನ್ನು ಗುಣಾತ್ಮಕವಾಗಿ ಗ್ರಹಿಸುವ ಬದಲು, 'ನನಗೆ ಇದರಿಂದ ಲಾಭ ಏನು?' ಎಂದು ನೋಡುವ ಈ ಸಂಕುಚಿತ ಮನೋಭಾವ (tubulur vision) ದಿಂದಾಗಿ ಸೌಂದರ್ಯೋಪಾಸನೆ, ಜೀವನೋಲ್ಲಾಸ, ಆನಂದವೇ ಮೊದಲಾದ ಶ್ರೀಮಂತ ಮೌಲ್ಯಗಳು ಹಿಂದಕ್ಕೆ

ಸರಿದು, ಉನ್ಮಾದ-ಮೇಲಾಟ-ಆಡಂಬರಗಳೇ ಸುಖದ ಮಾನದಂಡಗಳಾಗಿವೆ. 'ನಾನು ಇಲ್ಲಿ ಇದ್ದೇನೆ'-'ನಾಳೆ ಅಲ್ಲಿಗೆ ತಲುಪಬೇಕು' ಎಂಬ ಗುರಿ ತಲುಪಲು ಚಡಪಡಿಸುವ ಪ್ರವೃತ್ತಿ ಮನುಷ್ಯನಲ್ಲಿ 'ಪೈಪೋಟಿ- ಆಡಂಬರಗಳ ಬದುಕೇ ನಿಜವಾದ ಬದುಕು' ಎಂಬ ಭ್ರಮೆ ಹುಟ್ಟಿಸಿ ಆತನ ಬಾಳನ್ನು ನೀರಸ ಮಾಡಿದೆ. ಈ ನಿರಂತರ ಹೋರಾಟದಲ್ಲಿ ಆತನನ್ನು ಒಂದು ಮಾನಸಿಕ ಸ್ಫೋಟಕ ಸ್ಥಿತಿಗೆ ತಂದು ನಿಲ್ಲಿಸಿದೆ. ಶಿಕ್ಷಣ, ಅರ್ಥಶಾಸ್ತ್ರ, ರಾಜಕೀಯ, ಬೇಸಾಯ, ಸಾಹಿತ್ಯ, ವಿಜ್ಞಾನ, ತಂತ್ರಜ್ಞಾನ ಎಲ್ಲದರಲ್ಲೂ ಇಂದು ನಾವು ಕಾಣುತ್ತಿರುವ ಗುರಿತಲುಪುವ ಬಗ್ಗೆ ಅವಸರದ ಓಟ ನಮ್ಮ ಮೂಲಭೂತ ಗ್ರಹಿಕೆಯಲ್ಲಿರುವ ದೋಷವೆಂದೇ ನನ್ನ ನಂಬಿಕೆ. ತಂತ್ರಜ್ಞಾನ ಹೊರಚೆಲ್ಲಿದ ಅಸಂಖ್ಯ ಆಕರ್ಷಕ ಗ್ರಾಹಕ ಸರಕುಗಳು ಮತ್ತು ನೇರಮುಖದ ಪ್ರಗತಿಯ ಕಲ್ಪನೆ ಬದುಕಿನ ಸೌಂದರ್ಯವನ್ನು ಎಷ್ಟು ಕುಗ್ಗಿಸಿದೆಯೆಂದರೆ, ಇದಕ್ಕೆ ಪ್ರತಿಕ್ರಿಯೆಯಾಗಿಯೇ ಇಂದು ವಿಶ್ವದ ಅನೇಕ ರಾಷ್ಟ್ರಗಳ ಮೂಲೆ ಮೂಲೆಗಳಲ್ಲಿ ಸಣ್ಣ ಸಣ್ಣ ಪ್ರಜ್ಞಾವಂತ ಗುಂಪುಗಳು, ಪರಿಸರ ಚಳುವಳಿ, ಸ್ತ್ರೀವಾದ ಚಳುವಳಿ, ಜನಾಂಗೀಯ ಚಳುವಳಿ, ಆಧ್ಯಾತ್ಮಿಕ ಚಳುವಳಿ ಮುಂತಾದವುಗಳ ನೆಪದಲ್ಲಿ ತಮ್ಮ ತಮ್ಮ ಮಣ್ಣಿನ ಸಂಸ್ಕೃತಿ-ದೇಶೀ ತಿಳುವಳಿಕೆಗಳ ಬೇರುಗಳನ್ನು ಹುಡುಕಹೊರಟಿವೆ. ವಿಕೇಂದ್ರೀಕೃತ ಬದುಕಿನ ಆಶಯದತ್ತ ಸಾಗುತ್ತಿವೆ. ಯಂತ್ರಸಂಸ್ಕೃತಿಯ ಕೇಂದ್ರೀಕೃತ ರಾಕ್ಷಸ ಆಯಾಮದಿಂದ ಮಾನವ ಆಯಾಮಕ್ಕೆ ಇಳಿದು ವಿಕೇಂದ್ರೀಕೃತ ನೆಲೆಗೆ ಮತ್ತೆ ಮರಳಲು ಆಶಿಸುತ್ತಿವೆ. ಮನುಷ್ಯ-ನಿಸರ್ಗಗಳ ಸಂಬಂಧವನ್ನು ಮತ್ತೆ ಬೆಸೆಯಲು ಬಯಸಿವೆ. ಬದುಕಿನ ಜೀವಪೋಷಕ ಅಂಶಗಳನ್ನು ಮತ್ತೆ ಪೋಷಿಸಲು ತವಕಪಡುತ್ತಿವೆ. ವಿಜ್ಞಾನದ ಮಾನವೀಕರಣದತ್ತ ತುಡಿಯುತ್ತಿವೆ.

ಈ 'ಮುಟ್ಟುವ', 'ಅಳೆಯುವ', 'ಸಾಧಿಸುವ' ಪ್ರವೃತ್ತಿ, ಒಂದರೊಳಗೊಂದು ಹೆಣೆದುಕೊಂಡಿರುವ ಸಮಗ್ರ ವಿಶ್ವದ ಸುಂದರ ಸೂತ್ರಕ್ಕೇ ವಿರೋಧಿಯಾದವುಗಳು. ಆದ್ದರಿಂದಲೇ ಅವು ಆತ್ಮಘಾತಕ ಪ್ರವೃತ್ತಿಗಳು ಎಂಬುದು ಈ ಗುಂಪುಗಳ ಅಭಿಪ್ರಾಯವಾಗಿದೆ. ಎಲ್ಲವನ್ನು ನುಂಗಿ ನೊಣೆಯುವ ಈ ರಾಕ್ಷಸ ಸಂಸ್ಕೃತಿಯ ಎದುರು ಈ ಗುಂಪುಗಳ ಪರ್ಯಾಯ ಚಿಂತನೆಯ ಧ್ವನಿ ಇಂದು ಬಹಳ ಕ್ಷೀಣವಾದರೂ ಕೂಡ, ಇಂದು ವ್ಯಾಪಿಸಿರುವ ಬೆಂಗಾಡಿನಲ್ಲಿ ತಾತ್ಕಾಲಿಕವಾದರೂ ಖುಷಿ ಕೊಡುವ ತಂಗಾಳಿಯೆನ್ನದೆ ವಿಧಿಯಿಲ್ಲ. ಇವು ಮುಂದೆ ಯಾವ ಸ್ವರೂಪ ಪಡೆಯುತ್ತವೆ ಎಂಬುದನ್ನು ಮಾತ್ರ ಗಮನಿಸಬೇಕು. ಯಾಕೆಂದರೆ, ಈ ಚಳುವಳಿಗಳು ಕೂಡ ಕೇವಲ ಹಿಂದಿನದ್ದನ್ನು ವಿಜೃಂಭಿಸುವ, ಹಳೆಯದೆಲ್ಲವೂ ಒಳ್ಳೆಯದು ಎಂಬ ವಿವೇಚನಾರಹಿತ ವೈಭವೀಕರಣದ ಅತಿರೇಕಕ್ಕೆ ಹೋಗಿ ಮೂಲಭೂತವಾದದತ್ತ ಸಾಗುವ ಅಪಾಯವೂ ಇನ್ನೊಂದೆಡೆ ಇದೆ.

---

* ಡಾ। ನಿ. ಮುರಾರಿ ಬಲ್ಲಾಳ, ಮಾನಸ, ಅಂಬಲಪಾಡಿ, ಉಡುಪಿ - ೫೭೬ ೧೦೨.

ಗಿರಣಿ ಸಾರ ವಿಸ್ತಾರ

ಡಾ। ಬದರಹಳ್ಳಿ ನರಸಿಂಹಮೂರ್ತಿ

ಅನುಭಾವಿ ಕವಿಗಳ ಆತ್ಮಲೋಕದಲ್ಲಿ ಅಖಂಡ ಲೋಕಾತ್ಮವೆ ಅಡಗಿರುತ್ತವೆ. ಆದ್ದರಿಂದ ಅವರು ವ್ಯಕ್ತಿಮುಕ್ತಿಯನ್ನು ನಂಬುವುದಿಲ್ಲ. ಲೋಕದ ಮುಕ್ತಿ ಮತ್ತು ತಮ್ಮ ಮುಕ್ತಿ ಎರಡೂ ಒಂದೇ ಎಂದು ನಂಬುತ್ತಾರೆ. ಲೋಕದ ಬಹಿರಂಗ ಸ್ವರೂಪ, ಅದರ ಲೌಕಿಕ ಬದುಕಷ್ಟೆ ಮುಖ್ಯವಲ್ಲ ಅವರಿಗೆ. ಲೋಕದ ಅಲೌಕಿಕತೆ, ಅದರ ಅಂತರಂಗದ ತುಡಿತಗಳು ಅವರನ್ನು ಸದಾ ಕಾಡುತ್ತಿರುತ್ತವೆ. ಅವರ ದೃಷ್ಟಿಯಲ್ಲಿ ವರ್ತಮಾನವಷ್ಟೆ ಸತ್ಯವಲ್ಲ. ಭೂತ ಭವಿಷ್ಯತ್ತುಗಳೂ ಸತ್ಯದ ಭಾಗಗಳೇ ಆಗಿವೆ. ಅವರ ಒಳಗಣ್ಣಿನಲ್ಲಿ ಕಾಲಜ್ಞಾನವಿರುತ್ತದೆ.

ಕೈಗಾರಿಕೀಕರಣ ಉಂಟುಮಾಡಿದ ತಾಂತ್ರಿಕ ವಿಪ್ಲವ ಹಾಗೂ ಭೌತಿಕ ಬದಲಾವಣೆಗಳಿಗೆ ಇರುವ ಇತಿಮಿತಿಗಳಾಗಲೀ, ವಸಾಹತುಶಾಹಿ ಚರಿತ್ರೆಯು ನಿರ್ದಿಷ್ಟ ಕಾಲಖಂಡದಲ್ಲಿ ನಿರ್ದಿಷ್ಟ ದೇಶಗಳಲ್ಲಿ ಉಂಟು ಮಾಡಿದ ಪರಿಣಾಮಗಳಿಗೆ ಇರುವ ಇತಿಮಿತಿಗಳಾಗಲೀ ಅನುಭಾವ ಕಾವ್ಯಕ್ಕೆ ಇರುವುದಿಲ್ಲ. ಯಾಕೆಂದರೆ ಕೈಗಾರಿಕೀಕರಣ ಮತ್ತು ವಸಾಹತುಶಾಹಿ ಪರಿಕಲ್ಪನೆಗಳು ಬದುಕನ್ನು, ಕಾಲವನ್ನು ಒಡೆದು ವಿಭಾಗಿಸಿ ನೋಡುತ್ತವೆ. ಅನುಭಾವ ಯಾವಾಗಲೂ ಬದುಕನ್ನು, ಕಾಲವನ್ನು ಅಖಂಡವಾಗಿ ಹಿಡಿಯುತ್ತದೆ.

ಭಾರತಕ್ಕೆ ಕಾಲಿಟ್ಟ ವಸಾಹತುಶಾಹಿ ಮತ್ತು ವ್ಯಾಪಕವಾಗಿ ನಡೆದ ಕೈಗಾರಿಕೀಕರಣವನ್ನು ದಿಟ್ಟವಾಗಿ ಎದುರಿಸಿದ ಮೊಟ್ಟಮೊದಲ ಕನ್ನಡ ಅನುಭಾವಿ ಕವಿ ಶಿಶುನಾಳ ಶರೀಫ್. ಅವನ ಸಮಗ್ರ ಕಾವ್ಯವನ್ನು ಈ ನಿಟ್ಟಿನಿಂದ ಅಧ್ಯಯನ ಮಾಡಬೇಕಾಗಿದೆ. ಬರಿ ಹಾಡುತ್ತ ಹೋಗುವ ಒಬ್ಬ ಸಾಮಾನ್ಯ ಆಶುಕವಿ ಆಗಿರಲಿಲ್ಲ ಅವನು; ಮಧುರಚೆನ್ನ, ಬೇಂದ್ರೆ, ಅರವಿಂದರು, ಟ್ಯಾಗೋರರು, ಬ್ಲೇಕ್ ಮತ್ತು ಏಟ್ಸ್‌ರ ಸಾಲಿನಲ್ಲಿ ನಿಲ್ಲುವ ದೊಡ್ಡ ಅನುಭಾವಿ ಕವಿಯಾಗಿದ್ದಾನೆ.

ಶರೀಫನಿಗಿಂತ ಹಿಂದಿನವನು ಎನ್ನಲಾದ ಕಡಕೋಳ ಮಡಿವಾಳಪ್ಪ "ಅಜ್ಞಾನ ಜಾರಿಸುದು ವಿಜ್ಞಾನ ತುಂಬಿಸುದು ಪ್ರೇಮದಿಂದ ಸುಜ್ಞಾನವನು ಕರುಣಿಸೇಳು" ಎಂಬ ಸ್ವೀಕಾರಭಾವದಿಂದ ಕೈಗಾರಿಕೀಕರಣವನ್ನು ಕಂಡಿದ್ದಾನೆ. "ಮಮತೆಯಿಂದಿರೆ ನಾಡು ಸಮತೆಗೊಂಡಿದೆ ನೋಡು", "ಸರಕಾರ ಕಂಡಲ್ಲಿ ಸಲಾಮು ಮಾಡೊ" ಎನ್ನುವ ಮಡಿವಾಳಪ್ಪ ವಸಾಹತುಶಾಹಿ ವ್ಯವಸ್ಥೆಯ ಭಾರವನ್ನು "ದೇಶಕಧಿಕವಾದ" ತಂದೆ ಮಹಾಂತೇಶನ ಮೇಲೆ ಹಾಕಿ ನಿರ್ಲಿಪ್ತನಾಗಿದ್ದಾನೆ. ಅವನು ದೂರ ನಿಂತು ಎಲ್ಲವನ್ನು ನೋಡಿದ್ದಾನೆ. ಶರೀಫನಂತೆ ಹತ್ತಿರಹೋಗಿ ನೋಡಿಲ್ಲ. ಹೊಸವ್ಯವಸ್ಥೆಯನ್ನು ಒಂದು ಸವಾಲಿನಂತೆ ಸ್ವೀಕರಿಸಿಲ್ಲ.

ಶಿಶುನಾಳ ಶರೀಫ್ ಯಂತ್ರಲೋಕವನ್ನು ಸೂಕ್ಷ್ಮವಾಗಿ ಗಮನಿಸುತ್ತಾನೆ. ಯಂತ್ರದ ಅಂತರಾಳಕ್ಕೆ ಯೋಗದ ಪಟ್ಟುಗಳನ್ನು ಹಾಕಿ ಅದನ್ನು ಹಣ್ಣುಗಾಯಿ ನೀರುಗಾಯಿ ಮಾಡುತ್ತಾನೆ. ವಸಾಹತು ವ್ಯವಸ್ಥೆಯನ್ನು ಎದುರಿಸಲು ಹೊಸ ಐಕ್ಯಮಂತ್ರವನ್ನು ಕಟ್ಟಿಕೊಡುತ್ತಾನೆ. ಶರೀಫ ಬರೆದಿರುವ 'ಗಿರಣಿ ಸಾರ ವಿಸ್ತಾರ ನೋಡಮ್ಮಾ' ಪ್ರಚಂಡ ಜೀವಶಕ್ತಿಯಿಂದ ಉರಿಯುತ್ತಿರುವ ಅನುಭಾವ ಗೀತೆ. ಅಪ್ಪಟ ದೇಶೀಯ ಕಸುವುಳ್ಳ ಕವಿತೆ. ದುರಾಕ್ರಮಣವನ್ನು ಸಮರ್ಥವಾಗಿ ಎದುರಿಸಿ ನಿಲ್ಲುವ ಸ್ಥೈರ್ಯ ನೀಡುವ ಕವಿತೆ. ಈ ಕವಿತೆಯನ್ನು ಒಳಹೊಕ್ಕು ನೋಡೋಣ:

"ಧರಣಿಪತಿಯು ರಾಣಿ" ಎಂಬ ವೈರುಧ್ಯ ಎಲ್ಲವೂ ಬುಡಮೇಲಾಗಿರುವುದರ ಸೂಚಕ. ಆ ರಾಣಿ "ಕರುನಾಟ ರಾಜ್ಯಕೆ / ತರಿಸಿದ ಘನ ಜೋಕ್ಯವೋ ಜೀನಾದ ಪಿದ್ಯವೋ" ಆದ ಗಿರಣಿ ಕವಿಯ ಬೆರಗಿಗೆ ಕಾರಣವಾಗಿದೆ. ವಿಕ್ಟೋರಿಯಾ ರಾಣಿ ತರಿಸಿದ ಚೀನೀ ಮಾಟದ ಯಂತ್ರದಂಥ ಗಿರಣಿ ಬಗ್ಗೆ ದೇಶೀಯ ಬಂಧುಗಳು ಹುಷಾರಾಗಿರಬೇಕು ಎಂಬುದು ಶರೀಫನ ಸೂಚನೆ. ಇದೇ ರೀತಿ ಸೂಚನೆಗಳನ್ನು ಶರೀಫನ ಆಪ್ತಮಿತ್ರನಾದ ನವಲಗುಂದದ ನಾಗಲಿಂಗಯೋಗಿಯೂ ನೀಡುತ್ತಿದ್ದನಂತೆ. ಅವನು ಸೀರೆ ಸುತ್ತಿಕೊಂಡು ಊರಿನ ಕೇರಿಗಳಲ್ಲಿ ಅಲೆದಾಡುತ್ತ ರಾಣಿಯ ಆಳ್ವಿಕೆ ಬಗ್ಗೆ ಕಾಲಜ್ಞಾನ ಹೇಳುತ್ತಿದ್ದನಂತೆ. ಈ ಇಬ್ಬರು ಜೀವದ ಗೆಳೆಯರು ಜನರನ್ನು ಸುಪ್ತ ಪ್ರತಿಭಟನೆಗೆ ಬಡಿದೆಬ್ಬಿಸುತ್ತ, ಸ್ವದೇಶಿ ಸಂಸ್ಕೃತಿಯ ಯಥಾರ್ಥತೆಯನ್ನು ಎತ್ತಿಹಿಡಿಯುತ್ತ ನಾಡಿನ ಕಷ್ಟಕಾಲದಲ್ಲಿ ಭರವಸೆಯ ಕುಡಿಗಳಾಗಿದ್ದರು.

"ಜಲ ಅಗ್ನಿ ವಾಯು ಒಂದಾಗಿ / ಕಲೆತು ಚಂದಾಗಿ / ನೆಲದಿಂ ಗಗನಕೆ ಮುಟ್ಟಿದಂತೆಸೆವುದು" ಎಂಬ ಸಾಲುಗಳಲ್ಲಿ ಪಂಚಭೂತಗಳೆಲ್ಲವನ್ನು ಸೆರೆಹಿಡಿದು ದುಡಿಸಿಕೊಳ್ಳುತ್ತಿರುವ ಗಿರಣಿಯ ಅಧಿಪತ್ಯದ ಸೂಚನೆ ಇದೆ. ಕೈಗಾರಿಕೀಕರಣದ ರಾಕ್ಷಸೀ ಸಂಕೇತವಾದ ಗಿರಣಿ ಬದುಕನ್ನೇ ಬಂಧಿಸಿದೆ. ೧೮೮೭ರಲ್ಲಿ ಹುಬ್ಬಳ್ಳಿಯಲ್ಲಿ ಫೋರ್ಬ್ಸ್ ಮತ್ತು ಫೋರ್ಬ್ಸ್ ಎಂಬ ಇಂಗ್ಲೀಷ್ ಕಂಪನಿ ಒಂದು ಅರಿವೆ ಗಿರಣಿಯನ್ನು ತೆರೆಯಿತು. ಅದರ ಅಕರಾಳ ವಿಕರಾಳ ಆಕೃತಿಯನ್ನು, ಅದರ ಆಕ್ರಮಣಶೀಲತೆಯನ್ನು, ಅದು ನೆಲೆಗೊಳಿಸಲಿದ್ದ ಯಾಂತ್ರಿಕತೆಯನ್ನು ಸ್ವದೇಶಿ ಸಂಸ್ಕೃತಿಯ ನೆಲೆಯಿಂದ ಅರಿಯಲು, ಅರಗಿಸಿಕೊಳ್ಳಲು ಶಿವಯೋಗಿ ಶರೀಫ ನಡೆಸಿದ ಕಾವ್ಯಾತ್ಮಕ ಪ್ರಕ್ರಿಯೆಯೇ ಈ ಕವಿತೆಯಾಗಿದೆ. ಎದುರಾಳಿಯ ಶಕ್ತಿ ಸಾಮರ್ಥ್ಯವನ್ನು ಮೆಚ್ಚುವ ವೀರನ ಧಾಟಿಯಲ್ಲಿ ಶರೀಫ "ಚೆಲುವ ಚೆನ್ನಿಗನಾದ ಕಂಭವೋ ಹೊಗೆಯ ಬಿಂಬವೋ" ಎಂದು ಗಿರಣಿಯ ವಿಕರಾಳ ಚೆಲುವನ್ನು ಮೆಚ್ಚುತ್ತಾನೆ. ಏಟ್ಸ್ ಹೇಳುವ terrible beauty ಇದು.

ಗಿರಣಿಯ ಸಾಮಾನ್ಯ ಪರಿಕಲ್ಪನೆಯನ್ನು ಒಡೆದು ಅದಕ್ಕೊಂದು ಅಸಾಮಾನ್ಯ ಸಾಂಕೇತಿಕ ಘನತೆ ತಂದುಕೊಡುತ್ತ "ಒಳಗೊಂದು ಬೇರೆ ಆಕಾರ / ತಿಳಕೊ ಚಮತ್ಕಾರ" ಎಂಬ ಸ್ಟಾನ್ಜಾ ಶರೀಫನ ಕಾವ್ಯ ಪ್ರತಿಭೆ ಬಗ್ಗೆ ಬೆರಗು ಹುಟ್ಟಿಸುತ್ತದೆ. ಮನುಷ್ಯನ ದೇಹವನ್ನು ಯಂತ್ರಕ್ಕೆ ಹೋಲಿಸಿದರು ವಿಜ್ಞಾನಿಗಳು. ಆದರೆ ಶಿವಯೋಗಿ ಶರೀಫ ಯಂತ್ರದ ದೇಹಕ್ಕೆ ಯೌಗಿಕ ವ್ಯಕ್ತಿತ್ವವನ್ನು, ಜೀವಂತಿಕೆಯನ್ನು ನೀಡುತ್ತಿದ್ದಾನೆ: "ದಳಗಳೊಂಬತ್ತು ಚಕ್ರ ಸುಳಿವ ಸೂತ್ರಾಧಾರ / ಲಾಳಿ ಮೂರು ಕೊಳವಿಯೊಳು ಎಳೆತುಂಬುತದರೊಳು" ಎಂದು ಗಿರಣಿಯ ಅಂತರಂಗದಲ್ಲಿ ಯೌಗಿಕ ಚೆಲುವನ್ನು ಕಾಣುವ ಶರೀಫ ನಿಜವಾಗಲೂ ಒಬ್ಬ ದ್ರಷ್ಟಾರ. ಗಿರಣಿಯ ಹೊರರೂಪದ ಭೀಕರ ಚೆಲುವಿನ ಭಯ ಮಾಯವಾಗಿ ಅದರ ಅಂತರಾಳ ಆತ್ಮೀಯವಾಗಿ ಕಾಣಿಸತೊಡಗುತ್ತದೆ. ಯಂತ್ರಲೋಕದ ಮಗುವೊಂದು ನಮ್ಮ ಶಿಶುಭಾವದ ಕವಿಯೊಡನೆ ಸಲ್ಲಾಪದಲ್ಲಿ ತೊಡಗಿರುವಂತೆ ಭಾಸವಾಗುತ್ತದೆ. ಕೈಗಾರಿಕೀಕರಣ, ಯಾಂತ್ರಿಕ ನಾಗರಿಕತೆಗಳಿಗೆ ಬೇಸತ್ತ ಏಟ್ಸ್, ಕ್ರಿಶ್ಚಿಯಾನಿಟಿ

ಕೈಬಿಟ್ಟಿತು ಎಂಬ ಹತಾಶೆಯಿಂದ, ತನ್ನ ಪದ್ಯದಲ್ಲಿ ಸರ್ವನಾಶಗೈಯುವ ದೈತ್ಯಮೃಗವೊಂದನ್ನು ಆವಾಹಿಸುತ್ತಾನೆ. ಆದರೆ ಶಿಶುನಾಳ ಶರೀಫ ಸ್ವದೇಶಿ ಸಂಸ್ಕೃತಿಯನ್ನು ಹೊಸಗಿಹಾಕುವ ಹೂಂಕಾರದಲ್ಲಿರುವ ಗಿರಣಿಯನ್ನು ಒಲಿಸಿಕೊಂಡು ಅದನ್ನು ಅನುಭಾವಿಕ ಶಕ್ತಿಯನ್ನಾಗಿ ಪರಿವರ್ತಿಸಿಬಿಡುತ್ತಾನೆ. ತನ್ನ ಕಾಲಘಟ್ಟದ ಒಂದು ಮಹತ್ವದ ಸಾಂಸ್ಕೃತಿಕ ಸವಾಲಿಗೆ ಶರೀಫ ನೀಡಿದ ಜವಾಬು ಇದು. ಶ್ರೇಷ್ಠಕವಿಗಳಲ್ಲಿ ಮಾತ್ರ ಕಾಣಸಿಕೊಳ್ಳುವ ಛಾತಿ ಇದು.

"ಅಲ್ಲಿ ಬರದಿಟ್ಟರಳಿ ಹಂಜೀ / ಗಾಲಿಯರಡರ ಮೇಲೆ ಮೂಲ ಬ್ರಹ್ಮದ ಕೀಲ / ನಾಡಿ ಸುಷುಮ್ನ ಕೂಡಿ / ಅಲ್ಯಾಯ್ತೋ ಕುಕ್ಕಡಿ" ಎಂಬ ಸಾಲುಗಳು ಮನುಷ್ಯ ದೇಹ ಮತ್ತು ಗಿರಣಿಯ ದೇಹಗಳ ಯೌಗಿಕ ಸಮಾನತೆಯನ್ನು ಧ್ವನಿಸುತ್ತವೆ. ನಿಜಾರ್ಥ ಸಿದ್ಧಿಯಾಗಬೇಕೆಂದರೆ ನಮ್ಮ ಚಿಂತನೆ ಅಡ್ಡನಾಡಿ ಹಾದಿಗಳನ್ನು ಬಿಟ್ಟು ಆರೋಗ್ಯಪೂರ್ಣ ಮಾರ್ಗವನ್ನು ಹಿಡಿಯಬೇಕು ಎಂಬ ಒಳನೋಟವಿದೆ ಇಲ್ಲಿ. ನಿರ್ಜೀವ ಗಿರಣಿ ಕೂಡ ಬ್ರಹ್ಮದ ಕೀಲವನ್ನು ಪರಿಚಯಿಸುವ ಪರಿಕರವಾಗಿಬಿಡುತ್ತದೆ. "ದೇಹವೆ ದೇಗುಲ" ಎಂದ ಬಸವಣ್ಣನಿಗಿಂತ ಶರೀಫ ಇನ್ನೊಂದು ಹೆಜ್ಜೆ ಮುಂದೆ ಹೋಗಿದ್ದಾನೆ. ಬಸವಣ್ಣನ ಭಾವವೆ ವಿಕಾಸವಾಗಿ ಶರೀಫನಲ್ಲಿ ಮುಂದುವರೆದಿದೆ. ತುಳಿತಕ್ಕೆ ಒಳಗಾದ ಸಂಸ್ಕೃತಿ ತನ್ನ ಆಂತರಿಕ ಸತ್ವ ಮತ್ತು ನೈತಿಕ ಸ್ಥಿರತೆಗಳ ಮೂಲಕ ಹೊಸ ಭರವಸೆಯನ್ನು ಕಂಡುಕೊಳ್ಳುವ ಕ್ರಮ ಇದು. "ಪರಮಾನೆಂಬುವ ಪಟ್ಟೆವೊ ಅಲ್ಲೆ / ಮಾರಾಟಕಿಟ್ಟೇವೋ / ಧರೆಯೊಳು ಶಿಶುನಾಳ ದೇವಾಂಗ ಋಷಿಯಿಂದ / ನೇಸಿ ಹಚ್ಚಡ ಹೊಚ್ಚಿತೋ / ಲೋಕ ಮೆಚ್ಚಿತೊ" ಎಂಬ ಸಾಲುಗಳು ಈ ಕವಿತೆಗೆ ಒಂದು ಮಾರ್ಮಿಕ ತಿರುವು ನೀಡುತ್ತವೆ. ಅರಿವೆಯ ಗಿರಣಿ ಆಳವಾದ ಅರಿವಿಗೆ ರೂಪಕವಾಗಿ ನಿಲ್ಲುತ್ತದೆ. ಪುರಾಣವನ್ನು ಆಧುನಿಕ ಅರ್ಥಕ್ಕೆ ಬಳಸುವ ಶರೀಫನ ಕಾವ್ಯಸಾಮರ್ಥ್ಯ ನಮ್ಮನ್ನು ನಿಬ್ಬೆರಗಾಗಿಸುತ್ತದೆ. ಬೆತ್ತಲೆ ತಿರುಗುತ್ತಿದ್ದ ಮೂವತ್ತುಮೂರು ಕೋಟಿ ದೇವತೆಗಳಿಗೆ ಬಟ್ಟೆ ನೇಯ್ದುಕೊಟ್ಟು ಲೋಕದ ಮಾನ ಕಾಪಾಡಿದ ದೇವಾಂಗ ಋಷಿಯ ರಟ್ಟೆಗಳೆ ಬಟ್ಟೆ ಗಿರಣಿಯ ಕಾರ್ಮಿಕರ ರಟ್ಟೆಗಳಾಗಿ ಮಲ್ಟಿಪ್ಲೈ ಆಗಿವೆ ಎಂಬ ಸತ್ಯವನ್ನು ಕಟ್ಟಿಕೊಡುತ್ತದೆ ಈ ಮಹಾರೂಪಕ. ಗಿರಣಿ, ಪರಂಪರೆಯ ಕಾಯಕ ಸತ್ವವನ್ನೂ ಆಧುನಿಕ ಸಮಾಜವಾದಿ ಪರಿಕಲ್ಪನೆಯ ಕೇಂದ್ರವಾದ ಕಾರ್ಮಿಕ ಶಕ್ತಿಯನ್ನೂ, ಇವುಗಳಿಂದ ಸಾಧ್ಯವಾಗುವ ಲೋಕದ ಸಮತೋಲವನ್ನೂ ಒಟ್ಟೊಟ್ಟಿಗೇ ಪ್ರತಿನಿಧಿಸುತ್ತ ನಿಂತು ಅದ್ಭುತವೆನಿಸುತ್ತದೆ. ಇದನ್ನೆ ನಾವು ಸ್ಟ್ರೋಕ್ ಆಫ್ ಜೀನಿಯಸ್ ಎನ್ನುವುದು. ಮಹತ್ವದ ಕವಿಗೆ ಮಾತ್ರ ಸಾಧ್ಯ ಇಂಥ ಕಾವ್ಯಸಿದ್ಧಿ. ನಾಗರಿಕ ನರಕವನ್ನು ನಿರ್ಮಿಸಲು ಹವಣಿಸಿದ ಕೈಗಾರಿಕೀಕರಣ ಮತ್ತು ವಸಾಹತುಶಾಹಿಯ ಎದುರು ದೇಶೀಯ ಸತ್ವದ ಡಮರುಗ ಹಿಡಿದು ಶಿವತಾಂಡವ ನೃತ್ಯ ಮಾಡುವಂತೆ ಶಿವಯೋಗಿ ಶರೀಫ ಈ ಕವಿತೆಯನ್ನು ಕಟ್ಟಿ ಹಾಡಿ ಕುಣಿದಾಡಿದ್ದಾನೆ.

"ಗಿರಣಿ ಸಾರ" ಎಂಬಲ್ಲಿನ 'ಸಾರ', "ಪರಮಾನೆಂಬುವ ಪಟ್ಟೆವೊ" ಎಂಬಲ್ಲಿನ 'ಪರಮಾನ' ಈ ಪದಗಳಿಗೆ ಇರುವ ಕನ್ನಡ ಮತ್ತು ಉರ್ದು ಅರ್ಥಗಳು ಶರೀಫನ ಭಾಷಾಸತ್ವದ ಬಗ್ಗೆ ಅಚ್ಚರಿಹುಟ್ಟಿಸುತ್ತವೆ. ಈ ಎರಡೂ ಭಾಷೆಗಳನ್ನು, ಈ ಭಾಷೆಗಳನ್ನಾಡುವ ಜನಾಂಗಗಳನ್ನು ಒಟ್ಟಿಗೆ ಬೆಸೆಯುವುದು ಕೂಡ ಶರೀಫನ ಕಾವ್ಯದ ಇನ್ನೊಂದು ಮುಖ್ಯ ಉದ್ದೇಶವಾಗಿತ್ತು. ಅದು ಅವನ ಕಾಲದ ಸಾಂಸ್ಕೃತಿಕ ತುರ್ತು ಕೂಡ ಆಗಿತ್ತು. ವಿದೇಶಿ ಸಂಸ್ಕೃತಿಯ ಅಂದರೆ ಏಷಿಯಾಟಿಕ್ ಅಲ್ಲದ ಯೂರೋಪಿಯನ್ ಸಂಸ್ಕೃತಿಯ ಆಕ್ರಮಣಕ್ಕೆ ಬೆದರದೆ ಸ್ವದೇಶೀಯರು ಐಕ್ಯಮತ್ಯದಿಂದ ಸಂಘಟನೆಯಾಗುವುದು ಅಂದಿನ ತುರ್ತು ಅವಶ್ಯಕತೆ ಆಗಿತ್ತು. ಆ ಸಂಘಟನೆಗೆ ಒಂದು ಆಶಾವಾದಿ ಪ್ರೇರಣೆಯಂತಿವೆ ಶರೀಫನ ಹಿಂದೂ-ಮುಸ್ಲಿಂ ಪುರಾಣ

ಬೆರೆತ ಕವಿತೆಗಳು. ಎರಡೂ ಧರ್ಮಗಳ ಪುರಾಣಗಳು ಎಗ್ಗಿಲ್ಲದೆ ಒಂದರೊಳಗೊಂದು ಸಂಗಮಿಸುವ ನದಿಗಳಾಗಿ ಒಟ್ಟಿಗೆ ಹರಿಯತೊಡಗುತ್ತವೆ. ಶರೀಫನ ಕಾವ್ಯದಲ್ಲಿ ಮಹಾಭಾರತದ ಕರ್ಣ ಅರೇಬಿಯಾದ ಕರ್ಬಲಾ ಯುದ್ಧದಲ್ಲಿ ಪಾಲ್ಗೊಳ್ಳುತ್ತಾನೆ. ರಾಮಾಯಣದ ಹನುಮ ರಾಮನ ಅನುಮತಿ ಪಡೆದು ಮದೀನಾ ಶಹರಕ್ಕೆ ನಡೆದು ಅಲ್ಲಿನ ಪೈಲವಾನ ಮೌಲಾ ಅಲಿಯ ಜೊತೆ ಕುಸ್ತಿ ಆಡಿ ಗೆದ್ದು ಬರುತ್ತಾನೆ. ಹೀಗೆ ಮಾನವೀಯ ವಿವೇಕದ ಸ್ಥಾಪನೆಗಾಗಿ ಪ್ರತಿಪುರಾಣವನ್ನೆ ನಿರ್ಮಿಸಬಲ್ಲ ಶಿಶುನಾಳ ಶರೀಫ ದ್ರಷ್ಟಾರ ಕವಿಯೆಂಬುದರಲ್ಲಿ ಸಂದೇಹವಿಲ್ಲ.

ಬೇಸಾಯದ ಬದುಕಿನ ನೂರೆಂಟು ಪಲಕುಗಳನ್ನು ಚಿತ್ರಿಸುವ ಬೇಕಾದಷ್ಟು ಕವಿತೆಗಳನ್ನು ಶರೀಫ ಬರೆದಿದ್ದಾನೆ. ಜಾನಪದದ ಬೇರುಗಳಿಂದ ಹೊಮ್ಮಿದ ಅವನ ಕಾವ್ಯ ಹಳ್ಳಿಗಳ ಬೇಸಾಯದ ಬದುಕನ್ನು, ಅನುಭಾವಿಗಳ ಸಮತೋಲವನ್ನು ರೂಢಿಸಿಕೊಂಡು ಬೆಳೆಯಿತು. ನಗರೀಕರಣ, ಕೈಗಾರಿಕೀಕರಣ, ವಸಾಹತುಶಾಹಿಯ ಆಕ್ರಮಣ ಹಾಗು ವ್ಯಾಪಾರೀಕರಣವನ್ನು ನೇರವಾಗಿ ಪ್ರತಿಭಟಿಸಿತು. ಇಂಡಸ್ಟ್ರಿಯಲ್ ಇಂಡಿಯಾದ ಕಲ್ಪನೆಯನ್ನು ತಿರಸ್ಕರಿಸಿ, ಬೇಸಾಯದ, ಕುಶಲ ಕಸುಬುಗಳ ಗ್ರಾಮೀಣ ಭಾರತದ ಕನಸನ್ನು ಬಿತ್ತಿದ ಮಹಾತ್ಮಗಾಂಧಿಯ ಸ್ವದೇಶಿ ಹೋರಾಟವೂ ಶರೀಫನಂಥ ಕವಿಗಳ ಕಾಣ್ಕೆಯ ಮುಂದುವರಿಕೆ ಎನ್ನಬಹುದು.

ವಸಾಹತುಶಾಹಿಯು ದೇಶೀಯ ಸಮಾಜದಲ್ಲಿ ವಿಭಜನೆ ಉಂಟುಮಾಡಿದ ಹೊತ್ತಿನಲ್ಲೆ, ಸಂಘಟನೆಯ ಶಕ್ತಿಯಾಗಿ ಮೂಡಿಬಂದ ಸೂಫಿ ಅನುಭಾವಿ ಶಿಶುನಾಳ ಶರೀಫ ಮಾನವ ಸಮಾನತೆ, ಧಾರ್ಮಿಕ ಸಾಮರಸ್ಯ, ಜನಾಂಗೀಯ ಸಮನ್ವಯ, ಬಹುರೂಪಿ ಸಂಸ್ಕೃತಿಯ ಸೌಹಾರ್ದಯುತ ಅಸ್ತಿತ್ವಗಳಂಥ ಉದಾತ್ತ ಆದರ್ಶಗಳನ್ನು ಎತ್ತಿ ಹಿಡಿದಿದ್ದಾನೆ. ಶೈವ, ವೈಷ್ಣವ ಮತಗಳ ಕರ್ಮಠತೆಯನ್ನು ತಿರಸ್ಕರಿಸಿದ ಅನುಭಾವಿಗಳಂತೆ, ಇಸ್ಲಾಮಿನ ಕರ್ಮಠತೆಯನ್ನು ತಿರಸ್ಕರಿಸಿದ ಸೂಫಿಗಳಂತೆ ಶಿಶುನಾಳ ಶರೀಫ ಅಪ್ಪಟ ಮಾನವತಾವಾದಿಯಾಗಿದ್ದಾನೆ, ಲೋಕಪ್ರೇಮಿಯಾಗಿದ್ದಾನೆ. ಅವನ ಕಾವ್ಯವನ್ನು ನಮ್ಮ ವಿಮರ್ಶೆಯ ಯಾವುದೇ ಮಾನದಂಡಗಳಿಂದ ಮೌಲ್ಯಮಾಪನ ಮಾಡಿದರೂ ಅವನೊಬ್ಬ ಶ್ರೇಷ್ಠಕವಿಯಾಗಿ ನಿಲ್ಲುತ್ತಾನೆ.

ಕನ್ನಡ ಕಾವ್ಯಲೋಕದ ಮುಖ್ಯಪ್ರವಾಹದ ಆಚೆ ಜಾನಪದ ಸಂತರಂತೆ ನಿಂತು ಬ್ರಿಟಿಶ್ ವಸಾಹತುಶಾಹಿಯನ್ನು, ಕೈಗಾರಿಕೀಕರಣವನ್ನು ಎದುರಿಸಿದ ಕಡಕೋಳ ಮಡಿವಾಳಪ್ಪ, ಕೈವಾರದ ನಾರಾಯಣ ತಾತಯ್ಯ, ಶಿಶುನಾಳ ಶರೀಫರಂಥ ಬಹಳಷ್ಟು ಅನುಭಾವಿ ಕವಿಗಳನ್ನು ನಮ್ಮ ಹೇಳು-ಕೇಳು ಸಾಂಸ್ಕೃತಿಕ ಪರಂಪರೆಯಲ್ಲಿ ಹುಡುಕಿ ತೆಗೆಯಬಹುದಾಗಿದೆ. ಅವರೆಲ್ಲರ ಪ್ರತಿನಿಧಿಯಾಗಿ ಶಿಶುನಾಳ ಶರೀಫನನ್ನು ಇಲ್ಲಿ ನೋಡಲಾಗಿದೆ. ಅವರ ತಲೆಮಾರಿನ ನಂತರ ಮುಖ್ಯಪ್ರವಾಹದಲ್ಲೆ ಮೂಡಿಬಂದ ಇಬ್ಬರು ಅನುಭಾವಿ ಕವಿಗಳೆಂದರೆ ಮಧುರಚೆನ್ನ ಮತ್ತು ಬೇಂದ್ರೆ.

ಮಧುರಚೆನ್ನರ 'ನನ್ನ ನಲ್ಲ' ಕವಿತಾಸಂಕಲನ ಪ್ರಕಟವಾದದ್ದು ೧೯೩೩ರಲ್ಲಿ. ಆ ಹೊತ್ತಿಗೆ ಗಿರಣಿಗಳಿಗೆ ನಮ್ಮ ನಾಡಿನ ಸಂಸ್ಕೃತಿ ಹೊಂದಿಕೊಂಡಿತ್ತು. ಕೈಗಾರಿಕೀಕರಣ ಬದುಕಿನ ಒಂದು ಮುಖ್ಯ ಅಂಗವಾಗಿ ಸ್ವೀಕೃತವಾಗತೊಡಗಿತ್ತು. ಮಧುರಚೆನ್ನರು ಶರೀಫ, ಬೇಂದ್ರೆಯವರಿಗಿಂತ ಹೆಚ್ಚು ಅಂತಮುರ್ಖಿಗಳಾಗಿದ್ದರು. ಭಾವಪ್ರಧಾನವಾದ ಅನುಭಾವಕ್ಕಿಂತ ಬುದ್ಧಿಪ್ರಧಾನವಾದ ಅಧ್ಯಾತ್ಮವೇ ಅವರನ್ನು ಹೆಚ್ಚಾಗಿ ಸೆಳೆಯುತ್ತಿತ್ತು. ಈ ಕಾರಣಗಳಿಂದಾಗಿ ಅವರು ವಸಾಹತುಶಾಹಿ ಮತ್ತು ಕೈಗಾರಿಕೀಕರಣವನ್ನು ನೇರವಾಗಿ ಎದುರಿಸಲಿಲ್ಲ. ನಾಡಿನ ನೋವು ನಾಡವರ ಪಾಡು ಅವರ ಆತ್ಮಗೀತೆಗಳಲ್ಲಿ ಸಾಂಕೇತಿಕವಾಗಿ ಇಣುಕಿರುವುದನ್ನು ಗುರ್ತಿಸಬಹುದು.

"ನೆಲವಂತ ನಿಂತೀವ / ನೀರಾಗಿ ನುಂಗೀತ / ಬೆಣ್ಣಲ್ಲ ಜಾಣೆ ಬಿಳಿ ಸುಣ್ಣ / ತಂಗ್ಯಮ್ಮಾ / ಪರಿಮಳವಲ್ಲ ವಿಷಗಾಳಿ" ಎಂಬ 'ಸುಖ-ದುಃಖ' ಕವಿತೆಯ ಸಾಲುಗಳು ಬ್ರಿಟಿಷರ ಆಳ್ವಿಕೆ ಕುರಿತ ಭ್ರಮನಿರಸನವನ್ನೂ, ಆಧ್ಯಾತ್ಮಿಕ ಸಾಧನೆಯಲ್ಲಿ ಎದುರಾಗುವ ತೊಡಕುಗಳನ್ನೂ ಒಟ್ಟೊಟ್ಟಿಗೇ ಸಂಕೇತಿಸುತ್ತವೆ. ಆದರೆ ಮಧುರಚೆನ್ನರು ಎಲ್ಲೂ ಹತಾಶೆಗೆ ಒಳಗಾಗುವುದಿಲ್ಲ. ಹಾಗೆಂದು ಹೋರಾಟಕ್ಕೂ ಇಳಿಯುವವರಲ್ಲ. ಅವರದೇನಿದ್ದರೂ ಪ್ರಾರ್ಥನೆ, ತಪಸ್ಸುಗಳ ಹಾದಿ. ಅವರ ಗುರುಗಳಾದ ಅರವಿಂದರು ಹಿಟ್ಲರನ ಪತನಕ್ಕಾಗಿ, ಜಗತ್ತಿನ ಕಲ್ಯಾಣಕ್ಕಾಗಿ ಧ್ಯಾನ ಮಾಡುತ್ತಿದ್ದರಂತಲ್ಲ ಆ ಬಗೆಯ ಅಪ್ರೋಚು ಮಧುರಚೆನ್ನರದು. 'ದೇವತಾ ಪೃಥಿವಿ' ಯ ಈ ಸಾಲುಗಳನ್ನ ಕೇಳಿ: "ಹಸುವೀಗಿ ಮೊಲೆಯುಂಡೆ ಕಸಿವೀಸಿಗೇನುಳ್ಳೆ / ಹಾಲೊಲ್ಲೆ ಸಾಕು ಬಿಗಿದಪ್ಪ / ಏಳಮ್ಮಾ ಮಲಗಿರುವ ತಾಯಿ ಪೃಥಿವಿ". ಇಲ್ಲಿ ಮಾತೃಭೂಮಿಯನ್ನು ಎಚ್ಚರಿಸುವ ಆತ್ಮೀಯ ಒತ್ತಾಯವಿದೆ. ಮಕ್ಕಳಿಗೆ ಹೊಟ್ಟೆಗೆ ಹಿಟ್ಟೊಂದೆ ಸಾಲದು; ಹೃದಯಕ್ಕೆ ತಾಯ ಪ್ರೀತಿಯೂ ಬೇಕು ಎಂಬ ಸೂಚನೆ ಇದೆ. ಅದು ದೊರೆಯಬೇಕೆಂದರೆ ತಾಯಿ ನಿದ್ದೆಯ ಬಂಧನದಿಂದ ಎಚ್ಚರದ ಸ್ವಾತಂತ್ರ್ಯಕ್ಕೆ ಬರಬೇಕು. ಹೀಗೆ ಬಂಧನ, ಅಜ್ಞಾನ, ಅಧೀರತೆಯ ನಿದ್ದೆಯಲ್ಲಿರುವ ಸಂತಾನ ಸಂಕುಲವನ್ನು ಎಬ್ಬಿಸುವ ಕರೆಯಾಗಿದೆ ಈ ಕವಿತೆ.

ಅನುಭಾವ ಅಧ್ಯಾತ್ಮಗಳ ಬೆನ್ನುಹತ್ತುವವರಿಗೆ ಆತ್ಮಕಲ್ಯಾಣ ಲೋಕಕಲ್ಯಾಣಗಳು ಬೇರೆ ಬೇರೆಯಾಗಿ ಕಾಣುವುದಿಲ್ಲ ಎಂದು ಈ ಮೊದಲೇ ಹೇಳಲಾಗಿದೆಯಷ್ಟೆ. ಮಧುರಚೆನ್ನರು ಲೋಕಕಲ್ಯಾಣದ ಬಗ್ಗೆ ಆಶಾವಾದಿಗಳಾಗಿದ್ದಾರೆ. ಅದರ ಸಾಧ್ಯತೆಯನ್ನು ತಮ್ಮ ಆಧ್ಯಾತ್ಮಿಕ ಸಾಧನೆಯಲ್ಲಿ ಕಂಡ ಸೂಚನೆಯಿಂದ ಸೂಚಿಸಿದ್ದಾರೆ 'ನನ್ನನಲ್ಲ' ಕವಿತೆಯಲ್ಲಿ: "ತುಂಬಿ ಬಂದಿತು ಕಾಂತಿ, ತುಂಬಿ ಬಂದಿತು ಶಾಂತಿ / ತುಂಬಿ ದ್ಯಾವಾಪೃಥಿವಿ ಜೀವ ತುಂಬಿ". ಆತ್ಮಲೋಕದ ಈ ಸಿದ್ಧಿ ಬಾಹ್ಯಲೋಕದಲ್ಲೂ ಶಾಂತಿ ಕಾಂತಿಗಳನ್ನು ಮೂಡಿಸುತ್ತದೆಂಬ ನಂಬಿಕೆಯಿದೆ ಮಧುರಚೆನ್ನರಲ್ಲಿ. ಅಂತರಂಗದ ಶಕ್ತಿಯೆ ಬಹಿರಂಗದ ವ್ಯಾಪಾರವನ್ನು ಹದ್‌ಬಸ್ತಿಗೆ ತರುತ್ತದೆಂಬ ವಿಶ್ವಾಸ ಅವರದ್ದು. ಆದ್ದರಿಂದ ಅವರಿಗೆ "ಭಕ್ತಿ ಪ್ರೇಮವೆ ಕೊನೆ" ('ಪ್ರೇಮ'); "ಸರ್ವಭೂತಗಳಲ್ಲಿ ಸಮಬುದ್ಧಿ" ಇರಿಸಿಕೊಳ್ಳುವುದೆ ನಿಜವಾದ ಸಾಧನೆ('ಮಧುರ ಗೀತ').

ಬೇಂದ್ರೆಯವರ ಕಾವ್ಯ ಭಾರಿ ಬೀಸು ಉಳ್ಳದ್ದು. ನಿಸರ್ಗಕಾವ್ಯ, ಪ್ರೇಮಕಾವ್ಯ, ಆತ್ಮವಿಕಾಸದ ಕಾವ್ಯ, ಲೋಕದ ಕಾಳಜಿಯ ಕಾವ್ಯ ಹೀಗೆ ಯಾವುದೇ ಥೀಮು ಇಟ್ಟುಕೊಂಡು ಅವರ ಕಾವ್ಯಸಮುದ್ರಕ್ಕೆ ಧುಮುಕಿದರೂ ಸಾಕಷ್ಟು ಸಂಖ್ಯೆಯ ಸಫಲ, ಸಾರ್ಥಕ, ಮನಮಿಡಿಯುವ ಕವಿತೆಯ ಅಲೆಗಳು ನಮ್ಮನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುತ್ತವೆ. ಇಂಥ ವಸ್ತುವೆನ್ನದೆ ಎಲ್ಲದಕ್ಕು ಲಯದ ಗಾರುಡಿಸ್ಪರ್ಶ ಮತ್ತು ಅನುಭಾವದ ಜೀವಂತಿಕೆ ನೀಡುವ ಶ್ರೇಷ್ಠ ಕಾವ್ಯಕಾಯಕ ಅವರದ್ದು.

ಶಿಶುನಾಳ ಶರೀಫ ಕಟ್ಟಿಕೊಟ್ಟ ಕೈಗಾರಿಕೀಕರಣದ ರೂಪಕ 'ಗಿರಣಿ' ಬೇಂದ್ರೆಯವರಲ್ಲಿ ಮತ್ತೆ ಕಾಣಿಸಿಕೊಳ್ಳುತ್ತದೆ. ಆದರೆ ಅವರಲ್ಲಿ ಅದು ಯೌಗಿಕ ಅರ್ಥಕ್ಕೆ ಬದಲಾಗಿ ಪರಿಸರನಾಶ, ಬಂಡವಾಳ ಶಾಹಿ ದೌರ್ಜನ್ಯ, ಮೌಲ್ಯಪತನ ಮುಂತಾದ ನೇತ್ಯಾತ್ಮಕ ಅರ್ಥಗಳನ್ನು ಹೊತ್ತುಕೊಂಡು ನಿಂತಿದೆ. 'ಸಿದ್ಧರಾಮರ ವಚನವನ್ನು ನೆನೆದು' ಎಂಬ ಕವಿತೆಯಲ್ಲಿ ಬೇಂದ್ರೆಯವರು ವಸಾಹತುಶಾಹಿ ಯುಗದಿಂದಾಗಿ ಸೊನ್ನಲಿಗೆಗೆ ಬಂದೊದಗಿರುವ ಸಾಂಸ್ಕೃತಿಕ ದಾರಿದ್ರ್ಯವನ್ನು ಕಂಡು ದುಃಖಿಸುತ್ತಾರೆ. "ಗಿರಣಿಗಳ ಧೂಮ ಧೂಸರಿತ ಬಾಂದಳದಲ್ಲಿ / ಎಂದು ಮೆರೆವುದೊ ನಿಮ್ಮ ತ್ಯಾಗಧ್ವಜವು" ಎಂದು ಹಳಹಳಿಸುತ್ತಾರೆ. ಜನಮೇಳವನ್ನು ಉದ್ದೇಶಿಸಿ "ಎಲ್ಲರೊಳಗಿಹನೊಬ್ಬ ಅವನು ಕಟ್ಟಿದ ಕಬ್ಬ / ಕರೆಯಲಿದೆ ಹಾಲನ್ನು

ಕುಡಿಯಿರಾಗ" ಎಂಬ ಭರವಸೆ ನೀಡುತ್ತಾರೆ. ವಚನಕಾರ ಶಿವಶರಣರು ಕರೆದ ಅನುಭಾವದ ಹಾಲಿನ ಕುಂಭ ಶಿವಯೋಗಿ ಶಿಶುನಾಳ ಶರೀಫನ ಕೈಗೆ ಬಂದು ಈಗ ಬೇಂದ್ರೆಯವರ ಪಾಲಿಗೆ ಬಂದಿದೆ. ವಸಾಹತುಶಾಹಿಯ ಪ್ರಾಡ್ವಾಳಿಕೆಗೂ ಕೊನೆಯುಂಟು ಎಂಬುದನ್ನೂ ಬೇಂದ್ರೆಯವರು ಇದೇ ಕವಿತೆಯಲ್ಲಿ ಸೂಚಿಸಿರುವುದು ಆಶಾವಾದಿ ಚಿಂತನೆಯಾಗಿದೆ: "ಪಡುವಲದ ಕೆನ್ನೀರ ತಳಿಯಲ್ಲಿ ಮುಳುಗಿದನು / ಕೆಂಡಕಾರುತ್ತ ಪ್ರೋಚ್ಚಂಡ ರವಿಯು." 'ಪ್ರೋಚ್ಚಂಡ' ಪದದ ಉಗ್ರತೆ ಮತ್ತು ಕರ್ಕಶತೆ ಬ್ರಿಟಿಶ್ ಆಳ್ವಿಕೆಯ ದರ್ಪದ ಸೂಚಕವಾಗಿದೆ. ಪಶ್ಚಿಮದಲ್ಲಿ ಸೂರ್ಯ ಮುಳುಗುವುದು ಪೂರ್ವದಲ್ಲಿ ಮತ್ತೆ ಹುಟ್ಟಲೆಂದೆ ಎಂಬ ಧ್ವನಿಯಿಂದಾಗಿ, ಸ್ವದೇಶಿಸಂಸ್ಕೃತಿಯ ಅರ್ಥಪೂರ್ಣ ಮರುಚಿಂತನೆಗೆ ಬೆರಳು ಮಾಡುವಂತಿದೆ ಈ ಕವಿತೆ.

ರಾಜಕೀಯವಾಗಿ ವಸಾಹತುಶಾಹಿಯಿಂದ ಬಿಡುಗಡೆ ಹೊಂದಿದ್ದರೂ ಸಾಂಸ್ಕೃತಿಕವಾಗಿ ನಾವಿನ್ನೂ ವಸಾಹತುಶಾಹಿಯ ನೆರಳಿನಲ್ಲೇ ಇದ್ದೇವೆ ಎಂಬುದನ್ನು 'ಜೋಗಿ' ಕವಿತೆ ಸಾಂಕೇತಿಕವಾಗಿ ಸೂಚಿಸುತ್ತದೆ. "ಕೂಗೇ ಕೂಗತದ ಕೂಗೇ ಕೂಗತದ ಗಿರಣಿ ಕರೆಯೋ ಹಾಂಗ" ಎಂಬ ಸಾಲು ನಮ್ಮ ಸ್ವದೇಶಿ ಕೋಗಿಲೆ ವಿದೇಶಿ ಗಿರಣಿಯ ಅರ್ಥಹೀನ ಕೂಗನ್ನು ಅನುಸರಿಸುತ್ತಿದೆ ಎಂಬ ಆತಂಕವಿದೆ. ಈ ಅನುಕರಣೆಯಲ್ಲಿ ಏಕತಾನತೆ, ಕರ್ಕಶತೆ, ಆತ್ಮಜ್ಞಾನದ ಅಭಾವ ಇರುವುದೆ ಕವಿಯ ಆತಂಕಕ್ಕೆ ಕಾರಣವಾಗಿದೆ. ಇಂಥ ಕೂಗಿನಿಂದಾಗಿ ಇಡೀ ವಾತಾವರಣಕ್ಕೇ ಒಂದು ನಿಗೂಢ ಭಯಾನಕತೆ ಆವರಿಸಿಕೊಂಡಿರುವುದನ್ನು ಕವಿತೆ ಕಲಾತ್ಮಕವಾಗಿ ಕಟ್ಟಿಕೊಟ್ಟಿದೆ. ಆ ಕೂಗಿಗೆ ಮತ್ತೆ ತನ್ನರಿವು ಮರಳಿ, ತನ್ನತನ ದಕ್ಕಿ ಅದು ನಿಜವಾದ ಸ್ವದೇಶಿ ಸುಗ್ಗಿಯ ಸೊಲ್ಲು ಆಗಲಿದೆ ಎಂಬ ಸೂಚನೆಯು ಕವಿತೆಯಲ್ಲಿ ಇದ್ದು, ಬೇಂದ್ರೆಯವರು ಸಾಂಸ್ಕೃತಿಕ ಸಮಸ್ಯೆಯೊಂದನ್ನು ಎದುರಿಸುವಲ್ಲಿ ತೋರಿಸುವ ವಿವೇಕವನ್ನು ಸೂಚಿಸುತ್ತದೆ.

ಬೇಂದ್ರೆಯವರು ನೇರವಾದ ರಾಜಕೀಯ ಕವಿತೆಗಳನ್ನು ಬರೆದಿದ್ದಾರೆ. ೧೯೩೦ರಲ್ಲಿ ಪ್ರಕಟವಾದ 'ನರಬಲಿ' ಕವನ ಅವರನ್ನು ಜೇಲುವಾಸಕ್ಕೆ, ಗೃಹಬಂಧನಕ್ಕೆ ಗುರಿಮಾಡಿತು. "ಕಾಳಗವೆಂಬುದು ನೆತ್ತರಹೂವು/ ಬಿಡುಗಡೆಯೆಂಬುದು ಸಾವಿನ ಹಣ್ಣು" ಮತ್ತು "ಇದುವೆ ಕಾಳಿಯ ಪೂಜೆಯು ಶುದ್ಧ! / ಇದಕ್ಕೆ ಎಂಬರು ಹುಂಬರು ಯುದ್ಧ" ಎಂಬ ಸಾಲುಗಳು ಬ್ರಿಟಿಷ್ ಸರ್ಕಾರವನ್ನು ಸಿಟ್ಟಿಗೆಬ್ಬಿಸಿದವು. ಕ್ರೈಸ್ತಧರ್ಮದ ಪ್ರಸಾರದ ಬಗೆಗೂ ಅಸಹನೆಯಿದೆ ಈ ಕವಿತೆಯಲ್ಲಿ. ಈ ರೀತಿಯ ನೇರ ಖಂಡನೆಯ ಕವಿತೆಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಬರೆದಿದ್ದಾರೆ ಬೇಂದ್ರೆಯವರು. "ಕಾಳು ಇದೆ ಕೂಳು ಇಲ್ಲ, ಹಣದ ಹುಚ್ಚು ಹಿಡಿದಿದೆ" ಎನ್ನುವ 'ಅನ್ನಯಜ್ಞ'; "ಪ್ರಾಣದೇವ ನಿತ್ರಾಣ"ನಾಗಿರುವುದನ್ನು ಚಿತ್ರಿಸುವ 'ಅನ್ನಾವತಾರ'; "ಇದ್ದವರಿಗೆ ಇಹುದು ಎಲ್ಲ / ಇಲ್ಲದವರಿಗಿಲ್ಲೆ ಇಲ್ಲ" ಎನ್ನುವ 'ಹೆಣದ ಹಿಂದೆ'; "ಧರ್ಮಕ್ಕೆ 'ಧರ್ಮ' ಎನ್ನಬೇಡಾ / ಕರ್ಮವು ಇದು ನೋಡಾ" ಎಂದು ಸಾರುವ 'ಮನುವಿನ ಮಕ್ಕಳು'; "ಆದರೂ ಬರದೊ/ ಯಮನಿಗೆ ಕರುಣ/ ಉಸಿರಿಗೆ ಒಮ್ಮೆ/ ಜನನಾ ಮರಣಾ" ಎಂದು ಆರ್ತವಾಗುವ 'ಭೂಮಿತಾಯ ಚೊಚ್ಚಿಲು ಮಗ'; "ಅನ್ನವೆಲ್ಲವೂ ಆಯಿತು ಚಿನ್ನ / ನಾನೆ ನನ್ನನು ತಿನ್ನುವ ಅನ್ನಾ" ಎಂದು ಬೆಚ್ಚಿಬೀಳಿಸುವ 'ಕೆಲಸವಿಲ್ಲದವರ ಹಾಡು'; "ಗಂಡುಸಾದರೆ ನಿನ್ನ ಬಲಿಕೊಡುವಿಯೇನು?" ಎಂದು ಗುಡುಗುವ 'ಕನಸಿನೊಳಗೊಂದು ಕಣಸು'- ಇವೆಲ್ಲ ಪ್ರತಿಭಟನೆಯ ಕವಿತೆಗಳೇ. ಆದರೆ ವರ್ತಮಾನದ ಅನುಭವವನ್ನು ಪ್ರತಿಭಟಿಸುವುದಷ್ಟಕ್ಕೇ ನಿಲ್ಲದ ಬೇಂದ್ರೆಯವರ ಕಾವ್ಯಪ್ರತಿಭೆ ಭವಿಷ್ಯದ ಭರವಸೆಯನ್ನು ಬಿತ್ತುತ್ತದೆ. ಶ್ರಾವಣವನ್ನು "ಸ್ವತಂತ್ರ ವಂದಿಮಾಗಧ" ಎನ್ನುವಲ್ಲಿನ ಇಂಗಿತ ಈ ಬಗೆಯದು. "ಕತ್ತಲೆಯ ತುಟ್ಟತುದಿ ಹತ್ತಿರವೆ ಬೆಳಕು ಬದಿ" ಎಂದು

ಔಚಿತ್ಯಪೂರ್ಣವಾಗಿ ಭವಿಷ್ಯಸೂಚಕವಾಗಿ ನುಡಿಯುತ್ತಾರೆ. "ನೆಲದ ಎದೆ ಮೇಲೆ ತೆನೆಯ ಧ್ವಜವು ನಿಲ್ಲಲಿ" ಎಂದು ನೇರವಾಗಿ ಹಸಿರುಕ್ರಾಂತಿಗೆ ಕರೆನೀಡಿ ಪರಿಸರದ ಅರಿವನ್ನು ಕಡೆಯುತ್ತಾರೆ. ವೈಯಕ್ತಿಕ, ಸಾಂಸಾರಿಕ ಅನುಭವಗಳಲ್ಲಷ್ಟೆ ಅಲ್ಲದೆ ರಾಜಕೀಯ ಅನುಭವದಲ್ಲು ಬೆಂದು ಬೇಂದ್ರೆಯಾಗಿರುವ ಕವಿ ಚೇತನದ ಎದೆಗಾರಿಕೆ ಮತ್ತು ಹಂಬಲಗಳು ನಮ್ಮನ್ನು ತಟ್ಟುತ್ತವೆ. ಒಬ್ಬ ಅನುಭಾವಿ ಹೇಗೆ ಕ್ಷುಲ್ಲಕವೆನಿಸ ಬಹುದಾದ ಲೌಕಿಕಕ್ಕೆ, ಅನಾದಿ ಅನಂತವೆನ್ನಬಹುದಾದ ದೇಶಾತೀತ - ಕಾಲಾತೀತವಾದ ಅಲೌಕಿಕಕ್ಕೆ ಒಟ್ಟೊಟಿಗೆ ತುಡಿಯುತ್ತಾನೆ ಎಂಬುದನ್ನು ಅಧ್ಯಯನ ಮಾಡಲು ಬೇಂದ್ರೆಯವರ ಕಾವ್ಯ ಒಳ್ಳೆಯ ನೆಲೆಗಟ್ಟನ್ನು ಒದಗಿಸುತ್ತದೆ.

ಮಧುರಚೆನ್ನರು ತಮ್ಮಾತ್ಮದಲ್ಲಿ ಲೋಕಾತ್ಮವನ್ನು ಕಂಡರೆ ಬೇಂದ್ರೆಯವರು ಲೋಕಾತ್ಮಕ್ಕೇ ತಮ್ಮನ್ನು ಕೊಟ್ಟುಕೊಂಡುಬಿಡುತ್ತಾರೆ. ಹೀಗಾಗಿ ಕೈಗಾರಿಕೀಕರಣ, ಬ್ರಿಟಿಶ್ ವಸಾಹತುಶಾಹಿ ದಬ್ಬಾಳಿಕೆ, ಅನ್ಯಾಯಗಳ ಬಗ್ಗೆ ಬರೆಯುವಾಗ ಬೇಂದ್ರೆಯವರು ಅನುಭಾವವನ್ನು ನೆಪಮಾತ್ರಕ್ಕೆ ಉಳಿಸಿಕೊಂಡು ಒಬ್ಬ ಮಹಾ ಬಂಡಾಯಗಾರನಂತೆಯೆ ಬರೆಯುತ್ತಾರೆ. ಅನುಭಾವದ ಬೆಡಗಿನ ಭಾಷೆ ಮತ್ತು ಬಂಡಾಯ ಮನೋಭಾವದ ಸಾಮಾಜಿಕ ಕಾಳಜಿ ಎರಡೂ ಹದವಾಗಿ ಬೆರೆತಾಗ 'ಕುರುಡು ಕಾಂಚಾಣ' ದಂಥ ನಿಗಿನಿಗಿ ಕವಿತೆಗಳು ಹುಟ್ಟಿಬರುತ್ತವೆ. ಕಲ್ಕತ್ತೆಯ ಕಾಳಿಮಾತೆ, ಸವದತ್ತಿಯ ಎಲ್ಲಮ್ಮರನ್ನು ಹೋಲುವಂಥ ಕುರುಡು ಕಾಂಚಾಣದ ಸಾಕಾರ ಅವತಾರ ಭೀತಿ ನೆಡುತ್ತದೆ. ಮನುಷ್ಯಾಕೃತಿಗೆ ಅದನ್ನು ಹೋಲಿಸಿರುವುದು ನಿಜವಾದರೂ ಅವನು, ಅವಳು ಎನ್ನದೆ ಅದನ್ನೊಂದು ವಿಕಾರ ಮೃಗದಂತೆ ಟ್ರೀಟ್ ಮಾಡಿರುವುದನ್ನು ಮರೆಯಬಾರದು. ಅದರ ಕಾಲಿನಲ್ಲಿ "ಬಾಣಂತಿ ಎಲುಬ ಸಾ / ಬಾಣದ ಬಿಳುಪಿನಾ / ಕಾಣದ ಕಿರುಗೆಜ್ಜ" ಇದೆ. ಅದರ ಕೊರಳಲ್ಲಿ "ಸಣ್ಣ ಕಂದಮ್ಮಗಳ / ಕಣ್ಣೀನ ಕವಡೀಯ / ತಣ್ಣನ್ನ ಜೋಮಾಲೆ" ಇದೆ. ತಾಯಿ- ಕೂಸಿನ ಕರುಣಾರ್ದ್ರ ಸಂಬಂಧ ಇಲ್ಲಿ ಕರುಳು ಕತ್ತರಿಸುವಷ್ಟು ಕ್ರೂರ ಚಿತ್ರವಾಗಿ ಪರಿಣಮಿಸಿದೆ. ಕೂಲಿ ಕುಂಬಳಿಯವರ ಮೈಘೂಳಿ ಭಂಡಾರವಾಗಿರುವ, ಬಡವರ ಒಡಲಿನ ಹಸಿವಿನ ಬೆಂಕಿಯ ಪಂಜನ್ನು ಕೈಯಲ್ಲಿ ಹಿಡಿದಿರುವ ಕುರುಡು ಕಾಂಚಾಣದ ಸ್ಮಶಾನನೃತ್ಯ ಪ್ರಳಯಸದೃಶವಾಗಿದೆ. ಆದರೆ ಕಡೆಯಲ್ಲಿನ ವಿಕಾರವ್ಯಂಗ್ಯ ಓದುಗರನ್ನು ಹತಾಶೆಯಿಂದ ಮತ್ತೆ ಆಶಾವಾದಕ್ಕೆ ದಾಟಿಸುತ್ತದೆ. ಹಣದ ಕಲ್ಪನೆಯೆ ಇರದಿದ್ದ ಕಾಡುಕುಲಗಳ ಪ್ರಾಚೀನ ಸಮತಾವಾದವೇ, ಹಣದ ಘೋರ ಆಳ್ವಿಕೆಯ ಯುಗದ ನಂತರ ಹಣವನ್ನು "ಅಂಗಾತ ಬಿತ್ತೊ ಹೆಗಲಲಿ ಎತ್ತೊ" ಎಂಬ ಪರಿಸ್ಥಿತಿ ಒದಗಿ ಮತ್ತೆ ಮರುಸ್ಥಾಪನೆಯಾಗಲಿದೆ ಎಂಬ ಸೂಚನೆಯೊಂದಿಗೆ ಕವಿತೆ ಮುಗಿಯುತ್ತದೆ. ಇಷ್ಟು ಒಳ್ಳೆಯ ಬಂಡಾಯ ಕವಿತೆಯನ್ನು ನಮ್ಮ ಯಾವ ಬಂಡಾಯ ಕವಿಗಳೂ ಇದುವರೆಗೆ ಬರೆದಿಲ್ಲ. ಇದರ ಸಮಾಜವಾದಿ ಆಶಯ ಅಳವಾದದ್ದು.

ಬೇಂದ್ರೆಯವರ ಸಮಕಾಲೀನರೂ, ಮಹಾಕಾವ್ಯದ ಕರ್ತೃವೂ, ರಸಋಷಿಯೂ ಆದ ಕುವೆಂಪು ಅವರ ಕಾವ್ಯ ಪ್ರಕೃತಿಯ ಆರಾಧನೆಯ ಮೂಲಕ ಆಧ್ಯಾತ್ಮಿಕ ಶಿಖರಕ್ಕೇರುತ್ತದೆ. ಅವರು ಮೂಲಭೂತವಾಗಿ ಮಾರ್ಗಕವಿ. ಅನುಭಾವ ಕಾವ್ಯ ಜಾನಪದ ಮೂಲದ್ದು, ದೇಸಿ ಶೈಲಿಯಲ್ಲಿ ಮೈತಳೆಯುವಂಥಾದ್ದು. ನಂತರ ಬಂದ ನವ್ಯರಲ್ಲಿ ಅನುಭಾವಿ ಕವಿಗಳೇ ಇಲ್ಲ. ತಮ್ಮ ಲೋಕದ ಕಾಳಜಿಯಿಂದಾಗಿ ಅಡಿಗರು, ತಮ್ಮ ಗಾರುಡಿಗ ಭಾಷೆಯಿಂದಾಗಿ ಕಂಬಾರರು ಅನುಭಾವಿ ಕವಿಗಳಿಗೆ ಕೊಂಚ ಹತ್ತಿರವಿದ್ದಾರೆ. ಆದರೆ ಅವರಿಬ್ಬರೂ ಶುದ್ಧ ನವ್ಯರ ತಾತ್ವಿಕತೆಯನ್ನು ಸ್ವೀಕರಿಸಿರುವ ಕವಿಗಳು. ನವ್ಯರ ತಾತ್ವಿಕತೆ, ಬುದ್ಧಿಜನ್ಯವಾದ ತಾರ್ಕಿಕತೆ, ವೈಜ್ಞಾನಿಕ ಚಿಂತನೆ ಹಾಗು ಪಶ್ಚಿಮದಿಂದ ಬೀಸಿಬಂದ ಹಲವಾರು ವಾದಗಳನ್ನು

ಒಪ್ಪಿಕೊಂಡಿರುವಂಥದ್ದು. ಭಾಷೆಯ ಹೊರಶಿಲ್ಪದ ಮಟ್ಟಿಗೆ ವಚನಕಾರರಿಂದ ಪ್ರಭಾವಿತರಾದ ನವ್ಯರು ದೃಷ್ಟಿಕೋನದಲ್ಲಿ, ಮೌಲ್ಯವಿವೇಚನೆಯಲ್ಲಿ ಅಪ್ಪಟ ಯುರೋಪಿಯನೈಸ್ಡ್ ಬುದ್ಧಿಜೀವಿಗಳಾಗಿದ್ದರು. ಹೀಗಾಗಿ ಅವರ ಜಾಯಮಾನಕ್ಕೆ ಅನುಭಾವ ಒಗ್ಗಲಿಲ್ಲ.

ಬೇಂದ್ರೆಯವರ ನಂತರದ ಅನುಭಾವಿ ಕವಿ ಎಂದರೆ ಎಚ್. ಎಸ್. ಶಿವಪ್ರಕಾಶ. ಜಾನಪದ ಮೂಲದ, ದೇಸಿ ಶೈಲಿಯ ಅನುಭಾವ ಕಾವ್ಯದ ಸಾರಸತ್ವವನ್ನು ಹೀರಿಕೊಂಡು ತಂದು ಅದನ್ನು ಮಾರ್ಗ ಶೈಲಿಯ, ನಗರಗಳ ಆಡುನುಡಿಯ ಅಭಿವ್ಯಕ್ತಿಗೆ ಕಸಿಮಾಡಿ ಹೊಸಬಗೆಯ ಕಾವ್ಯಶೈಲಿ ಹುಟ್ಟುಹಾಕಿದವರು ಇವರು. ಇವರು ಲೋಕಾತ್ಮಕ್ಕೆ ತುಡಿಯುವ ರೀತಿಯೆ ವಿಶಿಷ್ಟವಾದದ್ದು. ತನ್ನಾತ್ಮಲೋಕದಲ್ಲಿ ಹುತ್ತಗಟ್ಟಿ ಕೂರಲು ಒಪ್ಪದ ಈ ಕವಿ ಲೋಕಾತ್ಮವನ್ನು ಒಗ್ಗೂಡಿಸಲು, ತಾಯೀಭಾವದಿಂದ ಅದನ್ನು ಸಂಭಾಳಿಸಲು, ಸಂತಯಿಸಲು ಸದಾ ಪ್ರಯತ್ನಿಸುತ್ತಾರೆ. ಉಪಸಂಸ್ಕೃತಿಗಳ ತಳದರಿವಿನಿಂದ ಹಿಡಿದು ನಾಡಿನ, ರಾಷ್ಟ್ರದ, ಖಂಡದ, ಇಡೀ ವಿಶ್ವದ ಮನುಷ್ಯ ಸಂಸ್ಕೃತಿಯನ್ನು ಜತನ ಮಾಡುವ ಕಾಳಜಿಯುಳ್ಳ ಮಹತ್ವದ ಕವಿಗಳಲ್ಲಿ ಒಬ್ಬರಾಗಿದ್ದಾರೆ.

ಅವರ 'ಸಮಗಾರ ಭೀಮವ್ವ' ಕೈಗಾರಿಕೀಕರಣ, ವಸಾಹತುಶಾಹಿಗಳ ಕಾಲದಲ್ಲಿ ನಾಡಿಗೊದಗಿದ ಸಾಂಸ್ಕೃತಿಕ ದಿವಾಳಿತನವನ್ನು, ಸಾಂಸ್ಕೃತಿಕ ಪುನಶ್ಚೇತನಕ್ಕೆ ಯೌಗಿಕ ಅನುಭಾವಿಕ ಶಕ್ತಿಗಳ ಅಗತ್ಯವಿದೆ ಎಂಬ ಸಂಗತಿಯನ್ನು ಸೂಚಿಸುವ ಕವಿತೆ. ಶಿಶುನಾಳ ಶರೀಫ ಮತ್ತು ಬೇಂದ್ರೆಯವರ ಕಾವ್ಯದಲ್ಲಿ ಕಾಣಿಸಿಕೊಂಡಿರುವ ಗಿರಣಿಯ ರೂಪಕ ಮತ್ತೆ ಶಿವಪ್ರಕಾಶರ ಈ ಕವಿತೆಯಲ್ಲಿ ಕಾಣಿಸಿಕೊಂಡಿರುವುದು ಗಮನಾರ್ಹವಾಗಿದೆ. "ಗದಗುಡುವ ಗದಗಕ್ಕೆ" ಹಾಗು "ಗಿರಣಿಗಳು ಕಿರುಗುಡುವ ಹುಬ್ಬಳ್ಳಿ ನಗರಕ್ಕೆ" ಅಷ್ಟೆ ಅಲ್ಲ "ತಾರೆ ಮಂಡಲ ಬುಗುರಿ ಕದರಿರುವ ವ್ಯೋಮಕ್ಕೆ" ಕರುಣೆಯ ಮಳೆ ತಾರೆಂದು ನಾಗಲಿಂಗ ಯೋಗಿಯೊಡನೆ ಕವಿ ಮೊರೆಯಿಡುತ್ತಾರೆ.

ಇದಕ್ಕೂ ಮುಂದಿನ ಸಿದ್ಧಿಯನ್ನು 'ಓ ಪ್ರಾಣಶಕ್ತಿದೇವಿ' ಕವಿತೆಯಲ್ಲಿ ಕಾಣುತ್ತೇವೆ. ವಿಶ್ವಪ್ರಜ್ಞೆಯ ಅನುಭಾವಿ ಕವಿಯೊಬ್ಬನ ಆರ್ತ ಪ್ರಾರ್ಥನೆಯಂತಿರುವ ಈ ಕವಿತೆಯನ್ನು ಓದುವಾಗ, ಕೇಳುವಾಗ ಒಂದು ಬಗೆಯ ಮಂತ್ರಶಕ್ತಿಯ ಅನುಭವವಾಗುತ್ತದೆ. ಎಲೆಕ್ಟ್ರಾನಿಕ್ ಮಾಯಾಬಜಾರು, ಕಂಪ್ಯೂಟರ್ ವೈರಸ್ಸು, ಹಾರುವ ತಟ್ಟೆಗಳ ಹಾವಳಿ, ಅಂತರಿಕ್ಷ ಯುದ್ಧಗಳ ಈ ಯುಗ ಪ್ರಾಣಶಕ್ತಿಗೇ ಮುಳುವಾಗಿರುವಾಗ ಈ ಕವಿ ವಿಶ್ವಕಲ್ಯಾಣಕ್ಕಾಗಿ ತಾಂತ್ರಿಕ ಮಂಡಲ ಹಾಕಿ ಪ್ರಾಣಶಕ್ತಿದೇವಿಯನ್ನು ಆವಾಹಿಸುತ್ತಿರುವ ಮಂತ್ರದಂತೆ ಈ ಕವಿತೆ ನಮ್ಮೊಳಗೆ ಅನುರಣನಗೊಳ್ಳುತ್ತದೆ. ಅರ್ಥವಲಯವನ್ನು ದಾಟಿ ಅನುಭಾವ ವಲಯಕ್ಕೇರಿದ ಅನುಭವವಾಗುತ್ತದೆ. ಬದುಕಿನ ಎಲ್ಲ ಬಗೆಯ ಚೆಲುವು ಕಸುವುಗಳಿಗೆ ಅಧಿದೇವತೆಯಾಗಿರುವ ಪ್ರಾಣಶಕ್ತಿ ದೇವಿಗೇ ಸಮತೋಲ ತಪ್ಪಿದರೆ ಮುಂದೆ ಗತಿಯೇನು ಎಂಬ ಅನುಭಾವಿಕ ಕಳವಳದಲ್ಲಿದ್ದಾರೆ ಕವಿ. ಅವಳೆ ಎಲ್ಲರಿಗು ಮಿಗಿಲಾಗಿರುವಾಗ, ಅವಳ ಬಗ್ಗೆ ಬೇರೆಯವರಲ್ಲಿ ಮೊರೆಯಿಡುವುದು ವ್ಯರ್ಥವೆಂದು, ಅವಳಿಗೇ ಮೊರೆಯಿಡುತ್ತಿದ್ದಾರೆ. ಸಕಲ ಜೀವರಾಶಿಗಳ ಅಂತರಂಗದಲ್ಲು ಇರುವ ಪ್ರಾಣಶಕ್ತಿದೇವಿಯನ್ನು ಜಾಗೃತಗೊಳಿಸುವುದೇ ಈ ಬೆಡಗಿನ ಕವಿತೆಯ ಮೂಲ ಉದ್ದೇಶ. ಅದರಿಂದ ಮಾತ್ರ ಕೈಗಾರಿಕೀಕರಣ ಉಂಟುಮಾಡಿರುವ ನರಕ ಮತ್ತೆ ಸ್ವರ್ಗವಾಗಲು ಸಾಧ್ಯ. ಅದರಿಂದ ಮಾತ್ರ ಖಂಡ ಖಂಡಗಳ ವಸಾಹತುಶಾಹಿ ಕಹಿಚರಿತ್ರೆಗೆ ತೆರೆ ಎಳೆಯಲು ಸಾಧ್ಯ. ಅದರಿಂದ ಮಾತ್ರ ದೊಣೆನಾಯಕರ ಹಾಗು ದೊಣೆನಾಯಕ ದೇಶಗಳ ಹಮ್ಮು ತಗ್ಗಿ ವಿಶ್ವಶಾಂತಿ ನೆಲೆಸಲು ಸಾಧ್ಯ. ಮನುಕುಲಕ್ಕೆ ತನ್ನ ಮಿತಿಯ ಅರಿವಾಗಿ, ನಿಸರ್ಗ

ತನ್ನ ಸಮತೋಲನವನ್ನು ಕಾಪಾಡಿಕೊಳ್ಳಲು ಸಾಧ್ಯವಾಗಿ ಈ ಭೂಮಿ ಜೀವಂತವಾಗಿ ತಿರುಗುತ್ತಿರಲಿ ಎಂಬುದೇ ಈ ಕವಿತೆಯ ಆಶಯ. ಓದುಗರನ್ನು ಅರಸುತ್ತಿರುವ ಮಹತ್ವದ ಕವಿತೆ ಇದು.

ವಸಾಹತುಶಾಹಿ, ಕೈಗಾರಿಕೀಕರಣದ ಅನುಭವ ಹಾಗೂ ಕನ್ನಡದ ಅನುಭಾವಿ ಕವಿಗಳು ಎಂಬ ಚೌಕಟ್ಟುಳ್ಳ ಈ ಪ್ರಬಂಧದ ಒಟ್ಟು ಫಲಶ್ರುತಿ ಇಷ್ಟು: ಕನ್ನಡದ ಅನುಭಾವಿ ಕವಿಗಳು ವ್ಯಕ್ತಿವಾದಿಗಳಲ್ಲ, ಲೋಕಪ್ರೇಮಿಗಳು. ಅವರು ಕೈಗಾರೀಕೀರಣ ಮತ್ತು ವಸಾಹತುಶಾಹಿಯ ಪ್ರಭಾವಕ್ಕೆ ತಟಸ್ಥರಾಗಿರದೆ ದಿಟ್ಟವಾಗಿ ಅವುಗಳ ಆಕ್ರಮಣವನ್ನು ಎದುರಿಸಿದ್ದಾರೆ. ದಿಕ್ಕಾಪಾಲಾಗತೊಡಗಿದ ದೇಶೀಯ ಸಂಸ್ಕೃತಿಯ ಒಳಬೇರುಗಳನ್ನು ಹಿಡಿದು ಅದಕ್ಕೆ ಕಾಯಕಲ್ಪ ಮಾಡಿದ್ದಾರೆ. ಜನತೆಯ ಪರವಾಗಿ ನಿಂತಿದ್ದಾರಷ್ಟೆ ಅಲ್ಲ ಕ್ರಾಂತಿಕಾರಿಗಳಂತೆಯೆ ಕಷ್ಟನಷ್ಟಗಳಿಗೆ ತಮ್ಮನ್ನೇ ಕೊಟ್ಟುಕೊಂಡಿದ್ದಾರೆ. ಅನುಭಾವ ಮತ್ತು ಸಮಾಜವಾದವನ್ನು ಬೆಸೆಯಲು ಹೋರಾಡಿದ ವಚನಕಾರರ ಪರಂಪರೆಯ ಸತ್ವವನ್ನು ಗುರ್ತಿಸಿ ಬೆಳೆಸಿದ್ದಾರೆ. ಕೈಗಾರಿಕೀಕರಣವನ್ನೆದುರಿಸಿದ ಕನ್ನಡದ ಅನುಭಾವಿ ಕವಿಗಳ ಅಧ್ಯಯನದಿಂದ ಸ್ಪಷ್ಟವಾಗುವ ಅಂಶವೆಂದರೆ ಇದು: ಒಬ್ಬ ನಿಜವಾದ ಅನುಭಾವಿ ಸಮಾಜವಾದಿಯ ಲಕ್ಷಣಗಳನ್ನು ಹೊಂದಿರುತ್ತಾನೆ. ಒಬ್ಬ ನಿಜವಾದ ಸಮಾಜವಾದಿ ಅನುಭಾವದ ಲಕ್ಷಣಗಳನ್ನು ಹೊಂದಿರುತ್ತಾನೆ.

---

* ಡಾ। ಬದರಹಳ್ಳಿ ನರಸಿಂಹಮೂರ್ತಿ. 'ಅನಿಮಿಷ', ದುರ್ಗಿಗುಡಿ, ಹೊನ್ನಾಳಿ - ೫೭೭ ೨೧೭, ಶಿವಮೊಗ್ಗ ಜಿಲ್ಲೆ.

‘‘ಪುಸ್ತಕೋದ್ಯಮದ ಸ್ವರೂಪ’’

ವಿಚಾರ ಸಂಕಿರಣ : ೧೨-೧೩ ಮಾರ್ಚ್ ೧೯೯೩ ಬೆಂಗಳೂರು

ಕನ್ನಡ ಪುಸ್ತಕೋದ್ಯಮ ಬೆಳೆದುಬಂದ ಬಗೆ

ಆರ್. ಎಲ್. ಅನಂತರಾಮಯ್ಯ

ಕನ್ನಡ ಪುಸ್ತಕೋದ್ಯಮಕ್ಕೆ ಈಗ ೧೭೭ ವರ್ಷ. ಈ ಲೆಕ್ಕಕ್ಕೆ ಆಧಾರ ಕನ್ನಡದಲ್ಲಿ ಮೊದಲು ಒಂದು ಪುಸ್ತಕವು ಮುದ್ರಣಗೊಂಡದ್ದು ೧೮೧೭ರಲ್ಲಿ ಎನ್ನುವುದು. ಹತ್ತಿರ ಹತ್ತಿರ ಎರಡು ಶತಮಾನದ ಪುಸ್ತಕೋದ್ಯಮದ ಇತಿಹಾಸವನ್ನು ಗುರುತಿಸುವ ಕೆಲಸ ಸುಲಭವಲ್ಲ. ಹಳೆಯದನ್ನು ಜೋಪಾನವಾಗಿ ಕಾದಿರಿಸಿಕೊಳ್ಳುವ ಪ್ರವೃತ್ತಿಯೇ ನಮ್ಮಲ್ಲಿಲ್ಲವಾದ್ದರಿಂದ ಈ ಕ್ಷೇತ್ರದಲ್ಲೂ ಮಾಹಿತಿ ದೊರಕುವುದು ಕಷ್ಟ. ಹಾಗೆ ನೋಡಿದರೆ ಪುಸ್ತಕ ಕ್ಷೇತ್ರವನ್ನು ನಾವು ಉಪಚಾರಕ್ಕೆ ಉದ್ಯಮ ಎನ್ನುತ್ತಿದ್ದೇವೆ. ಇದನ್ನು ಉದ್ಯಮವೆಂದು ಸರಕಾರ ಪರಿಗಣಿಸಬೇಕೆಂಬುದೇ ನಮ್ಮ ಬಯಕೆ. ತೈಲೋದ್ಯಮವೋ ಉಕ್ಕು ಉದ್ಯಮವೋ ಇದ್ದ ಹಾಗೆ ಪುಸ್ತಕೋದ್ಯಮವೂ ಇನ್ನೂ ಸವಲತ್ತುಗಳನ್ನು ಪಡೆದುಕೊಂಡು ಗಟ್ಟಿಯಾಗಿ ನಿಲ್ಲಬೇಕಾಗಿದೆ. ಬದಲಿ ಪದದ ಅಭಾವದಿಂದ ಪುಸ್ತಕಕ್ಕೆ ಸಂಬಂಧಪಟ್ಟ ಎಲ್ಲ ಪ್ರಕ್ರಿಯೆಗಳನ್ನೂ ಒಟ್ಟಾಗಿ ನಾವೀಗ ಪುಸ್ತಕೋದ್ಯಮ ಎಂದು ಕರೆಯುತ್ತಿದ್ದೇವೆ.

ರಚನೆ, ಮುದ್ರಣ-ಪ್ರಕಟಣೆ, ಮಾರಾಟ-ಪ್ರಸಾರ ಈ ಮೂರೂ ಹಂತಗಳಲ್ಲಿ ಪುಸ್ತಕೋದ್ಯಮವನ್ನು ಪರಿಶೀಲಿಸಬೇಕು. ಸಾವಿರ ವರ್ಷಗಳಿಂದಲೂ ಕನ್ನಡದ ಕವಿಗಳು, ಲೇಖಕರು ಬರೆಯುತ್ತಿದ್ದಾರೆ. ಓಲೆ ಕಟ್ಟುಗಳ ರೂಪದಲ್ಲಿ ಸಂಗ್ರಹಿತವಾಗಿರುವ, ಮೌಲ್ಯ ತಿಳಿಯದವರ ಕೈಗೆ ಸಿಕ್ಕಿ ವಿಲವಾಗುತ್ತಿರುವ ಕೃತಿ ರಾಶಿ ಅಗಾಧವಾದದ್ದು. ಮುದ್ರಣ ಚಾಲ್ತಿಗೆ ಬರುವ ಮೊದಲು ರಾಜರು ಕೃತಿಗಳನ್ನು ಪ್ರತಿಮಾಡಿಸಿ ಹಂಚುತ್ತಿದ್ದರು. ವಿಶೇಷ ಸಂದರ್ಭಗಳಲ್ಲಿ 'ಗ್ರಂಥದಾನ' ಮಾಡುತ್ತಿದ್ದರು. ಹಾಗಾಗಿ ಗ್ರಂಥಪ್ರಸಾರ ತುಂಬ ಸೀಮಿತವಾಗಿತ್ತು, ಮಾರಾಟದ ಪ್ರಶ್ನೆಯೇ ಇರಲಿಲ್ಲವೆನ್ನೋಣ. ಮುದ್ರಣದ ರಂಗ ಪ್ರವೇಶವಾದಾಗ ಈ ಚಿತ್ರ ಬದಲಾಯಿತು.

ಭಾರತಕ್ಕೆ ಮೊದಲು ಮುದ್ರಣಯಂತ್ರ ಕಾಲಿಟ್ಟದ್ದೂ ಆಕಸ್ಮಿಕವೇ. ಹಡಗಿನಲ್ಲಿ ಬೇರೆಲ್ಲಿಗೋ ಹೋಗುತ್ತಿದ್ದ ಯಂತ್ರವು, ಗೋವೆಯ ಬಳಿ ಹಡಗು ಕೆಟ್ಟುದರಿಂದ ಅಲ್ಲೇ ನಿಂತಿತು. ಅದರ ಜೊತೆಗೆ ಬಂದಿದ್ದ ಸಿಬ್ಬಂದಿಯೂ ಅಲ್ಲೇ ಉಳಿದರು. ಪೋರ್ಚುಗೀಸ್ ಪಾದ್ರಿಗಳು ಅದನ್ನು ಬಳಸಿಕೊಂಡು ಕೊಂಕಣಿಯಲ್ಲಿ ಕ್ರೈಸ್ತಧರ್ಮದ ಪುಸ್ತಕ ಅಚ್ಚುಮಾಡಿದರು. ಕೊಂಕಣಿಗೆ ಲಿಪಿ ಬೇರೆ ಇಲ್ಲ, ಕನ್ನಡದಲ್ಲೇ ಅಚ್ಚಾಗಬೇಕಾಯಿತು. ಮಿಶಿನರಿಗಳಿಗೆ ದೇಶ ಭಾಷೆಗಳಲ್ಲಿ ಮುದ್ರಣ ಅತ್ಯಗತ್ಯವಾಗಿತ್ತು. ಬಾಯಲ್ಲಿ ಮಾಡುವ ಮತಬೋಧನೆಯು ಗಾಳಿಪಾಲಾಗದ ಹಾಗೆ ಪುಸ್ತಕ ರೂಪದಲ್ಲಿ ಕೊಟ್ಟು ಪ್ರಚಾರ ಮಾಡಬೇಕಾಗಿತ್ತು.

ಅವರು ಭಾಷೆಗಳನ್ನು ಕಲಿತರು, ಅವುಗಳಲ್ಲಿ ಧರ್ಮಗ್ರಂಥಗಳನ್ನು ರಚಿಸಿ, ಮುದ್ರಿಸಿ ಹಂಚಿದರು. ಹೀಗೆ ಮಿಕ್ಕ ಭಾಷೆಗಳಂತೆ ಕನ್ನಡದಲ್ಲಿಯೂ ಪುಸ್ತಕ ಪ್ರಕಟಣೆ ಕೆಲಸ ಧರ್ಮಪ್ರಸಾರದ ಸಾಧನವಾಗಿ ಪ್ರಾರಂಭವಾಯಿತು. ಭಾಷೆ ಕಲಿಯುವಾಗ ವ್ಯಾಕರಣ ಬೇಕು, ಕೋಶ ಬೇಕು. ಪ್ರಾದೇಶಿಕ ವಿದ್ವಾಂಸರ ನೆರವು ಪಡೆದು ಮಿಶನರಿಗಳು ವ್ಯಾಕರಣಗಳನ್ನೂ ನಿಘಂಟುಗಳನ್ನೂ ರಚಿಸಿದರು, ರಚಿಸಿದ್ದನ್ನು ಮುದ್ರಿಸಿ ಪ್ರಕಟಿಸಿದರು. ಹೀಗೆ ಪ್ರಕಟವಾದುದು ಕನ್ನಡದ ಮೊತ್ತ ಮೊದಲನೆಯ ಕೃತಿ ವಿಲಿಯಂ ಕೇರಿಯ 'ಎ ಗ್ರಾಮರ್ ಆಫ್ ಕನರೀಸ್ ಲ್ಯಾಂಗ್ವೇಜ್' (A Grammar of Canarese Language). ಅದು ಮುದ್ರಣಗೊಂಡದ್ದು ಕಲ್ಕತ್ತೆಯ ಬಳಿ ಶ್ರೀರಾಂಪುರ (ಸೆರಾಂಪೂರ್) ಎಂಬಲ್ಲಿ. ಭಾರತದ ಎಲ್ಲ ಪ್ರಾಂತೀಯ ಭಾಷೆಗಳಲ್ಲೂ ಮುದ್ರಣ-ಪ್ರಕಟಣೆ ಕೈಗೊಳ್ಳಲು ಯೋಜನೆ ಹಾಕಿದ್ದ ವಿಲಿಯಂ ಕೇರಿ ೧೮೧೭ರಲ್ಲಿ ಈ ಪುಸ್ತಕ ಪ್ರಕಟಿಸಿದನು. ಇದು ಇಂಗ್ಲೀಷಿನಲ್ಲಿ ಬರೆದ ವ್ಯಾಕರಣ, ಉದಾಹರಣೆಗಳೆಲ್ಲ ಕನ್ನಡ ಅಕ್ಷರಗಳಲ್ಲಿವೆ.

ಜೆಸೂಟ್, ವೆಸ್ಲಿಯನ್, ಬಾಸೆಲ್ ಮೊದಲಾದ ಮಿಶನ್‌ಗಳಿಗೆ ಸೇರಿದ ಮಿಶನರಿಗಳು ಭಾರತಾದ್ಯಂತ ತಮ್ಮ ಧರ್ಮಪ್ರಸಾರ ಕಾರ್ಯವನ್ನು ಬಿರುಸಾಗಿ ನಡೆಸಿದ್ದರು. ಕಲ್ಕತ್ತ, ಮದರಾಸು, ಮಂಗಳೂರು ಇಂತಹ ಚಟುವಟಿಕೆಗಳ ಮುಖ್ಯ ಕೇಂದ್ರಗಳು. ಜಾನ್ ಹ್ಯಾಂಡ್ಸ್ ಎನ್ನುವವನು ೧೮೨೦ರಲ್ಲಿ ಹೊಸ ಒಡಂಬಡಿಕೆಯನ್ನು ಬಳ್ಳಾರಿಯಲ್ಲಿ ಮುದ್ರಿಸಿ ಪ್ರಕಟಿಸಿದನು. ಅದೇ ಸಮಯದಲ್ಲಿ ಮದರಾಸಿನ ಫೋರ್ಟ್ ಸೇಂಟ್ ಜಾರ್ಜ್‌ನ ಕಾಲೇಜು ಪ್ರೆಸ್‌ನಲ್ಲಿ ಜಾನ್ ಮೆಕೆರಲ್ A Grammar of the Kurnata Language ಪ್ರಕಟಿಸಿದನು. ಅಲ್ಲಿಂದಲೇ ೧೮೩೨ರಲ್ಲಿ ವಿಲಿಯಂ ರೀವ್ ತಯಾರಿಸಿದ ಇಂಗ್ಲಿಷ್-ಕನ್ನಡ, ಕನ್ನಡ-ಇಂಗ್ಲಿಷ್ ಎರಡೂ ಬೃಹತ್ ನಿಘಂಟುಗಳು ಬಂದುವು. ಎರಡೂ ಕೂಡಿ ೩೦೦೦ ಪುಟಗಳ ಬೃಹತ್ ಗಾತ್ರ; ಡೆಮ್ಮೈ ಚತುರ್ಥ ಆಕಾರದಲ್ಲಿ; ೧೮೩೨ರಲ್ಲೇ ಸರ್ವಾಂಗ ಸುಂದರವಾಗಿ ಬೈಬಲ್ ಸಮಗ್ರ ಆವೃತ್ತಿಯೂ ಪ್ರಕಟವಾಯಿತು. ಮಂಗಳೂರಿನಲ್ಲಿ ಬಾಸೆಲ್ ಮಿಶನ್ ಕಾರ್ಯತತ್ಪರವಾಗಿತ್ತು. ಸು. ೧೮೪೧ರಲ್ಲಿ ಇಲ್ಲಿ ಪುಸ್ತಕೋದ್ಯಮದಲ್ಲಿ ನಿರತನಾಗಿದ್ದ, ಅಂದರೆ ಪುಸ್ತಕಗಳ ಮೂಲಕ ಧರ್ಮಪ್ರಸಾರದಲ್ಲಿ ತೊಡಗಿದ್ದ ಮಿಶನರಿ ಜಾನ್ ವೈಗಲ್. ಕ್ರೈಸ್ತ ಧಾರ್ಮಿಕ ಸಾಹಿತ್ಯ ಮಾತ್ರವಲ್ಲದೆ, ಕನ್ನಡದ ಪ್ರಾಚೀನ ಕಾವ್ಯಗಳಾದ ಬಸವ ಪುರಾಣ, ಜೈಮಿನಿ ಭಾರತ, ಕುಮಾರವ್ಯಾಸ ಭಾರತ, ದಾಸರ ಪದಗಳು ಮೊದಲಾದುವನ್ನೂ ಪ್ರಕಟಿಸಿದನು. ಮೊದಮೊದಲು ಲಿಥೋ ಅಂದರೆ ಕಲ್ಲಚ್ಚಿನ ಮುದ್ರಣ ಮಾಡುತ್ತಿದ್ದು ೧೮೫೧ರ ವೇಳೆಗೆ ಬಿಡಿಮೊಳೆಗಳ ಜೋಡಣೆ ರೂಢಿಗೆ ಬಂದಿತು. ಇಂದಿಗೂ ಸುವಿಖ್ಯಾತವಾಗಿ ಎಣೆಯಿಲ್ಲದ ಸ್ಥಾನ ಪಡೆದಿರುವ ಕಿಟ್ಟೆಲರ ಕನ್ನಡ-ಇಂಗ್ಲಿಷ್ ಕೋಶ ಬಂದದ್ದು ಇಲ್ಲಿಂದಲೇ. ಹಲವು ಆಕಾರದ, ಹಲವು ಪ್ರಯೋಜನದ ಹಲವು ಬಗೆಯ ಮುದ್ರಿತ ಸಾಮಗ್ರಿಯನ್ನು ಬಾಸೆಲ್ ಮಿಶನ್ ನೀಡಿತು. ಬಣ್ಣದ ಮುದ್ರಣವನ್ನೂ ಕೈಗೊಳ್ಳಲಾಗಿತ್ತು ಹಾಗೂ ಒತ್ತಕ್ಷರಗಳಿಲ್ಲದೆ ಒಂದೇ ಸಾಲಾಗಿ ಪಕ್ಕಪಕ್ಕದಲ್ಲಿ ಅಕ್ಷರಗಳನ್ನು ಜೋಡಿಸುವ ಲಿಪಿಸುಧಾರಣೆಯ ಪ್ರಯತ್ನವನ್ನೂ ಮಾಡಲಾಯಿತು ಎಂಬುದನ್ನು ಗಮನಿಸಿದಾಗ ಇವರ ಸಾಧನೆ ನಮ್ಮನ್ನು ಬೆರಗುಗೊಳಿಸುತ್ತದೆ. ಕನ್ನಡ ಭಾಷಾ ಸಾಹಿತ್ಯ ಕ್ಷೇತ್ರದಲ್ಲಿ ಅದೊಂದು ಕ್ರಾಂತಿಯೇ ಆಗಿಬಿಡುತ್ತಿತ್ತು. ಬರವಣಿಗೆ ಸುಲಭ, ಮುದ್ರಣ ಸುಲಭ, ಕಾಗದ ಉಳಿತಾಯ. ಆದರೆ ಪ್ರಯೋಗ ಅಷ್ಟಕ್ಕೇ ನಿಂತುಹೋಯಿತು. ಮುಂದೆ ಆಚಾರ್ಯ ಬಿಎಂಶ್ರೀ ಅವರು ಲಿಪಿಸುಧಾರಣೆಯ ಪ್ರಸ್ತಾಪವನ್ನು ಮಾಡಿದರು. ಆಗಲೂ ಅದು ನಿಲ್ಲಲಿಲ್ಲ. ಅದು ಬೇರೆ ವಿಷಯ. ಆದರೆ ನೂರೈವತ್ತು ವರ್ಷಗಳ ಹಿಂದೆಯೇ ಆ ಪ್ರಯೋಗ ನಡೆದದ್ದು ವಿಶೇಷ. ಹಾಗೆ ಮುದ್ರಣಗೊಂಡಿರುವ ಒಂದು ಪುಸ್ತಕ ಉಪಲಬ್ಧವಿದೆ. ಅದು ಕೊಡಗಿನ ರಾಜೇಂದ್ರನ ನಾಮೆ.

ಬ್ರಿಟಿಷರು ನಮ್ಮ ದೇಶದಲ್ಲಿ ತಳವೂರಿದ ಮೇಲೆ ಕೈಗೊಂಡ ಆಧುನಿಕ ಶಿಕ್ಷಣ ಪ್ರಸಾರ ಕಾರ್ಯಕ್ರಮಕ್ಕೆ

ಗ್ರಂಥೋದ್ಯಮವೂ ಸಹಾಯಕ ಸಾಧನವಾಯಿತು. ಎಲ್ಲ ತರಗತಿಗಳಿಗೂ ಕ್ರಮಿಕ ಪುಸ್ತಕಗಳು, ಇತಿಹಾಸ, ಭೂಗೋಳ, ಜ್ಯಾಮಿತಿ, ಅಂಕಗಣಿತ, ಖಗೋಳ ವಿಜ್ಞಾನ, ಜೀವವಿಜ್ಞಾನ ಹೀಗೆ ಹಲವು ವಿಷಯಗಳನ್ನು ಕುರಿತ ಪಠ್ಯಪುಸ್ತಕಗಳನ್ನು ಅಧಿಕಾರಿಗಳು ಪ್ರಕಟಿಸತೊಡಗಿದರು. ಧಾರವಾಡ, ಬೆಂಗಳೂರು, ಮೈಸೂರು ಮುಂತಾದ ಕಡೆ ಸರಕಾರಿ ಮುದ್ರಣಾಲಯಗಳು ಸ್ಥಾಪಿತವಾದುವು. ಇಂಗ್ಲಿಷ್ ಲೇಖಕರು ಬರೆದುದನ್ನು ಕನ್ನಡಕ್ಕೆ ಅನುವಾದ ಮಾಡಿಸಲು 'ಟ್ರಾನ್ಸ್‌ಲೇಟರರ' ಬಳಗವನ್ನೇ ನೇಮಿಸಿಕೊಂಡರು. ಒಳ್ಳೆಯ ಕಾಗದ, ರಟ್ಟು ಮುದ್ರಣಗಳಿಂದ ಈ ಪಠ್ಯಪುಸ್ತಕಗಳು ಇಂದಿಗೂ ಮಾದರಿಯಾಗಿವೆ. 'ಜಗದುತ್ಪತ್ತಿ ಸ್ಥಿತಿಲಯಗಳ ವಿವರಣ', 'ಬಾಲಶೀಕ್ಷೆ', 'ವಿದುರನೀತಿಯೆಂಬುವ ಗ್ರಂಥವು', 'ಪಾಠಶಾಲೆಯಲ್ಲಿವೋದುವ ವಿದ್ಯಾರ್ಥಿಗಳವುಪಯೋಗದ ಬಾಲಬೋಧೆ' ಇಂತಹ ಪುಸ್ತಕಗಳು ಆ ಕಾಲದವು. ಜಾನ್ ಗ್ಯಾರಟ್, ಡೆಪ್ಯೂಟಿ ಚೆನ್ನಬಸಪ್ಪ, ಬಾಳಶಾಸ್ತ್ರಿ ಜಾಂಭೇಕರ್, ವಿಲಿಯಂ ಆಲೆನ್ ರಸೆಲ್ ಮೊದಲಾದವರು ಈ ದಿಸೆಯಲ್ಲಿ ಅಪಾರ ಸೇವೆ ಸಲ್ಲಿಸಿದರು. ವಾಚನ ಪುಸ್ತಕಗಳ ತಯಾರಿಕೆಗೆಂದೇ 'ಕೆನರೀಸ್ ಟ್ರಾನ್ಸ್‌ಲೇಟರ' ಕಚೇರಿ ಸ್ಥಾಪಿತವಾಯಿತು. ಈ ಕಾಲದಲ್ಲಿ ವೆಂಕಟರಂಗೋಕಟ್ಟಿ ಹಾಗೂ ಗಂಗಾಧರ ಮಡಿವಾಳೇಶ್ವರ ತುರಮರಿ ಇವರುಗಳು ಅಪಾರವಾಗಿ ಶ್ರಮಿಸಿದರು.

ಆಗ ಅಚ್ಚುಮೊಳೆಗಳು ಮಿಶನರಿಗಳ ಸ್ವಾಮ್ಯದಲ್ಲಿದ್ದುವು. ಹಾಗೂ ಪುಸ್ತಕಗಳ ಪ್ರಕಟಣೆಯಲ್ಲಿ ಆಸಕ್ತರಾದ ಎಲ್ಲರಿಗೂ ಸುಲಭವಾಗಿ ಅಕ್ಷರ ಮೊಳೆಗಳು ದೊರಕುತ್ತಿರಲಿಲ್ಲ. ೧೮೭೦ರ ಸುಮಾರಿಗೆ ವೆಂಕಟರಂಗೋಕಟ್ಟಿಯವರು ಒಬ್ಬ ಕಂಚುಗಾರನ ನೆರವಿನಿಂದ ಅಕ್ಷರಗಳನ್ನು ಎರಕ ಹೊಯ್ಯಿಸಿದರು. ಆದರೆ ಅವು ಬಹಳ ಒರಟೊರಟಾಗಿದ್ದುವು, ತೃಪ್ತಿಕರವಾಗಿರಲಿಲ್ಲ. ಕೊನೆಗೆ ಕುಶಲಕರ್ಮಿಯೊಬ್ಬನನ್ನು ಮುಂಬಯಿಗೆ ಕಳಿಸಿ ತರಬೇತಿ ಕೊಡಿಸಿ ಬೆಳಗಾವಿಯಲ್ಲಿ ಒಂದು ಟೈಪ್‌ಫೌಂಡ್ರಿ ಸ್ಥಾಪಿಸಲು ಬೆಳಗಾಂವ ಲಿಥೋಗ್ರಾಫಿಕ್ ಪ್ರೆಸ್‌ನವರು ಪ್ರಯತ್ನಿಸಿದರು. ಇದಕ್ಕೆ ಶಿಕ್ಷಣ ಅಧಿಕಾರಿಯಾಗಿದ್ದ ರಸೆಲರ ಸಹಾಯವೂ ದೊರೆತು ಅಲ್ಲಿಂದ ಮುಂದಕ್ಕೆ ಕನ್ನಡ ಅಚ್ಚುಮೊಳೆಗಳು ಯಾರಿಗೆ ಬೇಕಾದರೂ ಕೊಳ್ಳಲು ಮುಕ್ತವಾಗಿ ದೊರಕುವಂತಾಯಿತು. ಕನ್ನಡ ಪುಸ್ತಕೋದ್ಯಮದ ಬೆಳವಣಿಗೆಯಲ್ಲಿ ಇದೊಂದು (೧೮೭೧) ಮುಖ್ಯವಾದ ಮಜಲು.

ಆ ವೇಳೆಗೆ ಮದರಾಸು, ಬೆಂಗಳೂರುಗಳಲ್ಲಿ ಮುದ್ರಣಾಲಯಗಳು ಸ್ಥಾಪನೆಗೊಂಡಿದ್ದುವು. ೧೮೭೦ರ ನಂತರ ಬೇಕಾದಷ್ಟು ಕಡೆ ಜಿಲ್ಲೆ, ತಾಲೂಕು ಕೇಂದ್ರಗಳಲ್ಲೂ ಛಾಪಖಾನೆಗಳು ತಲೆಯೆತ್ತಿದುವು. ಹಳೆಯ ಪುಸ್ತಕಗಳನ್ನು ತಿರುವಿಹಾಕುತ್ತಿದ್ದರೆ ಆಗಿನ ಈ ಕೆಲವು ಮುದ್ರಣಾಲಯಗಳ ಹೆಸರು ಕಂಡು ನೆನಪಿನಲ್ಲಿ ಊರಿ ನಿಲ್ಲುವ ಕೆಲಸ ಮಾಡಿರುವುದು ಕಂಡುಬರುತ್ತದೆ. ಮದರಾಸಿನ ಹಿಂದೂ ಭಾಷಾಸಂಜೀವಿನೀ, ಸರಸ್ವತೀ ಪ್ರೆಸ್, ಬೆಂಗಳೂರಿನ ವಿಚಾರದರ್ಪಣ ಮುದ್ರಾಕ್ಷರ ಶಾಲೆ, ಟೌನ್ ಪ್ರೆಸ್, ಚಾಮುಂಡೇಶ್ವರಿ ಪ್ರೆಸ್, ಮೈಸೂರು ಬುಕ್ ಡಿಪೊ ಪ್ರೆಸ್, ವಾಜಪೇಯ ಕೃಷ್ಣಯ್ಯ ಮತ್ತು ವೆಲನಾಡು ಬಿ. ಸುಬ್ಬಯ್ಯನವರ ಮುದ್ರಣಾಲಯಗಳು, ವಾಗೀಶ್ವರಿ ಪ್ರೆಸ್, ಮೈಸೂರಿನ ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್, ಮುಂಬಯಿಯ ಕರ್ನಾಟಕ ಛಾಪಖಾನೆ, ಭಾರತಿ ಪ್ರೆಸ್, ಬೆಳಗಾಂವಿಯ ರಾಮತತ್ವ ಪ್ರಕಾಶ ಪ್ರೆಸ್ ಇತ್ಯಾದಿ. ಖ್ಯಾತ ಸಂಶೋಧಕ ಮತ್ತು ಪುಸ್ತಕೋದ್ಯಮಿ ಡಾ. ಶ್ರೀನಿವಾಸ ಹಾವನೂರರು ಆಗ ಅಂದರೆ ೧೯ನೇ ಶತಮಾನದಲ್ಲಿ ಕಾರ್ಯನಿರತವಾಗಿದ್ದ ೮೫ ಪ್ರಸಿದ್ಧ ಮುದ್ರಣಾಲಯಗಳನ್ನು ಪಟ್ಟಿ ಮಾಡಿದ್ದಾರೆ (ಹೊಸಗನ್ನಡ ಅರುಣೋದಯ, ಪು. ೫೭೭).

ಮೈಸೂರು ರಾಜಮನೆತನವೂ ಪುಸ್ತಕೋದ್ಯಮದ ಬೆಳವಣಿಗೆಗೆ ಮಹತ್ವದ ಸೇವೆ ಸಲ್ಲಿಸಿದೆ.

೧೮೫೦-೬೦ರ ದಶಕಗಳಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಹಲವು ಕೃತಿಗಳು ಬೆಳಕು ಕಂಡಿವೆ. ಮೈಸೂರಿನ ಅಂಬಾವಿಲಾಸ ಹಾಗೂ ಜಗನ್ಮೋಹಿನೀ ಶಿಲಾಯಂತ್ರಗಳಲ್ಲಿ ಪುಸ್ತಕಗಳು ಅಚ್ಚಾಗುತ್ತಿದ್ದವು. 'ಸಂಖ್ಯಾರತ್ನಕೋಶ', ೧೨೨೦ ಪುಟಗಳ 'ಸೌಗಂಧಿಕಾ ಪರಿಣಯ' ೧೮೬೦ರಲ್ಲಿ ಬಂದವು. ಶ್ರೀತತ್ವನಿಧಿ (ಈಚೆಗೆ ಕನ್ನಡ ವಿಶ್ವವಿದ್ಯಾಲಯವು ಮರುಮುದ್ರಿಸಿದೆ), ನಂಜುಂಡಶತಕ, ಅಧ್ಯಾತ್ಮರಾಮಾಯಣ ಟೀಕೆ ಇತ್ಯಾದಿ ಕೃತಿಗಳು ಬಂದುವು. ಮಹಾರಾಜರು ಇತರ ಅನೇಕ ಲೇಖಕರನ್ನು ಪ್ರೋತ್ಸಾಹಿಸಿ, ಬರೆಯಿಸಿ, ಪ್ರಚುರಿಸಲು ನೆರವಾದರು.

ರಚನೆ, ಮುದ್ರಣ, ಪ್ರಕಟಣೆ ಇಷ್ಟರಿಂದ ಉದ್ಯಮ ಪೂರ್ಣವಾಗಲಿಲ್ಲವಷ್ಟೆ. ಪುಸ್ತಕಗಳ ಪ್ರಸರಣ ಅವೆಲ್ಲಕ್ಕಿಂತಲೂ ಮುಖ್ಯವಲ್ಲವೆ? ಇಂದೂ, ಉದ್ಯಮವು ಆರಂಭವಾದ ಎರಡು ಶತಕಗಳ ನಂತರವೂ ನಮ್ಮನ್ನು ಕಾಡುತ್ತಿರುವ ನಿಜವಾದ ಸಮಸ್ಯೆ ಇದೇಯೆ. ಪುಸ್ತಕ ರಚಿತವಾಗುತ್ತದೆ, ಎಲ್ಲೋ ಯಾರೋ ಬಂಡವಾಳ ಹಾಕಿ ಮುದ್ರಣವಾಗುತ್ತದೆ, ಆಮೇಲೆ ಎಲ್ಲೋ ರಾಶಿ ಬಿದ್ದು ಕೊಳೆಯುತ್ತದೆ. "ಮಾಲೆಗಾರನ ಹೂಸ ಬಾಸಿಗ ಮುಡಿವ ಭೋಗಿಗಳಿಲ್ಲದೆ ಬಾಡಿ" ಹೋಗುತ್ತದೆ. ಪುಸ್ತಕಗಳಿಗೆ ಗ್ರಾಹಕರಿಲ್ಲವೆಂದಲ್ಲ, ಅಲ್ಲವೇ ಅಲ್ಲ. ಅವರ ಬಳಿಗೆ ಹೋಗುವ ನಮ್ಮ ಪ್ರಯತ್ನ ಸೂಕ್ತ ರೀತಿಯಲ್ಲಿಲ್ಲ. ಅಥವಾ ಸೂಕ್ತ ಫಲ ನೀಡುತ್ತಿಲ್ಲ. ಇದನ್ನು ವಿವರವಾಗಿ ಆಮೇಲೆ ನೋಡೋಣ. ಆ ಕಾಲದಲ್ಲಿ ಪುಸ್ತಕಗಳ ಪ್ರಸರಣಕ್ಕೆ ಎಂಥ ಇಂಬು ದೊರಕಿತ್ತು ಎಂಬುದನ್ನು ನೋಡಬಹುದು. ಬಳ್ಳಾರಿಯ ಶಿವಲಿಂಗಂ ಶೆಟ್ರು, ಕೋನೇರಿ ಶೆಟ್ರು, ಆದಿನಾರಾಯಣ ಶೆಟ್ರು, ಮೈಸೂರಿನ ವೆಂಕಟಾಚಲಂ ಶೆಟ್ರು, ಧಾರವಾಡದ ಕಲ್ಯಾಣಪ್ಪ ಮಾದನಶೆಟ್ಟಿ ಇವರೇ ಮೊದಲಾದವರನ್ನು ಇಲ್ಲಿ ನೆನೆಯಬೇಕು. "ಟ್ರಾವೆಲಿಂಗ್ ಬುಕ್ ಮರ್ಚಂಟ್ಸ್" ಎಂದು ತಮ್ಮನ್ನು ಕರೆದುಕೊಂಡ ಇವರು ಪುಸ್ತಕಗಳನ್ನು ಗಾಡಿಗಳಲ್ಲಿ ಹೇರಿಕೊಂಡು ಊರೂರಿಗೆ ಹೋಗುತ್ತಿದ್ದರು. ಜಾತ್ರೆ, ಸಂತೆ, ಜನ ನೆರೆಯುವ ಕಡೆ ನಿಂತು ಪುಸ್ತಕ ಮಾರಾಟ ಮಾಡುತ್ತಿದ್ದರು. ಇವತ್ತು ಇರುವ ಸಂಪರ್ಕ ಸೌಲಭ್ಯ, ಸಾರಿಗೆ ಸೌಲಭ್ಯ ಇಲ್ಲದಿದ್ದ ಆ ಕಾಲದಲ್ಲಿ ಒಂದು ಕನ್ನಡ ಪುಸ್ತಕವು ಮದರಾಸಿನಲ್ಲೋ ಕುಂಭಕೋಣದಲ್ಲೋ ಅಚ್ಚಾಗಿ ಬಳ್ಳಾರಿಯಲ್ಲಿ ಪ್ರಕಟವಾಗಿ ಪ್ರಾಂತ್ಯಾದ್ಯಂತ ಟ್ರಾವೆಲಿಂಗ್ ಬುಕ್ ಮರ್ಚೆಂಟ್ಸ್‌ಗಳ ಮೂಲಕ ಮಾರಾಟವಾಗುತ್ತಿದ್ದಿತು. ನನಗೆ ತಿಳಿದಿರುವ ಮಟ್ಟಿಗೆ ಈಗ ಈ ಕೆಲಸವನ್ನು ಆಧುನಿಕ ರೀತಿಯಲ್ಲಿ ಮಾಡುತ್ತಿರುವ ಇಬ್ಬರು ಪ್ರಕಾಶಕ ಮಾರಾಟ ಮಿತ್ರರನ್ನು ಸಂತೋಷದಿಂದ ಇಲ್ಲೇ ಉಲ್ಲೇಖಿಸಿ ಬಿಡುತ್ತೇನೆ. ಒಬ್ಬರು ಧಾರವಾಡದ ಸಮಾಜ ಪುಸ್ತಕಾಲಯದ ಫಾಣೇಕರ ಸೋದರರು; ಇನ್ನೊಬ್ಬರು ಬೆಂಗಳೂರು ನವಕರ್ನಾಟಕ ಪ್ರಕಾಶನದ ಸೋದರ ರಾಜಾರಾಂ ಅವರು. ಇವರದಂತೂ ಐದು ಪ್ರದರ್ಶನ ಘಟಕಗಳು ನಾಡಿನಾದ್ಯಂತ ವರ್ಷವಿಡೀ ಪುಸ್ತಕ ಪ್ರದರ್ಶನ - ಮಾರಾಟ ಕಾರ್ಯದಲ್ಲಿ ನಿರತವಾಗಿರುತ್ತವೆ. ಪುಸ್ತಕ ಮನಸ್ಕತೆ ಬೆಳೆಸುವ ಬಗ್ಗೆ ಭಾಷಣ ಮಾಡುವ ನಾವು ನೂರು ವರ್ಷಗಳ ಕೆಳಗೆ ನಮ್ಮ ಶೆಟ್ರು ಬಂಧುಗಳು ಮಾಡಿದ ಪ್ರಯತ್ನವನ್ನು ಗಮನಿಸಬೇಕು. ಪುಸ್ತಕೋದ್ಯಮದ ಬೆಳವಣಿಗೆಯಲ್ಲಿ ಅದೆಂಥ ಮಹತ್ವದ ಕ್ರಮವಾಯಿತೆಂಬುದನ್ನು ತಿಳಿದುಕೊಳ್ಳಬೇಕು.

ಕ್ರೈಸ್ತ ಮಿಶನರಿಗಳ ಪ್ರಯತ್ನವೂ ಬ್ರಿಟಿಷ್ ಅಧಿಕಾರಿಗಳ ಪರಿಶ್ರಮವೂ ಸ್ಥಳೀಯರ ಉತ್ಸಾಹದೊಂದಿಗೆ ಬೆರೆತು ಪ್ರಕಟಣೆಗಳ ಸಂಖ್ಯೆ ಹೆಚ್ಚಾಗುತ್ತಾ ಹೋದಂತೆ ಅವುಗಳ ಮೂಲಕ ದೇಶೀಯರು ಏನನ್ನು ಜನರಲ್ಲಿ ಹರಡುತ್ತಿದ್ದಾರೆ ಎಂದು ತಿಳಿದುಕೊಳ್ಳುವ ಅಪೇಕ್ಷೆ ಸರಕಾರಕ್ಕೆ ಉಂಟಾಯಿತು. ಹೀಗೆ ಅನುಮಾನಜನ್ಯ ಆಗತ್ಯದಿಂದಾಗಿ, ಸರಕಾರವು ಮುದ್ರಿತ ಗ್ರಂಥ ವಿಷಯಕವಾದ ಕಾಯಿದೆಯನ್ನು ೧೮೬೭ರಲ್ಲಿ ಜಾರಿಗೆ

ತಂದಿತು. ಇದರ ಪ್ರಕಾರ ದೇಶಭಾಷೆಗಳಲ್ಲಿ ಮುದ್ರಣಗೊಂಡ ಯಾವುದೇ ಪುಸ್ತಕ ಅಥವಾ ಪತ್ರಿಕೆಯ ಮೂರು ಪ್ರತಿಗಳನ್ನು ಉಚಿತವಾಗಿ ಮುದ್ರಕನು ಸರಕಾರಕ್ಕೆ ಸಲ್ಲಿಸಬೇಕಾಯಿತು. ಅವುಗಳಲ್ಲಿ ಒಂದು ಪ್ರತಿಯನ್ನು ಪ್ರಾಂತ ಸರಕಾರವು ಕಾಪಿರೈಟ್ ಗ್ರಂಥಾಲಯದಲ್ಲಿ ಕಾದಿರಿಸಿ ಇನ್ನೆರಡನ್ನು ಕೇಂದ್ರಾಡಳಿತಕ್ಕೆ ಕಳಿಸಬೇಕಾಯಿತು. ಭಾಷಾಂತರಕಾರರ ನೆರವಿನಿಂದ ಅವುಗಳಲ್ಲಿ ತಮ್ಮ ವಿರೋಧವಾದ ಯಾವ ಸಂಗತಿಯೂ ಇಲ್ಲವೆಂಬುದನ್ನು ಅವರು ಮನವರಿಕೆ ಮಾಡಿಕೊಳ್ಳುತ್ತಿದ್ದಿರಬಹುದು. ಅವರು ಕೈಗೊಂಡ ಈ ಕ್ರಮದಿಂದ ಸ್ವಲ್ಪಮಟ್ಟಿಗಾದರೂ ಆ ಕಾಲದ ಪ್ರಕಟಣೆಗಳು ನೋಡಸಿಕ್ಕುವಂತಾಗಿವೆಯೆಂಬುದೀಗ ವಿಚಿತ್ರದ ಸಂಗತಿ. ಈಗಲೂ ಇದೇ ಕಾಯಿದೆಯನ್ವಯ ಕಲ್ಕತ್ತೆಯ ರಾಷ್ಟ್ರೀಯ ಗ್ರಂಥಾಲಯಕ್ಕೆ ಪ್ರತಿಯೊಂದು ಪುಸ್ತಕವನ್ನೂ ಕಳಿಸಬೇಕು. ರಾಷ್ಟ್ರೀಯ ಗ್ರಂಥಸೂಚಿಯಾಗಲಿ, ರಾಷ್ಟ್ರೀಯ ಅಂತರರಾಷ್ಟ್ರೀಯ ಪುಸ್ತಕೋದ್ಯಮ ಸಂಬಂಧಿ ಮೌಲ್ಯಮಾಪನವಾಗಲಿ ನಿಲ್ಲುವುದು ಇಲ್ಲಿ ಸಂಗ್ರಹವಾಗುವ ಪುಸ್ತಕಗಳ ಸಂಖ್ಯೆಯ ಆಧಾರದ ಮೇಲೆ. ಆದರೆ ದುರದೃಷ್ಟವಶಾತ್ ಈಗ ಪ್ರಕಟವಾಗುವ ಶೇ. ೩೦ರಷ್ಟು ಪುಸ್ತಕಗಳೂ ಅಲ್ಲಿಗೆ ಹೋಗುತ್ತಿಲ್ಲ. ಹಾಗೆ ಕಾಯಿದೆಯನ್ವಯ ಪುಸ್ತಕ ಕಳಿಸದೆ ಹೋದ ಮುದ್ರಕನ ಮೇಲೆ ಕ್ರಮ ಜರುಗಿಸಿದ ದಾಖಲೆಯನ್ನು ಡಾ. ಹಾವನೂರರರು ಉಲ್ಲೇಖಿಸಿದ್ದಾರೆ. ಆದರೆ ಈಗ ಹಾಗೆ ಕ್ರಮ ಜರುಗಿಸುವುದೂ ಕಷ್ಟವಾಗಿದೆ. ಹಾಗೂ ಕಾಯಿದೆಯ ಉದ್ದೇಶ ವಿಫಲವೇ ಆಗಿದೆ. ಇರಲಿ, ೧೮೬೭ರ ರಿಜಿಸ್ಟ್ರೇಷನ್ ಕಾಯಿದೆಯು ೧೯೦೦ಕ್ಕಿಂತ ಹಿಂದೆ ಪ್ರಕಟವಾದ ಬಹುತೇಕ ಪುಸ್ತಕಗಳ ಬಗೆಗೆ ಮಾಹಿತಿಯು ನಮಗೆ ದೊರಕುವಂತೆ ಮಾಡಿತು. ಹಾಗೆ ಸಂಗ್ರಹಿತ ಪುಸ್ತಕಗಳ ತ್ರೈಮಾಸಿಕ ವರದಿ ಸಲ್ಲಿಸಲು ಸರಕಾರವು ಅಧಿಕಾರಿಗಳನ್ನು ನೇಮಿಸಿತ್ತು. ಆ ವರದಿಗಳ ಪ್ರಕಾರ ವರ್ಷಕ್ಕೆ ಸರಾಸರಿ ೨೦೦ ಪುಸ್ತಕಗಳು ಪ್ರಕಟವಾಗುತ್ತಿದ್ದುವು.

ಸರಕಾರೀ ಭಾಷಾಂತರಕಾರರು ಬೇರೆ ಪುಸ್ತಕಗಳನ್ನೂ ಅನುವಾದ ಮಾಡುತ್ತಿದ್ದುದರ ಜೊತೆಗೆ ಇತರ ವಿದ್ವಾಂಸರೂ ಮರಾಠೀ, ಸಂಸ್ಕೃತ, ಬಂಗಾಳಿ ಭಾಷೆಗಳಿಂದ ಅನುವಾದ ಮಾಡಿ ಪ್ರಕಟಿಸತೊಡಗಿದರು. ಈಗ ನಾವು ೧೯ನೆಯ ಶತಮಾನದ ಕೊನೆಯ ಭಾಗಕ್ಕೆ ಬಂದಿದ್ದೇವೆ. ಪೂರ್ಣ ಪ್ರಮಾಣದ ಬೈಬಲ್ ೧೮೬೫ರಲ್ಲಿ ಬಂದಿತು, ಸಕ್ಕರಿ ಬಾಳಾಚಾರ್ಯ ಶಾಂತಕವಿ ಅವರು ನಾಟಕಗಳನ್ನೂ, ಬಿ. ವೆಂಕಟಾ ಚಾರ್ಯರು ಕಾದಂಬರಿಗಳನ್ನೂ ಅನುವಾದ ಮಾಡಿ ಪ್ರಕಟಿಸತೊಡಗಿದರು. ದುರ್ಗೇಶನಂದಿನಿ ೧೮೬೫ರಲ್ಲಿ ಬಂದಿತು. ಐತಿಹಾಸಿಕ, ಪತ್ತೇದಾರಿ, ಸಾಮಾಜಿಕ ಕೃತಿಗಳು ಬಂದುವು. ಗಳಗನಾಥ ಸುರಸ ಗ್ರಂಥಮಾಲೆ ಬಿರುಸಾಗಿ ಕಾರ್ಯನಿರತವಾಗಿತ್ತು. ಭಾಷಾ ಕಲಿಕೆಗೆ ಅಗತ್ಯವಾದ ವ್ಯಾಕರಣಾದಿ ಕೃತಿಗಳೂ ಹೆಚ್ಚು ಹೆಚ್ಚಾಗಿ ಬಂದುವು. ಕನ್ನಡ ಕಯ್ಪಿಡಿ, A Grammar of the Kannada Language (ಎಫ್. ಕಿಟ್ಟೆಲ್), ಶಬ್ದಾದರ್ಶ (ಬಿ. ಮಲ್ಲಪ್ಪ), ವಾಣೀಮುಕುರ (ನರೇಗಲ್ಲ), ಗ್ಯಾರೆಟ್ ಮತ್ತು ಸ್ಯಾಂಡರ್ಸನ್ ಅವರು ಸಂಪಾದಿಸಿದ ಕೋಶಗಳು, ಸಣ್ಣ ಕರ್ನಾಟಕ ಕಾವ್ಯಮಾಲೆ ೧೮೬೫ (ಸಂ: ಎಫ್. ಕಿಟ್ಟೆಲ್), ಕವಿತಾ ಸಂಗ್ರಹವು ೧೮೭೪ (ಗಂಗಾಧರ ಮಡಿವಾಳೇಶ್ವರ ತುರಮರಿ) ಪ್ರಾಕ್ಕಾವ್ಯ ಮಾಲಿಕೆ ೧೮೬೮ (ಸಂ: ಜಿ. ವರ್ತ್), ಅಭಿಜ್ಞಾನ ಶಾಕುಂತಲ ನಾಟಕವು (ಬಸವಪ್ಪ ಶಾಸ್ತ್ರೀ), ಇಗ್ಗಪ್ಪ ಹೆಗ್ಗಡೆ ವಿವಾಹ ಪ್ರಹಸನ ೧೮೮೭(ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ), ಆರು ಬೆರಳಿನ ಕುರುಹು (ವೆಂಕಟರಂಗೋಕಟ್ಟಿ), ಇಸೋಪನ ನೀತಿ ಕಥೆಗಳು ೧೮೪೦ (ಸಂ. ಎಲಿಯಟ್), ಪಂಚತಂತ್ರ ೧೮೬೦, ನಗೆಗಡಲು (ರಾ. ನರಸಿಂಹಾಚಾರ್ಯ), ಕಥಾಸಂಗ್ರಹ ೧೮೬೩ (ಸ್ಯಾಂಡರ್ಸನ್), ಸುಕುಮಾರಿ (ಮಾಲಯಾಳಂ ಅನುವಾದ ಎಚ್. ರಾಬರ್ಟ್ಸ್ ೧೮೯೯) - ಇವು ಆಗಿನ ಕೆಲವು ಮುಖ್ಯ ಕೃತಿಗಳು.

ಪ್ರಸ್ತುತ ಶತಮಾನದ ಆದಿಭಾಗದಲ್ಲಿ ಪುಸ್ತಕೋದ್ಯಮವು ಶಾಖೋಪಶಾಖೆಗಳಾಗಿ ಕುಡಿವರಿದು

ಬೆಳೆಯಿತು. ೧೮೧೭ರಿಂದ ೧೯೦೦ವರೆಗೆ ಮೊದಲನೆಯ ಕಾಲಾವಧಿ, ೧೯೦೧ರಿಂದ ಸ್ವಾತಂತ್ರ್ಯೋದಯದವರೆಗೆ ಎರಡನೆಯ, ೧೯೪೭ರಿಂದ ಇದುವರೆಗೆ ಮೂರನೆಯ ಕಾಲಾವಧಿ ಎಂದು ಗುರುತು ಮಾಡಿಕೊಂಡು ಪರಿಶೀಲಿಸಲು ಹೊರಟರೆ ಇದುವರೆಗೆ ನೋಡಿರುವುದು ಮೊದಲನೆಯ ಅವಧಿಯ ಪುಸ್ತಕೋದ್ಯಮ. ಎರಡನೆಯ ಅವಧಿಯಲ್ಲಿ ಶೇಷಾಚಲ ಗ್ರಂಥಮಾಲೆ, ಕರ್ಣಾಟಕ ಗ್ರಂಥಮಾಲೆ, ಕಾದಂಬರೀ ಸಂಗ್ರಹ ಗ್ರಂಥಮಾಲೆ, ಮೈಸೂರಿನ ಕಾವ್ಯಕಲಾನಿಧಿ ಮತ್ತು ಕಾವ್ಯಮಂಜರಿ, ಬೆಂಗಳೂರಿನ ಕಳಾನಿಧಿ ಬುಕ್ ಡಿಪೊ, ಮದರಾಸಿನ ಆರ್. ವೆಂಕಟೇಶ್ವರ ಕಂಪೆನಿ ಇಂತಹ ಹಲವಾರು ಸಂಸ್ಥೆಗಳು ಪ್ರಕಾಶನೋದ್ಯಮ ನಿರತವಾಗಿದ್ದುವು. ಮೂರನೆಯ ಕಾಲಾವಧಿಯಲ್ಲಿ ಈ ಕಾರ್ಯಚಟುವಟಿಕೆ ಇನ್ನೂ ವಿಸ್ತಾರವಾಯಿತು. ಕಾವ್ಯಾಲಯ, ವಿದ್ಯಾನಿಧಿ ಪ್ರಕಾಶನ, ಸ್ಟ್ಯಾಂಡರ್ಡ್ ಬುಕ್ ಡಿಪೊ, ಶಾರದಾ ಪ್ರಕಟಣಾಲಯ, ಗೀತಾಬುಕ್ ಹೌಸ್, ಸಮಾಜ ಪುಸ್ತಕಾಲಯ, ಮಿಂಚಿನ ಬಳ್ಳಿ, ಮನೋಹರ ಗ್ರಂಥಮಾಲೆ, ಶಾರದಾ ಮಂದಿರ ಹೀಗೆ ಸುಪ್ರಸಿದ್ಧವಾದ ಹತ್ತಾರು ಸಂಸ್ಥೆಗಳು ಪ್ರಕಾಶನ ಕಾರ್ಯದಲ್ಲಿ ತೊಡಗಿದುವು. ಕಾವ್ಯ, ನಾಟಕ, ಕತೆ, ಕಾದಂಬರಿ, ಪ್ರಬಂಧ, ವಿಜ್ಞಾನ ಹೀಗೆ ಹತ್ತಾರು ಬಗೆಯ ಸಾಹಿತ್ಯ ಬೆಳಕು ಕಾಣತೊಡಗಿತು. ಮನೋಹರ ಗ್ರಂಥಮಾಲೆಯು ವಾರ್ಷಿಕ ಚಂದಾ ತೆಗೆದುಕೊಂಡು ಪುಸ್ತಕಗಳನ್ನು ಪೂರೈಸುವ ಕೆಲಸ ತೊಡಗಿತು.

ಸಾಹಿತ್ಯದ ಪರಿಶೀಲನೆ ನನ್ನ ಪ್ರಬಂಧದ ಉದ್ದೇಶವಲ್ಲ. ಮುದ್ರಣ, ಪ್ರಕಟಣೆ, ಮಾರಾಟ, ವಾಚನಾಭಿರುಚಿವರ್ಧನೆ ಇವು ಮಾತ್ರ ಇಲ್ಲಿ ಪ್ರಸ್ತುತ. ಈ ದೃಷ್ಟಿಯಿಂದ ಮೇಲೆ ಹೇಳಿದ ಮೂರು ಕಾಲಾವಧಿಗಳನ್ನು ಕುರಿತು ಸಾಮಾನ್ಯ ಸ್ವರೂಪದ ಕೆಲವು ಅಂಶಗಳನ್ನು ಇಲ್ಲಿ ಗುರುತಿಸಲು ಪ್ರಯತ್ನಿಸಿದೆ.

ಮೊದಲನೆಯ ಅವಧಿಯಲ್ಲಿ : (೧) ಉದ್ಯಮನಿರತರಾದವರು ಮುಖ್ಯವಾಗಿ ಕ್ರೈಸ್ತ ಮಿಶನರಿಗಳು ಮತ್ತು ಶಿಕ್ಷಣ ಪ್ರಸಾರದಲ್ಲಿ ಆಸಕ್ತರಾಗಿದ್ದ ಬ್ರಿಟಿಷ್ ಅಧಿಕಾರಿಗಳು. (೨) ಆಗ ಪ್ರಕಟವಾದ ಸಾಹಿತ್ಯ ಮುಖ್ಯವಾಗಿ ಧಾರ್ಮಿಕ, ಸ್ತುತಿಗಳು, ಸಂಭಾಷಣೆಗಳು, ಕಾವ್ಯ, ಕತೆಗಳು ಇತ್ಯಾದಿ. ಇನ್ನೊಂದು ಬಗೆಯವೆಂದರೆ ವಿವಿಧ ವಿಷಯಕ ಪಠ್ಯಪುಸ್ತಕಗಳು, ನಕ್ಷೆ, ಕೋಷ್ಟಕ, ಬಾಲಾಭ್ಯಾಸ, ವ್ಯಾಕರಣ ಇತ್ಯಾದಿ. (೩) ಉಪಯೋಗಿಸುತ್ತಿದ್ದ ಕಾಗದ ವಿದೇಶದಿಂದ ತರಿಸಿದ ಉತ್ತಮ ಕಾಗದ ಇಲ್ಲವೆ ಚಿಂದಿಯಿಂದ ತಯಾರಿಸಿದ ಕೋರಿಕಾಗದ (೪) ರಟ್ಟು ಸಾಮಾನ್ಯವಾಗಿ ತೆಳುಕಾಗದ. (೫) ಮುದ್ರಣ ಕಲ್ಲಚ್ಚು ಮತ್ತು ಆಮೇಲೆ ಬಿಡಿ ಮೊಳೆಗಳು, (೬) ಸಾಮಾನ್ಯವಾಗಿ ಡೆಮ್ಮೈ ಅಷ್ಟ ಆಕಾರದ ಪುಸ್ತಕಗಳು (೭) ಪುಸ್ತಕವನ್ನು ಯಾರು ಯಾರಿಗಾಗಿ ಯಾವಾಗ ಎಲ್ಲಿ ಮುದ್ರಿಸಿದರು ಎಂಬುದನ್ನು ಸ್ಪಷ್ಟವಾಗಿ ಮೊದಲ ರಕ್ಷಾಪುಟದ ಮೇಲೆಯೇ ಮುದ್ರಿಸುತ್ತಿದ್ದರು.

ಎರಡನೆಯ ಅವಧಿಯಲ್ಲಿ : (೧) ಅನೇಕ ಖಾಸಗಿ ಪ್ರಕಾಶಕರು ಕಾರ್ಯಾರಂಭಮಾಡಿದರು. ಹಲವು ಸಂಸ್ಥೆಗಳ ಹೆಸರನ್ನು ಮೇಲೆಯೇ ಹೇಳಿದೆ. (೨) ಬಗೆಬಗೆಯ ಸಾಹಿತ್ಯ ಪ್ರಕಾರಗಳಲ್ಲಿ ಪುಸ್ತಕಗಳು ಪ್ರಕಟವಾಗತೊಡಗಿದವು. ಚಾಮಾರಾಜೋಕ್ತಿವಿಲಾಸ ರಾಮಾಯಣ, ವಾಣೀವಿಲಾಸ ಮಹಾಭಾರತ, ಭಾಗವತ ಮಾಲಿಕೆಗಳು; ದೇವಶಿಖಾಮಣಿ ಅಳಸಿಂಗರಾಚಾರ್ಯರ ರಾಮಾಯಣ ಭಾರತ ಸಂಪುಟಗಳು ಬಹು ಜನಪ್ರಿಯವಾದುವು. ಅದೇ ಸಮಯದ ಎರಡು ಮುಖ್ಯ ಬೆಳವಣಿಗೆಗಳನ್ನು ಇಲ್ಲಿ ಉಲ್ಲೇಖಿಸಬೇಕು. ಮೊದಲನೆಯದು ಜಯಚಾಮರಾಜೇಂದ್ರ ಒಡೆಯರ್ ಅವರು ಪ್ರಕಟಿಸಿದ ಗ್ರಂಥರತ್ನಮಾಲೆ. ಅಷ್ಟಾದಶ ಮಹಾಪುರಾಣಗಳು, ಇತರ ಹಲವು ಧಾರ್ಮಿಕ ಕೃತಿಗಳನ್ನು ವಿದ್ವಾಂಸರಿಂದ ಅನುವಾದ ಮಾಡಿಸಿ, ಪುಟದ ಮೇಲ್ಭಾಗದಲ್ಲಿ ಮೂಲಶ್ಲೋಕ, ಕೆಳಭಾಗದಲ್ಲಿ ಗದ್ಯಾನುವಾದ ಹೀಗೆ ಸಾವಿರಾರು ಪುಟಗಳ

ಮುದ್ರಣ ಮಾಡಿಸಿ ನಾನೂರಕ್ಕೂ ಹೆಚ್ಚು ಸಂಪುಟಗಳನ್ನು ಪ್ರಕಟಿಸಿದರು. ಶಿವಪುರಾಣ, ವಾಯುಪುರಾಣ, ಬ್ರಹ್ಮವೈವರ್ತ ಇತ್ಯಾದಿ. ಇವಿರಲಿ, "ನಭೂತೋ ನಭವಿಷ್ಯತಿ" ಎನ್ನುವಂತಹ ವೇದರತ್ನಮಾಲೆಯ ಪ್ರಕಟಣೆಯೇ ಕನ್ನಡ ಪುಸ್ತಕೋದ್ಯಮದ ಒಂದು ಅಪೂರ್ವ ಸಾಹಸ. ಋಗ್ವೇದದ ಮಂತ್ರಗಳೆಲ್ಲವನ್ನೂ ಮೂಲ ಪಾಠ (ಕನ್ನಡ ಲಿಪಿಯಲ್ಲಿ), ಪದ ಪಾಠ, ಘನಪಾಠ, ಇಂಗ್ಲಿಷ್ ಅನುವಾದ, ಕನ್ನಡದಲ್ಲಿ ಸಾರಾಂಶ, ವ್ಯಾಕರಣ ವಿಶೇಷ, ಸಾಯಣ ಭಾಷ್ಯ ಇವುಗಳೊಂದಿಗೆ ೩೬ ಬೃಹತ್ ಸಂಪುಟಗಳಾಗಿ ಪ್ರಕಟಿಸಲಾಗಿದೆ. ಇಲ್ಲಿ ೧೦ ಪಾಯಿಂಟ್‌ನಿಂದ ೨೪ ಪಾಯಿಂಟ್‌ವರಿಗೆ ವಿವಿಧಗಾತ್ರದ ಕನ್ನಡ ಅಚ್ಚುಮೊಳೆಗಳು ಬಳಕೆಯಾಗಿವೆ. ಜಗತ್ತಿನ ಬೇರೆ ಯಾವುದೇ ಭಾಷೆಯಲ್ಲಿ ಇಡೀ ಋಗ್ವೇದವನ್ನು ಹೀಗೆ ಪ್ರಕಟಿಸಿಲ್ಲ. ಮುದ್ರಣ ತಾಂತ್ರಿಕತೆಯು ವಿಶೇಷ ಆಯಾಮಗಳನ್ನು ಪಡೆದಿರುವ ಇಂದಿಗೂ ಈ ಸಂಪುಟಗಳ ಮರುಮುದ್ರಣ ಕೋಟ್ಯಂತರ ರೂಪಾಯಿಗಳ ವೆಚ್ಚ ತಗಲುವ ಸಾಹಸ. ಇದು ಕನ್ನಡ ಪುಸ್ತಕೋದ್ಯಮಕ್ಕೆ ಮಹಾರಾಜರು ನೀಡಿದ ಕೊಡುಗೆ. ಇನ್ನೊಂದು ವಿಶೇಷ ಕಾರ್ಯಕ್ರಮ ಹಾಕಿಕೊಟ್ಟವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು. ಮೈಸೂರು ವಿಶ್ವವಿದ್ಯಾನಿಲಯದ ಮೊದಲನೆಯ ಘಟಿಕೋತ್ಸವದಲ್ಲಿ ಭಾಷಣ ಮಾಡುವಾದ ಅವರು ವಿಶ್ವವಿದ್ಯಾನಿಲಯದ ಮೆಟ್ಟಲು ಹತ್ತಲಾರದ ಜನಸಾಮಾನ್ಯರಿಗಾಗಿ ಜ್ಞಾನಗಂಗೆಯನ್ನು ಅವರಿರುವೆಡೆಗೇ ಒಯ್ಯುವುದು ವಿಶ್ವವಿದ್ಯಾನಿಲಯದ ಕರ್ತವ್ಯವಾಗಬೇಕು ಎಂದು ದೀಕ್ಷೆ ಕೊಟ್ಟರು. ರಾಜರ್ಷಿಯ ಸತ್ಸಂಕಲ್ಪ ಈಡೇರಿತು. ಅದೇ ಮೈಸೂರು ವಿಶ್ವವಿದ್ಯಾನಿಲಯದ ಇಂದಿನ ಪ್ರಸಾರಾಂಗದ ನಾಂದಿ. 'ಮೈಸೂರು ಪ್ರಯೋಗವಾದ' ಪ್ರಚಾರ ಪುಸ್ತಕಮಾಲೆ, ಪ್ರೊ। ಜಿ. ಹನುಮಂತರಾಯರು ಪ್ರಾರಂಭಮಾಡಿದ ಮಾಲಿಕೆ ಅತ್ಯಂತ ಜನಪ್ರಿಯವಾಗಿ, ಬೆಳೆದು ಟಿಸಿಲೊಡೆದು ಇಂದು ವಿಶ್ವವಿದ್ಯಾನಿಲಯಗಳ ಪ್ರಸಾರಾಂಗಗಳಿಗೆ ಮಾದರಿಯಾಗುವಂತಾಯಿತು. ಕರ್ನಾಟಕ, ಬೆಂಗಳೂರು, ಗುಲಬರ್ಗಾ, ಮಂಗಳೂರು, ಈಚೆಗೆ ಕನ್ನಡ ವಿಶ್ವವಿದ್ಯಾಲಯಗಳು "ಹೃದಯ"ವೆನಿಸಿದ ಪ್ರಸಾರಾಂಗಗಳನ್ನು ರೂಪಿಸಿವೆ, ಪ್ರಕಟಣ ಕಾರ್ಯದಲ್ಲಿ ತೊಡಗಿವೆ. ಜೊತೆಗೆ ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಸಾಹಿತ್ಯ ಅಕಾದೆಮಿ, ಕರ್ನಾಟಕ ಸಾಹಿತ್ಯ ಅಕಾದೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಕನ್ನಡ ಸಾಹಿತ್ಯ ಪರಿಷತ್ತು ಇವು ವ್ಯಾಪಕವಾದ ಪ್ರಕಟಣ ಕಾರ್ಯಕ್ರಮಗಳನ್ನು ಹಾಕಿಕೊಂಡಿವೆ. ಪುಸ್ತಕೋದ್ಯಮ ಇತಿಹಾಸದ ಎರಡನೆ ಕಾಲಾವಧಿಯ ವಿಶೇಷ ಬೆಳವಣಿಗೆ ಇದು. (೩) ಖಾಸಗಿ ಪ್ರಕಾಶಕರು ಕೆಲವು ಗಟ್ಟಿಯಾಗಿ ಉಳಿಯುವ ಸಂಸ್ಥೆಗಳನ್ನು ಕಟ್ಟಿದರು. ತಮ್ಮ ತನು ಮನ ಧನಗಳನ್ನು ಉದ್ಯಮಕ್ಕೆ ಧಾರೆಯೆರೆದರು. ಅವರಿಗೆ ಪುಸ್ತಕೋದ್ಯಮ ಹವ್ಯಾಸವಾಗಲಿಲ್ಲ, ಅದೇ ಪ್ರಮುಖ ವೃತ್ತಿಯಾಯಿತು. (೪) ನೂರಾರು ಜನ ಲೇಖಕ ಲೇಖಕಿಯರನ್ನು ಬೆಳಕಿಗೆ ತಂದರು. (೫) ಡೆಮ್ಮಿ ಅಷ್ಟ, ಕ್ರೌನ್ ಅಷ್ಟ ಅಳತೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾದುವು. ವಾಹಿನಿ ಪ್ರಕಾಶನವು ಕ್ರೌನ್ ಅಷ್ಟ ಅಳತೆಯಲ್ಲಿ ನೂರಾರು ಕಾದಂಬರಿಗಳನ್ನು ಪ್ರಕಟಿಸಿತು. (೬) ಕಲ್ಲಚ್ಚು ಮುದ್ರಣ ಮುಂತಾದ ವಿವಿಧ ಟೈಪ್ ಫೌಂಡ್ರಿಗಳ ಕನ್ನಡ ಅಕ್ಷರಗಳು ಬಳಕೆಯಲ್ಲಿದ್ದುವು. ಬಿಬಿಡಿ ಪವರ್ ಪ್ರೆಸ್, ಮೈಸೂರು ವೆಸ್ಲಿ ಪ್ರೆಸ್, ಈಸ್ಟರ್ನ್ ಪ್ರೆಸ್ ಇಂಥವು ಅತ್ಯುತ್ತಮ ಮುದ್ರಣ ಕೊಡುತ್ತಿದ್ದುವು.

ಮೂರನೆಯ ಕಾಲಾವಧಿಯು ನ್ಯಾಯವಾಗಿ ನನ್ನ ಸಮೀಕ್ಷೆಗೆ ಬರುವಂಥದಲ್ಲ. ಮುಂದಿನ ಪ್ರಬಂಧಕಾರರು ಅದನ್ನು ಚಿತ್ರಿಸಲು ನನಗಿಂತ ಸಮರ್ಥರು. ಆದರೆ ತುಲನಾತ್ಮಕ ದೃಷ್ಟಿಯಿಂದ ನಾಲ್ಕು ಮಾತು ಇಲ್ಲಿ ಕೂಡಿಸಬಯಸುತ್ತೇನೆ. (೧) ಈಗ ಪ್ರಕಾಶಕರ ಸಂಖ್ಯೆ ಹೆಚ್ಚು. (೨) ಪ್ರಮುಖ ಪ್ರಕಾಶಕರು ಪ್ರಮುಖ ಮಾರಾಟಗಾರರು ಅಥವಾ ವಿತರಕರೂ ಆಗಿದ್ದಾರೆ. ಇದು ವಿಶೇಷ ಪರಿಸ್ಥಿತಿ. ಅಂದರೆ ಪುಸ್ತಕ

ಪ್ರಕಾಶಕ ಲೇಖಕ ವ್ಯಾಪಾರಿ ಇವರ ನಡುವೆ ಇದ್ದ ಪರಸ್ಪರ ಅವಲಂಬನೆ ಈಗ ಅಷ್ಟಾಗಿ ಕಾಣುವುದಿಲ್ಲ. (೩) ನೂರು ವರ್ಷಗಳ ಹಿಂದೆ ವರ್ಷಕ್ಕೆ ೨೦೦ ಪುಸ್ತಕ ಪ್ರಕಟವಾಗುತ್ತಿದ್ದುದು ಈಗ ೧೫೦೦ಆಗಿದೆ; ಏಳು ಪಟ್ಟು ಹೆಚ್ಚು; (೪) ನಿರ್ದಿಷ್ಟ ವಿಷಯಗಳಿಗೆ ಬದಲಾಗಿ ಈಗ ಪುಸ್ತಕಕ್ಕೆ ವಸ್ತುವಾಗದ ವಿಷಯವೇ ಇಲ್ಲ. ಕಲ್ಪಿಸಿಕೊಳ್ಳಬಹುದಾದ ಎಲ್ಲ ವಿಷಯಗಳ ಬಗಗೂ ಪುಸ್ತಕಗಳು ಬರುತ್ತಿವೆ. ವಿಶ್ವಕೋಶಗಳು, ನಿಘಂಟುಗಳು, ಪರಾಮರ್ಶನ ಕೃತಿಗಳು, ಪಿಎಚ್.ಡಿ. ನಿಬಂಧಗಳು, ಲಲಿತ ಸಾಹಿತ್ಯ, ಕಥೆ, ಕಾದಂಬರಿ, ನಾಟಕ ಇತ್ಯಾದಿ, ವಿಜ್ಞಾನ, ಸಾಮಾಜಿಕ ಅಧ್ಯಯನ, ಮಾನವಿಕ ವಿಷಯಗಳು, ಉಪಯುಕ್ತ ಕಲೆ, ಆರೋಗ್ಯ, ಪರಿಸರ ಪಾಲನೆ ಇತ್ಯಾದಿ. ಬಾಲಸಾಹಿತ್ಯ, ವಯಸ್ಕಮಟ್ಟದ ಸಾಹಿತ್ಯ ರಾಶಿರಾಶಿಯಾಗಿ ಬರುತ್ತಿವೆ. (೫) ಕಲ್ಲಚ್ಚಿನಿಂದ ಮುಂದೆ ಬಂದು ಕೈಯಿಂದ ಕತ್ತಿದ ಬಿಡಿ ಮೊಳೆಗಳನ್ನು ಜೋಡಿಸಿದ ಲೆಟರ್ ಪ್ರೆಸ್ ಮುದ್ರಣ ದಾಟಿ, ಫೌಂಡ್ರಿ ಮೊಳೆಗಳು ಬಂದು, ಮಾನೋಟೈಪ್, ಲೈನೋಟೈಪ್‌ಗಳ ಹಂತ ಮುಗಿದು, ಫೋಟೋ ಕಂಪೋಸಿಂಗ್, ಕಂಪ್ಯೂಟರ್ ಸೆಟಿಂಗ್, ಡಿಟಿಪಿ,ಲೇಸರ್ ಪ್ರಿಂಟಿಂಗ್ ಹೀಗೆ ತಾಂತ್ರಿಕತೆಯು ಹತ್ತಾರು ಆಯಾಮಗಳಲ್ಲಿ ಪ್ರಗತಿ ಕಂಡಿದೆ. ಒಂದು ಗುಂಡಿ ಒತ್ತುವುದರಿಂದ ಪ್ಯಾರಾಗಳನ್ನು ಪುನರ್ ವ್ಯವಸ್ಥೆ ಮಾಡಬಹುದು, ಅಕ್ಷರಗಳನ್ನು ಎಷ್ಟು ಸಣ್ಣಗೆ ಬೇಕಾದರೂ ಕುಗ್ಗಿಸಬಹುದು, ಹಿಗ್ಗಿಸಬಹುದು, ಆಕಾರ ಬದಲಿಸಬಹುದು. (೬) ಯಾಂತ್ರೀಕೃತ ರಟ್ಟು ಕಟ್ಟುವಿಕೆ, ಮೂರು ಮುಖ ಕತ್ತರಿಸುವುದು, ರಕ್ಷಾಪುಟಕ್ಕೆ ವಾರ್ನಿಷ್ ಟಿಂಟ್ ಹಾಕುತ್ತಿದ್ದುದು ಹಳತಾಗಿ ಈಗ ಲ್ಯಾಮಿನೇಷನ್ ಯುಗ ಕಾಲಿರಿಸಿದೆ. (೭) ಮುಂದಿನಿಂದ ಒಂದು, ಹಿಂದಿನಿಂದ ಒಂದು ಹೀಗೆ ಎರಡೆರಡು ಕಿರುಕಾದಂಬರಿಗಳನ್ನು ಒಟ್ಟಿಗೆ ರಟ್ಟುಕಟ್ಟಿದ 'ಜೋಡಿಕಾದಂಬರಿ'ಗಳೂ ಬಂದಿವೆ.

ಆದರೆ ಇನ್ನೊಂದು ವಿಶೇಷಾಂಶವನ್ನೂ ಗಮನಿಸಬೇಕು. ಕನ್ನಡದಲ್ಲಿ ಹಿಂದಿನಂತೆ ಪುಸ್ತಕೋದ್ಯಮಕ್ಕೆ ತೆತ್ತುಕೊಂಡು, ಅದನ್ನು ಪವಿತ್ರ ವೃತ್ತಿಯಾಗಿ ಬೆಳೆಸಿಕೊಂಡು ಬಂದ ಪ್ರಕಾಶಕರು ಹೆಚ್ಚಾಗಿ ಉಳಿದಿಲ್ಲ. ಈಗ ಪ್ರಧಾನವಾಗಿ ಉಳಿದಿರುವ ಪ್ರಕಾಶಕರ ಸಂಖ್ಯೆಯೇ ಬೆರಳೆಣಿಕೆಯಷ್ಟು ಕಡಿಮೆ. ಅವರೂ ಉದ್ಯಮದಲ್ಲಿ ಉತ್ಸಾಹ ಕಳೆದುಕೊಂಡಿದ್ದಾರೆ. ಹೊಸ ಲೇಖಕರಿಗೆ ಅವಕಾಶ ದೊರಕುತ್ತಿಲ್ಲ. ಹಾಗಾಗಿ ಈಗ ಕನ್ನಡ ಪುಸ್ತಕೋದ್ಯಮದಲ್ಲಿ ತಮ್ಮ ಕೃತಿಗಳನ್ನು ತಾವೇ ಪ್ರಕಟಿಸುವ "ಲೇಖಕ-ಪ್ರಕಾಶಕ" ತಂಡ ಹೆಚ್ಚಾಗಿದೆ. ಇದು ಕನ್ನಡದ್ದೇ ವಿಶೇಷ ಪರಿಸ್ಥಿತಿಯೋ ಹೇಗೆ, ನನಗೆ ತಿಳಿಯದು. ಇವರಿಗೆ ಅನುಭವವಿಲ್ಲ, ಮಾರಾಟದ ಜಾಲವಿಲ್ಲ, ಪ್ರಸರಣದ ವ್ಯವಸ್ಥೆಯಿಲ್ಲ. ಬ್ಯಾಂಕುಗಳಲ್ಲಿ ಸಾಲಮಾಡಿ ಅಥವಾ ಕೂಡಿಟ್ಟ ಹಣ ಸುರಿದು ಪುಸ್ತಕ ಪ್ರಕಟಿಸಿ ಆಸೆ ಪೂರೈಸಿಕೊಳ್ಳುತ್ತಾರೆ. ಅಲ್ಲಿಗೆ ತೀರಿತು. ಪುಸ್ತಕಗಳು ಅವರ ಬಳಿಯೇ ಉಳಿಯುತ್ತವೆ. ಅವರಿಗೆ ಹತಾಶೆ, ಹಣದ ಮುಗ್ಗಟ್ಟು ಅನಿವಾರ್ಯವಾಗುತ್ತದೆ. ಈಗ ಪುಸ್ತಕೋದ್ಯಮ ಉಳಿಸಿರುವವರು ಬಹುತೇಕ ಇವರೇ ಎಂದರೇ ಸತ್ಯದೂರವಾಗದು. ಈ ಪರಿಸ್ಥಿತಿಗೆ ಏನು ಕಾರಣ? ಮುಂದಿನ ಪ್ರಬಂಧವು ಈ ದಿಸೆಯಲ್ಲಿ ಬೆಳಕು ಚೆಲ್ಲುತ್ತದೆಂದು ಭಾವಿಸುತ್ತೇನೆ.

ಇದರಿಂದಾಗಿ ಈಗ ಯಾವ ಪುಸ್ತಕ ಎಲ್ಲಿ ಪ್ರಕಟವಾಗಿದೆ ಎಂಬ ಮಾಹಿತಿ ದೊರಕುವುದೇ ಕಷ್ಟವಾಗಿದೆ. ಗ್ರಂಥಲೋಕವು ಹದಿನೇಳು ವರ್ಷ ಈ ಕೆಲಸ ಮಾಡಿತು. ಅದೀಗ ಕಳೆದುಹೋದ ಕಥೆ. ಈಗ ಕನ್ನಡ ವಿಶ್ವವಿದ್ಯಾಲಯವು ಅದೇ ಕೆಲಸ ಮಾಡುತ್ತಿದ್ದರೂ ಅದು ಏನೇನೂ ಸಾಲದು. ಈಗ ಕನ್ನಡ ಪುಸ್ತಕ ಪ್ರಾಧಿಕಾರವು ಈ ವಿಚಾರವನ್ನು ಆದ್ಯತೆಯ ಮೇರೆಗೆ ಕೈಗೆತ್ತಿಕೊಳ್ಳಬೇಕು. ಲೇಖಕ-ಪ್ರಕಾಶಕ ಮಿತ್ರರ ನೆರವಿಗೆ ಬಂದು ಪುಸ್ತಕೋದ್ಯಮವು ಕುಸಿಯದಂತೆ ಆಧಾರ ಕೊಡಬೇಕು. ಮೊದಲು ಮಾಹಿತಿ ಸಂಗ್ರಹ

ಪ್ರಕಟಣೆಗಳಿಗೆ ವ್ಯವಸ್ಥೆ ಮಾಡಬೇಕು. ಇತರ ಸಂಸ್ಥೆಗಳಾದ ನ್ಯಾಬುಟ್ರ, ಸಾಹಿತ್ಯ ಅಕಾದೆಮಿ, ಎಲ್ಲಾ ವಿಶ್ವವಿದ್ಯಾನಿಲಯಗಳು, ಕನ್ನಡ ಸಾಹಿತ್ಯ ಪರಿಷತ್ತು ಮೊದಲಾದವು ಮಾಡುವ ಪ್ರಕಟಣೆಯ ಕಾರ್ಯವನ್ನೇ ಪ್ರಾಧಿಕಾರವೂ ನಡೆಸುವುದರಿಂದ ಪರಿಸ್ಥಿತಿಯಲ್ಲಿ ಏನೂ ಸುಧಾರಣೆಯಾಗಲಾರದು.

ಕನ್ನಡ ಪುಸ್ತಕೋದ್ಯಮವು ಸುದೀರ್ಘ ಹಿನ್ನಲೆಯುಳ್ಳದ್ದು, ಸಮೃದ್ಧವಾದ ಬೆಲೆಯನ್ನು ಹೊಂದಿರುವಂಥದು. ನಮ್ಮ ಪರಂಪರೆ ಎಂಥದು ಎಂಬುದರ ಅರಿವನ್ನು ಮೊದಲು ನಾವು ಮಾಡಿಕೊಳ್ಳಬೇಕು. ಈ ಕೆಲವು ಪ್ರಥಮಗಳನ್ನು ಗಮನಿಸಿ: **ಮೊದಲ ಅನುವಾದ** (ಧರ್ಮವನ್ನು ಹೊರತುಪಡಿಸಿ)- ಶ್ರೀರಾಮಕಥಾರಂಜನ: ಕನ್ಯಾಪತಿ ಲಕ್ಷ್ಮೀನರಸಿಂಹ ಕವಿ, ೧೮೬೭, ಮದರಾಸು ಸರಸ್ವತೀ ನಿಲಯ ಮುದ್ರಾಕ್ಷರ ಶಾಲೆ: **ಮೊದಲ ಕಾದಂಬರಿ** - ಕಮಲಾಕ್ಷ ಪದ್ಮಗಂಧಿಯರ ಕಥೆ: ವೆಂಕಟೇಶ ಭೀಮರಾವ ಭಂಡಿವಾಡ ೧೮೮೧ ಸಮಾಚಾರ ಪ್ರೆಸ್: **ಮೊದಲ ನಾಟಕ** - ಉಷಾ ಪರಿಣಯ ನಾಟಕ: ತಮ್ಮಪ್ಪ ಸತ್ಯಪ್ಪ ಚಿಕ್ಕೋಡಿ, ೧೮೮೩ ವಿಚಾರದರ್ಪಣ ಮುದ್ರಾಶಾಲೆ: **ಮೊದಲ ಕಥಾಸಂಕಲನ** - ಮರ್ಯಾದೆ ರಾಮಣ್ಣನವರ ಕಥೆಗಳು: ಮಾಲೂರು ಎಸ್. ಕೃಷ್ಣಯ್ಯ ೧೮೯೯ ಶಾರದ ಮುದ್ರಾಕ್ಷರ ಶಾಲೆ: **ಮೊದಲ ಗದ್ಯ** - ರೇಣುಕಾಚರಿತೆಯೆಂಬ ವಚನ ಕಾವ್ಯವು: ಪ್ರೌಢಲಿಂಗಾರ್ಯ ತನಯ ೧೮೭೬ ವಿಚಾರದರ್ಪಣ: ಸೌಗಂಧಿಕಾ ಪರಿಣಯ: ಮುಮ್ಮಡಿ ಕೃಷ್ಣರಾಜ ೧೮೭೮ ಜಗನ್ಮೋಹನ: **ಮೊದಲ ಬಾಲಸಾಹಿತ್ಯ ಕೃತಿ** - ಈಸೋಪನ ನೀತಿ ಕಥೆಗಳು: ಸಂ: ಎಲಿಯಟ್ ೧೮೪೫ ಬಾಸೆಲ್ ಮಿಶನ್ ಪ್ರೆಸ್. ಕನ್ನಡದಲ್ಲಿ ಒಂದಲ್ಲ ಐದು ವಿಶ್ವಕೋಶಗಳಿವೆ (ಬಾಲಪ್ರಪಂಚ, ವಿಜ್ಞಾನ ಪ್ರಪಂಚ, ಜ್ಞಾನಗಂಗೋತ್ರಿ, ಕನ್ನಡ ವಿಶ್ವಕೋಶ, ವಿಷಯ ವಿಶ್ವಕೋಶ ಕರ್ನಾಟಕ); ಬೃಹತ್ ಕನ್ನಡ ನಿಘಂಟು ಬರುತ್ತಿದೆ (ಎಂಟು ಸಂಪುಟಗಳು); ಸಾಹಿತ್ಯಕ ವಿಶ್ವಕೋಶವಿದೆ; ಸಮಗ್ರ ವಚನವಾಙ್ಮಯ ಸಂಪುಟಗಳು ಬಂದಿವೆ; ಸಮಗ್ರ ಹರಿದಾಸ ವಾಙ್ಮಯ ಸಂಪುಟಗಳ ಸಿದ್ಧತೆ ಆಗುತ್ತಿದೆ ಎಂದು ಕೇಳಿದ್ದೇನೆ; ಕನ್ನಡ ಗ್ರಂಥಸೂಚಿಯ ಹನ್ನೊಂದು ಸಂಪುಟಗಳು ಬಂದಿವೆ. ಪೂರ್ಣಗೊಂಡಾಗ ಸುಮಾರು ಎಂಬತ್ತು ಸಾವಿರ ಕನ್ನಡ ಪುಸ್ತಕಗಳ ಗ್ರಂಥಸೂಚೀ ಮಾಹಿತಿ ಇಲ್ಲಿ ದೊರಕುತ್ತದೆ. ಇನ್ನು ನಾನು ಸೂಚಿಸಿದ ಮೂರನೆಯ ಕಾಲಾವಧಿಯಲ್ಲಿ ವ್ಯಾಪಕವಾದ ಕೆಲಸ ಮಾಡಿದ ಐಬಿಎಚ್ ಪ್ರಕಾಶನ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ., ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ತು ಇವೆಲ್ಲ ಮುಂದಿನ ಪ್ರಬಂಧದ ವಸ್ತುವಾಗುತ್ತವೆ. ಐ.ಬಿ.ಎಚ್. ಅನೇಕ ಪ್ರಥಮಗಳನ್ನು ಸ್ಥಾಪಿಸಿದೆ; ಅಮರಚಿತ್ರ ಕಥೆ, ಭಾರತ-ಭಾರತಿ ಪುಸ್ತಕ ಸಂಪದ, ವಿಶ್ವಕಥಾಕೋಶ ಈ ಸರಣಿಗಳಿಗೆ ಪುಸ್ತಕಾಸಕ್ತರೆಲ್ಲ ಕೃತಜ್ಞರಾಗಿರುತ್ತಾರೆ. ಹಾಗೆಯೇ ಬಾಲಸಾಹಿತ್ಯ ಮಂಡಲದ ಒಂದಾಣೆಮಾಲೆಯನ್ನು ನೆನಪಿಗೆ ತರುವ ಕಸಾಪ ಕಿರಿಯರ ಸಾಹಿತ್ಯಮಾಲೆ, ಕನ್ನಡ ಕಂದ ಪುಸ್ತಕಮಾಲೆಗಳನ್ನೂ ಮರೆಯಲಾಗದು.

೧೮೧೭ರಿಂದ ಪ್ರಾರಂಭವಾದ ಕನ್ನಡ ಪುಸ್ತಕೋದ್ಯಮದ ಬೆಳವಣಿಗೆ ಅತ್ಯದ್ಭುತವೂ ರೋಮಾಂಚಕಾರಿಯೂ ಆದ ಅಧ್ಯಯನ ವಿಷಯ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಸೂಚಿಗಾಗಿ ಮಾಹಿತಿ ಸಂಗ್ರಹಿಸಲು ದೇಶಾದ್ಯಂತ ವಿವಿಧ ಗ್ರಂಥಾಲಯಗಳಲ್ಲಿ ಕೆಲಸಮಾಡಿ ಆ ರೋಮಾಂಚನವನ್ನು ಸ್ವಲ್ಪಮಟ್ಟಿಗಾದರೂ ಅನುಭವಿಸಿದ್ದೇನೆ. ಡಾ. ಶ್ರೀನಿವಾಸ ಹಾವನೂರರ ಅಧ್ಯಯನವು (ಹೊಸಗನ್ನಡ ಅರುಣೋದಯ) ನಿಂತಲ್ಲಿಂದ ಇಂದಿನವರೆಗಿನ ಪುಸ್ತಕೋದ್ಯಮದ ಬೆಳವಣಿಗೆ ಕೂಲಂಕಷ ಅಧ್ಯಯನಕ್ಕೆ ಒಳಗಾಗಬೇಕಾಗಿದೆ. ಅದು ಬಹಳ ಕಷ್ಟದ ಕೆಲಸವೂ ಹೌದು. ಗ್ರಂಥಾಲಯಗಳ ಪಾತ್ರ; ಸರಕಾರದ ಸಗಟು ಕೊಳ್ಳಿಕೆಯು ಉದ್ಯಮದ ಮೇಲೆ ಮಾಡಿರುವ ಪರಿಣಾಮ; ಪ್ರಕಾಶನ-ಮಾರಾಟ ಬೇರೆ

ಬೇರೆಯಾಗಿರುವುದು ವಿಹಿತವೆ ಅಥವಾ ಒಟ್ಟಿಗೇ ಇರಬೇಕೆ ಎಂಬ ವಿಷಯ; ಸರಕಾರಿ, ಅರೆಸರಕಾರಿ ಸಂಸ್ಥೆಗಳು ಉದ್ಯಮದ ಬೆಳವಣಿಗೆಗೆ ಹೇಗೆ ನೆರವಾಗಬೇಕು, ಕೆಲಸದ ಪುನರುಕ್ತಿಯಷ್ಟೇ ಇವರ ಕೆಲಸವಾದರೆ ಸಾಕೆ? ಇಂತಹ ಪ್ರಶ್ನೆಗಳನ್ನೆಲ್ಲ ಎತ್ತಿಕೊಂಡು ಅಧ್ಯಯನ ನಡೆಯಬೇಕು. ಆ ಅಧ್ಯಯನಕ್ಕೆ ಇಂತಹ ವಿಚಾರ ಸಂಕಿರಣಗಳು ಪ್ರೇರಕವಾಗಲಿ ಎಂದು ಆಶಿಸುತ್ತೇನೆ. ಅಸಮಗ್ರವಾದರೂ ಈ ಪ್ರಬಂಧವನ್ನು ತಾಳ್ಮೆಯಿಂದ ಆಲಿಸಿದ ತಮಗೂ, ಈ ಅವಕಾಶ ಕಲ್ಪಿಸಿಕೊಟ್ಟ ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ಪ್ರಕಾಶಕರ ಸಂಘಗಳಿಗೂ ಕೃತಜ್ಞನಾಗಿದ್ದೇನೆ. ನಮಸ್ಕಾರ.

---

* ಆರ್. ಎಲ್. ಅನಂತರಾಮಯ್ಯ, ನಂ. ೪೯, ಅಕ್ಷಯ, ತೊಣಚಿಕೊಪ್ಪಲು ಬಡಾವಣೆ, ಸರಸ್ವತೀಪುರಂ, ಮೈಸೂರು - ೫೭೦ ೦೦೯.

ಭಾರತದಲ್ಲಿ ಪುಸ್ತಕೋದ್ಯಮ ಮತ್ತು ಅದರ ಸಮಸ್ಯೆಗಳು

ಸಾ. ಮಂಚಯ್ಯ

ಪ್ರಾಚೀನ ಕಾಲದಲ್ಲಿ ಜ್ಞಾನಪ್ರಸಾರ ಕಷ್ಟಕರವಾಗಿತ್ತು. ಉತ್ಕೃಷ್ಟ ಗ್ರಂಥಗಳನ್ನು ಬಾಯಿಪಾಠ ಮಾಡುವುದರ ಮೂಲಕ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾವಣೆ ಮಾಡುತ್ತಿದ್ದರು. ವೇದ ಸಾಹಿತ್ಯ ಸಾಗಿಬಂದುದೇ ಈ ಮಾರ್ಗದಲ್ಲಿ. ಕಾಗದದ ತಯಾರಿಕೆಯೂ ತಿಳಿದಿರಲಿಲ್ಲ. ರಾಜರುಗಳು ಮತ್ತು ಧನಿಕರುಗಳು ಕೆಲವು ನೂರುಗಳಷ್ಟು ಹಸ್ತಪ್ರತಿಗಳನ್ನು ನಕಲುಮಾಡಿಸಿ ಖ್ಯಾತ ವಿದ್ವಾಂಸರಿಗೆ ಹಂಚುತ್ತಿದ್ದರು. ಹಾಗೆ ಮಾಡುವುದು ಕೀರ್ತಿ ತರುವುದೆಂದು ತಿಳಿದಿದ್ದುದಲ್ಲದೆ ಅಂತಹ ಅಪೂರ್ವ ಗ್ರಂಥಗಳನ್ನು ಮನೆಯಲ್ಲಿ ಸಂಗ್ರಹಿಸುವುದು ಸಮಾಜದಲ್ಲಿ ತಮ್ಮ ಸ್ಥಾನಗೌರವ ಹೆಚ್ಚಿಸುವುದೆಂಬ ನಂಬಿಕೆಯೂ ಇತ್ತು. ಇದರಿಂದಾಗಿ ಶ್ರೀಸಾಮಾನ್ಯರಿಗೆ ಈ ಗ್ರಂಥಗಳು ಲಭ್ಯವಾಗುತ್ತಿರಲಿಲ್ಲ. ಅಲ್ಲದೆ ಓದು ಬರಹ ಬಲ್ಲವರ ಸಂಖ್ಯೆಯೂ ಅತ್ಯಲ್ಪವಿದ್ದುದರಿಂದ ಈ ಗ್ರಂಥಗಳಿಗೆ ಅಧಿಕ ಬೇಡಿಕೆಯೂ ಇರಲಿಲ್ಲ.

ಮುದ್ರಣಯಂತ್ರದ ಆವಿಷ್ಕಾರ

ಮುದ್ರಣಯಂತ್ರದ ಆವಿಷ್ಕಾರ ಮತ್ತು ಕಾಗದದ ತಯಾರಿಕೆ ಮಾನವ ಇತಿಹಾಸದಲ್ಲೊಂದು ಮೈಲಿಗಲ್ಲು. ಪುಸ್ತಕ ಮುದ್ರಣ, ಪ್ರಕಟಣೆ ಮತ್ತು ವಿತರಣೆ ಜ್ಞಾನ ಪ್ರಸಾರಕಾರ್ಯವನ್ನು ಸುಲಭಗೊಳಿಸಿತು. ಹಲವು ಲಕ್ಷ ಪ್ರತಿಗಳನ್ನು ಕೆಲವೇ ದಿನಗಳಲ್ಲಿ ಮುದ್ರಿಸಿ, ಮೈಕಟ್ಟು (Binding). ಮೇಲು ಹೊದಿಕೆ ಹೊದಿಸಿ ಪ್ರಕಟಿಸಿ ವಿತರಿಸಲು ಸಾಧ್ಯವಾಗುವ ಮಟ್ಟಿಗೆ ಮುದ್ರಣ ತಾಂತ್ರಿಕತೆ ಅಭಿವೃದ್ಧಿ ಹೊಂದಿದೆ. ಇಂದು ಇಂಗ್ಲಿಷ್ ಭಾಷೆಯಲ್ಲಿ, ಅಷ್ಟೇಕೆ ಪ್ರಪಂಚದ ಯಾವುದೇ ಭಾಷೆಯಲ್ಲಿ ಪ್ರಕಟವಾದ ಯಾವುದೇ ಪುಸ್ತಕ ಅದರ ಪ್ರಾಮುಖ್ಯವನ್ನು ಆಧರಿಸಿ ಪ್ರಪಂಚದ ಇತರ ಹಲವು ಭಾಷೆಗಳಲ್ಲಿ ಅನುವಾದದ ಮೂಲಕ ಓದುಗರ ಕೈಸೇರುವುದು. ಹಾಗೆಯೇ ರಾಷ್ಟ್ರ ಭಾಷೆ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ರಚನೆಯಾದ ಪುಸ್ತಕಗಳೂ ಅತ್ಯಲ್ಪಕಾಲದಲ್ಲಿ ಉದ್ದೇಶಿತ ಓದುಗರ ಕೈಸೇರುವುವು. ಸಂಚಾರ ಮತ್ತು ಸಂವಹನ ಕ್ಷೇತ್ರದಲ್ಲಾಗಿರುವ ಕ್ರಾಂತಿಕಾರಿ ಪ್ರಗತಿ ವಿಶ್ವವನ್ನು ಸಂಕುಚಿತಗೊಳಿಸಿ ಪರಸ್ಪರ ಪ್ರಭಾವ ಬೀರುವಿಕೆ ಮತ್ತು ಪರಸ್ಪರ ಅವಲಂಬನವನ್ನು ಅನಿವಾರ್ಯವಾಗಿಸಿದೆಯಲ್ಲದೆ ಸುಲಭವಾಗಿಯೂ ಮಾಡಿದೆ. ಈ ಪರಿಸ್ಥಿತಿ ಪುಸ್ತಕೋದ್ಯಮಕ್ಕೆ ಮತ್ತಷ್ಟು ಉತ್ತೇಜನ ನೀಡಿದೆ.

ಪುಸ್ತಕೋದ್ಯಮ

ಅಭಿವೃದ್ಧಿ ಹೊಂದಿದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪುಸ್ತಕೋದ್ಯಮ ಸುಮಾರು ಐದು ನೂರು ವರ್ಷಗಳ ಹಿಂದೆ ಪ್ರಾರಂಭವಾಯಿತು. ಆದರೆ ಭಾರತದಲ್ಲಿ ಅದು ಕೇವಲ ನೂರು ವರ್ಷಗಳ ಹಿಂದೆಯಷ್ಟೇ ಪ್ರಾರಂಭವಾಗಿ ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇದೆ. ಅಭಿವೃದ್ಧಿ ಹೊಂದಿದ ಪಾಶ್ಚಿಮಾತ್ಯ ದೇಶಗಳಲ್ಲಿ ಆರ್ಥಿಕ ಅಭಿವೃದ್ಧಿ ಮತ್ತು ಸಾಂಸ್ಕೃತಿಕ ಪ್ರಗತಿಯ ಅವಿಭಾಜ್ಯ ಭಾಗವೆಂದು ಭಾವಿಸಬಹುದಾದ ಉದ್ಯಮವೆಂದು ಪರಿಗಣಿತವಾಗಿ ಪುಸ್ತಕೋದ್ಯಮ ತನ್ನ ಪ್ರಾರಂಭದ ದಿನಗಳ ಅನನುಭವದ ಹಂತಗಳನ್ನು ದಾಟಿಕೊಂಡು ಸುವ್ಯವಸ್ಥಿತ ಉದ್ಯಮವಾಗಿ ಬೆಳೆದಿದೆ. ಮ್ಯಾಕ್‌ಮಿಲನ್, ಮಾಕ್‌ಗ್ರಾಹಿಲ್, ಎಲ್ಸೆವಿಯರ್ ಸೈಂಟಿಫಿಕ್ ಪಬ್ಲಿಷಿಂಗ್ ಕಂಪನಿ, ಆಕ್ಸ್‌ಫರ್ಡ್ ಪ್ರೆಸ್-ಇವೇ ಮುಂತಾದವುಗಳ ಬೆಳವಣಿಗೆಯ ಇತಿಹಾಸವನ್ನು ಅಧ್ಯಯನ ಮಾಡಿದರೆ ಇದು ಸ್ಪಷ್ಟವಾಗುವುದು. ಪುಸ್ತಕೋದ್ಯಮ ಕ್ಷೇತ್ರದಲ್ಲಿ ಇವು ಪ್ರತಿಷ್ಠಿತ ಸಂಸ್ಥೆಗಳು. ಇವುಗಳ ಜೊತೆಗೆ ಹೆಸರು ಪಡೆದಿರುವ ಇನ್ನೂ ಅನೇಕ ಸಂಸ್ಥೆಗಳಿವೆ. ಇಂತಹ ಸಂಸ್ಥೆಗಳಲ್ಲಿ ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್ ಕೂಡ ಒಂದು. ಇವು ಪುಸ್ತಕೋದ್ಯಮ ಕ್ಷೇತ್ರದಲ್ಲಿ ಅಪೂರ್ವವಾದ ಸೇವೆ ಸಲ್ಲಿಸುತ್ತಿರುವುದಲ್ಲದೆ ವಿಶ್ವವ್ಯಾಪಿ ವ್ಯವಹಾರವುಳ್ಳವುಗಳಾಗಿಯೂ ಇವೆ. ಅವುಗಳಿಗೆ ವಿಶ್ವಾದ್ಯಂತ ಮಾರುಕಟ್ಟೆ ಇದ್ದು ಅವುಗಳ ಉದ್ಯಮ ನಿರಂತರವಾಗಿ ಸಾಗಲು ಸಾಧ್ಯವಾಗಿದೆ. ಅವುಗಳು ಹಲವು ವರ್ಷಗಳ ಅನುಭವದಿಂದ ಪುಸ್ತಕೋದ್ಯಮ ಮತ್ತು ಮಾರಾಟಕ್ಕೆ ಸಂಬಂಧಿಸಿದ ತಾತ್ವಿಕ ಮತ್ತು ಕಲೆಗೆ ಸಂಬಂಧಿಸಿದ ಜ್ಞಾನ ಗಳಿಸಿಕೊಂಡಿವೆ.

ಭಾರತದಲ್ಲಿ

ಭಾರತದಲ್ಲಿ ಪುಸ್ತಕೋದ್ಯಮ ಪ್ರಾರಂಭವಾಗಿ ಕೇವಲ ನೂರು ವರ್ಷಗಳು ಆಗಿವೆ. ಈ ಅವಧಿಯಲ್ಲಿ ಅದು ಸುವ್ಯವಸ್ಥಿತವಾಗಿ ಬೆಳೆದು ಲಾಭದಾಯಕವಾದ ಉದ್ಯಮ ಆಗಬಹುದಾಗಿತ್ತಾದರೂ ಅದು ಒಂದು ವ್ಯವಸ್ಥಿತ ಉದ್ಯಮವಾಗಿ ಬೆಳೆದಿಲ್ಲ. ಇಂದು ಕೂಡ ಪುಸ್ತಕೋದ್ಯಮ ಒಂದು ಉದ್ಯಮವೋ, ಸೇವೆಯೋ ಎಂದು ಚರ್ಚಿಸಲು ಪ್ರಯತ್ನಿಸುತ್ತಿದ್ದೇವೆ. ಪುಸ್ತಕ ರಚನಾ ಕಾರ್ಯದಲ್ಲಿ ತೊಡಗುವ ಲೇಖಕರು, ಮುದ್ರಕರು, ಪ್ರಕಾಶಕರು ಮತ್ತು ಮಾರಾಟಗಾರರು ಯಾವುದೇ ರೀತಿಯ ಪ್ರತಿಫಲ ಇಲ್ಲದೆ ಈ ಕಾರ್ಯದಲ್ಲಿ ತಮ್ಮ ಅಮೂಲ್ಯ ಆಲೋಚನೆ, ಸಮಯ, ಶಕ್ತಿ ಮತ್ತು ಹಣ ವ್ಯಯಿಸಲು ಸಿದ್ಧರಿಲ್ಲ; ಅಂತಹವರಿರುವರೆಂದು ಭಾವಿಸುವುದೂ ವಾಸ್ತವಾಂಶಕ್ಕೆ ವಿರುದ್ಧವಾಗಿರುತ್ತದೆ. ತಮ್ಮ ಜೀವನ ನಿರ್ವಹಣೆಗೆ ಆಧಾರವಾಗಿ ಈ ಚಟುವಟಿಕೆಗಳಲ್ಲಿ ಹಲವರು ತೊಡಗಿದ್ದಾರೆ. ಇದು ಉದ್ಯೋಗ ಸೃಷ್ಟಿಸುವ ಉದ್ಯಮವೂ ಹೌದು. ಆದುದರಿಂದ ಪುಸ್ತಕೋದ್ಯಮ ಸೇವೆಯಲ್ಲ; ಅದು ಬಂಡವಾಳ ಅಪೇಕ್ಷಿಸುವ ಒಂದು ಉದ್ಯಮ. ಇತರ ಉದ್ಯಮಗಳಲ್ಲಿ ತೊಡಗಿರುವವರಂತೆ ಈ ಉದ್ಯಮದಲ್ಲಿ ತೊಡಗುವವರು ಲಾಭಾಕಾಂಕ್ಷಿಗಳಾಗಿರುವುದು ಸಹಜ. ಭಾರತದಲ್ಲಿ ಈ ಉದ್ಯಮದಲ್ಲಿ ತೊಡಗಿರುವ ಅನೇಕರಿಗೆ ಈ ಉದ್ಯಮಕ್ಕೆ ಸಂಬಂಧಿಸಿದ ತಾಂತ್ರಿಕ ಜ್ಞಾನ ಇಲ್ಲದಿರುವುದೂ ಪ್ರಗತಿಯ ಹಾದಿಯಲ್ಲಿ ತೊಡಕಾಗಿ ನಿಂತಿದೆ. ಅನೇಕ ಪ್ರಕಾಶಕರು ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುವರು; ಅಷ್ಟೇ ಅನಿರೀಕ್ಷಿತ ರೀತಿಯಲ್ಲಿ ಮರೆಯಾಗುವರು. ಭಾರತದಲ್ಲಿ ವ್ಯವಸ್ಥಿತ ರೀತಿಯಲ್ಲಿ ಉದ್ಯಮವನ್ನು ನಡೆಸಿಕೊಂಡು ಬರುತ್ತಿರುವ ಸಂಸ್ಥೆಗಳು ಬೆರಳೆಣಿಕೆಯಷ್ಟು. ಅವೂ ಕೂಡ ಅನೇಕ ಎಡರು

ತೊಡರುಗಳನ್ನು ಅನುಭವಿಸಿವೆ; ಅನುಭವಿಸುತ್ತಿವೆ. ಅನಾರೋಗ್ಯಕರವಾದ ಸ್ಪರ್ಧೆ, ರಾಜಕೀಯ ಒತ್ತಡ, ಪ್ರಭಾವ ಮತ್ತು ಪುಸ್ತಕಗಳನ್ನು ಕೊಳ್ಳುವುದರಲ್ಲಿ ಆಗುತ್ತಿರುವ ಭ್ರಷ್ಟಾಚಾರ - ಇವೆಲ್ಲವೂ ಭಾರತದಲ್ಲಿ ಪುಸ್ತಕೋದ್ಯಮ ಅನುಭವಿಸುತ್ತಿರುವ ಸಮಸ್ಯೆಗಳು.

ಪುಸ್ತಕೋದ್ಯಮದ ಎರಡು ಗುಂಪುಗಳು

ಪುಸ್ತಕೋದ್ಯಮವನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು: (೧) ಇಂಗ್ಲಿಷ್ ಮತ್ತು ಭಾರತೀಯ ಭಾಷೆಗಳಲ್ಲಿ ಪುಸ್ತಕ ಪ್ರಕಟಣೆ ಮತ್ತು ಪಾಶ್ಚಾತ್ಯ ದೇಶಗಳ ಪುಸ್ತಕೋದ್ಯಮಿಗಳು ಪ್ರಕಟಿಸಿದ ಪುಸ್ತಕಗಳನ್ನು ವ್ಯಾಪಾರ ಒಪ್ಪಂದದ ಮೂಲಕ ದೇಶದ ಓದುಗರಿಗ ಸುಲಭ ಬೆಲೆಯ ಆವೃತ್ತಿಗಳನ್ನು ಪ್ರಕಟಿಸುವ ಪುಸ್ತಕೋದ್ಯಮಿಗಳು; (೨) ಪ್ರಾದೇಶಿಕ ಭಾಷೆಗಳಲ್ಲಿ ಪುಸ್ತಕಗಳನ್ನು ಪ್ರಕಟಿಸುವ ಪುಸ್ತಕೋದ್ಯಮಿಗಳು. ಮೊದಲ ವರ್ಗದ ಪುಸ್ತಕೋದ್ಯಮಿಗಳು ವಿದ್ವಾಂಸರ, ಸಂಶೋಧಕರ ಮತ್ತು ವಿದ್ಯಾರ್ಥಿ ಸಮೂಹದ ಬೇಡಿಕೆಗಳನ್ನು ಪೂರೈಕೆ ಮಾಡುತ್ತಾರೆ. ಅವರಿಗೆ ದೇಶದೊಳಗ ಮತ್ತು ದೇಶದ ಹೊರಗ ವಿಸ್ತೃತ ಮಾರುಕಟ್ಟೆ ಇದೆ. ಎರಡನೇ ವರ್ಗದ ಪುಸ್ತಕೋದ್ಯಮಿಗಳು ಪ್ರಕಟಿಸುವ ಪುಸ್ತಕಗಳಿಗೆ ಸೀಮಿತವಾದ ಮಾರುಕಟ್ಟೆ ಇದೆ. ಅಂದರೆ ಅವರ ಪುಸ್ತಕಗಳಿಗೆ ಪ್ರಾದೇಶಿಕ ಮಾರುಕಟ್ಟೆ ಮಾತ್ರ ಇದೆ. ಅವರು ಪ್ರಕಟಿಸುವ ಪುಸ್ತಕಗಳ ಒಂದೆರಡು ಸಾವಿರ ಪ್ರತಿಗಳು ಮಾರಾಟವಾಗುವುದೂ ಕಷ್ಟವೇ. ಅಷ್ಟು ಪ್ರತಿ ಮಾರಾಟವಾಗಲು ಕನ್ನಡ ಪುಸ್ತಕಗಳ ಸಗಟು ಖರೀದಿ ಮತ್ತು ರಾಜ್ಯ ಗ್ರಂಥಾಲಯ ಇಲಾಖೆಯ ಮೊರೆ ಹೋಗಬೇಕು. ಇವುಗಳ ಜೊತೆಗ ಶಾಲಾ ಕಾಲೇಜುಗಳ ಗ್ರಂಥಾಲಯಗಳನ್ನು ಆಶ್ರಯಿಸಬೇಕು. ಸಾರ್ವಜನಿಕ ಮಾರುಕಟ್ಟೆಯಲ್ಲಿ ಮಾರಾಟವಾಗುವ ಪುಸ್ತಕಗಳ ಸಂಖ್ಯೆ ಬಹಳ ಕಡಿಮೆ.

ಮಾರಾಟ ವ್ಯವಸ್ಥೆ

ಪುಸ್ತಕದ ಮಾರಾಟವು ಪುಸ್ತಕದ ಗುಣಮಟ್ಟ, ಓದುಗರ ಅಭಿರುಚಿ, ವಸ್ತು, ಜನರ ಓದುವ ಅಭ್ಯಾಸ, ಸಾಕ್ಷರರ ಸಂಖ್ಯೆ, ಪುಸ್ತಕದ ಬೆಲೆ, ಪುಸ್ತಕದ ವಿಮರ್ಶೆ, ಅದರ ಬಗೆಗಿನ ಪ್ರಚಾರವನ್ನವಲಂಬಿಸಿದೆ. ಅನೇಕ ಉತ್ತಮ ಪುಸ್ತಕಗಳು ಮಾರುಕಟ್ಟೆಗ ಬಂದರೂ ಅಗತ್ಯ ಪ್ರಚಾರವಿಲ್ಲದೆ ಮಾರಾಟ ಆಗುವುದಿಲ್ಲ. ವಿಶ್ವವಿದ್ಯಾಲಯಗಳು, ಅಕಾಡೆಮಿಗಳು ಮತ್ತು ಸರ್ಕಾರದ ಪ್ರಕಟಣಾ ವಿಭಾಗಗಳು ಪ್ರಕಟಿಸುವ ಪುಸ್ತಕಗಳು ಮಾರುಕಟ್ಟೆಗೆ ಬರುವುದೇ ಇಲ್ಲ. ಇವರು ತಾವೂ ಒಂದು ಉದ್ಯಮ ಕೈಗೊಂಡಿದ್ದೇವೆ, ಅದನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗಬೇಕಾದರೆ ವ್ಯಾಪಾರಿ ಮನೋಭಾವದಿಂದ ವ್ಯವಹರಿಸಬೇಕೆಂಬ ಅರಿವು ಅವರಿಗಿದ್ದಂತಿಲ್ಲ. ಇದರಿಂದ ಅವರು ಪ್ರಕಟಿಸಿದ ಪುಸ್ತಕಗಳು ಮಾರುಕಟ್ಟೆಯ ಮುಖ ನೋಡದೆ ದಾಸ್ತಾನುಮಳಿಗೆಯಲ್ಲಿ ಕೊಳೆಯುವಂತಾಗಿದೆ. ವಿಶ್ವವಿದ್ಯಾಲಯಗಳ ಮತ್ತು ಸರ್ಕಾರದ ಈ ಘಟಕಗಳೂ ಕೂಡ ತಾವು ಇದುವರೆಗೆ ಅನುಸರಿಸಿಕೊಂಡು ಬಂದ ಮಾರ್ಗವನ್ನು ತೊರೆದು ತಾವು ಪ್ರಕಟಿಸುವ ಸಾಹಿತ್ಯ ಉದ್ದೇಶಿತ ಓದುಗರನ್ನು ಮುಟ್ಟುವಂತೆ ವ್ಯವಸ್ಥೆಮಾಡಬೇಕು. ಪ್ರಕಟವಾದ ಯಾವುದೇ ಪುಸ್ತಕವನ್ನು ಕುರಿತಂತೆ ಸಂಕ್ಷಿಪ್ತ ವಿಮರ್ಶೆಯ ಮೂಲಕ ಪ್ರಚಾರ ಅಗತ್ಯ. ಒಟ್ಟಿನಲ್ಲಿ ಭಾರತದಲ್ಲಿನ ಪುಸ್ತಕೋದ್ಯಮಿಗಳು ಈ ಉದ್ಯಮಕ್ಕೆ ಸಂಬಂಧಪಟ್ಟಂತೆ ಪಾಶ್ಚಾತ್ಯದೇಶಗಳ ಪುಸ್ತಕೋದ್ಯಮಿಗಳಿಂದ ಕಲಿಯಬೇಕಾದುದು ಬಹಳ ಇದೆ.

ಪುಸ್ತಕಗಳ ಮಾರಾಟ ಜನರ ವಾಚನಾಭಿರುಚಿ ಮತ್ತು ಓದುವ ಅಭ್ಯಾಸಗಳನ್ನವಲಂಬಿಸಿದೆ. ಸಾಕ್ಷರರ ಸಂಖ್ಯೆ ಅತಿ ಕಡಿಮೆ ಇರುವ ಭಾರತದಲ್ಲಿ ಪುಸ್ತಕೋದ್ಯಮ ಅಗತ್ಯ ಮಾರುಕಟ್ಟೆ ಇಲ್ಲದಿರುವ ಸಮಸ್ಯೆಯನ್ನು ಎದುರಿಸುತ್ತದೆ. ಏನೇ ಇರಲಿ, ರಾಷ್ಟ್ರೀಯ ಮತ್ತು ರಾಜ್ಯ ಸರ್ಕಾರಗಳು ಹಮ್ಮಿಕೊಂಡಿರುವ ಸಾಕ್ಷರತಾ ಆಂದೋಲನ, ಸಾಕ್ಷರೋತ್ತರ ಕಾರ್ಯಕ್ರಮ ಅಂದರೆ ನವಸಾಕ್ಷರರು ತಾವು ಗಳಿಸಿದ ಓದು ಬರಹ ಶಕ್ತಿಯನ್ನು ಉಳಿಸಿಕೊಂಡು ಬೆಳೆಸಿಕೊಳ್ಳುವಂತೆ ಮಾಡಲು ಅವರಿಗೆ ಸೂಕ್ತ ಸಾಹಿತ್ಯ ಒದಗಿಸುವ ಕಾರ್ಯಕ್ರಮ, ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರುವುದರ ಮೂಲಕ ರಾಷ್ಟ್ರದಲ್ಲಿ ಅನಕ್ಷರತೆಯನ್ನು ನಿರ್ಮೂಲನ ಮಾಡಲು ಕೈಗೊಂಡಿರುವ ಯೋಜನೆಗಳು ಯಶಸ್ವಿಯಾದರೆ ಪುಸ್ತಕೋದ್ಯಮಕ್ಕೆ ಉತ್ತೇಜನ ದೊರಕುವುದರಲ್ಲಿ ಸಂದೇಹವಿಲ್ಲ.

ಪಠ್ಯಪುಸ್ತಕ ರಾಷ್ಟ್ರೀಕರಣ ಮತ್ತು ಅದರಿಂದ ಉದ್ಭವಿಸಿದ ಸಮಸ್ಯೆ

ಪಠ್ಯಪುಸ್ತಕ ರಚನೆ, ಮುದ್ರಣ, ಪ್ರಕಾಶನ ಮತ್ತು ವಿತರಣೆ ಪುಸ್ತಕೋದ್ಯಮದ ಬಹುಮುಖ್ಯ ಚಟುವಟಿಕೆಯಾಗಿತ್ತು. ಪ್ರಕಟವಾದ ಪುಸ್ತಕಗಳಿಗೆ ನಿಶ್ಚಿತ ಮಾರುಕಟ್ಟೆಯೂ ಇತ್ತು. ಆದರೆ ಅನಾರೋಗ್ಯಕರವಾದ ಸ್ಪರ್ಧೆಯ ಕಾರಣದಿಂದ ಮತ್ತು ವ್ಯಾಪಕ ಭ್ರಷ್ಟಾಚಾರದಿಂದಾಗಿ ಪಠ್ಯಪುಸ್ತಕಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಪುಸ್ತಕೋದ್ಯಮಕ್ಕೆ ಸಾಧ್ಯವಾಗದುದರಿಂದ ರಾಜ್ಯಸರ್ಕಾರಗಳು ಪಠ್ಯ ಪುಸ್ತಕಗಳ ರಚನೆ ಮತ್ತು ಪ್ರಕಾಶನವನ್ನು ರಾಷ್ಟ್ರೀಕರಣ ಮಾಡಿದವು. ಇದರಿಂದ ಪುಸ್ತಕೋದ್ಯಮದಲ್ಲಿ ತೊಡಗಿದ್ದವರಿಗೆ ಪಠ್ಯಪುಸ್ತಕಗಳ ಪ್ರಕಾಶನದ ಬಾಗಿಲು ಮುಚ್ಚಿಹೋಯಿತು. ಈ ನಿರ್ಣಯ ಹಂತಹಂತವಾಗಿ ಪ್ರಾರಂಭವಾದರೂ ಅಂತಿಮವಾಗಿ ಪಠ್ಯಪುಸ್ತಕಗಳ ಪ್ರಕಾಶನಕಾರ್ಯ ರಾಷ್ಟ್ರೀಕರಣವಾಗುವುದು ಖಚಿತವೆಂದು ಪೂರ್ವಭಾವಿಯಾಗಿಯೇ ಪುಸ್ತಕೋದ್ಯಮಿಗಳಿಗೆ ತಿಳಿದಿದ್ದರೂ ಅವರು ಸಾಹಿತ್ಯ ಸೃಷ್ಟಿಗೆ ಸಂಬಂಧಿಸಿದಂತೆ ಹೊಸ ಕ್ಷೇತ್ರಗಳನ್ನು ಅನ್ವೇಷಿಸುವುದರಲ್ಲಿ ವಿಫಲರಾದರು. ಅವರ ವೈಫಲ್ಯವೇ ಇಂದು ಅವರ ಉದ್ಯಮಕ್ಕೆ ಎದುರಾಗಿರುವ ಸಮಸ್ಯೆಯಾಗಿದೆ.

ಹೊಸ ಕ್ಷೇತ್ರಗಳಾವುವು?

ಪಠ್ಯಪುಸ್ತಕಗಳು ರಾಷ್ಟ್ರೀಕರಣವಾದರೆ ಆ ಪುಸ್ತಕೋದ್ಯಮಕ್ಕೆ ಬೇರೆ ಕ್ಷೇತ್ರಗಳಿಲ್ಲವೇ? ಶಾಲಾ ವಿದ್ಯಾರ್ಥಿನಿಯರು ಮತ್ತು ವಿದ್ಯಾರ್ಥಿಗಳು ತಮ್ಮ ಓದುವ ಅಭ್ಯಾಸವನ್ನು ಕೇವಲ ಪಠ್ಯಪುಸ್ತಕಗಳಿಗೇ ಸೀಮಿತಗೊಳಿಸಬೇಕೆ? ಅವರಿಗೆ ಪೂರಕ ಓದಿಗೆ ಸಾಹಿತ್ಯ ಬೇಡವೆ? ಪೂರಕ ಓದಿಗಾಗಿ ಸೃಷ್ಟಿಸುವ ಸಾಹಿತ್ಯದ ರೂಪುರೇಷೆಗಳೇನು? ಅದರ ವಸ್ತುವಿನ ವೈಶಿಷ್ಟ್ಯವೇನು? ಎಂಬಿವೇ ಪ್ರಶ್ನೆಗಳನ್ನು ಕುರಿತು ಆಲೋಚಿಸುವ ಪ್ರಯತ್ನ ಪುಸ್ತಕೋದ್ಯಮದಿಂದ ಆಗಲಿಲ್ಲ. ಅಲ್ಲೊಬ್ಬರು ಇಲ್ಲೊಬ್ಬರು ಪ್ರಯತ್ನಿಸಿದರೂ ಆ ಕ್ಷೇತ್ರವನ್ನು ಸಂಪೂರ್ಣವಾಗಿ ವ್ಯಾಪಿಸಲು ಸಮರ್ಥವಾಗಲಿಲ್ಲ. ಅದು ಪ್ರಾರಂಭಿಕ ಪ್ರಯತ್ನವಾಗಿಯೇ ಉಳಿದು ಮುರುಟಿಹೋಯಿತು. ಈ ಪ್ರಾರಂಭ ಪ್ರಯತ್ನದಲ್ಲಿ ಹೊರಬಂದ ಪುಸ್ತಿಕೆಗಳು ಜೀವನಚರಿತ್ರೆ, ಕಲೆ, ಸಾಹಿತ್ಯ, ಜಾನಪದ, ನೃತ್ಯ, ಸಂಗೀತ, ಸಂಸ್ಕೃತಿ ಮುಂತಾದ ವಿಷಯಗಳನ್ನು ಕುರಿತು ರಚಿಸಿದವುಗಳು. ಈ ವಿಷಯಗಳಿಗೆ ಸಂಬಂಧಿಸಿದಂತೆ ಮಕ್ಕಳು ತಮ್ಮ ಪಠ್ಯಪುಸ್ತಕಗಳಲ್ಲಿ ದೊರೆಯಬಹುದಾದ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಜ್ಞಾನ ಸಂಪಾದಿಸಲು ನೆರವಾದರೂ ಅವುಗಳ ಪ್ರಯೋಜನ ಕೆಲವರಿಗೆ ಮಾತ್ರ

ದೊರಕಿತು. ಈ ಪುಸ್ತಿಕೆಗಳು ರಾಜ್ಯದ ಎಲ್ಲ ಶಾಲೆಗಳನ್ನು ತಲುಪಲಿಲ್ಲ. ಪ್ರಾಥಮಿಕ ಮತ್ತು ಪ್ರೌಢಶಾಲೆಗಳೂ ಸೇರಿದಂತೆ ಒಟ್ಟು ಸುಮಾರು ೪೪ ಸಾವಿರ ಶಾಲೆಗಳಲ್ಲಿ ಕೇವಲ ೧೦,೦೦೦ಶಾಲೆಗಳಿಗೆ ಮಾತ್ರ ಈ ಪುಸ್ತಕಗಳು ದೊರೆತಿವೆ. ಉಳಿದ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳಿಗೆ ಪೂರಕ ಓದಿಗೆ ಪುಸ್ತಕಗಳೇ ಇಲ್ಲ. ಇದರ ಜೊತೆಗೆ ಕಳೆದ ಮೂರು ನಾಲ್ಕು ವರ್ಷಗಳಿಂದ "ಕಪ್ಪು ಹಲಗೆ ಆಂದೋಲನ" ಯೋಜನೆಯಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳಿಗೂ ಪೂರಕ ಓದಿಗೆ ಅನುಕೂಲವಾಗುವಂತೆ ಪುಸ್ತಿಕೆಗಳನ್ನು ಕೊಂಡು ಸರಬರಾಜು ಮಾಡುತ್ತಿದ್ದಾರೆ.

ವಿಜ್ಞಾನ ಸಾಹಿತ್ಯ ಕೊರತೆ

ಶಾಲಾ ಮಕ್ಕಳಿಗೆ ಈ ಯುಗದಲ್ಲಿ ಅತಿ ಮುಖ್ಯವೆನಿಸಿದ ತಾಂತ್ರಿಕ ಜ್ಞಾನ ಮತ್ತು ವಿಜ್ಞಾನ ಕುರಿತ ಪುಸ್ತಿಕೆಗಳನ್ನು ಕೊಂಡು ಸರಬರಾಜು ಮಾಡುವುದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದೇವೆ. ೧೯೯೨-೯೩ರಲ್ಲಿ ವಿಜ್ಞಾನ ಶಿಕ್ಷಣಕ್ಕೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ವಿಜ್ಞಾನ ಕುರಿತು ರಚಿಸಿದ ಪುಸ್ತಕಗಳನ್ನು ಕೊಂಡು ಶಾಲೆಗಳಿಗೆ ಸರಬರಾಜು ಮಾಡಲು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ಹೇರಳ ಧನಸಹಾಯ ನೀಡಿತು. ಆದರೆ ಈ ಹಣದ ಬಹುಪಾಲು ಇಂಗ್ಲಿಷಿನಲ್ಲಿ ಬರೆದ ಪುಸ್ತಕಗಳನ್ನು ಕೊಂಡುಕೊಳ್ಳಲು ವಿನಿಯೋಗ ಆಯಿತು. ಇದಕ್ಕೆ ಕಾರಣ ಕನ್ನಡದಲ್ಲಿ ವಿಜ್ಞಾನ ಕುರಿತು ರಚಿಸಿದ ಪುಸ್ತಕಗಳಿಲ್ಲವೆಂಬುದು. ಅಂದರೆ ಪ್ರಾದೇಶಿಕ ಭಾಷೆಗಳಲ್ಲಿ ಪುಸ್ತಕ ಪ್ರಕಾಶನ ಕಾರ್ಯ ಕೈಗೊಂಡಿರುವ ಪುಸ್ತಕೋದ್ಯಮಿಗಳು ಇನ್ನೂ ಈ ವಿಷಯದ ಬಗ್ಗೆ ಆಲೋಚಿಸಿದಂತಿಲ್ಲ. ಪುಸ್ತಕೋದ್ಯಮಿಗಳಿಗೆ ಆ ಕ್ಷೇತ್ರದಲ್ಲಿ ವಿಪುಲವಾದ ಕೆಲಸ ಇದೆ. ಈ ಅವಕಾಶವನ್ನು ಪುಸ್ತಕೋದ್ಯಮ ಯಶಸ್ವಿಯಾಗಿ ಉಪಯೋಗಿಸಿಕೊಳ್ಳಬೇಕು. ಉದಾಹರಣೆಗೆ ಕೆಲವು ಹೆಸರುಗಳನ್ನು ಸೂಚಿಸಬಹುದು-"ಸಂವಹನ ಸಾಧನಗಳು" ತಂತಿಯ ಮೂಲಕ ಮತ್ತು ತಂತಿಯ ಸಹಾಯವಿಲ್ಲದೆ ವಿದ್ಯುತ್ ಕರೆಗಂಟೆ ಹೇಗೆ ಕೆಲಸ ಮಾಡುತ್ತದೆ, ಪಂಖ (Fan) ಹೇಗೆ ಕೆಲಸಮಾಡುತ್ತದೆ, ವಿಮಾನ ಮತ್ತು ಹಡಗುಗಳು, ಸಂಚಾರ ಸಾಧನಗಳು, ನಮ್ಮ ಶರೀರ, ಅದರ ರಕ್ಷಣೆ, ನಮ್ಮ ಆಹಾರ ಹೀಗೆ ನೂರಾರು ತಲೆಬರಹದಲ್ಲಿ ಪುಸ್ತಿಕೆಗಳನ್ನು ರಚಿಸಿ, ಮುದ್ರಿಸಿ, ವಿತರಿಸಿ ಆ ಕ್ಷೇತ್ರದ ಸಾಹಿತ್ಯವನ್ನು ಶ್ರೀಮಂತ ಗೊಳಿಸಬಹುದು.

ಮಕ್ಕಳ ಸಾಹಿತ್ಯದ ಗುಣಮಟ್ಟ

ಈಗ ದೊರಕುವ ಮಕ್ಕಳ ಸಾಹಿತ್ಯವನ್ನು ಮಕ್ಕಳ ವಯಸ್ಸು ಅವರ ಬೌದ್ಧಿಕ ಮಟ್ಟ, ಭಾಷಾಶಕ್ತಿ, ಅವುಗಳ ರಚನೆಯಲ್ಲಿ ಉಪಯೋಗಿಸಿರುವ ಭಾಷೆ ಮತ್ತು ಶೈಲಿ, ವಿಷಯ ನಿರೂಪಣೆ, ಚಿತ್ರಗಳು, ಅವುಗಳ ಹೊರನೋಟ ಇವುಗಳನ್ನು ಮಾನದಂಡವಾಗಿಟ್ಟುಕೊಂಡು ಮೌಲ್ಯಮಾಪನ ಮಾಡಿದರೆ ಅವು ಮೇಲೆ ಸೂಚಿಸಿರುವ ಅಂಶಗಳನ್ನು ತೃಪ್ತಿಪಡಿಸಲಾರವು. ಅವು ದೋಷಪೂರಿತವಾಗಿವೆ. ಮಕ್ಕಳ ಮನೋವಿಜ್ಞಾನದ ಪರಿಚಯವಿಲ್ಲದವರು ರಚಿಸಿರತಕ್ಕಂತಹ ಪುಸ್ತಕಗಳು. ಅವು ಮಕ್ಕಳ ಜ್ಞಾನದಾಹವನ್ನು ತಣಿಸಿ ಅವರ ಕುತೂಹಲವನ್ನು ಕೆರಳಿಸಲಾರವು. ಹೊರನೋಟಕ್ಕೆ ಆಕರ್ಷಣೀಯವಾಗಿಯೂ ಇಲ್ಲ.

ಮಕ್ಕಳ ವಿಶ್ವಕೋಶ

ಮಕ್ಕಳಿಗಾಗಿಯೇ ರಚಿಸಿದ ಸಚಿತ್ರ ವಿಶ್ವಕೋಶಗಳಂತೂ ಇಲ್ಲವೇ ಇಲ್ಲ. ಕಿರಿಯರ ವಿಶ್ವಕೋಶ

"ಜ್ಞಾನಗಂಗೋತ್ರಿ"ಯೂ ವಸ್ತು, ಭಾಷೆ, ಶೈಲಿ ಮತ್ತು ಚಿತ್ರಗಳನ್ನು ಆಧಾರವಾಗಿಟ್ಟುಕೊಂಡು ಪರಿಶೀಲಿಸಿದರೆ ಅದೂ ವಯಸ್ಕರಿಗೇ ಎಂಬುದು ಅರಿವಾಗುವುದು.

ಮಕ್ಕಳ ಸಾಹಿತ್ಯದ ಹಂತಗಳು

ಮಕ್ಕಳಿಗಾಗಿ ರಚಿಸುವ ಸಾಹಿತ್ಯವನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು : (೧) ಮೊದಲ ವರ್ಗದ ಸಾಹಿತ್ಯ ಮೂರು ವರ್ಷಗಳ ಮೇಲ್ಪಟ್ಟು ಹತ್ತು ವರ್ಷಗಳೊಳಗಿನ ವಯೋಮಿತಿಯ ಮಕ್ಕಳಿಗೆ; (೨) ಎರಡನೇ ವರ್ಗದ ಸಾಹಿತ್ಯ ಹತ್ತರಿಂದ ಹನ್ನೆರಡು ವರ್ಷಗಳ ವಯೋಮಿತಿಯ ಮಕ್ಕಳಿಗೆ; (೩) ಮೂರನೇ ವರ್ಗದ ಸಾಹಿತ್ಯ ೧೩ರಿಂದ ೧೫ ಅಥವಾ ೧೬ ಅಥವಾ ಅದಕ್ಕೂ ಮೇಲ್ಪಟ್ಟ ಪದವಿಪೂರ್ವ ಶಿಕ್ಷಣ ಹಂತದ ವಿದ್ಯಾರ್ಥಿಗಳ ಆವಶ್ಯಕತೆಗಳನ್ನು ಆಧರಿಸಿದುದು.

ಮೊದಲನೇ ವರ್ಗದ ಪುಸ್ತಕಗಳು ವರ್ಣರಂಜಿತ ಚಿತ್ರಗಳನ್ನು ಹೊಂದಿರಬೇಕು. ಪ್ರಾಣಿ ಪ್ರಪಂಚ, ಸಸ್ಯ ಪ್ರಪಂಚ, ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳ ಚಟುವಟಿಕೆಗಳನ್ನು ತಿಳಿಸುವ ಚಿತ್ರಗಳಿರಬೇಕು. ಮಕ್ಕಳ ಪರಿಸರವನ್ನು ಅವರಿಗೆ ಸ್ಫುಟವಾಗಿ ಚಿತ್ರಮುಖೇನ ಪರಿಚಯಿಸುವುದೇ ಇದರ ಉದ್ದೇಶ. ಈ ಪುಸ್ತಕಗಳಲ್ಲಿ ಚಿತ್ರವೇ ಪ್ರಧಾನ. ದೀರ್ಘ ವಿವರಣೆ ಅನಗತ್ಯ. ವಿವರಣೆ ಇದ್ದರೂ ಒಂದೆರಡು ಪದಗಳಲ್ಲೋ, ವಾಕ್ಯಗಳಲ್ಲೋ ಮುಗಿಯಬೇಕು. ಪುಸ್ತಕಗಳು ಮೊದಲನೋಟಕ್ಕೆ ಆಕರ್ಷಣೀಯವಾಗಿರಬೇಕು. ಶಾಲಾ ಪೂರ್ವ ವಯಸ್ಸಿನ ಮಕ್ಕಳಿಗೆ ಚಿತ್ರಪ್ರಧಾನ ಪುಸ್ತಕಗಳ ರಚಿಸುವುದು ಅಗತ್ಯ.

ಎರಡನೇ ಗುಂಪನ್ನು ಗಮನದಲ್ಲಿಟ್ಟುಕೊಂಡು ರಚಿಸುವ ಪುಸ್ತಕಗಳಲ್ಲಿಯೂ ವರ್ಣರಂಜಿತ ಚಿತ್ರಗಳಿಗೆ ಪ್ರಮುಖ ಸ್ಥಾನ ಇದೆ. ಉದಾಹರಣೆಗೆ ಪತಂಗದ ಜೀವನಚಿತ್ರ ಅಥವಾ ಕಪ್ಪೆಯ ಜೀವನಚಿತ್ರ ವರ್ಣರಂಜಿತವಾಗಿದ್ದರೆ ಮತ್ತು ವಿವರಣೆ ಇಲ್ಲದ ಚಿತ್ರಗಳ ಮೂಲಕವೇ ಎಲ್ಲವನ್ನೂ ಮಕ್ಕಳು ಸುಲಭವಾಗಿ ಗ್ರಹಿಸುವರು. ಈ ಪುಸ್ತಕಗಳಲ್ಲಿ ಕೊಡಬಹುದಾದ ವಿವರಣೆ ಸರಳವೂ ಸ್ಪಷ್ಟವೂ ಆಗಿರಬೇಕು.

ಮೂರನೆಯ ಗುಂಪು ಪ್ರೌಢಶಾಲಾ ಮತ್ತು ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮತ್ತು ಆ ಹಂತದಲ್ಲಿ ಶಿಕ್ಷಣ ನಿಲ್ಲಿಸಿ ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿರುವವರಿಗೆ. ಅವರಿಗೂ ಆಕರ್ಷಣೀಯ ಚಿತ್ರಗಳು ಅಗತ್ಯ. ಆ ಹಂತದ ಓದುಗರಿಗೆ ಒದಗಿಸಬೇಕಾದ ಓದುವ ಸಾಮಗ್ರಿಯ ವ್ಯಾಪ್ತಿ ವಿಸ್ತೃತವಾಗುವುದು. ಅವರ ಅಗತ್ಯಗಳೂ ಹೆಚ್ಚಾಗುವುವು. ಅವರಿಗೆ ನೈಸರ್ಗಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಿಷಯಗಳನ್ನು ಕುರಿತಂತೆ ಮಾಹಿತಿ ಒದಗಿಸಬೇಕು. ವಿಜ್ಞಾನ ಮತ್ತು ತಾಂತ್ರಿಕ ಜ್ಞಾನಕ್ಕೆ ಸಂಬಂಧಿಸಿದಂತೆ ಮಾನವನ ಸಾಧನೆಯ ಚಿತ್ರದ ಪಕ್ಷಿನೋಟವನ್ನು ಅವರ ಮುಂದಿಡಬೇಕು. ಈ ಕ್ಷೇತ್ರದಲ್ಲಿ ಪುಸ್ತಕೋದ್ಯಮ ಇನ್ನೂ ಪದಾರ್ಪಣೆ ಮಾಡಿಲ್ಲ.

ನವಸಾಕ್ಷರರಿಗೆ ಸಾಹಿತ್ಯ ರಚನೆ

ಭಾರತಸರ್ಕಾರ, ರಾಜ್ಯಸರ್ಕಾರಗಳ ಸಹಕಾರದಿಂದ ಭಾರತದಲ್ಲಿ ೯ರಿಂದ ೩೫ವರ್ಷಗಳ ವಯೋಮಿತಿಯ ಜನರಲ್ಲಿ ಅನಕ್ಷರತೆಯನ್ನು ತೊಡೆದುಹಾಕಲು ಸ್ಥಿರ ಸಂಕಲ್ಪ ಮಾಡಿ ಈಗಾಗಲೇ ರಾಷ್ಟ್ರಾದ್ಯಂತ ಸಾಕ್ಷರತಾ ಆಂದೋಲನ ಪ್ರಾರಂಭವಾಗಿದೆ. ಈ ಕಾರ್ಯದಲ್ಲಿ ಸಂಪೂರ್ಣ ಯಶಸ್ಸು ಗಳಿಸಬೇಕೆಂಬುದು ಈ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿರುವವರ ಸಂಕಲ್ಪವಾಗಿದೆ. ಪೂರ್ಣಯಶಸ್ಸು

ಸಾಧ್ಯವಿಲ್ಲವಾದರೂ ಶೇಕಡ ೬೦ರಿಂದ ೮೦ರವರೆಗಾದರೂ ಸಾಧಿಸುವುದು ಸಾಧ್ಯ. ಕೇವಲ ಅನಕ್ಷರತೆಯ ನಿರ್ಮೂಲನವಷ್ಟೇ ಸಾಲದು, ಈ ಆಂದೋಲನದ ಕಾಲದಲ್ಲಿ ವಯಸ್ಕರು ಗಳಿಸಿದ ಅಕ್ಷರಜ್ಞಾನವನ್ನು ಉಳಿಸಿಕೊಂಡು ಬೆಳೆಸಿಕೊಳ್ಳಬೇಕಾದರೆ ಸಾಕ್ಷರೋತ್ತರ ಕಾರ್ಯಕ್ರಮವು ಅಗತ್ಯ ಎಂಬ ಅಂಶವನ್ನು ಆಡಳಿತ ಮತ್ತು ಕಾರ್ಯಕರ್ತರು ಮನಗಂಡಿದ್ದಾರೆ. ನವಸಾಕ್ಷರರಿಗೆ ಅವರ ಅಭಿರುಚಿ, ಆಸಕ್ತಿ ಮತ್ತು ಅಗತ್ಯಗಳನ್ನು ಆಧರಿಸಿ ಹಲವು ವಿಷಯಗಳನ್ನು ಕುರಿತು ಅವರಿಗೆ ಅರ್ಥವಾಗುವ ರೀತಿಯಲ್ಲಿ ಸಾಹಿತ್ಯ ರಚಿಸಿ, ಪ್ರಕಟಿಸಿ ಸರಬರಾಜು ಮಾಡುವುದು ಅಗತ್ಯ. ನವಸಾಕ್ಷರರಿಗೆ ಪರಿಸರ ಜ್ಞಾನವಿದೆ; ಸಾಮಾನ್ಯ ಪ್ರಜ್ಞೆ ಇದೆ; ಶಬ್ದಸಂಪತ್ತಿದೆ. ಆದರೆ ಅವರ ಶಬ್ದಸಂಪತ್ತಿನ ಪರಿಚಯ ನಮಗಿಲ್ಲ. ಅವರಿಗೆ ಸಾಹಿತ್ಯ ರಚಿಸಲು ನೆರವಾಗುವಂತೆ ಅವರ ಪದಸಂಪತ್ತಿನ ಸಮೀಕ್ಷೆ ಅಗತ್ಯ. ಅವರಿಗೆ ಪರಿಚಿತವಿರುವ ಪದಗಳನ್ನೇ ಬಳಸಿ ಸಾಹಿತ್ಯ ರಚಿಸಿದರೆ ಅವರಿಗೆ ಅರ್ಥವಾಗುವುದು. ವಸ್ತುವಿನಲ್ಲಿ ವೈವಿಧ್ಯತೆ ಇರಬೇಕು. ಮೈಸೂರು ವಯಸ್ಕರ ಶಿಕ್ಷಣ ಸಮಿತಿ ರಚಿಸಿ ಪ್ರಕಟಿಸಿರುವ ಪುಸ್ತಕಗಳು ನಮಗೆ ಅಗತ್ಯ ಮಾರ್ಗದರ್ಶನ ನೀಡುತ್ತವೆ.

ಜನಶಿಕ್ಷಣ ನಿರ್ದೇಶನಾಲಯ ನವಸಾಕ್ಷರರಿಗೆ ಸಾಹಿತ್ಯ ರಚಿಸಿ ಪ್ರಕಟಿಸುವ ಕಾರ್ಯವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ವಹಿಸಿದೆ. ಈ ಕ್ಷೇತ್ರದಲ್ಲಿ ಏಕಸ್ವಾಮಿತ್ವವನ್ನು ಪ್ರೋತ್ಸಾಹಿಸುವುದು ಅಪೇಕ್ಷಣೀಯವೂ ಅಲ್ಲ, ಉಚಿತವೂ ಅಲ್ಲ. ಈ ರೀತಿ ಬರಹಗಾರರನ್ನು ಅಲಕ್ಷಿಸಿದಂತಾಗುವುದು. ಎಲ್ಲರಿಗೆ ಮುಕ್ತಸ್ಪರ್ಧೆ ಇರಬೇಕು. ಯಾವುದೇ ಒಂದು ಸಂಸ್ಥೆ ಅಥವಾ ವ್ಯಕ್ತಿ ನವಸಾಕ್ಷರರಿಗೆ ಸಾಹಿತ್ಯ ರಚಿಸುವ ದಕ್ಷತೆಯನ್ನು ಹೊಂದಿದೆ ಅಥವಾ ಹೊಂದಿದ್ದಾನೆ ಎಂದು ಭಾವಿಸುವುದು ಸೈದ್ಧಾಂತಿಕವಾಗಿ ಸಾಧುವಲ್ಲ. ಪ್ರಕಾಶಕರು, ಬರಹಗಾರರು ಮತ್ತು ಇಲಾಖೆ ಈ ವಿಷಯ ಕುರಿತಂತೆ ಕಾರ್ಯಾಗಾರಗಳನ್ನು ವ್ಯವಸ್ಥೆ ಮಾಡುವುದು ಅಗತ್ಯ. ಪುಸ್ತಕೋದ್ಯಮಕ್ಕೆ ಇದು ಹೊಸ ಕ್ಷೇತ್ರ. ಪುಸ್ತಕ ಪ್ರಕಾಶನಕ್ಕೆ ವಿಪುಲ ಅವಕಾಶಗಳಿವೆ.

ಗ್ರಂಥಾಲಯಗಳು

ಅಮೆರಿಕದ ಸಂಯುಕ್ತ ಸಂಸ್ಥಾನಗಳಂತಹ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಗ್ರಂಥಾಲಯ ಸೌಲಭ್ಯಗಳು ಬಹಳ ಕಡಿಮೆ. ಅಲ್ಲಿ ಗ್ರಂಥಾಲಯ ಸೇವೆಗಾಗಿ ವರ್ಷಕ್ಕೆ ತಲಾ ೧೨ ರೂಪಾಯಿ ವೆಚ್ಚ ಮಾಡಿದರೆ ಭಾರತದಲ್ಲಿ ಕೇವಲ ಐದು ಪೈಸೆ ಖರ್ಚುಮಾಡುತ್ತಿದ್ದೇವೆ. ಇಷ್ಟು ಅತ್ಯಲ್ಪ ಹಣದಿಂದ ಗ್ರಂಥಾಲಯಗಳನ್ನು ಬಲಗೊಳಿಸಿ ಅವು ಓದುಗರ ಆಸಕ್ತಿಗಳನ್ನು ಪೂರೈಕೆ ಮಾಡಲು, ವೈವಿಧ್ಯತೆಯಿಂದ ಕೂಡಿದ ಗ್ರಂಥಗಳನ್ನು ಕೊಂಡು ಓದುಗರನ್ನು ತೃಪ್ತಿಪಡಿಸಲು ಸಾಧ್ಯವಿಲ್ಲ. ಆದುದರಿಂದ ಸರ್ಕಾರ ತನ್ನ ವಾರ್ಷಿಕ ಆಯವ್ಯಯ ಅಂದಾಜುಪಟ್ಟಿಯಲ್ಲಿ ಗ್ರಂಥಾಲಯಗಳಿಗೆ ಹೆಚ್ಚು ಹಣ ಒದಗಿಸಬೇಕು. ಕರ್ನಾಟಕ ಸರ್ಕಾರ ಪ್ರತಿ ಗ್ರಾಮಪಂಚಾಯಿತಿಯಲ್ಲೂ ಒಂದೊಂದು ಗ್ರಂಥಾಲಯ ಪ್ರಾರಂಭಿಸುವ ನೀತಿಯನ್ನು ಘೋಷಿಸಿದೆ. ಇದು ನಿಜಕ್ಕೂ ಸಂತೋಷದ ಸುದ್ದಿ. ಕೇವಲ ಗ್ರಂಥಾಲಯ ಪ್ರಾರಂಭಿಸಿದುದರಿಂದಲೇ ನಾವು ತೃಪ್ತರಾಗಬಾರದು. ಆ ಗ್ರಂಥಾಲಯಗಳು ಕೇವಲ ಕಥೆ ಕಾದಂಬರಿಗಳಿಂದಲೇ ತುಂಬಿರಬಾರದು. ಗ್ರಾಮೀಣ ಪ್ರದೇಶದ ಜನರು ಅವಲಂಬಿಸಿರುವ ವಿವಿಧ ಉದ್ಯೋಗಗಳನ್ನು ಕುರಿತು ರಚಿಸಿದ ಪುಸ್ತಕಗಳು, ಗುಡಿಕೈಗಾರಿಕೆಗಳು, ಪರಿಸರ ರಕ್ಷಣೆ, ಆರೋಗ್ಯ ಮತ್ತು ನೈರ್ಮಲ್ಯ, ವೈಚಾರಿಕತೆ, ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ವಿಷಯಗಳನ್ನು ಕುರಿತು ರಚಿಸಿರುವ ಪುಸ್ತಕಗಳನ್ನು ಹೆಚ್ಚಾಗಿ ಕೊಂಡು ಓದುಗರಿಗೆ ಒದಗಿಸಬೇಕು. ಈ ಯೋಜನೆಯೂ ಭಾರತದಲ್ಲಿ ಪುಸ್ತಕೋದ್ಯಮಕ್ಕೆ ಪ್ರೋತ್ಸಾಹ ನೀಡುತ್ತದೆ.

ಭಾರತದಲ್ಲಿ ಪುಸ್ತಕೋದ್ಯಮ ಸರ್ಕಾರದ ಪೋಷಣೆ ಅಥವಾ ಆಶ್ರಯದಿಂದಲೇ ಬದುಕಬೇಕೆಂಬ ಧೋರಣೆ ಕೈಬಿಟ್ಟು ಜಾಗೃತಗೊಂಡು ಸ್ವಶಕ್ತಿಯ ಮೇಲೆ ಜನಪ್ರಿಯತೆ ಗಳಿಸಬೇಕು. ಪರಿಸ್ಥಿತಿ ಸುಧಾರಣೆ ಆದಂತೆಲ್ಲ, ಓದು ಬರಹ ಕಲಿತವರ ಸಂಖ್ಯೆ ಹೆಚ್ಚಿದಂತೆಲ್ಲ, ಜನರಲ್ಲಿ ವಾಚನಾಭಿರುಚಿ ಹೆಚ್ಚಿದಂತೆಲ್ಲ ಪುಸ್ತಕಗಳಿಗೆ ಬೇಡಿಕೆಯೂ ಹೆಚ್ಚುವುದು. ಆ ಸ್ಥಿತಿ ಬರಲಿ ಎಂದು ಕಾಯುವುದಕ್ಕಿಂತ ಅಂತಹ ಸ್ಥಿತಿ ಶೀಘ್ರದಲ್ಲಿ ಬರಲಿದೆಯೆಂದು ಆಶಾವಾದಿಗಳಾಗಿ ನಮ್ಮ ಉದ್ಯಮವನ್ನು ಭದ್ರಬುನಾದಿಯ ಮೇಲೆ ನೆಲಗೊಳಿಸಲು ಪ್ರಯತ್ನಿಸಬೇಕು. ನಮ್ಮ ಅತಿಮುಖ್ಯ ದೌರ್ಬಲ್ಯಗಳಲ್ಲೊಂದಾದ ಅನಾರೋಗ್ಯಕರ ಪೈಪೋಟಿಗೆ ತಿಲಾಂಜಲಿಕೊಟ್ಟು ಉತ್ತಮ ಸಾಹಿತ್ಯವನ್ನು ಜನರಿಗೆ ಒದಗಿಸಲು ಪ್ರಯತ್ನಿಸಿದರೆ ಪುಸ್ತಕೋದ್ಯಮಕ್ಕೆ ಒಳ್ಳೆಯ ಭವಿಷ್ಯವಿದೆ.

* ಸಾ. ಮಂಚಯ್ಯ, ೧೯೯೨, ೩೫ನೇ 'ಬಿ' ಕ್ರಾಸ್, ೨೮ನೇ ಮುಖ್ಯರಸ್ತೆ, ೪ನೇ 'ಟಿ' ಬ್ಲಾಕ್, ಜಯನಗರ - ೫೬೦ ೦೪೧.

ಕನ್ನಡ ಪುಸ್ತಕೋದ್ಯಮ : ಸಮಕಾಲೀನ ಸ್ಥಿತಿ-ಗತಿ

ಆರ್. ಎಸ್. ರಾಜಾರಾಮ್

ಲೋಕದ ಎಲ್ಲ ಚಿಂತನೆಗಳಿಗೆ ಮನುಷ್ಯನೇ ಮೂಲ ಪುರುಷ. ವಾನರಾವಸ್ಥೆಯಿಂದ ಮಾನವಾವಸ್ಥೆಯ ಪರಿವರ್ತನೆಯ ಪ್ರಕ್ರಿಯೆಯಲ್ಲಿ ನಮ್ಮ ಪೂರ್ವಜರು ತಮ್ಮ ಬುದ್ಧಿಬಲದಿಂದ ದುಡಿಮೆಗೆ ತೀವ್ರ ಚಾಲನೆಯಿತ್ತರು. ದುಡಿಮೆಯನ್ನು ಆವಿಷ್ಕರಿಸುತ್ತಾ ಗಟ್ಟಿಗೊಳಿಸಿದ ಅನುಭವಗಳನ್ನು ಮುಂದಿನ ಪೀಳಿಗೆಗೆ ಬಾಯ್ದೆರೆಯಾಗಿ, ನಂತರ ಅಕ್ಷರಗಳ ಮೂಲಕ ಸಾಗಿಸುತ್ತಲೇ ಬಂದರು. ಮೊದಮೊದಲಲ್ಲಿ ಪಕ್ವಗೊಂಡ ಅನುಭವ ಜ್ಞಾನ ಸಮೂಹಸುಖಕ್ಕಾಗಿ ಬಳಕೆಯಾಯಿತು. ಸಂಗ್ರಹಪ್ರವೃತ್ತಿ ಆರಂಭಗೊಂಡ ತರುವಾಯ ಉತ್ಪನ್ನ ಸಲಕರಣೆಗಳ ಒಡೆಯ ಈ ಜ್ಞಾನಭಂಡಾರವನ್ನು ಸಂಪತ್ತಿನ ಉತ್ಪನ್ನಕ್ಕಾಗಿ ತನ್ನದಾಗಿಸಿಕೊಂಡ. ವಿದ್ಯೆ-ಉಳ್ಳವರಿಗೆ ಮೇಲ್ವರ್ಗದವರಿಗೆ ಮೀಸಲಾಯಿತು. ದುಡಿಮೆಗೆ ಈಡಾದ ಶೂದ್ರವರ್ಗ ವಿದ್ಯಾ ವಂಚಿತವಾಯಿತು. ವೇದವನ್ನುಚ್ಚರಿಸಿದರೆ ನಾಲಿಗೆಗೆ ಕತ್ತರಿ; ಕೇಳಿದರೆ ಕಿವಿಗೆ ಕಾದ ಸೀಸವನ್ನು ಹೊಯ್ಯಬೇಕೆನ್ನುವ ಅಂದಿನ ಸಮಾಜದ ರೀತಿ ರಿವಾಜು ವಿದ್ಯೆಯ ಮಹತ್ವವನ್ನು ಎತ್ತಿ ಹೇಳುತ್ತದೆ. ಓದಬಲ್ಲವ ಚಿಂತಿಸಬಲ್ಲ, ಘಟಿಸಿದ ಸಂಭವಗಳಿಗೆ ಕಾರಣ ಹುಡುಕಬಲ್ಲ, ಸಮಾಜದಲ್ಲಾಗುವ ಬದಲಾವಣೆಯ ಅನಿವಾರ್ಯತೆಯನ್ನು ವಿಶ್ಲೇಷಿಸಬಲ್ಲ, ತೊಡಕುಗಳನ್ನು ನೇರ್ಪುಗೊಳಿಸುವಲ್ಲಿ ತನ್ನ ವಿದ್ಯೆಯನ್ನು ಪರಿಣಾಮಕಾರಿಯಾಗಿ ಬಳಸಬಲ್ಲ. ಆದ್ದರಿಂದಲೇ ವರ್ಗ ವಿಭಜಿತ ಸಮಾಜದಲ್ಲಿ ಆಳುವ ವರ್ಗಗಳ ಹಿತಾಸಕ್ತಿಗಳನ್ನು ಕಾಪಾಡಬಲ್ಲವರಿಗೆ, ಅವರ ಆಡಳಿತವನ್ನು ನಿರಂತರವಾಗಿ ಸಮರ್ಥಿಸಿ ಕೊಳ್ಳಬಲ್ಲವರಿಗೆ ಮಾತ್ರವಷ್ಟೇ ವಿದ್ಯೆ ಲಭ್ಯವಾಯಿತು. ಅವರೇ ಮುಂದೆ ವಿದ್ಯೆಯನ್ನು ಪಡೆಯುವ, ನೀಡುವ ಏಕಸ್ವಾಮ್ಯಾಧಿಪತಿಗಳಾಗಿ ಪುರೋಹಿತ ವರ್ಗವೆಂದು ಗುರುತಿಸಲ್ಪಟ್ಟರು. ಕೆಳಸ್ತರದ ದುಡಿಯುವ ವರ್ಗವನ್ನು ಮೌಢ್ಯದಲ್ಲಿರಿಸಲು ಇಹಲೋಕ-ಪರಲೋಕ, ಆತ್ಮ-ಪರಮಾತ್ಮನನ್ನು ಸೃಷ್ಟಿಸಿ ಅವರ ದಾರಿದ್ರ್ಯಕ್ಕೆ ಪೂರ್ವಜನ್ಮದ ಪಾಪವೇ ಕಾರಣವೆಂದೂ, ಈ ಜನ್ಮದಲ್ಲಿ ಯಜಮಾನನಿಗೆ ವಿಧೇಯನಾಗಿದ್ದಲ್ಲಿ ಮುಂದಿನ ಜನ್ಮದಲ್ಲಾದರೂ ಒಳ್ಳೆಯ ಶರೀರ ಪ್ರಾಪ್ತಿಯಾಗಿ ಸುಖಜೀವನ ಸಿಗಬಹುದೆಂದೂ ಆಮಿಷವನ್ನು ಒಡ್ಡಿ, ವಿದ್ಯೆಯನ್ನು ಶೋಷಣೆಯ ಸಾಧನವಾಗಿ ಉಪಯೋಗಿಸಲಾಯಿತು.

ವಿದ್ಯಾರ್ಜನೆಯ ಮೂಲಗಳು :

ವಿದ್ಯಾರ್ಜನೆಗೆ ಮುಖ್ಯವಾಗಿ ನಾಲ್ಕು ಮೂಲಗಳನ್ನು ಗುರುತಿಸಲಾಗಿದೆ. ೧. ಅನುಭವಜನ್ಯತೆ,

೨. ಪ್ರಕೃತಿ-ಪರಿಸರ, ೩. ಗುರುಮುಖಿ ಶಿಕ್ಷಣ, ೪. ಗ್ರಂಥ ವಾಚನ. ಮೊದನೆಯದು ವ್ಯಕ್ತಿಗತವಾದದ್ದು; ಎರಡನೆಯದು ತಾನು ಬದುಕಿ ಬಾಳಿದ ನೆಲಕ್ಕೆ ಮಾತ್ರವೇ ಸಂಬಂಧಪಟ್ಟದ್ದು; ಮೂರನೆಯದು ಕಾಲ ಮಿತಿಯಿಂದ ಕೂಡಿದ ಶಿಕ್ಷಣ; ನಾಲ್ಕನೆಯದು ಸಮಗ್ರ ಜ್ಞಾನಭಂಡಾರವನ್ನೇ ತನ್ನದಾಗಿಸಿಕೊಳ್ಳಬಹುದಾದ ಗ್ರಂಥವಾಚನ. ಮೊದಲ ಮೂರು ಮೂಲಗಳನ್ನು ಹಲವು ತೆರನಾಗಿ ಪಡೆದ ಹಲವು ವಿದ್ಯಾರ್ಥಿಗಳ ಬರೆಹ ಗ್ರಂಥರೂಪಕ್ಕೆ ಪರಿವರ್ತಿತವಾದಾಗ ಇದರ ಲಾಭವನ್ನು ಗ್ರಂಥವಾಚಕ ಪಡೆದುಕೊಳ್ಳಬಲ್ಲ. ಆದ್ದರಿಂದಲೇ ಜ್ಞಾನಾರ್ಜನೆಯಲ್ಲಿ ಗ್ರಂಥವಾಚನಕ್ಕಿರುವ ಮಹತ್ವ ಬೇರಾವುದಕ್ಕೂ ಇರಲು ಸಾಧ್ಯವಿಲ್ಲ.

ಇಂದು ತಿಳಿವಳಿಕೆಯನ್ನು ಪಡೆಯಲು ಗ್ರಂಥದ ಮೊರೆ ಹೋಗಬೇಕಾಗಿಲ್ಲವೆಂದೂ, ಓದುವ ಕಷ್ಟಕ್ಕೆ ಈಡಾಗದೆ ವಿಹಾರಾಮವಾಗಿ ಕುಳಿತು ದೃಶ್ಯ-ಶ್ರವಣ ಮಾಧ್ಯಮಗಳ ಮೂಲಕ ವಿದ್ಯಾರ್ಜನೆ ಮಾಡಬಹುದೆಂದೂ ಹೇಳುವವರಿದ್ದಾರೆ. ಬೃಹತ್ ಗ್ರಂಥಾಲಯದ ಎಲ್ಲಾ ಪುಸ್ತಕಗಳನ್ನು ಸಿಲಿಕಾನ್ ಚಿಪ್ ಒಂದರಲ್ಲಿ ಇಂದು ಅಡಗಿಸಿಕೊಳ್ಳಬಹುದಾಗಿದೆ. ಈ ವಿದ್ಯುನ್ಮಾನ ಮಾಧ್ಯಮಗಳು ಪುಸ್ತಕಗಳಿಗೆ ಬದಲಿಯಾಗಬಲ್ಲವೆ, ಸ್ಪರ್ಧಿಯಾಗಬಲ್ಲವೆ ಎಂದರೆ ಇಲ್ಲವೆಂದೇ ಹೇಳಬೇಕಾಗುತ್ತದೆ. ಕಾರಣವಿಷ್ಟೆ-ಓದು ವೈಯಕ್ತಿಕವಾದದ್ದು. ನಿಮಗೆ ಬೇಕೆಂದಾಗ, ಬೇಕಾದ್ದನ್ನು, ಬೇಕಾದಲ್ಲಿ ಓದಬಹುದಾದ ಸ್ವಾತಂತ್ರ್ಯ ನಿಮಗಿರುತ್ತದೆ. ಇತರ ಮಾಧ್ಯಮಗಳಾದ ದೂರದರ್ಶನ ಇತ್ಯಾದಿಗಳು ಸಾರ್ವತ್ರಿಕವಾದದ್ದು. ಅವರು ಬಡಿಸಿದ್ದನ್ನು ನೀವು ಉಣ್ಣಬಹುದು. ಇಲ್ಲಿ ನಿಮ್ಮ ಇಷ್ಟಾನಿಷ್ಟಗಳಿಗೆ ಆದ್ಯತೆಯಿಲ್ಲ. ಈ ವಿದ್ಯುನ್ಮಾನ ಮಾಧ್ಯಮಗಳಿಗೆ ಹೊರಗಿನ ಶಕ್ತಿ ಸಾಮರ್ಥ್ಯಗಳ ಅಂದರೆ, ವಿದ್ಯುಚ್ಛಕ್ತಿ, ಚಾಲಕಪರಿಣತೆ, ಪರಿಸರ ನಿಯಂತ್ರಣ ಇತ್ಯಾದಿಗಳ ಅವಶ್ಯಕತೆಯಿದೆ. ಪುಸ್ತಕ ಇಂತಹ ಯಾವ ಬಾಹ್ಯ ಶಕ್ತಿಮೂಲಗಳನ್ನು ಬಯಸುವುದಿಲ್ಲ. ಈ ಮಾಧ್ಯಮಗಳು ಪುಸ್ತಕಗಳಿಗೆ ಸ್ಪರ್ಧಿಗಳು ಹಾಗೂ ಬದಲಿಗಳಲ್ಲ. ವಿದ್ಯಾರ್ಜನೆಯಲ್ಲಿ ಇವೆಲ್ಲವೂ ಪೂರಕ ಸಾಮಗ್ರಿಗಳು.

ತೀವ್ರಗತಿಯ ಇಂದಿನ ಸಮಾಜದಲ್ಲಿ ಪುಸ್ತಕ ಓದಿಗೆ ಸಾಕಷ್ಟು ಸಮಯ ಸಿಗುವುದಿಲ್ಲವೆನ್ನುವುದು ನಿಜ. ಇದರಿಂದಾಗಿ ಪುಸ್ತಕೋದ್ಯಮದಲ್ಲಿ ಹಿಂಜರಿತವಾಗಿದೆಯೆನ್ನುವುದೂ ನಿಜಸಂಗತಿಯೇ. ಆದರೆ ಇದಕ್ಕೆ ಕಾರಣ ಈ ಮಾಧ್ಯಮಗಳಲ್ಲ. ಪ್ರಕಟಣಾ ಪ್ರಪಂಚದಲ್ಲಿ ೭ನೇ ಸ್ಥಾನದಿಂದ ೧೭ನೇ ಸ್ಥಾನಕ್ಕೆ ತಳ್ಳಲ್ಪಟ್ಟ ಭಾರತದ ಪುಸ್ತಕೋದ್ಯಮದ ಹಿಂಜರಿತಕ್ಕೆ ಈ ಮಾಧ್ಯಮಗಳು ಕಾರಣವಲ್ಲ. ಇವುಗಳನ್ನು ಪುಸ್ತಕಗಳ ಸ್ಪರ್ಧಿಗಳೆಂದು ಹೆಸರಿಸಿ ಹಿಂಜರಿತವನ್ನು ಸಮರ್ಥಿಸಿಕೊಳ್ಳುವವರು, ವಿಜ್ಞಾನ-ತಂತ್ರಜ್ಞಾನದ ಬಿಟ್ಟಿನಲ್ಲಿ ಜ್ಞಾನಾರ್ಜನೆಯ ಶತ್ರುಗಳೇ ಸರಿ. ಮಾತ್ರವಲ್ಲ ಈ ನಿಲುವು ದೇಶದ ಪ್ರಗತಿಯಲ್ಲಿ ಅಪಾಯಕಾರಿಯೂ ಹೌದು.

ಪುಸ್ತಕದ ರೂಪುರೇಷೆ :

ಇಟ್ಟಿಗೆಗಳ ಮೇಲೆ, ಶಿಲೆಗಳ ಮೇಲೆ, ತಾಳೆಗರಿ ಹೀಗೆ ಹಲವೆಡೆ ಸಂಗ್ರಹಿತವಾದ ಬರಹಗಳು ಕ್ರಮೇಣ ಕಾಗದ ಹಾಗೂ ಮುದ್ರಣ ಕಲೆಯ ಆವಿಷ್ಕಾರದೊಂದಿಗೆ ಪುಸ್ತಕ ರೂಪವನ್ನು ತಳೆಯಿತು. ಯುನೆಸ್ಕೊ ಪ್ರಕಾರ ೪೯ ಪುಟಗಳಿಗೆ ಕಡಿಮೆಯಿಲ್ಲದ ೪ ಪುಟಗಳ ರಕ್ಷಾಕವಚವನ್ನು ಹೊಂದಿರುವ ನಿಯತಕಾಲಿಕವಲ್ಲದ ಮುದ್ರಿತ ಪ್ರಕಟಣೆ ಪುಸ್ತಕ ಎನಿಸಿಕೊಳ್ಳುತ್ತದೆ.

೨೦ನೇ ಶತಮಾನದ ಮೊದಲ ಭಾಗದಲ್ಲಿ ಕ್ರೈಸ್ತಮತ ಪ್ರಚಾರಕ್ಕಾಗಿ ಬೈಬಲನ್ನು ಕನ್ನಡದಲ್ಲಿ

ಮುದ್ರಿಸಿದ ಕ್ರೈಸ್ತಮತ ಪ್ರಚಾರಕರು, ಕನ್ನಡ ಭಾಷೆಯನ್ನು ಜನಸಾಮಾನ್ಯರ ಬಳಿಗೆ ಒಯ್ದು ಪ್ರಚಾರ ಕಾರ್ಯಕ್ಕೆ ತೀವ್ರತೆ ನೀಡಿದರು. ಭಾಷೆಯ ಅಭ್ಯಾಸವನ್ನು ಸರಳಗೊಳಿಸಲು ಶ್ರಮಿಸಿದ ಈ ಮಹನೀಯರು ವ್ಯಾಕರಣ, ನಿಘಂಟು, ಛಂದೋಗ್ರಂಥ, ಹಳಗನ್ನಡ ಕಾವ್ಯಗಳನ್ನು ಮುದ್ರಿಸಿದ ತರುವಾಯವೇ ನಮ್ಮ ವಿದ್ವಾಂಸರು ಓಲೆಯ ಗರಿಗಳಲ್ಲಿ ಅಡಗಿದ್ದ ಸಾಹಿತ್ಯ ಕೃತಿಗಳನ್ನು ಪ್ರಕಟಣೆಗೆ ಸಿದ್ಧಗೊಳಿಸಿದರು. ಕ್ರೈಸ್ತ ಧರ್ಮಗುರುಗಳು ಜನತೆಯ ನಡುವೆ ತಮ್ಮ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿದ ನಂತರವೇ ನಮ್ಮ ಹಳೆಯ ಓಲೆಗರಿಗಳು ಪ್ರಕಟಣೆಗೆ ಸಿದ್ಧವಾದವು ಎಂಬುದನ್ನು ಇಲ್ಲಿ ಗಮನಿಸಬೇಕು. ಅಲ್ಲಿಯವರೆಗೂ ಈ ಜ್ಞಾನಭಂಡಾರ ಮೇಲ್ವರ್ಗದ ಆಸ್ತಿಯಂತೆ ಜತನವಾಗಿ ಇರಿಸಲ್ಪಟ್ಟಿತ್ತು. ಧರ್ಮಗ್ರಂಥಗಳ, ಪುರಾಣ ಕಥೆಗಳ ಪ್ರಕಟಣೆ ಅರಮನೆ-ಗುರುಮನೆಗಳಿಂದ ನಡೆದು ಪುಸ್ತಕ ಪ್ರಕಾಶನ ಮುಂದುವರಿಯಲು ಕಾರಣವಾಯಿತು. ನಂತರ ಮೈಸೂರಿನ ಶಿಕ್ಷಣ ಹಾಗೂ ಶಾಸನ ಇಲಾಖೆ, ಪ್ರಾಚ್ಯ ಕೋಶಾಗಾರ, ಕಾವ್ಯ ಕಲಾನಿಧಿ, ಕಾವ್ಯಮಂಜರಿ ಸಂಸ್ಥೆಗಳು ಮತ್ತು ಮಂಗಳೂರಿನ ಬಾಸೆಲ್ ಮಿಷನ್ ಮಾಡಿದ ಪ್ರಕಟಣೆಗಳು ಸ್ತುತ್ಯಾರ್ಹ.

ಹಿಂದೆ ಘಟಿಕ ಸ್ಥಾನಗಳು, ಬ್ರಹ್ಮಪುರಿಗಳು, ಮಠ, ದೇವಸ್ಥಾನಗಳಲ್ಲಿ ಕೆಲವರಿಗೆ ಮಾತ್ರವೇ ಲಭ್ಯವಿದ್ದ ಶಿಕ್ಷಣ ಮುಂದೆ ಸಮಗ್ರ ಶಿಕ್ಷಣ ಯೋಜನೆಯಿಂದಾಗಿ ಎಲ್ಲಾ ಪ್ರದೇಶಗಳಲ್ಲಿ ಶಾಲೆಗಳ ಪ್ರಾರಂಭಕ್ಕೆ ಕಾರಣವಾಯಿತು. ಇದರಿಂದಾಗಿ ಶಿಕ್ಷಣದ ಪ್ರಮುಖ ಸಾಧನವಾದ ಪುಸ್ತಕ, ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿಸಲು ದೊಡ್ಡ ಪ್ರಮಾಣದಲ್ಲಿ ಪ್ರಕಟಗೊಳ್ಳಲಾರಂಭವಾಯಿತು.

೧೯೫೬ರವರೆಗೆ ಕನ್ನಡ ಪ್ರದೇಶಗಳು ಹಲವು ಆಡಳಿತಗಳಡಿಯಲ್ಲಿ ಹಂಚಿಹೋಗಿದ್ದರೂ ಪುಸ್ತಕ ಪ್ರಕಟಣೆ ಆಯಾಯ ಪ್ರದೇಶಗಳಲ್ಲಿ ಮುಂದುವರಿದಿತ್ತು. ಅರಮನೆ, ಗುರುಮನೆಗಳೊಂದಿಗೆ ವಿಶ್ವವಿದ್ಯಾನಿಲಯದ ಪ್ರಸಾರಾಂಗಗಳು, ಕನ್ನಡ ಸಾಹಿತ್ಯ ಪರಿಷತ್ತು, ಮಿಥಿಕ್ ಸೊಸೈಟಿ ಹಾಗೂ ಹಲವಾರು ಖಾಸಗಿ ಪ್ರಕಾಶಕರು ತಮ್ಮ ಅಮೂಲ್ಯವಾದ ಪ್ರಕಟಣೆಗಳ ಮೂಲಕ ಕನ್ನಡ ಸಾಹಿತ್ಯ ಸಂಪತ್ತನ್ನು ಶ್ರೀಮಂತಗೊಳಿಸಿದರೂ ಅವುಗಳಲ್ಲಿ ಹಲವಾರು ಪ್ರಕಾಶನ ಸಂಸ್ಥೆಗಳು ಇಂದು ನಿಷ್ಕ್ರಿಯವಾಗಿವೆ. ಹಿಂದೆ ಪುಸ್ತಕ ಪ್ರಕಟಣಾ ಕಾರ್ಯದಲ್ಲಿ ತೊಡಗಿಕೊಳ್ಳುತ್ತಿದ್ದ ವಿದ್ವಾಂಸರು, ಬುದ್ಧಿಜೀವಿಗಳು, ಪ್ರಕಟಣಾ ಪ್ರಪಂಚದಿಂದ ಹಿಂದೆ ಸರಿಯುತ್ತಿದ್ದಾರೆ. ದೇಶದ ಪ್ರಗತಿಗೆ ಪೂರಕವಾಗಿರಬೇಕಾದ ಪುಸ್ತಕೋದ್ಯಮ ಇಂದು ಗೊತ್ತುಗುರಿಯಿಲ್ಲದೆ ಹೂಡಿದ ಹಣಕ್ಕೆ ಲಾಭವನ್ನಷ್ಟೆ ನಿರೀಕ್ಷಿಸುವ ಸಾಮಾನ್ಯ ಉದ್ದಿಮೆಯಾಗಿ ಪರಿವರ್ತಿತವಾಗುತ್ತಿದೆ.

ಪುಸ್ತಕೋದ್ಯಮ :

ದೇಶದ ಪ್ರಗತಿಯನ್ನು ಪುಸ್ತಕೋದ್ಯಮದ ಮೂಲಕ ಅಳೆಯಲಾಗುತ್ತದೆ. ದೇಶದ ಅಭಿವೃದ್ಧಿಯ ಪ್ರತಿಬಿಂಬ ಆಯಾಯ ದೇಶದ ಪ್ರಕಟಣೆಯಲ್ಲಿ ಪ್ರತಿಫಲಿತವಾಗುತ್ತದೆ. ಹಾಗಿದ್ದರೂ ಪುಸ್ತಕೋದ್ಯಮವನ್ನು ರಾಷ್ಟ್ರದ ಇತರ ಉದ್ಯಮಗಳೊಂದಿಗೆ ಹೋಲಿಸಿದಾಗ ಅದರ ಗಾತ್ರ ಅತಿ ಕಿರಿದು. ಈ ಕಿರುಗಾತ್ರದ ಉದ್ಯಮ ದೇಶದ ಬೃಹತ್ ಉದ್ಯಮಗಳ ಕೀಲಿಕೈ ಎನ್ನುವುದೂ ನಿಜವೆ. ಪುಸ್ತಕ ಪ್ರಕಟಣೆ ಒಂದು ಉದ್ಯಮವೇ ಎನ್ನುವುದು ಸಹ ಚರ್ಚಾಸ್ಪದ ವಿಷಯವೆ. ಯಾವುದೇ ಒಂದು ಉದ್ಯಮವನ್ನು ಆರಂಭಿಸಬೇಕಾದರೆ ನೆಲ, ದುಡಿಮೆ, ಬಂಡವಾಳ, ಸಂಘಟನೆ, ಸ್ಥಿರ ಮಾರುಕಟ್ಟೆ ಇತ್ಯಾದಿಗಳು ಅವಶ್ಯ. ಆದರೆ ಪುಸ್ತಕೋದ್ಯಮಕ್ಕೆ ಬೇಕಾದ ಅವಶ್ಯಕತೆಗಳೇ ಬೇರೆ. ಪುಸ್ತಕ ವ್ಯವಸಾಯದಲ್ಲಿ ಲೇಖಕ ಪ್ರಮುಖನಾದರೂ ಲೇಖಕ, ಪ್ರಕಾಶಕ, ಮುದ್ರಕ, ವಿತರಕ ಇವರ ಸಾಮೂಹಿಕ ಪ್ರಯತ್ನದ ಫಲದಿಂದ ಪುಸ್ತಕದ ಸೋಲು

ಗಳಾಗಿ ನಿರ್ಮಾಣವಾಗುತ್ತದೆ. ಇದನ್ನು ಉಪಯೋಗಿಸುವಾತ ಓದುಗ. ಓದುಗಸಮೂಹದ ವಾಚನಾಭಿರುಚಿಯ ವೃದ್ಧಿಗೆ ನೆರವಾಗುವ ವಾಚನ ಪರಿಸರದ ನಿರ್ಮಾಣ ಕಾರ್ಯ ಸತತವಾಗಿ ನಡೆಯುತ್ತಲೇ ಇರಬೇಕು. ಈ ದಿಸೆಯಲ್ಲಿನ ಆಸಕ್ತಿ ಪುಸ್ತಕೋದ್ಯಮಕ್ಕೆ ಅಭ್ಯುದಯವಾಗುತ್ತದೆ. ಆದರೆ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಕಾರ್ಯ ಯಾವುದೇ ರೂಪದಲ್ಲೂ ಇದುವರೆಗೆ ಕಾಣಿಸಿಕೊಂಡಿಲ್ಲ. ಖಾಸಗಿ ಪ್ರಕಾಶಕರಾಗಲಿ, ಬುದ್ಧಿಜೀವಿಗಳಾಗಲಿ ಇದನ್ನು ಮಾಡಲು ಸಾಧ್ಯವಿಲ್ಲ. ಇದು ಸರಕಾರದಿಂದ ಮಾತ್ರವೇ ಸಾಧ್ಯ. ಉತ್ತಮ ಓದುಗ ಸಮೂಹ ದೃಷ್ಟಿಯಿಂದ ರಾಷ್ಟ್ರದ ಪ್ರಗತಿಗೆ ನೆರವಾಗಬಲ್ಲ. ಆದ್ದರಿಂದಲೇ ಸರಕಾರ ಈ ದಿಸೆಯಲ್ಲಿ ಮಾಡುವ ವೆಚ್ಚ, ಅದರ ತಕ್ಷಣ ಫಲಿತಾಂಶವನ್ನು ತೋರಿಸಲಾರದಾದರೂ ರಾಷ್ಟ್ರದ ಪ್ರಗತಿಯಲ್ಲಿ, ಭವಿಷ್ಯತ್ತಿನ ನಿರ್ಮಾಣದಲ್ಲಿ ಅದು ಪರೋಕ್ಷವಾಗಿ ಸಹಾಯ ಮಾಡುತ್ತದೆ.

ಕನ್ನಡ ಪ್ರಕಾಶನ – ಸ್ಥಿತಿ-ಗತಿ :

[illegible] ೧೯೮೬-೮೭ರಲ್ಲಿ [illegible] ದೇಶದ ಒಟ್ಟು ಪ್ರಕಟಣೆಗಳಲ್ಲಿ ಕನ್ನಡವು ಶೇಕಡಾ ೬ ರಷ್ಟು. ಇಂಗ್ಲೀಷ್ ಶೇ. ೩೨, ಹಿಂದಿ ಶೇ. ೧೫, ತಮಿಳು ಶೇ. ೮, ಮಲಯಾಳ ಶೇ.೫ ಇತ್ಯಾದಿ. ಹತ್ತು ವರ್ಷಗಳ ಹಿಂದಿನ ಈ ಅಂಕೆ-ಅಂಶಗಳಿಂದ ಒಂದಿಷ್ಟು ಮುಂದುವರಿಕೆ ಆಗಿರಬಹುದಾದರೂ, ಕನ್ನಡದ ಒಟ್ಟು [illegible] ಸರಿ. ಇದಕ್ಕೆ ಕಾರಣಗಳೇನು? ಇವುಗಳನ್ನು ಸರಿಪಡಿಸುವ [illegible] ಬೇಕು ಎಂಬುದು ಚರ್ಚೆಗೆ ಒಳಗಾಗಬೇಕಾದ ವಿಷಯ.

ಶಿಕ್ಷಣ, ಆರೋಗ್ಯ, ಕಾನೂನು, ಮೊದಲಾದ [illegible] ಸಾಹಿತ್ಯವನ್ನು ಒದಗಿಸಿ ಕನ್ನಡದಲ್ಲಿ ಅತ್ಯುತ್ತಮ ಪುಸ್ತಕ ಪರಂಪರೆಯನ್ನು ಆರಂಭಿಸಿದ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ತನ್ನ ಪ್ರಕಟಣೆಯನ್ನು [illegible]. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಣಾ ಪ್ರಪಂಚದಿಂದ ದೂರ ಸರಿಯುತ್ತಿದೆ. ಉಳಿದ ವಿಶ್ವವಿದ್ಯಾಲಯಗಳ ಪ್ರಸಾರಾಂಗಗಳು ಸಹ ಆಗೊಂದು ಈಗೊಂದು ಪ್ರಕಟಣೆಗಳ ಮೂಲಕ ತಮ್ಮ ಇರವನ್ನು ಉಳಿಸಿಕೊಂಡಿವೆ. ನ್ಯಾಷನಲ್ ಬುಕ್ ಟ್ರಸ್ಟ್, ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಪ್ರಕಟಣೆಗಳಲ್ಲೂ ಹೆಚ್ಚಿನ ಚಟುವಟಿಕೆಗಳು ಕಾಣಬರುತ್ತಿಲ್ಲ. ಕನ್ನಡ ವಿಶ್ವವಿದ್ಯಾಲಯ ಎಲ್ಲಾ ರೀತಿಯ [illegible] ಪ್ರಕಟಣೆಗಳ ಮೂಲಕ ವಿಶ್ವವಿದ್ಯಾಲಯದ ಮೂಲೋದ್ದೇಶ ಪ್ರಕಟಣೆಯೇ ಆಗಿರಬೇಕು ಎಂಬಂತೆ ವರ್ತಿಸುತ್ತಿದೆ. ಕನ್ನಡ-ಸಂಸ್ಕೃತಿ ಇಲಾಖೆ ಹೆಚ್ಚು ಶ್ರಮವಿಲ್ಲದ ಮರು ಮುದ್ರಣಗಳನ್ನೂ ಜನಪ್ರಿಯ ಸಾಹಿತ್ಯವನ್ನೂ ಆಗೊಮ್ಮೆ ಈಗೊಮ್ಮೆ ಅಚ್ಚುಮಾಡುವುದರಲ್ಲಿ ನಿರತವಾಗಿದೆ. ಈ ಸರಣಿಗೆ ಪುಸ್ತಕ ಪ್ರಾಧಿಕಾರವೂ ಸೇರಿಕೊಳ್ಳಬಹುದೇನೋ ತಿಳಿಯದು. ಆದರೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾತ್ರವೇ ಹಲವು ವಿಶಿಷ್ಟ ವಿಷಯಗಳ ಬಗ್ಗೆ ಅಧ್ಯಯನಶೀಲ ಪ್ರಕಟಣೆಗಳನ್ನು ಹೊರತರುತ್ತಿರುವುದು ಮಾತ್ರವಲ್ಲದೆ ಮಾರುಕಟ್ಟೆಯನ್ನು ತಲುಪುತ್ತಿರುವುದೂ ಗುರುತಿಸಬೇಕಾದ ಅಂಶ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಈ ಕಾರ್ಯಸಾಧನೆ ಸರಕಾರದ ನೀತಿ-ನಿರೂಪಣೆಯಿಂದಾಗಲಿ, ಸಮಗ್ರ ಯೋಜನೆಯಿಂದಾಗಲೀ ಪ್ರೇರಿತವಾದುದಲ್ಲ. ಅಲ್ಲಿಯ ಕಾರ್ಯಸಮಿತಿ, ಅಧ್ಯಕ್ಷರ ಕಾರ್ಯತತ್ಪರತೆ ಮಾತ್ರವೇ ಇದಕ್ಕೆ ಕಾರಣ. ಮುಂದಿನ ಸಾಂಸ್ಥಿಕ ಬದಲಾವಣೆಯೊಂದಿಗೆ ಇಲ್ಲಿಯ ಕಾರ್ಯಚಟುವಟಿಕೆಗಳೂ ಸ್ಥಗಿತಗೊಂಡರೆ ಆಶ್ಚರ್ಯ ಪಡಬೇಕಾಗಿಲ್ಲ.

ವಿಜ್ಞಾನ-ತಂತ್ರಜ್ಞಾನ ಎಲ್ಲಾ ಕ್ಷೇತ್ರಗಳಲ್ಲೂ ಮಾರ್ಪುಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಕನ್ನಡವನ್ನು ಇಂದಿನ ಯುಗದ ಅವಶ್ಯಕತೆಗಳಿಗೆ ಒಗ್ಗುವಂತೆ ಮಾಡಬೇಕಾದ ಅಗತ್ಯವಿದೆ. ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಈ ಎಲ್ಲಾ ಸಂಸ್ಥೆಗಳೂ ಈ ತುರ್ತು ಸಂದರ್ಭದಲ್ಲೇ ನಿದ್ರಾವಶವಾಗಿವೆ. ಈಗ ನಮ್ಮ ಭಾಷೆಯನ್ನು ವಿದ್ಯುನ್ಮಾನ ಭಾಷೆಗೆ ಅಳವಡಿಸಬೇಕಾಗಿದೆ. ವಿಜ್ಞಾನ-ತಂತ್ರಜ್ಞಾನದ ಪರಿಭಾಷೆಯನ್ನು ಸಮೃದ್ಧಗೊಳಿಸದೆ ಹೋದಲ್ಲಿ ಇನ್ನೂ ಹಲವಾರು ವರ್ಷಗಳ ಕಾಲ ಉನ್ನತ ವ್ಯಾಸಂಗವನ್ನು ಪಡೆಯಲು ಇಂಗ್ಲಿಷ್ ಭಾಷೆಯ ಮೊರೆ ಹೋಗಬೇಕಾಗುತ್ತದೆ. ಪರಿಷತ್ತು, ಪ್ರಸಾರಾಂಗಗಳು ಬಹಳಷ್ಟು ಹಿಂದೆಯೇ ಹಮ್ಮಿಕೊಂಡ ವಿಶ್ವಕೋಶ, ಕನ್ನಡ ನಿಘಂಟುಗಳ ಯೋಜನೆಗಳು ಇನ್ನೂ ಪೂರ್ಣಗೊಂಡಿಲ್ಲ. ಕನ್ನಡದ ಸಮಗ್ರ ಬೆಳವಣಿಗೆಗೆ ಹೊಸ ಯೋಜನೆಗಳು ಯಾವುವೂ ರೂಪುಗೊಂಡಿಲ್ಲ. ಕನ್ನಡಕ್ಕೆ ತೀರಾ ಅಗತ್ಯವಾದ ವಿಜ್ಞಾನ ಪದಕೋಶ, ಆಡಳಿತದಲ್ಲಿ ಕನ್ನಡವನ್ನು ಉಪಯೋಗಿಸಲು ಉಪಯುಕ್ತ ಪೂರಕ ಪ್ರಕಟಣೆಗಳು ಇನ್ನೂ ಯಾವ ಪ್ರಮಾಣದಲ್ಲೂ ಬಂದಿಲ್ಲವೆಂಬುದನ್ನು ಇಲ್ಲಿ ಗಮನಿಸಬೇಕಾಗಿದೆ. ಈ ಸ್ಥಿತಿ ಹೀಗೇ ಮುಂದುವರಿದಲ್ಲಿ ಕನ್ನಡ ಕೇವಲ ಕಥೆ-ಕಾದಂಬರಿ-ಕಾವ್ಯಗಳಿಗಷ್ಟೇ ಸೀಮಿತವಾದ ಭಾಷೆಯಾಗಿ ಹಿಂದುಳಿಯುತ್ತದೆ. ನಾಡಿನ ಪ್ರಗತಿಯಲ್ಲಿ ಜನತೆಯನ್ನು ಒಂದುಗೂಡಿಸಬೇಕಾದ ಭಾಷೆ. ವ್ಯವಹಾರದಲ್ಲಿ ಹಿಂದುಳಿದು ನಾಡಿನ ಅನೈಕ್ಯತೆಗೆ ಕಾರಣವಾಗುವ ಅಪಾಯವೂ ಇದೆಯೆಂಬುದನ್ನು ನಾವು ಮನಗಾಣಬೇಕಾಗಿದೆ.

ಖಾಸಗಿ ಪ್ರಕಾಶನ ಕ್ಷೇತ್ರ :

ತಲಾ ಹತ್ತು ರೂಪಾಯಿಯಂತೆ ೧೨ ಜನ ಬಂಡವಾಳ ಹೂಡಿ ೧೯೪೫ರಲ್ಲಿ ಸ್ಥಾಪಿಸಿದ ಸಾಹಿತ್ಯ ಪ್ರವರ್ತಕ ಕೋ-ಆಪರೇಟಿವ್ ಸೊಸೈಟಿ ಇಂದು ಕೇರಳದ ಅತೀ ದೊಡ್ಡ ಖಾಸಗಿ ಪ್ರಕಾಶನ ಸಂಸ್ಥೆಯಾಗಿದೆ. ಈಗಾಗಲೇ ೪೦೦೦ಕ್ಕೂ ಹೆಚ್ಚು ಶೀರ್ಷಿಕೆಗಳನ್ನು ಹೊರತಂದ ಈ ಸಂಸ್ಥೆ, ೫೦೦ ಜನ ಸಿಬ್ಬಂದಿಯನ್ನು ಹೊಂದಿದೆ. ಲೇಖಕರಿಗೆ ಶೇ. ೩೦ರಷ್ಟು ಗೌರವಧನವನ್ನು ನೀಡುವ ಜಾಗತಿಕ ದಾಖಲೆಯ ಅತೀ ಹೆಚ್ಚು ಗೌರವಧನ ನೀಡುವ ಕೀರ್ತಿ ಈ ಸಂಸ್ಥೆಗೆ ಸಲ್ಲುತ್ತದೆ. ಕೇರಳದಲ್ಲಿ ಬೆಳೆದಂತೆ ನಮ್ಮಲ್ಲಿ ಪುಸ್ತಕೋದ್ಯಮ ಬೆಳೆದಿಲ್ಲವೆಂಬುದನ್ನು ಒಪ್ಪಿಕೊಳ್ಳೋಣ. ನಮ್ಮ ರಾಜ್ಯದ ಬಗ್ಗೆ ಹೇಳುವುದಾದರೆ, ವರ್ಷದಲ್ಲಿ ಒಂದೆರಡು ಪುಸ್ತಕಗಳಿಂದ-ಹೆಚ್ಚೆಂದರೆ ೨೦-೩೦ ಪುಸ್ತಕಗಳವರೆಗೆ ಪ್ರಕಟಣೆ ಮಾಡುವ ಪ್ರಕಾಶಕರಿದ್ದಾರೆ. ೭೦-೮೦ ಪುಸ್ತಕಗಳನ್ನು ಹೊರತರುವ ಖಾಸಗಿ ಪ್ರಕಾಶಕರು ಒಬ್ಬಿಬ್ಬರು ಇರಬಹುದು. ಪ್ರೌಢ ವ್ಯಾಸಂಗ, ಪರಾಮರ್ಶನ, ವಿಜ್ಞಾನ-ತಂತ್ರಜ್ಞಾನ, ವಿಶ್ವಕೋಶ, ನಿಘಂಟುಗಳು ಖಾಸಗಿ ಪ್ರಕಾಶಕರ ವ್ಯಾಪ್ತಿಯಿಂದ ಹೊರಗುಳಿಯುತ್ತವೆ. ಕಾರಣ-ಇವಕ್ಕೆ ತೊಡಗಿಸಬೇಕಾದ ಇಡಿಗಂಟು, ಪುನಃ ವಾಪಸಾಗಿ ಅವನ ಕೈಸೇರಲು ವರ್ಷಗಳೇ ಬೇಕು. ಉಳಿದಂತೆ ಅವನ ದೃಷ್ಟಿ ಸಾಮಾನ್ಯ ವಿಷಯಗಳ ಮೇಲೆ ಮಾತ್ರವೇ ಕೇಂದ್ರೀಕೃತವಾಗುತ್ತದೆ. ಕಥೆ, ಕಾದಂಬರಿ, ಆರೋಗ್ಯ, ಇತರೇ ವಿಷಯಗಳ ಕುರಿತ ಕಿರುಪುಸ್ತಕಗಳಿಂದಾಚೆ ಅವನ ಗಮನ ಹರಿಯುವುದಿಲ್ಲ. ಸಗಟು ಕೊಳ್ಳಿಕೆಯಲ್ಲಿ ವಿಜ್ಞಾನ ಪುಸ್ತಕಗಳನ್ನೋ, ಮಕ್ಕಳ ಪುಸ್ತಕಗಳನ್ನೋ, ವಯಸ್ಕ ಪುಸ್ತಕಗಳನ್ನೋ ಸರಕಾರ ಕೊಳ್ಳುತ್ತದೆ ಎಂದಾದರೆ ಎಲ್ಲಾ ಪ್ರಕಾಶಕರೂ ಇದರತ್ತಲೇ ಗಮನ ಹರಿಸುತ್ತಾರೆ. ಪ್ರಕಾಶನ ಕ್ಷೇತ್ರದಲ್ಲಿ ಹಿಂದಿನ ದಿನದವರೆಗೂ ಪರಿಚಿತವಲ್ಲದ ಸಂಸ್ಥೆಗಳು ಈ ಸಗಟು ಕೊಳ್ಳಿಕೆಯ ಪ್ರಕಟಣೆ ಬಂದೊಡನೆ ಚುರುಕಾಗಿ ಸರಕಾರದ ಬೇಡಿಕೆ ಪೂರೈಕೆಯ ನಂತರ ಅಸ್ತಂಗತವಾಗುವುದು ತಿಳಿಯದ ವಿಷಯವೇನಲ್ಲ.

ಇದರಿಂದಾಗಿ ಪ್ರಕಾಶನ ಕ್ಷೇತ್ರದಲ್ಲಿ ಅನಿಶ್ಚಿತತೆ ಕಾಡುತ್ತಿದೆ. ಸಗಟು ಕೊಳ್ಳಿಕೆ, ಗ್ರಂಥಾಲಯ ಪೂರೈಕೆಯನ್ನು ಮಾತ್ರವೇ ಮಾಡುವ ಕೆಲವು ಪ್ರಕಾಶಕರು ಮಾತ್ರವೇ ಉದ್ಯಮದಲ್ಲಿ ಯಶಸ್ವಿಯಾಗಿದ್ದಾರೆ. ಕನ್ನಡದಲ್ಲಿ ಅತಿದೊಡ್ಡ ಪ್ರಮಾಣದಲ್ಲಿ ಪುಸ್ತಕಗಳನ್ನು ಹೊರತಂದು ಸರಕಾರಕ್ಕೆ ಪೂರೈಸುತ್ತಿದ್ದ ಸಂಸ್ಥೆಯೊಂದು ಸರಕಾರ ಕೆಲ ವರ್ಷಗಳ ಹಿಂದೆ ಕೊಳ್ಳಿಕೆಯನ್ನು ನಿಲ್ಲಿಸಿದಾಗ ತನ್ನ ಪ್ರಕಟಣೆಯನ್ನು ನಿಲ್ಲಿಸಿದ್ದನ್ನು ನಾವು ಕಾಣುತ್ತೇವೆ. ಪುಸ್ತಕೋದ್ಯಮದಲ್ಲಿ ನಿರ್ಲಕ್ಷ್ಯಕ್ಕೆ ಗುರಿಯಾದ ಕ್ಷೇತ್ರ - ವಿತರಣೆ. ಯಾವ ಪ್ರಕಾಶಕನೂ ತನ್ನ ಪ್ರಕಟಣೆಗಳನ್ನು ಓದುಗನಿಗೆ ತಲುಪಿಸುವ ಕಾರ್ಯದ ಕುರಿತು ಚಿಂತಿಸುವುದಿಲ್ಲ. ಗ್ರಂಥಾಲಯಗಳ ಬೇಡಿಕೆಗೆ ಹಾತೊರೆದು, ಓದುಗನನ್ನು ಮರೆಯುವ ಪ್ರವೃತ್ತಿ ಇಂದಿನ ಹೆಚ್ಚಿನ ಪ್ರಕಾಶಕರಲ್ಲಿ ವ್ಯಕ್ತವಾಗುತ್ತಿದೆ. ಹೂಡಿದ ಹಣಕ್ಕೆ ಮುಪ್ಪಟ್ಟನ್ನು ಗಳಿಸುವ ವ್ಯಾಪಾರಿ-ಸ್ಪರ್ಧಾ ಮನೋಭಾವವೇ ಇದಕ್ಕೆ ಕಾರಣ. ಓದುಗನನ್ನು ತಲುಪಲು ಅಭಿರುಚಿ ನಿರ್ಮಾಣ, ವಾಚನ ಪರಿಸರ ಅಗತ್ಯವೆನ್ನುವುದು ನಿಜವಾದರೂ ಈ ನಿಟ್ಟಿನಲ್ಲಿ ಸರಕಾರದ ಮೇಲೆ ಒತ್ತಡ ಹೇರುವ ಕಾರ್ಯವನ್ನು ಪ್ರಕಾಶಕ ಖಾಸಗಿಯಾಗಿ ಆಗಲಿ ಸಾಮೂಹಿಕವಾಗಿ ತನ್ನ ಸಂಘ ಸಂಸ್ಥೆಗಳ ಮೂಲಕವಾಗಿಯಾಗಲೀ ಮಾಡದೇ ಇರುವುದು ಇದಕ್ಕೆ ಕಾರಣವಾಗಿದೆ. ಇಂದಿನ ಪ್ರಕಾಶನ ಕ್ಷೇತ್ರದಲ್ಲಿನ ಅನಿಶ್ಚಿತತೆಯಿಂದ ಹೊರಬರಲು ಓದಿಗೆ ಪ್ರಚೋದನೆ ನೀಡಿದಲ್ಲಿ ಮಾತ್ರವೇ ಇದು ಸಾಧ್ಯ.

ಓದಿಗೆ ಪ್ರಚೋದನೆ :

೧. ಪಾಠಕ್ಕಾಗಿ ತರಗತಿಗಳಿರುವಂತೆ ವಾರಕ್ಕೊಂದು ಲೈಬ್ರರಿ ತರಗತಿಯನ್ನು ಪಾಠಕ್ರಮದಲ್ಲಿ ಅಳವಡಿಸುವುದು.

೨. ವರ್ಷದ ಉತ್ತಮ ಕಥೆ, ಕಾದಂಬರಿ, ಪ್ರಶಸ್ತಿ ವಿಜೇತ ಗ್ರಂಥ ಹಾಗೂ ತಾನು ಗ್ರಂಥಾಲಯದಲ್ಲಿ ಓದಿದ ಪುಸ್ತಕಗಳ ಕುರಿತು ಬರೆಯುವಂತೆ ಮಾಡಲು ಪ್ರಶ್ನಪತ್ರಿಕೆಯಲ್ಲಿ ಪ್ರಶ್ನೆಗಳನ್ನು ರೂಪಿಸಿ ಕನಿಷ್ಠ ೧೦ ಅಂಕಗಳನ್ನು ನೀಡುವುದು. ಇದರಿಂದಾಗಿ ಪಠ್ಯೇತರ ಓದು ಹೆಚ್ಚುವುದರೊಂದಿಗೆ ಗ್ರಂಥಾಲಯಗಳಲ್ಲಿ ಒಳ್ಳೆಯ ಓದನ್ನು ಅರಸುವ ಪ್ರವೃತ್ತಿ ಬೆಳೆಯುತ್ತದೆ. ವಿದ್ಯಾರ್ಥಿಗಳು ಕೇಳಬಹುದಾದ ಪ್ರಶ್ನೆಗಳಿಗೆ ಸಿದ್ಧರಿರಲು ಅನಿವಾರ್ಯವಾಗಿ ಶಿಕ್ಷಕರೂ ತಮ್ಮ ಓದನ್ನು ರೂಢಿಸಿಕೊಳ್ಳಬೇಕಾಗುತ್ತದೆ.

೩. ನಮ್ಮ ವಾರ್ತಾ ಪತ್ರಿಕೆಗಳು ಸಾಧಾರಣವಾಗಿ ಮನರಂಜನೆ, ಮಾರುಕಟ್ಟೆ, ಆಟೋಟ ಇತ್ಯಾದಿಗಳಿಗೆ ವಾರಕ್ಕೊಂದು ಪುಟವನ್ನು ಮೀಸಲಿಡುತ್ತವೆ. ಆದರೆ ಪುಸ್ತಕ ವಿಮರ್ಶೆಗೆ ಈ ಅಕ್ಷರ ಮಾಧ್ಯಮ ಮೀಸಲಿರಿಸುವ ಸ್ಥಳ ಒಂದು ಅಥವಾ ಒಂದೂವರೆ ಕಾಲಂ. ನಮ್ಮ ಎಲ್ಲಾ ಪತ್ರಿಕೆಗಳ ಮನವೊಲಿಸಿ ತಿಂಗಳಿಗೊಂದು ಸಲವಾದರೂ ಒಂದು ಪೂರ್ತಿ ಪುಟವನ್ನು ಪುಸ್ತಕ ಪರಿಚಯಕ್ಕಾಗಿ ಮೀಸಲಿಡುವಂತೆ ಮಾಡಬೇಕು. ಆ ಪುಟದಲ್ಲಿ ಪುಸ್ತಕ ಜಾಹಿರಾತುಗಳಿಗೆ ರಿಯಾಯಿತಿ ಕೊಡುವಂತೆ ಮಾಡಿದಲ್ಲಿ, ಪುಸ್ತಕ ಮಾಹಿತಿ ಓದುಗನನ್ನು ತಲಪುತ್ತದೆ. ಪತ್ರಿಕೆಗಳ ಪ್ರಸಾರ ಸಂಖ್ಯೆಯೂ ಏರುತ್ತದೆ ಎಂಬುದನ್ನು ಅವರಿಗೆ ಮನಗಾಣಿಸಬೇಕು.

೪. ಈಗ ಬಳಕೆ ವಸ್ತುಗಳ ಮಾರಾಟ ಚಳುವಳಿ ಹೇಗಿದೆ ಎಂದರೆ, ಎಲ್ಲಾ ಸಾರ್ವಜನಿಕ, ಖಾಸಗಿ ಸಂಘಸಂಸ್ಥೆಗಳು, ಕಾರ್ಖಾನೆ-ಕಚೇರಿಗಳ ಆಡಳಿತ ವರ್ಗಗಳೇ ತಮ್ಮ ಸಿಬ್ಬಂದಿವರ್ಗ ಖರೀದಿಸುವ ಗೃಹಬಳಕೆ ವಸ್ತುಗಳಿಗೆ ಒಂದೇ ಗಂಟಿನಲ್ಲಿ ಹಣ ನೀಡಿ ಅವರಿಗೆ ನೀಡುವ ತಿಂಗಳ ವೇತನದಲ್ಲಿ ಕಂತು ಕಂತಾಗಿ ಹಣವನ್ನು ವಸೂಲು ಮಾಡಿಕೊಳ್ಳುತ್ತಿವೆ.

ಓದು- ಆ ಮೂಲಕ ಪಡೆಯುವ ತಿಳಿವಳಿಕೆ ಸಿಬ್ಬಂದಿಯ ದಕ್ಷತೆಯನ್ನು ಹೆಚ್ಚಿಸುತ್ತದೆಯಾದ್ದರಿಂದ ಇಂತಹ ಪ್ರಯೋಗವನ್ನು ಮಾಡುವಂತೆ ಸರಕಾರಿ-ಅರೆ ಸರಕಾರಿ ಕಾರ್ಯಾಲಯಗಳ, ಸಂಘ-ಸಂಸ್ಥೆಗಳ ಆಡಳಿತ ವರ್ಗವನ್ನು ಕೇಳಿಕೊಳ್ಳಬಹುದು. ಅವರು ಕೊಳ್ಳಬಹುದಾದ, ಓದಬಹುದಾದ ಉತ್ತಮ ಪುಸ್ತಕ ಪಟ್ಟಿಯನ್ನು ತಯಾರಿಸಿ, ಅವುಗಳಿಗೆ ಮಾತ್ರವೇ ಈ ಸೌಲಭ್ಯ ಎಂಬ ಷರತ್ತನ್ನು ಹಾಕಬೇಕಾಗುತ್ತದೆ. ಇಲ್ಲವಾದಲ್ಲಿ ಈ ಯೋಜನೆಯ ದುರುಪಯೋಗವಾಗುತ್ತದೆ.

೫. ಈ ಯೋಜನೆಯಲ್ಲಿ ಅತೀ ಹೆಚ್ಚು ಮಾರಾಟವಾದ ಪುಸ್ತಕವನ್ನು ಗುರುತಿಸಿ, ಅದರ ಲೇಖಕ-ಪ್ರಕಾಶಕರನ್ನು ಗೌರವಿಸುವುದು. ಇದು ನಿಜಕ್ಕೂ ಓದುಗರ ಉತ್ತಮ ಆಯ್ಕೆಯಾಗಿರುತ್ತದೆ.

೬. ಓದುಗರಲ್ಲಿ ವಿಮರ್ಶಾ ಪ್ರಜ್ಞೆ ಬೆಳೆಯಬೇಕಾದಲ್ಲಿ ಅವರು ವಿಮರ್ಶೆಗಳನ್ನು ಓದುವ ರೂಢಿ ಮಾಡಿಕೊಳ್ಳಬೇಕು. ಈಗ ನಮ್ಮ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಎಲ್ಲಾ ವೃತ್ತ ಪತ್ರಿಕೆಗಳೂ ಬರುತ್ತಿವೆ. ಭಾನುವಾರದಂದು ಹೆಚ್ಚಿನ ಪತ್ರಿಕೆಗಳಲ್ಲಿ ವಿಮರ್ಶೆ ಪ್ರಕಟವಾಗುತ್ತವೆ. ಪ್ರತಿ ಸೋಮವಾರದಂದು ಪ್ರಕಟಿತ ವಿಮರ್ಶೆಗಳನ್ನು ಗ್ರಂಥಾಲಯಗಳ ಪ್ರಚಾರ ಫಲಕಗಳಲ್ಲಿ ಹಾಕುವುದರ ಮೂಲಕ ಓದುಗರಿಗೆ ಪುಸ್ತಕಗಳ ಅರಿವನ್ನು ನೀಡುವುದು. ಇದರಿಂದಾಗಿ ತಮಗೆ ಓದಲು ಇಂಥ ಪುಸ್ತಕವನ್ನು ಒದಗಿಸಿ ಎಂಬ ಬೇಡಿಕೆಯನ್ನು ಓದುಗರೇ ಸಲ್ಲಿಸಲು ಮುಂದೆ ಬರುವರು.

೭. ಪ್ರತಿ ವರ್ಷವೂ ಕನ್ನಡ ಪುಸ್ತಕ ಮೇಳವನ್ನು ರಾಜ್ಯ ನಾಲ್ಕಾರು ವಲಯಗಳಲ್ಲಿ ಏರ್ಪಡಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು.

ವಿತರಣೆ :

೧. ಸಗಟು ಕೊಳ್ಳಿಕೆಯನ್ನು ಗಮನದಲ್ಲಿಟ್ಟುಕೊಂಡು ಹಲವಾರು ಪ್ರಕಾಶಕರು ಪುಸ್ತಕ ಪ್ರಕಟಣೆಯಲ್ಲಿ ತೊಡಗಿದ್ದಾರೆ. ದುಬಾರಿ ಬೆಲೆ ಇರಿಸಿ ತಮ್ಮ ಪುಸ್ತಕವನ್ನು ಖರೀದಿಸುವಂತೆ ಮಾಡಲು ಯಾವುದೇ ಭ್ರಷ್ಟ ಮಾರ್ಗವನ್ನು ಅನುಸರಿಸಲು ಇವರು ಸಿದ್ಧರೆ. ಇವರಿಗೆ ಜನಸಾಮಾನ್ಯರನ್ನು ತಲುಪುವ ಇರಾದೆ ಇಲ್ಲ. ಆದ್ದರಿಂದ ಪುಸ್ತಕದ ತಯಾರಿ ವೆಚ್ಚ, ಲಾಭಾಂಶ, ರಾಯಧನ ಇತ್ಯಾದಿಗಳನ್ನು ಗಮನದಲ್ಲಿರಿಸಿ ಇಂತಹ ಕಾಗದ, ಇಂತಹ ಮುದ್ರಣವಿದ್ದು ಈ ಆಕಾರದ್ದಾದರೆ ಇದರ ಪುಟ, ಬೆಲೆ ಹೀಗಿರಬೇಕು ಎಂಬ ನಿಯಮ ರೂಪಿಸಬೇಕು. ಹಾಗಾದಲ್ಲಿ ಒಂದು ಪುಸ್ತಕದ ಬದಲು ಎರಡು ಪುಸ್ತಕಗಳಾದರೂ ಗ್ರಂಥಾಲಯವನ್ನು ಸೇರುತ್ತವೆ. ಈ ಪದ್ಧತಿ ಈಗ ಕೇರಳದಲ್ಲಿ ಜಾರಿಯಲ್ಲಿದೆ.

೨. ಈಗ ಸಗಟು ಕೊಳ್ಳಿಕೆಯನ್ನು ಹಲವಾರು ಹೆಸರುಗಳಲ್ಲಿ ಮಾಡಲಾಗುತ್ತಿದೆ. ರಾಜ್ಯ ಕೇಂದ್ರ ಗ್ರಂಥಾಲಯ, ನಗರ ಕೇಂದ್ರ ಗ್ರಂಥಾಲಯ, ಜಿಲ್ಲಾ ಕೇಂದ್ರ ಗ್ರಂಥಾಲಯ, ರಾಜಾರಾಮ್ ಮೋಹನ್ ಯೋಜನೆ, ವಯಸ್ಕರ ಶಿಕ್ಷಣ ಯೋಜನೆ, ಯು.ಜಿ.ಸಿ., ವಿಜ್ಞಾನ ಪ್ರೋತ್ಸಾಹಕ ಯೋಜನೆ, ಕಪ್ಪು ಹಲಗೆ ಯೋಜನೆ ಇತ್ಯಾದಿಗಳಲ್ಲವೂ ಇದ್ದು, ಪುಸ್ತಕಗಳ ಆಯ್ಕೆ ಬೇರೆ ಬೇರೆ ಸಮಿತಿಗಳಿಂದ ನಡೆಯುತ್ತಿದೆ. ಪ್ರಭಾವ ಬೀರಬಲ್ಲ ಪ್ರಕಾಶಕ ತನ್ನ ಪುಸ್ತಕಗಳನ್ನು ಎಲ್ಲಾ ಯೋಜನೆಗಳಲ್ಲೂ ತುರುಕಬಲ್ಲ. ಇದರಿಂದ ಅತಿ ಸಣ್ಣ ಪ್ರಕಾಶಕ ವಂಚಿತನಾಗುತ್ತಾನೆ. ಒಂದೇ ನಗರದಲ್ಲಿ ಹಲವು ಆಡಳಿತಗಳಡಿಯಲ್ಲಿ ಇರುವ ಬೇರೆ ಬೇರೆ ಗ್ರಂಥಾಲಯಗಳಲ್ಲಿ ಒಂದೇ ತೆರನಾದ ಶೀರ್ಷಿಕೆಗಳು ಇರಲು ಇದರಿಂದ ಕಾರಣವಾಗುತ್ತದೆ. ಆದ್ದರಿಂದ ಪುಸ್ತಕಗಳನ್ನು ಸಗಟು ಖರೀದಿಗಾಗಿ ಆಯ್ಕೆ ಮಾಡುವಾಗ ಈ ಕೆಳಗಿನ ಅಂಶಗಳನ್ನು ಗಮನಿಸಬೇಕು.

ಅ. ಸಾರ್ವಜನಿಕ ಗ್ರಂಥಾಲಯಗಳಾಗಿದ್ದರೆ ಅಲ್ಲಿರಬೇಕಾದ ಪುಸ್ತಕಗಳ ವಿಷಯವನ್ನು ಗುರುತಿಸುವುದು. ಯಾವ ಯಾವ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳಿರಬೇಕೆಂಬ ತೀರ್ಮಾನವನ್ನು ಅಲ್ಲಿಯ ಓದುಗರಿಂದ ಪಡೆಯಲು ಪ್ರಯತ್ನಿಸುವುದು.

ಆ. ಗ್ರಾಮಾಂತರ ಶಾಲೆಗಳಿಗೆ ಬೇಕಾದ ಪುಸ್ತಕಗಳನ್ನು ಗುರುತಿಸುವುದು.

ಇ. ವಿಜ್ಞಾನ-ತಂತ್ರಜ್ಞಾನದ ಕುರಿತಾದ ಪುಸ್ತಕಗಳನ್ನು ಆಯ್ಕೆ ಮಾಡುವಾಗ ಹೊಸ ವಿಷಯಗಳು ಸೇರ್ಪಡೆಯಾಗದ ಹಳೆಯ ಪುಸ್ತಕಗಳು, ಪರಿಷ್ಕರಣಗೊಳ್ಳದ ಮರುಮುದ್ರಣಗಳನ್ನು ಆಯ್ಕೆಯಿಂದ ಹೊರಗಿಡುವುದು.

ಈ. ವಯಸ್ಕರ ಶಿಕ್ಷಣ ಇಲಾಖೆ ನಡೆಸುವ ಜನಶಿಕ್ಷಣ ನಿಲಯಗಳಿಗೆ ಹಿಂದೆ ಕೊಳ್ಳಲಾದ ಪುಸ್ತಕಗಳ ಕುರಿತು ನಡೆದ ಹಗರಣಗಳನ್ನು ಸರಿಪಡಿಸುವುದರ ಬದಲು ವಯಸ್ಕರ ಶಿಕ್ಷಣಕ್ಕೆ ಬೇಕಾಗಬಹುದಾದ ಎಲ್ಲಾ ಪುಸ್ತಕಗಳ ಮುದ್ರಣ, ಪ್ರಕಟಣೆ, ವಿತರಣೆಯ ಹೊಣೆಯನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ ವಹಿಸಲಾಗಿದೆ. ಇದರಿಂದಾಗಿ ಖಾಸಗಿ ಪ್ರಕಾಶಕರನ್ನು ಕಡೆಗಣಿಸಿದಂತಾಗಿದೆಯಲ್ಲದೆ, ಗುಣಮಟ್ಟದಿಂದ ಕೂಡಿದ ಪುಸ್ತಕ ಪ್ರಕಟಣೆಯ ಸ್ಪರ್ಧೆಯಲ್ಲಿ ಖಾಸಗಿ ಪ್ರಕಾಶಕರು ಪ್ರವೇಶಿಸದಂತೆ ತಡೆಹಾಕಲಾಗಿದೆ. ಇದು ಸರಿಯಾದ ಕ್ರಮವಲ್ಲವೆಂದೇ ಹೇಳಬೇಕಾಗಿದೆ.

ಉ. ಈ ಎಲ್ಲಾ ಆಯ್ಕೆ ಸಮಿತಿಗಳ ಕಾರ್ಯಗಳನ್ನು ಸಮನ್ವಯಗೊಳಿಸಿದರೆ ಮಾತ್ರವೇ ಸಗಟು ಕೊಳ್ಳಿಕೆ ಕಾರ್ಯಕ್ರಮ ಯಶಸ್ವಿಯಾಗಬಲ್ಲದು.

ಊ. ಈಗ ಸಗಟು ಪುಸ್ತಕ ಕೊಳ್ಳುವಾಗ ಒಬ್ಬ ಪ್ರಕಾಶಕರಿಂದ ಇಂತಿಷ್ಟು ಶೀರ್ಷಿಕೆಗಳು ಇಲ್ಲವೇ ಇಂತಿಷ್ಟು ಮೌಲ್ಯ ಎಂದು ನಿಗದಿಪಡಿಸಲಾಗುತ್ತಿದೆ. ಇದರಿಂದಾಗಿ ಒಳ್ಳೆಯ ಪುಸ್ತಕಗಳನ್ನು ಅಧಿಕ ಸಂಖ್ಯೆಯಲ್ಲಿ ತರುವ ಕೆಲವು ಪ್ರಕಾಶಕರಿಗೆ ಅನ್ಯಾಯವಾಗುತ್ತದೆ. ಸಣ್ಣ-ಪುಟ್ಟ ಪ್ರಕಾಶಕರಿಗೆ ಮೇಲಿನ ಈ ನಿಯಮವನ್ನು ಅನ್ವಯಿಸಬಹುದಾಗಿದೆ. ತಿಂಗಳಿಗೆ ಎರಡು, ಮೂರು, ನಾಲ್ಕು ಮತ್ತು ಇನ್ನೂ ಹೆಚ್ಚಿನ ಪುಸ್ತಕಗಳನ್ನು ಹೊರತರುವ ಪ್ರಕಾಶಕರಿಂದ ಅವರ ಒಟ್ಟು ಪ್ರಕಟಿತ ಸಂಖ್ಯೆಯಲ್ಲಿ ಶೇಕಡಾ-೨೫, -೩೫, -೪೦ನ್ನು ಖರೀದಿಸಿದಲ್ಲಿ, ಪುಸ್ತಕೋದ್ಯಮದಲ್ಲೇ ತೊಡಗಿದ ಇವರನ್ನು ಪ್ರೋತ್ಸಾಹಿಸಿದಂತೆ ಆಗುತ್ತದೆ.

ಸರಕಾರ ಇದೀಗ ಶಾಲಾ ಪಠ್ಯಪುಸ್ತಕಗಳನ್ನು ಖಾಸಗೀಕರಣಗೊಳಿಸುತ್ತಿದೆ. ಹೆಚ್ಚು ಸಂಖ್ಯೆಯಲ್ಲಿ ಕಡಿಮೆ ಅವಧಿಯಲ್ಲಿ, ಖಂಡಿತವಾಗಿಯೂ ಮಾರಾಟವಾಗುವ ಈ ಯೋಜನೆಯತ್ತ ಹಲವು ಹೊರ ರಾಜ್ಯಗಳ ಪ್ರಕಾಶಕರು ಆಸಕ್ತಿ ವಹಿಸುತ್ತಿದ್ದಾರೆ. ಸಾಕಷ್ಟು ರೀತಿಯ ಒತ್ತಡಗಳನ್ನು ಹೇರುತ್ತಿದ್ದಾರೆ. ಈ ಬಗ್ಗೆ ಚರ್ಚಿಸಬೇಕಾದುದು ಅಗತ್ಯ. ಕರ್ನಾಟಕದಲ್ಲಿ ಗ್ರಂಥೋದ್ಯಮ ಬೆಳೆದುಬರಲು, ಭಾಷೆ ಸಾಹಿತ್ಯ ಶ್ರೀಮಂತಗೊಳ್ಳಲು ಶ್ರಮಿಸಿದ ಹಲವು ಪ್ರಕಾಶಕರಿದ್ದಾರೆ. ಇದರಿಂದಾಗಿ ಹಲವು ಕಷ್ಟ-ನಷ್ಟಗಳಿಗೂ ಅವರು ಗುರಿಯಾಗಿದ್ದಾರೆ. ಅಂಥವರಿಗೆ ಪಠ್ಯಪುಸ್ತಕದ ಪ್ರಕಟಣೆಯ ಜವಾಬ್ದಾರಿ ಕೊಟ್ಟಲ್ಲಿ, ಅದರಿಂದ ಬರಬಹುದಾದ ಲಾಭ ಪುನಃ ಕನ್ನಡ ಪುಸ್ತಕ ಪ್ರಕಟಣೆಗೇ ಮರಳುತ್ತದೆಯಾದ್ದರಿಂದ, ಅಂಥವರನ್ನು ಗುರುತಿಸುವ ಕಾರ್ಯ ಮಾಡಬೇಕಾಗಿದೆ.

ಮೇಲಿನ ಹಲವು ಅಂಶಗಳು ಕನ್ನಡ ಪುಸ್ತಕೋದ್ಯಮದ ಇಂದಿನ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ

ನೆರವಾಗಬಲ್ಲವು. ಸರಕಾರಿ ಇಲಾಖೆಗಳು, ಅನುದಾನ ಪಡೆಯುವ ಸಂಸ್ಥೆಗಳು ತಮ್ಮ ಪ್ರಕಟಣೆಗಳನ್ನು ತರುವ ಬಗ್ಗೆ ಸಮಗ್ರ ಯೋಜನೆಯನ್ನು ರೂಪಿಸಿಕೊಳ್ಳಬೇಕು. ಆಡಳಿತ, ಕನ್ನಡದ ಬೆಳವಣಿಗೆ, ಪ್ರೌಢ ವ್ಯಾಸಂಗಗಳಿಗೆ ಬೇಕಾದ ಪ್ರಕಟಣೆಗಳಷ್ಟೇ ಅದರ ಕಾರ್ಯಭಾರವಾಗಬೇಕು. ಯಾವುದೇ ಕಾರಣಕ್ಕೂ ಅದು ಖಾಸಗಿ ಪ್ರಕಾಶಕರ ಸ್ಪರ್ಧಿಯಾಗಬಾರದು. ಖಾಸಗಿ ಪ್ರಕಾಶಕರು ಹಮ್ಮಿಕೊಳ್ಳುವ ವಿಶಿಷ್ಟ ಯೋಜನೆಗಳ ಸಹಾಯಕ್ಕೆ ಈ ಸಂಸ್ಥೆಗಳು ನೆರವಾದಲ್ಲಿ ಮಾತ್ರವೇ ಪುಸ್ತಕೋದ್ಯಮ ಬೆಳೆದುಬರಲು ಸಾಧ್ಯ. ಈ ನಿಟ್ಟಿನಲ್ಲಿ ಸರಕಾರ ನೀತಿ-ನಿಯಮಗಳನ್ನು ರೂಪಿಸಬೇಕಾಗಿದೆ. ಈ ಬಗ್ಗೆ ಇನ್ನೂ ಸಾಕಷ್ಟು ರೀತಿಯಲ್ಲಿ ಚರ್ಚೆ ಅಗತ್ಯ ಹಾಗೂ ಅನಿವಾರ್ಯ.

---

* **ಆರ್. ಎಸ್. ರಾಜಾರಾಮ್**, ವ್ಯವಸ್ಥಾಪಕ ನಿರ್ದೇಶಕರು, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ. ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು - ೫೬೦ ೦೦೧.

ಭಾರತೀಯ ಭಾಷೆಗಳಲ್ಲಿ ಪ್ರಕಾಶನೋದ್ಯಮ

(ದೆಹಲಿಯ ಫ್ರಾಂಕ್ ಬ್ರದರ್ಸ್ ಅಂಡ್ ಕಂಪನಿ ಲಿಮಿಟೆಡ್‌ನ ಆರ್. ಸಿ. ಗೋವಿಲ್‌ರ ಇಂಗ್ಲಿಷ್ ಭಾಷಣ)

ಅನು : ಪ್ರೊ। ಎನ್. ಚಂದ್ರಪ್ಪ

ಭಾರತೀಯ ಪ್ರಕಾಶಕರ ಒಕ್ಕೂಟ ಭಾರತೀಯ ಭಾಷಾ ಪ್ರಕಾಶಕರ ರಾಷ್ಟ್ರೀಯ ಸಮ್ಮೇಳನವನ್ನು ೧೯೯೩ರ ಏಪ್ರಿಲ್‌ನಲ್ಲಿ ಏರ್ಪಡಿಸಿತ್ತು. ಆ ಗೋಷ್ಠಿಯಲ್ಲಿ ಅನೇಕ ಉಪಯುಕ್ತ ಶಿಫಾರಸ್ಸುಗಳನ್ನು ಮಾಡಲಾಗಿತ್ತು. ಈ ಗೋಷ್ಠಿ ಪುಸ್ತಕ ಪ್ರಕಟಣಾ ಉದ್ಯಮದಲ್ಲಿ ದೂರಗಾಮಿ ಪರಿಣಾಮವನ್ನು ಉಂಟುಮಾಡುತ್ತದೆ ಎಂಬುದರಲ್ಲಿ ನನಗೆ ದೃಢವಾದ ನಂಬಿಕೆಯಿದೆ.

ಮೊದಲಿಗೆ ನಾನು ಭಾರತದಲ್ಲಿನ ಪ್ರಕಾಶನೋದ್ಯಮದ ದೃಶ್ಯವನ್ನು ಕುರಿತು ಹೇಳಬೇಕಾಗಿದೆ.

ಭಾರತದ ಪುಸ್ತಕೋದ್ಯಮ ವೈವಿಧ್ಯಮಯವಾಗಿದೆ. ಆದರೆ ಇದರಲ್ಲಿ ಕೆಲವು ಪರಸ್ಪರ ವಿರೋಧ ಸಂಗತಿಗಳಿರುವುದನ್ನು ನಾವು ಮರೆಯುವಂತಿಲ್ಲ. ಭಾರತ ಜಗತ್ತಿನ ವೈಜ್ಞಾನಿಕ ಮತ್ತು ತಾಂತ್ರಿಕ ಮಾನವಶಕ್ತಿಯಲ್ಲಿ ನಾಲ್ಕನೆಯ ಸ್ಥಾನದಲ್ಲಿದ್ದರೂ ಜಗತ್ತಿನ ನಿರಕ್ಷರಸ್ಥರಲ್ಲಿ ಶೇಕಡ ೫೦ರಷ್ಟನ್ನು ತನ್ನದಾಗಿ ಉಳಿಸಿಕೊಂಡಿದೆ. ಭಾರತದಲ್ಲಿ ಪ್ರಕಟವಾಗುತ್ತಿರುವ ಪುಸ್ತಕಗಳ ನಿಖರ ಅಂಕಿ-ಅಂಶಗಳು ಲಭಿಸುತ್ತಿಲ್ಲ. ಯುನೆಸ್ಕೊ ಅಂಕಿ-ಅಂಶಗಳ ಪ್ರಕಾರ ಶೀರ್ಷಿಕೆಗಳ ಪ್ರಕಾಶನದಲ್ಲಿ ಪ್ರಪಂಚದಲ್ಲಿ ೧೨ನೇ ಸ್ಥಾನದಲ್ಲಿದೆ ಮತ್ತು ತೃತೀಯ ಜಗತ್ತಿನಲ್ಲಿ ಆಂಗ್ಲ ಪುಸ್ತಕಗಳನ್ನು ಪ್ರಕಟಿಸುವುದರಲ್ಲಿ ಮುಂಚೂಣಿಯಲ್ಲಿದ್ದು, ಇಂಗ್ಲಿಷ್ ಭಾಷೆಯ ಪುಸ್ತಕಗಳ ಪ್ರಕಟನೆಯಲ್ಲಿ ಮೂರನೇ ಸ್ಥಾನದಲ್ಲಿದೆ. ಭಾರತೀಯ ಪ್ರಕಾಶಕರು ಭಾರತದ ೧೪ ಭಾಷೆಗಳು ಮತ್ತು ಇಂಗ್ಲಿಷ್‌ನಲ್ಲಿ ಪುಸ್ತಕಗಳನ್ನು ಪ್ರಕಟಿಸುತ್ತಿದ್ದಾರೆ ಮತ್ತು ವಾರ್ಷಿಕ ಸರಾಸರಿ ಪ್ರಕಟಣೆಗಳು ಸು. ೨೦,೦೦೦ ದಷ್ಟಿವೆ. ಭಾರತದಲ್ಲಿ ಪ್ರಕಟಣೆಯಾಗುತ್ತಿರುವ ಪುಸ್ತಕಗಳ ಅಂಕಿ-ಅಂಶಗಳು ನಮಗೆ ಕಲಕತ್ತದ ಸೆಂಟ್ರಲ್ ರೆಫರೆನ್ಸ್ ಗ್ರಂಥಾಲಯ ನೀಡಿರುವ ಮಾಹಿತಿಯಿಂದ ಲಭಿಸುತ್ತವೆ. ಕಲಕತ್ತ ಸೆಂಟ್ರಲ್ ರೆಫರೆನ್ಸ್ ಗ್ರಂಥಾಲಯಕ್ಕೆ ಪ್ರಕಟಿತವಾದ ಪುಸ್ತಕದ ಒಂದು ಪ್ರತಿಯನ್ನು ಕಡ್ಡಾಯವಾಗಿ ಕಳುಹಿಸಲೇಬೇಕು ಎಂಬ ನಿಯಮ ಡೆಲಿವರಿ ಆಫ್ ಬುಕ್ (ಪಬ್ಲಿಕ್ ಲೈಬ್ರರೀಸ್) ಆಕ್ಟ್ ೧೯೫೪ರ ಕಾಯ್ದೆಯಲ್ಲಿ ವಿಧಿಸಲಾಗಿದೆ. ಬಹಳಷ್ಟು ಭಾಷಾ ಪ್ರಕಾಶಕರು, ಲೇಖಕ ಪ್ರಕಾಶಕರು ಪುಸ್ತಕಗಳನ್ನು ಕಲಕತ್ತ ಸೆಂಟ್ರಲ್ ರೆಫರೆನ್ಸ್ ಲೈಬ್ರರಿಗೆ ಕಾನೂನಿನ ಅರಿವಿಲ್ಲದೆಯೋ ಅಥವಾ ಉಚಿತವಾಗಿ ಕಳುಹಿಸಲು ಇಷ್ಟವಿಲ್ಲದೆಯೋ ಕಳುಹಿಸುತ್ತಿಲ್ಲ. ಕಾನೂನಿನ ರೀತ್ಯ ಶಿಕ್ಷಾರ್ಹವಾದರೂ ಕಾನೂನನ್ನು ಅನುಷ್ಠಾನಿಸುವಲ್ಲಿ ಇರುವ ತೊಡಕಿನಿಂದಾಗಿ ರಾಷ್ಟ್ರೀಯ ಗ್ರಂಥಸೂಚಿಯಲ್ಲಿ ಸಿಗುವ ಮಾಹಿತಿ ಮತ್ತು ಪ್ರಕಾಶನ ಅಂಕಿ-ಅಂಶಗಳು ಒಂದು ಅಂದಾಜಿನ ಪ್ರಕಾರ-

ವಾರ್ಷಿಕ ಪ್ರಕಟಣೆಗಳು ಸು. ೨೦,೦೦೦. ಇವುಗಳಲ್ಲಿ ಶೇಕಡ ೭೦ರಷ್ಟು ಭಾರತೀಯ ಭಾಷೆಗಳಲ್ಲಿಯೂ ಶೇಕಡ ೩೦ ರಷ್ಟು ಆಂಗ್ಲಭಾಷೆಯಲ್ಲಿಯೂ ಪ್ರಕಟವಾಗುತ್ತಿವೆ.

೧೯೯೦ರ ಯುನೆಸ್ಕೊ ಅಂಕಿ-ಅಂಶಗಳ ಪ್ರಕಾರ ಜಗತ್ತಿನಲ್ಲಿ ಪ್ರಕಟವಾಗಿರುವ ಶೀರ್ಷಿಕೆಗಳು ೮,೪೨,೦೦೦. ಇವುಗಳಲ್ಲಿ ೨,೪೨,೦೦೦ ಶೀರ್ಷಿಕೆಗಳು ಅಭಿವೃದ್ಧಿ ಆಗುತ್ತಿರುವ ದೇಶಗಳಲ್ಲಿ ಪ್ರಕಟವಾಗಿವೆ. ಮಿಷನ್ ಸಲೆ ಮೂಲದಿಂದ ಅಭಿವೃದ್ಧಿ ಆಗಿರುವ ದೇಶಗಳಲ್ಲಿ ಪ್ರಕಟವಾಗಿರುವ ಶೀರ್ಷಿಕೆಗಳು ಕೇವಲ ೫೯. ಇದೇ ಅಭಿವೃದ್ಧಿ ಆಗುತ್ತಿರುವ ದೇಶಗಳಲ್ಲಿ ೪೯೧ರಷ್ಟಿವೆ. ಆದ್ದರಿಂದ ಭಾರತದಲ್ಲಿ ಪ್ರಕಟವಾಗುತ್ತಿರುವ ಶೀರ್ಷಿಕೆಗಳು ಪ್ರೋತ್ಸಾಹದಾಯಕವಾಗಿಲ್ಲ.

ಪ್ರಪಂಚದ ಪ್ರಕಾಶನಗಳಲ್ಲಿ ಸರಾಸರಿ ಪ್ರತಿ ವ್ಯಕ್ತಿ ವರ್ಷಕ್ಕೆ ಸು.೨೦೦೦ಪುಟಗಳನ್ನು ಓದುತ್ತಿದ್ದರೆ ಭಾರತದಲ್ಲಿ ಇದು ೩೦ಪುಟಗಳಿಗೆ ಮಾತ್ರ ಸೀಮಿತವಾಗಿದೆ. ಮುದ್ರಣ ವೇಗದಲ್ಲಿಯೂ ಭಾಷೆಯಿಂದ ಭಾಷೆಗೆ ಅಂತರವಿದೆ. ಗಂಭೀರ ಪುಸ್ತಕಗಳ ಮತ್ತು ಸಾಧಾರಣ ಪುಸ್ತಕಗಳ ಮುದ್ರಣವೇಗ ಭಾರತೀಯ ಭಾಷೆಗಳಲ್ಲಿ ೧೦೦೦ ದಿಂದ ೨೦೦೦ದಷ್ಟು ಓದುತ್ತಿದೆ. ಬಹುಸಂಖ್ಯಾತ ಓದುಗರಿರುವ ದೇಶಗಳಲ್ಲಿ ಮುದ್ರಣವೇಗ ೫ ಲಕ್ಷ ಪ್ರತಿಗಳಷ್ಟು ಓದುತ್ತಿದೆ.

ಅಕ್ಷರಸ್ಥರ ಸಂಖ್ಯೆ ಬೆಳೆದಂತೆಲ್ಲಾ ಪುಸ್ತಕಗಳ ಬೇಡಿಕೆಯೂ ಬೆಳೆಯುತ್ತಿದೆ. ಪುಸ್ತಕ ಪ್ರಕಟಣೆ ಭಾರತದಲ್ಲೀಗ ಹೊಸ ತಿರುವು ಪಡೆಯುತ್ತಿದೆ ಮತ್ತು ದೊಡ್ಡ ಪ್ರಮಾಣದಲ್ಲಿ ವೃತ್ತಿಪರವಾಗುತ್ತಿದೆ. ಅಮೇರಿಕದ ಪಬ್ಲಿಷರ್ಸ್ ವೀಕ್ಲಿ ವರದಿಗಾರರಾದ ಸಾಲಿ ಟೈಲರ್ ಪ್ರಕಾರ ಭಾರತಕ್ಕೆ ತನ್ನ ದೇಶೀಯ ಪ್ರಕಟನೆಯ ದೃಶ್ಯವನ್ನು ಬೆಳೆಸುವಲ್ಲಿ ಎರಡು ಆಸ್ತಿಗಳಿವೆ. ಅವುಗಳೆಂದರೆ ಬೃಹದಾಕಾರದ ಮಧ್ಯಮವರ್ಗ (೧೫೦ ಮಿಲಿಯನ್ ಜನರಲ್ಲಿ ೧೮ ಮಿಲಿಯನ್ ಜನ ಇಂಗ್ಲಿಷ್ ಓದಲು ಮತ್ತು ಬರೆಯಲು ಬಲ್ಲವರಾಗಿದ್ದಾರೆ) ಮತ್ತು ಪ್ರಬುದ್ಧವಾಗಿ ಬೆಳೆಯುತ್ತಿರುವ ದೇಶೀಯ ಪ್ರಕಾಶನೋದ್ಯಮ.

ಪ್ರಾಂತೀಯ ಭಾಷಾ ಪ್ರಕಾಶನ

ಭಾರತದಲ್ಲಿ ಇಂಗ್ಲಿಷ್ ಮಾತನಾಡುವ ಜನ ಶೇಕಡ ೩ರಷ್ಟು ಮಾತ್ರ ಇದ್ದಾರೆ. ಆದರೆ ಭಾರತದಲ್ಲಿ ಪ್ರಕಟವಾಗುತ್ತಿರುವ ಒಟ್ಟು ಪುಸ್ತಕಗಳಲ್ಲಿ ಶೇಕಡ ೪೦ರಷ್ಟು ಇಂಗ್ಲಿಷ್‌ನಲ್ಲಿವೆ ಮತ್ತು ಉಳಿದ ಶೇಕಡ ೬೦ರಷ್ಟು ಎಲ್ಲಾ ಭಾರತೀಯ ಭಾಷೆಗಳಲ್ಲಿ ಪ್ರಕಟವಾಗುತ್ತಿವೆ.

ಭಾರತೀಯ ಭಾಷೆಗಳ ಸ್ಥಿತಿ ಸಮಾನವಾಗಿಲ್ಲ. ಜನಸಂಖ್ಯಾ ದೃಷ್ಟಿಯಿಂದಲೂ ಕೆಲವು ಭಾಷೆಗಳು ಮುಂದೆ ಇರುವುದು ಕಂಡುಬರುತ್ತದೆ. ಸರಾಸರಿ ಶೀರ್ಷಿಕೆಗಳ ಪ್ರಕಟಣೆಯಲ್ಲಿ ಶೇಕಡ ೧೪.೫೯ರಷ್ಟಿರುವ ಹಿಂದೀ ಭಾಷೆ ಭಾರತೀಯ ಭಾಷೆಗಳಲ್ಲಿ ಮೊದಲ ಸ್ಥಾನ ಪಡೆದರೆ, ತಮಿಳು ದ್ವಿತೀಯ ಸ್ಥಾನ (ಶೇ. ೮.೩೮), ಮರಾಠಿ (ಶೇ. ೭.೪೧), ಬಂಗಾಲಿ (ಶೇ. ೬.೫೨), ಮಲಯಾಳಂ (ಶೇ. ೫), ಗುಜರಾತಿ (ಶೇ. ೩.೮೨) ಹೀಗೆ...

ಸಂವಿಧಾನದಲ್ಲಿ ಘೋಷಿಸಿರುವ ೧೫ ಭಾಷೆಗಳಲ್ಲಿ ೧೦ಭಾಷೆಗಳು ಉತ್ತಮ ವ್ಯವಸ್ಥಿತ ಪ್ರಕಾಶನೋದ್ಯಮಗಳನ್ನು ಹೊಂದಿವೆ. ಅವು ಯಾವುವೆಂದರೆ ಅಸ್ಸಾಮಿ, ಬೆಂಗಾಲಿ, ಗುಜರಾತಿ, ಕನ್ನಡ, ಮರಾಠಿ, ಮಲಯಾಳಂ, ತಮಿಳು, ತೆಲುಗು ಮತ್ತು ಉರ್ದು. ಭಾರತೀಯ ಭಾಷಾ ಸಾಮಾನ್ಯ ಮತ್ತು ಪೇಪರ್‌ಬ್ಯಾಕ್ ಪ್ರಕಾಶನಗಳಲ್ಲಿ ಒಂದು ವಿಶಿಷ್ಟ ಲಕ್ಷಣವೆಂದರೆ ಅವುಗಳನ್ನು ಕೊಂಡು ಓದುವ ಓದುಗರು ಕಡಿಮೆ ಆದಾಯದ ಮಧ್ಯಮ ವರ್ಗದವರಾದುದರಿಂದ ಕಡಿಮೆ ಬೆಲೆಯಿರುವುದಾಗಿದೆ. ಇದರಿಂದಾಗಿ

ಪುಸ್ತಕದ ಉತ್ಪಾದನೆ ಮತ್ತು ವಿನ್ಯಾಸ ಉತ್ತಮ ಮಟ್ಟದಲ್ಲ. ಭಾರತೀಯ ಪುಸ್ತಕ ಪ್ರಕಾಶನ ಉತ್ತಮವಾಗಿರುವ ಒಂದು ವಲಯವೆಂದರೆ ಪೇಪರ್‌ಬ್ಯಾಕ್ ಪ್ರಕಾಶನ. ಇದಕ್ಕೆ ಕಾರಣ ಬಡತನವೇ ಹೆಚ್ಚಾಗಿ ಆವರಿಸಿಕೊಂಡಿರುವ ಅಧಿಕ ಸಂಖ್ಯೆಯ ಗ್ರಾಮೀಣ ಜನರು ದುಬಾರಿ ಬೆಲೆಯ ಪುಸ್ತಕ ಕೊಂಡು ಓದಲು ಸಾಧ್ಯವಾಗದಿರುವುದು.

ಭಾರತೀಯ ಭಾಷೆಗಳಲ್ಲಿಯೂ ಉತ್ತಮ ಮಟ್ಟದ ಪ್ರಕಾಶನಗಳಿಗೆ ಕೊರತೆಯೇನೂ ಇಲ್ಲ. ಬಹಳ ಭಾಷೆಗಳಲ್ಲಿ ಉನ್ನತ ಮಟ್ಟದ ಶೀರ್ಷಿಕೆಗಳು ಪ್ರಕಟವಾಗಿವೆ. ಸಾಹಿತ್ಯ ಅಕಾದೆಮಿಗಳು ಪ್ರತಿ ವರ್ಷ ವಿವಿಧ ಭಾಷೆಗಳಲ್ಲಿನ ಲೇಖಕರಿಗೆ ಪ್ರಶಸ್ತಿಗಳನ್ನು ನೀಡುತ್ತಿವೆ. ಪ್ರಶಸ್ತಿ ಪಡೆದ ಕೃತಿಗಳನ್ನು ಇತರ ಭಾಷೆಗಳಿಗೆ ಅನುವಾದ ಮಾಡಲಾಗುತ್ತಿದೆ.

ಪ್ರಾಂತೀಯ ಭಾಷೆಗಳ ಅಕ್ಷರಸ್ಥರ ಪ್ರಮಾಣ ಗಣನೀಯವಾಗಿ ಬೆಳೆಯುತ್ತಿದೆ. ಹೊಸ ಓದುಗರ ಪುಸ್ತಕಗಳ ಬೇಡಿಕೆಯೂ ಬೆಳೆಯುತ್ತಿದೆ. ಸಾಮಾನ್ಯ ವಿದ್ಯಾಭ್ಯಾಸ, ಉನ್ನತ ವಿದ್ಯಾಭ್ಯಾಸವನ್ನು ಸೇರಿಕೊಂಡಂತೆ ಪ್ರಾಂತೀಯ ಭಾಷೆಯಲ್ಲಿಯೇ ನಡೆಯುತ್ತಿದೆ. ಇದರಿಂದಾಗಿ ಪಠ್ಯಪುಸ್ತಕಗಳು ಮತ್ತಿತರ ಪೂರಕ ಉಪಕರಣಗಳು ಪ್ರಾಂತೀಯ ಭಾಷೆಗಳಲ್ಲಿಯೇ ಇರಬೇಕಾದ ಅಗತ್ಯವಿದೆ. ಸದ್ಯ ಪ್ರಾಂತೀಯ ಭಾಷಾ ಪ್ರಕಾಶಕರು-ಆಂಗ್ಲ ಭಾಷಾ ಪ್ರಕಾಶಕರಿಗಿಂತ ಹಿಂದೆ ಇದ್ದಾರೆ. ಆದರೂ ಪ್ರಾಂತೀಯ ಭಾಷಾ ಪ್ರಕಾಶನಕ್ಕೆ ಉತ್ತಮ ಭವಿಷ್ಯವಿದೆ. ಗಂಭೀರವಾದ ಮತ್ತು ವಿದ್ವತ್ಪೂರ್ಣವಾದ ಪುಸ್ತಕಗಳು ಗಣನೀಯವಾಗಿ ಬೆಳೆಯುತ್ತಿವೆ. ಆಂಗ್ಲ ಭಾಷೆಯಿಂದ ಬಹಳಷ್ಟು ಪುಸ್ತಕಗಳನ್ನು ಪ್ರಾಂತೀಯ ಭಾಷೆಗಳಿಗೆ ಭಾಷಾಂತರಿಸಲಾಗಿದೆ ಮತ್ತು ಕೆಲವು ಪ್ರಾಂತೀಯ ಭಾಷಾ ಪುಸ್ತಕಗಳನ್ನು ಆಂಗ್ಲ ಭಾಷೆ ಹಾಗೂ ವಿದೇಶಿ ಭಾಷೆಗಳಿಗೂ ಭಾಷಾಂತರಿಸಲಾಗಿದೆ.

ದೂರದರ್ಶನ, ಕಂಪ್ಯೂಟರ್ ಮಾಧ್ಯಮಗಳು ಹಾಗೂ ಪುಸ್ತಕಗಳ ವಿರುದ್ಧ ಸ್ಪರ್ಧೆ

ಪುಸ್ತಕ ಪ್ರಕಾಶನೋದ್ಯಮ ಕ್ಷೇತ್ರದಲ್ಲಿ ದಿನಗಳಲ್ಲಿ ದೂರದರ್ಶನ ಮತ್ತು ಗಣಕ ಯಂತ್ರಗಳು ಸ್ಥಾಪನೆಯಾಗುತ್ತಿರುವುದರ ಬಗ್ಗೆ ಸಾಕಷ್ಟು ಮಾತುಕತೆಗಳಾಗುತ್ತಿವೆ. ಹೊಸ ಮಾಧ್ಯಮಗಳು ಮತ್ತು ಎಲೆಕ್ಟ್ರಾನಿಕ್ ತಂತ್ರಜ್ಞಾನ ಪುಸ್ತಕೋದ್ಯಮವನ್ನು ಸಂಪೂರ್ಣವಾಗಿ ನಾಶ ಮಾಡಬಹುದೆಂಬ ಭಯದ ವಾತಾವರಣವೂ ಈ ಕ್ಷೇತ್ರದಲ್ಲಿ ಮೂಡಿದೆ. ದೂರದರ್ಶನ ಓದಿಗೆ ಮೀಸಲಿರುವ ಸೀಮಿತವಾದ ವೇಳೆಯನ್ನು ಕಬಳಿಸುತ್ತಿರುವುದು ಗಮನಾರ್ಹವಾದ ಸತ್ಯಸಂಗತಿ. ಆದರೆ ಕಾಲಗತಿಯು ಎಲೆಕ್ಟ್ರಾನಿಕ್ ಮಾಧ್ಯಮ ಪುಸ್ತಕಗಳ ಸ್ಥಾನವನ್ನು ಪೂರ್ಣವಾಗಿ ತುಂಬುತ್ತದೆಂಬ ನಂಬಿಕೆಯನ್ನು ಸುಳ್ಳುಮಾಡಿದೆ. ಅಮೇರಿಕದ ಅನುಭವನ್ನು ಇಲ್ಲಿ ಉಲ್ಲೇಖಿಸುವುದು ಉಚಿತ. ಎಲೆಕ್ಟ್ರಾನಿಕ್ ಉಪಕರಣಗಳು ಮೊದಲಿಗೆ ಹೆಚ್ಚು ವ್ಯಾಪಕವಾಗಿ ಬಳಕೆಯಾಗಿದ್ದು ಅಮೇರಿಕದಲ್ಲಿಯೆ! ೧೯೫೦-೧೯೭೫ರ ಅವಧಿಯಲ್ಲಿ ದೂರದರ್ಶನ ಪ್ರಧಾನ ಪ್ರಭಾವಿ ಶಕ್ತಿಯಾಗಿ ಬಳಸಲ್ಪಟ್ಟಿತು ಮತ್ತು ಜನಸಂಖ್ಯೆ ಶೇಕಡ ೪೩ರಷ್ಟು ಹೆಚ್ಚಾಯಿತು. ಅದೇ ಸಮಯದಲ್ಲಿ ಪ್ರಕಟವಾದ ಪುಸ್ತಕಗಳ ಸಂಖ್ಯೆಯೂ ಮುಪ್ಪಟ್ಟು ಬೆಳೆದಿದೆ. ೧೯೫೦ರಲ್ಲಿ ದೂರದರ್ಶನ ಪ್ರಭಾವ ಮೊದಲಿಗೆ ಕಾಣಿಸಿಕೊಂಡಾಗ ೧೧,೦೨೨ ಶೀರ್ಷಿಕೆಗಳು ಪ್ರಕಟವಾದವು. ೧೯೭೦ ಗಣಕಯಂತ್ರ ತನ್ನ ಪ್ರಭಾವವನ್ನು ಎಲ್ಲಾ ಪ್ರಮುಖ ಕ್ಷೇತ್ರಗಳಲ್ಲಿಯೂ ಬೀರಲು ಪ್ರಾರಂಭಿಸಿದಾಗ ಪ್ರಕಟಿತ ಶೀರ್ಷಿಕೆಗಳ ಸಂಖ್ಯೆ ೩೬,೦೭೧ಕ್ಕೆ ಏರಿತು. ೧೯೭೯ರಲ್ಲಿ ದೂರದರ್ಶನ ಬಂದ ೩೦ ವರ್ಷಗಳ ಮತ್ತು ಗಣಕಯಂತ್ರ ಬಂದ ೧೦ ವರ್ಷಗಳ ನಂತರ ೪೫,೧೮೨ ಶೀರ್ಷಿಕೆಗಳು ಪ್ರಕಟವಾಗಿವೆ. ೧೯೫೦ರಲ್ಲಿ ಪುಸ್ತಕ ಪ್ರಕಾಶನದ ಆದಾಯ ಅಮೇರಿಕದಲ್ಲಿ ೫೦೦ ಮಿಲಿಯನ್ ಡಾಲರ್‌ನಷ್ಟಿತ್ತು; ೧೯೭೦ರಲ್ಲಿ ಇದು ೨.೯ ಬಿಲಿಯನ್‌ಗಿಂತ ಹೆಚ್ಚಾಯಿತು. ೧೯೮೦ರ ಹೊತ್ತಿಗೆ ೭ ಬಿಲಿಯನ್‌ಗಿಂತ ಹೆಚ್ಚಾಯಿತು.

ಭಾರತೀಯ ಭಾಷೆಗಳಲ್ಲಿ ಪ್ರಕಾಶನೋದ್ಯಮ ಬೆಳೆಸಲು ಮುಖ್ಯ ಸಲಹೆಗಳು

ನಾನು ಮೊದಲೇ ಹೇಳಿದಂತೆ ಭಾರತದಲ್ಲಿ ಪ್ರಕಾಶನೋದ್ಯಮ ಬೆಳೆಯಲು ಸಾಕಷ್ಟು ಉತ್ತಮ ಅವಕಾಶವಿದೆ. ಮಾಡಬೇಕಾದ ಮುಖ್ಯ ಕೆಲಸವೆಂದರೆ ಜನರಲ್ಲಿ ಓದುವ ಅಭ್ಯಾಸ ಬೆಳೆಸಬೇಕು. ವಿತರಣೆಯ ವಿಧಾನವನ್ನು ಸುಧಾರಿಸಬೇಕು. ಪುಸ್ತಕ ವಿಮರ್ಶೆ, ವಿಶ್ಲೇಷಣೆಗಳನ್ನು ನಿಯತ ಕಾಲಿಕೆಗಳಲ್ಲಿ ಮೇಲಿಂದ ಮೇಲೆ ಪ್ರಕಟಿಸಬೇಕು. ಭಾರತ ಮತ್ತು ವಿದೇಶಗಳಲ್ಲಿರುವ ಉತ್ತಮ ಗ್ರಂಥಾಲಯಗಳು ಮತ್ತು ಪುಸ್ತಕ ವಿತರಕರ ಬಗ್ಗೆ ಪ್ರಚಾರ ನೀಡಬೇಕು. ಭಾರತೀಯ ಓದುಗರ ಕೈಕಟ್ಟಿದ ಹಾಗೆ ಬೆಲೆಯನ್ನು ನಿಗದಿಪಡಿಸುವ ಕಡೆ ಗಮನವಿರಬೇಕು. ನನ್ನ ಆಲೋಚನೆಯಂತೆ ಪ್ರಕಾಶಕರೂ ಇದೇ ಮಿತವ್ಯಯದ ನೀತಿಯನ್ನು ಪಾಲಿಸಬೇಕು. ವಿವಿಧ ಭಾಷೆಗಳ ಪ್ರಕಾಶಕರ ನಡುವೆ ಸಂಯೋಜನೆಗಳಿರಬೇಕು.

* ಪ್ರೊ. ಎಸ್. ಚಂದ್ರಪ್ಪ, ಪ್ರಾಧ್ಯಾಪಕ, ಕನ್ನಡ ವಿಭಾಗ, ವಿ.ವಿ.ಪುರ ಕಲೆ ಮತ್ತು ವಾಣಿಜ್ಯ ಕಾಲೇಜು, ಬೆಂಗಳೂರು - ೫೬೦ ೦೦೪.

ಹೊಸ ಪ್ರಕಟಣೆಗಳು

(೧೯೯೮ರ ಪ್ರಕಟಣೆಗಳಾದ ಈ ಪುಸ್ತಕಗಳ ಹೆಸರು, ಲೇಖಕರು ಅಥವಾ ಸಂಪಾದಕರ ಹೆಸರು ಮತ್ತು ಪ್ರಕಾರ ಯಾವುದೆಂಬುದನ್ನು ಅನುಕ್ರಮವಾಗಿ ಕೊಡಲಾಗಿದೆ)

ಯಶಸ್ವಿ
ಲೇ. ಸುಧಾಮೂರ್ತಿ
ಕಾದಂಬರಿ
ಬೆಲೆ ರೂ. ೬೫/-

ಪಂಪ ಪ್ರಶಸ್ತಿ ವಿಜೇತರು
ಆರ್. ಡಿ. ಜಿ.
ಪರಿಚಯ ಪುಸ್ತಕ
ಬೆಲೆ ರೂ. ೨೦/-

ಭೋಗ
ಎಚ್. ಕೆ. ಅನಂತರಾವ್
ಕಾದಂಬರಿ
ಬೆಲೆ ರೂ. ೫೦/-

ಐತಿಹಾಸಿಕ ಕಥೆಗಳು
ಶೇಟ್ಟಲೂರು ಶ್ರೀನಿವಾಸ ರಂಗಾಚಾರ್ಯ
ಕಥೆಗಳು
ಬೆಲೆ ರೂ. ೩೫/-

ಭಾರತದ ವಸ್ತುಸಂಗ್ರಹಾಲಯಗಳು
ಬಿ. ಗೋ. ರಮೇಶ್
ಸಂಗ್ರಹಾಲಯ ಮಾಹಿತಿ
ಬೆಲೆ ರೂ. ೩೦/-

ಗಾಳಿಪಟ
ಸುಮತೀಂದ್ರ ನಾಡಿಗ
ಮಕ್ಕಳ ಸಾಹಿತ್ಯ
ಬೆಲೆ ರೂ. ೧೨/-

ಚಲಿಪಿಲಿ
ಜಿ. ಎನ್. ರಂಗನಾಥರಾವ್
ಲಲಿತ ವಾಚಿಕೆಗಳು (ಸಂಕೀರ್ಣ)
ಬೆಲೆ ರೂ. ೯೦/-

ಜಯ
ಎಚ್. ಕೆ. ಅನಂತರಾವ್
ಕಾದಂಬರಿ
ಬೆಲೆ ರೂ. ೬೦/-

ಪರಿಸರ ಪ್ರಜ್ಞೆ
ಕೆ. ಭೈರಪ್ಪ
ವಿಜ್ಞಾನ (ಪರಿಸರ)
ಬೆಲೆ ರೂ. ೩೮/-

ಆಚೆ ಬದಿ
ಕೆ. ವಿ. ತಿರುಮಲೇಶ್
ಅನುವಾದ
ಬೆಲೆ ರೂ. ೮೫/-

ಇನ್ನೊಂದು ಸಾಹಿತ್ಯ ಚರಿತ್ರೆ
ಸುಮತೀಂದ್ರ ನಾಡಿಗ
ವಿಮರ್ಶೆ
ಬೆಲೆ ರೂ. ೬೦/-

ಸುರಖಾಬದ ಗರಿಗಳು
ಡಾ. ಪಂಚಾಕ್ಷರಿ ಹಿರೇಮಠ
ಮಕ್ಕಳ ಕಾದಂಬರಿ (ಅನುವಾದ)
ಬೆಲೆ ರೂ. ೨೫/-

ಶಾಸ್ತ್ರೀಯ ಸಂಪುಟ (ಸಂಪುಟ-೧)
ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ
ಶಬ್ದಾರ್ಥ ವಿಚಾರ-ಗ್ರಂಥ ಸಂಪಾದನೆ-
ಭಾಷೆ - ವ್ಯಾಕರಣ-ನಿಘಂಟು ಸಾಹಿತ್ಯ -
ನಿಘಂಟು ರಚನೆ
ಬೆಲೆ ರೂ. ೧೯೫/-

ಶಾಸ್ತ್ರೀಯ ಸಂಪುಟ (ಸಂಪುಟ-೨)
ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ
ಛಂದಸ್ಸು ಸಾಹಿತ್ಯ ರೂಪಗಳು
ಬೆಲೆ ರೂ. ೧೯೫/-

ಶಾಸ್ತ್ರೀಯ (ಸಂಪುಟ-೩)
ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ
ಸಾಹಿತ್ಯ ಚರಿತ್ರೆ - ವಿಮರ್ಶೆ - ಸಮೀಕ್ಷೆ
ಪ್ರಾಚೀನ ಕಾಲ
ಬೆಲೆ ರೂ. ೨೨೫/-

ಶಾಸ್ತ್ರೀಯ (ಸಂಪುಟ-೪)
ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ
ಸಾಹಿತ್ಯ ಚರಿತ್ರೆ - ವಿಮರ್ಶೆ ಸಮೀಕ್ಷೆ
ಮಧ್ಯಕಾಲೀನ - ಆಧುನಿಕ
ಬೆಲೆ ರೂ. ೨೨೫/-

ಹಸಿರುಭೂತ ಮತ್ತು ಇತರ ಸೂಫಿ ಕತೆಗಳು
ಗ್ರಾಕೇಅ
ಮಕ್ಕಳ ಸಾಹಿತ್ಯ
ಬೆಲೆ ರೂ. ೧೨/-

ಮಾರುತಿ ಶಾಲೆ ಹುಡುಗರು
ರಸಿಕಪುತ್ತಿಗೆ
ಮಕ್ಕಳ ಕಥೆಗಳು
ಬೆಲೆ ರೂ. ೧೨/-

ಪರ್ಷಿಯಾದ ವಿನೋದ ಕಥೆಗಳು
ಅನು : ಸಿ. ಎಸ್. ಪ್ರಕಾಶಮೂರ್ತಿ
ಮಕ್ಕಳ ಕಥೆಗಳು
ಬೆಲೆ ರೂ. ೧೮/-

ಬ್ಯಾಂಕಿಂಗ್
ಗೋವಿಂದಮೂರ್ತಿ ದೇಸಾಯಿ
ಬ್ಯಾಂಕಿಗೆ ಸಂಬಂಧಪಟ್ಟ ವಿಷಯಗಳು
ಬೆಲೆ ರೂ. ೧೨೦/-

ಇನ್ನಷ್ಟು ಈಸೋಪನ ಕಥೆಗಳು
ದು. ನಿಂ. ಬೆಳಗಲಿ
ಮಕ್ಕಳ ಸಾಹಿತ್ಯ
ಬೆಲೆ ರೂ. ೧೩/-

ಮತ್ತಷ್ಟು ಹೇಳಲು ತಕ್ಕ ಕಥೆಗಳು
ಜಿ. ಪಿ. ರಾಜರತ್ನಂ
ಮಕ್ಕಳ ಸಾಹಿತ್ಯ
ಬೆಲೆ ರೂ. ೧೨/-

ಕಾಸಿಗೊಂದು ಸೇರು
ಡಾ. ಚಂದ್ರಶೇಖರ ಕಂಬಾರ
ಮಕ್ಕಳ ಜನಪದ ಕಥೆಗಳು
ಬೆಲೆ ರೂ. ೧೨/-

ಮಹನೀಯರ ಪೌರಾಣಿಕ ಕಥೆಗಳು
ಸತ್ಯಕಾಮ
ಮಕ್ಕಳ ಕಥೆಗಳು
ಬೆಲೆ ರೂ. ೨೨/-

ವ್ಯವಹಾರ ನಿರ್ವಹಣೆ
ರಾಜೇಶ್ವರಿ ಕೃಷ್ಣ
ವಾಣಿಜ್ಯಶಾಸ್ತ್ರ
ಬೆಲೆ ರೂ. ೧೨೦/-

ಮನುಷ್ಯದೇಹ ಮತ್ತು ಆರೋಗ್ಯ
ಡಾ. ಹೆಚ್. ಗಿರಿಜಮ್ಮ
ಡಾ. ಪೂರ್ಣಿಮಾ ಭಟ್
ವಿಜ್ಞಾನ
ಬೆಲೆ ರೂ. ೧೨೫/-

ಭೂವಿಜ್ಞಾನ
ಟಿ. ಆರ್. ಅನಂತರಾಮು
ವಿಜ್ಞಾನ
ಬೆಲೆ ರೂ. ೧೨೦/-

ಸಾಹಿತ್ಯ
ಪ್ರೊ. ಎಲ್. ಎಸ್. ಶೇಷಗಿರಿರಾವ್
ಸಾಹಿತ್ಯ ವಿಚಾರ
ಬೆಲೆ ರೂ. ೧೨೫/-

ಪ್ರಾಣಿಶಾಸ್ತ್ರ
ಡಾ. ಟಿ. ಎ. ಬಾಲಕೃಷ್ಣ
ವಿಜ್ಞಾನ
ಬೆಲೆ ರೂ. ೧೩೫/-

ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್
ನೇಮಿಚಂದ್ರ
ವಿಜ್ಞಾನ
ಬೆಲೆ ರೂ. ೧೫೦/-

*ಈ ಎಲ್ಲ ಪುಸ್ತಕಗಳ ಪ್ರಕಾಶಕರು : ಸಪ್ನಾ ಬುಕ್ ಹೌಸ್ : ಕರ್ನಾಟಕ ಬುಕ್ ಏಜೆನ್ಸಿ, ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ, ಬೆಂಗಳೂರು - ೫೬೦ ೦೦೯.

ನಾನು, ಹಕ್ಕಿ, ಧರ್ಮ
ಅರ್ಜುನ ಕೋರಟಕರ
ಕವನ ಸಂಕಲನ
ತಾ. ಜಮಖಂಡಿ - ೫೮೭ ೩೦೧
ಜಿಲ್ಲೆ - ಬಾಗಲಕೋಟೆ

Registration No. 45646/88

- ಪ್ರತಿಯೊಬ್ಬ ರೂಪವತಿಯಾದ ಹೆಣ್ಣು ಇನ್ನೊಂದು ಹೆಣ್ಣಿನೊಂದಿಗೆ ಪ್ರೇಮಕ್ಕಾಗಿ ಸ್ಪರ್ಧಿಯಾಗುವುದು ಸಹಜ. ನೋವಿನಲ್ಲಿರುವ ಹೆಂಡತಿ ತ್ಯಾಗದ ಸಂಕೇತವಾಗಿ ದೂರಕ್ಕೆ ಹೆಚ್ಚು ಆಕರ್ಷಕಳಾಗಿ ಕಾಣುತ್ತಾಳೆ.

- ಸೌಂದರ್ಯ ಅನ್ನೋದು ವೈವಿಧ್ಯಮಯ ಕವಿತೆಯಂತೆ. ಅವರವರ ಮನೋಭಾವಕ್ಕೆ ತಕ್ಕಂತೆ ಅರ್ಥವಾಗುವ ಕವಿತೆ.

- ಪಾಶ್ಚಾತ್ಯ ಚಿಂತನೆ, ಜೀವನ ಕ್ರಮ, ತಳಕು ಪಳಕು ನಮ್ಮ ಮನೆಯ ಪಡಸಾಲೆಯನ್ನೇ ಹೊಕ್ಕಿದ್ದು ಕನ್ನಡ ಸಂಸ್ಕೃತಿ ಸಮಾಜ ಎಂಬುದು ಪ್ರತ್ಯೇಕವಾಗಿ ಉಳಿಯುವ ಸಾಧ್ಯತೆಯನ್ನೇ ಕಡಿಮೆ ಮಾಡಿದೆ. ಪ್ರಬಲ ಸಮೂಹ ಮಾಧ್ಯಮಗಳ ದೆಸೆಯಿಂದ ಇಡೀ ಜಗತ್ತೇ ನಮ್ಮ ಡ್ರಾಯಿಂಗ್ ರೂಮಿನಲ್ಲಿ ಹಾಜರಾಗುತ್ತಾ ನಮ್ಮ ಸಾಂಸ್ಕೃತಿಕ ಐಕ್ಯತೆಯ ಸ್ವಾತಂತ್ರ್ಯವನ್ನೇ ಮೊಟಕುಗೊಳಿಸುತ್ತಿದೆ. ಹಾಗಾಗಿ ದೇಶೀ ಕನ್ನಡ ಸಂಸ್ಕೃತಿ ಸಮಾಜದ ಇಡೀ ತಳಗಟ್ಟೇ ಇಂದು ಅಲುಗಾಡುತ್ತಿದೆ.

- ಪ್ರೇಮ ಬಂಧನ ಎಷ್ಟು ಗಟ್ಟಿಯೆಂದರೆ ಸಾಯಬೇಕೆನ್ನುವ ಹೊತ್ತಿನಲ್ಲಿ ಪತಿಯ ಬಗ್ಗೆ ಮಮಕಾರ, ಆ ಅಂಧಕಾರದಲ್ಲಿ ನಿರಾಶೆಯಿಂದ ಹತಾಶಳಾದ ಆ ಅಬಲೆ ಗಂಗೆಯಲ್ಲಿ ಧುಮುಕಿದಳು. ಎಲ್ಲವನ್ನೂ ತನ್ನೊಳಗೆ ಸೆಳೆದುಕೊಳ್ಳುವ, ಸಹಜ ಸ್ವಭಾವದ ಗಂಗೆಯ ಅಲೆಗಳು ಅವಳನ್ನು ಒಳಗೆ ಎಳೆದುಕೊಂಡು ನುಂಗಿ ಹಾಕಿದವು.

.... ಮಾತನಾಡುವುದು ಒಂದು ಕಲೆ ನಿಜ.
ಆದರೆ ಸಮಯ ಬಂದಾಗ
ತುಟಿ ಹೊಲಿದುಕೊಂಡಿರುವಾತ
ಆ ಮೌನಿ-ದೊಡ್ಡ ಕಲಾವಿದ

....

.... ಬೊಗಸೆ ಸಿಹಿನೀರಿಗಾಗಿ
ತಳಮಳಿಸುತ್ತಿರುವ ಹೊಟ್ಟೆಗಳನ್ನು
ಉದ್ಧರಣೆಯ ಗಂಗಾಜಲದಿಂದ
ಉದ್ಧರಿಸಲಾರೆ ಸ್ವಾಮಿ!

ಅನಿಕೇತನ